"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 7ನೇ ಫೆಬ್ರವರಿ 2018
ಬುಧವಾರ

## ವಿಷಯಾನುಕ್ರಮಣಿಕೆ

1. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

111 – ಬಗರ್ ಹುಕುಂ ಸಾಗುವಳಿದಾರರ ಬಗ್ಗೆ – ಶ್ರೀ ಎನ್.ಅಪ್ಪಾಜಿ ಗೌಡ

179 – ಭೂಮಾಪನ ಸಿಬ್ಬಂದಿಗಳ ನೇಮಕಾತಿ ಬಗ್ಗೆ – ಶ್ರೀ ಕೆ.ಟಿ.ಶ್ರೀಕಂಠೇಗೌಡ

139– ಕಲಬುರ್ಗಿ ನಗರದಲ್ಲಿರುವ ಶ್ರೀ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದ ಅಭಿವೃದ್ಧಿ ಬಗ್ಗೆ – ಶ್ರೀ ಅಮರನಾಥ್ ಪಾಟೀಲ್

105 – ನೀರಾವರಿ ಯೋಜನೆಗಳ ಬಗ್ಗೆ – ಶ್ರೀ ಬಿ.ಜೆ. ಪುಟ್ಟಸ್ವಾಮಿ

118 – ಪಹಣಿ ಪತ್ರಿಕೆಯಲ್ಲಿ ಸುಧಾರಿತ ತಂತ್ರಾಂಶ ಅಳವಡಿಸಿರುವ ಬಗ್ಗೆ – ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

128 – ಖಾತೆ ಮತ್ತು ಪೋಡಿ ಬಗ್ಗೆ – ಶ್ರೀ ಎಂ.ನಾರಾಯಣ ಸ್ವಾಮಿ

117 – ಪಂತರಪಾಳ್ಯ ಸರ್ವೆ ನಂ.47 ಮತ್ತು 59ರ ಜಮೀನಿನ ಬಗ್ಗೆ – – ಶ್ರೀ ಪಿ.ಆರ್. ರಮೇಶ್

137– ಡೀಮ್ಡ್ ಫಾರೆಸ್ಟ್ ವಿರಹಿತಪಡಿಸಿ 94ಸಿ,94ಸಿಸಿ,ಅಕ್ರಮ–ಸಕ್ರಮ ಭೂ ಮಂಜೂರಾತಿ ಮಾಡುವ ಬಗ್ಗೆ – ಶ್ರೀ ಕೋಟ ಶ್ರೀನಿವಾಸ ಪೂಜಾರಿ

169 – ಕೆರೆಗಳ ಅಭಿವೃದ್ಧಿ ಬಗ್ಗೆ – ಶ್ರೀ ಸೋಮಣ್ಣ ಮ.ಬೇವಿನಮರದ

100 – ಕಂದಾಯ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಕುರಿತು – ಶ್ರೀ ರಮೇಶ್ ಬಾಬು

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**2. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

**(ಅ) ಬಿಸಿಯೂಟ ಕಾರ್ಯಕರ್ತರ ಧರಣಿಯ ಕುರಿತು–**

– ಶ್ರೀಮತಿ ತಾರಾ ಅನುರಾಧ

– ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

**(ಆ) ಶಿವಮೊಗ್ಗ–ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದಿರುವ ಮೆಕ್ಕೆ ಜೋಳವನ್ನು ಸರ್ಕಾರದ ವತಿಯಿಂದ ಖರೀದಿ ಮಾಡದಿರುವ ಬಗ್ಗೆ**

– ಶ್ರೀ ಪ್ರಸನ್ನ ಕುಮಾರ್

–ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಇ) ವಿಜಯಪುರ ನಗರ ಮತ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನಕಲಿ ಮತದಾರರ ಹೆಸರು ಅವ್ಯಾಹತವಾಗಿ ಸೇರ್ಪಡೆಗೊಳ್ಳುತ್ತಿರುವುದನ್ನು ತಡೆಗಟ್ಟುವ ಬಗ್ಗೆ**

– ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ್)

– ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

**3. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**4. ನಿಯಮ 68ರ ಅಡಿಯಲ್ಲಿ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ.**

**ರಾಜ್ಯದಲ್ಲಿ ನಡೆಯುತ್ತಿರುವ ನಿರಂತರ ಕೊಲೆ, ಸುಲಿಗೆ, ಅತ್ಯಾಚಾರ, ಸರಗಳ್ಳತನ, ಗ್ಯಾಂಗ್‌ವಾರ್‌ಗಳು ಅಲ್ಲದೆ, ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಮೇಲೆ ಹಲ್ಲೆ ಹಾಗೂ ಜೈಲಿನ ಆವರಣದಲ್ಲೇ ಗುಂಪು ಘರ್ಷಣೆ, ಕೊಲೆ ಇತ್ಯಾದಿಗಳಿಂದಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ವಿಫಲಗೊಂಡಿರುವ ವಿಷಯದ ಬಗ್ಗೆ.**

– ಶ್ರೀ ರಾಮಲಿಂಗಾ ರೆಡ್ಡಿ (ಗೃಹ ಸಚಿವರು)

– ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

– ಶ್ರೀ ಬಿ.ಜೆ.ಪುಟ್ಟಸ್ವಾಮಿ

**5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ**

– ಶ್ರೀ ಎಸ್. ರವಿ

– ಡಾ: ಜಯಮಾಲ ರಾಮಚಂದ್ರ

– ಶ್ರೀ ಕೆ.ಟಿ.ಶ್ರೀಕಂಠೇಗೌಡ

**6. ಸದನದಲ್ಲಿ ಸಚಿವರು ಮತ್ತು ಅಧಿಕಾರಿಗಳ ಹಾಜರಾತಿ ಬಗ್ಗೆ ಚರ್ಚೆ**

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– – – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 7ನೇ ಫೆಬ್ರವರಿ 2018**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಗ್ಗೆ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು**

1. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:111**

**(ಉತ್ತರ ಲಗತ್ತಿಸಿದೆ)**

**ಶ್ರೀ ರಮೇಶ್ ಬಾಬು (ಶ್ರೀ ಎನ್.ಅಪ್ಪಾಜಿಗೌಡ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮೂರು ಪ್ರಶ್ನೆಗಳನ್ನು ಕೇಳಲಾಗಿದೆ. ಮೊದಲನೆಯದು, ಮಂಡ್ಯ ಜಿಲ್ಲೆಯಲ್ಲಿರತಕ್ಕಂಥ ಬಗರ್ ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು ಎಂದು ಮಾಹಿತಿಯನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಎರಡನೆಯದು, ಬಗರ್ ಹುಕುಂ ಸಾಗುವಳಿದಾರರು ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಮಾಹಿತಿಯನ್ನು ಒದಗಿಸಿದ್ದಾರೆ. ಮೂರನೆಯ ಪ್ರಶ್ನೆ ಬಹಳ ಪ್ರಮುಖವಾದುದು. ಮಂಡ್ಯ ಜಿಲ್ಲೆಯಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಜಮೀನು ಹಂಚಿಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಏನು ಎಂದು ಪ್ರಶ್ನೆ ಕೇಳಿದ್ದೆನು. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಮಾಹಿತಿಯಲ್ಲಿ 2014ರಲ್ಲಿ 4 ಸಭೆಗಳನ್ನು ಮಾಡಿದ್ದಾರೆ. ಆದರೆ, 2017ರಲ್ಲಿ ಒಂದೇ ಸಭೆ ನಡೆದಿದೆ. ಅಂದರೆ, ಅವರು ಬಹುತೇಕ ಒಂದು ವರ್ಷದಿಂದ ಸಭೆಗಳನ್ನೇ ಮಾಡಿಲ್ಲ. ನಮೂನೆ 53 ರಲ್ಲಿ ಸುಮಾರು 25077 ಅರ್ಜಿಗಳು ಬಾಕಿ ಇರುತ್ತವೆ ಎನ್ನುವ ಮಾಹಿತಿಯನ್ನು ಸನ್ಮಾನ್ಯ ಸಚಿವರು ಕೊಟ್ಟಿದ್ದಾರೆ. ನಾವು ಬಹಳ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆವು. ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರು ಆದ ನಂತರ, ಬಹಳ ಪ್ರಮುಖವಾದ ನಿರೀಕ್ಷೆ ಇದು ನಮ್ಮ ಕನಸು ಆಗಿಲ್ಲ, ಸರ್ಕಾರದ ಕನಸಿನ ಜೊತೆಗೆ ಬಗರ್ ಹುಕುಂ ನ್ನು ಸಕ್ರಮ ಮಾಡುವಂಥದ್ದು ಸನ್ಮಾನ್ಯ ಕಾಗೋಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಮ್ಮಪ್ಪನವರ ಕನಸಾಗಿದೆ ಎನ್ನುವುದು ನನ್ನ ಭಾವನೆ. ಇವತ್ತಿನ ದಿವಸ ನೀವು ಈ ತರಹದ ಅರ್ಜಿಗಳು ಒಂದೊಂದು ತಾಲ್ಲೂಕಿನಲ್ಲಿ ಸುಮಾರು 25000 ಅರ್ಜಿಗಳನ್ನು ಬಾಕಿ ಇಟ್ಟುಕೊಂಡರೆ, ಇಡೀ 174 ತಾಲ್ಲೂಕಿನಲ್ಲಿ ಎಷ್ಟು ಅರ್ಜಿಗಳು ಬಾಕಿ ಇವೆ ಎನ್ನುವ ಪ್ರಶ್ನೆ ನಮ್ಮನ್ನು ಕಾಡುತ್ತದೆ. ದಯಮಾಡಿ, ಈ ಅರ್ಜಿಗಳು ವಿಲೇವಾರಿ ಆಗದೇ ಇರತಕ್ಕಂತಹ ಸಮಯ ಇದೆ. ಮಾರ್ಚ್ 2ನೇ ವಾರದಲ್ಲಿ ಬಹುತೇಕ ನಿಮಗೆ Code of Conduct ಜಾರಿಗೆ ಬರುತ್ತದೆ. ಮತ್ತೆ ನೀವು ಸಭೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿ ಆದರೆ ರೈತರು ಎಲ್ಲಿಗೆ ಹೋಗುತ್ತಾರೆ. ಈಗ ಇರತಕ್ಕಂಥ ಒಂದೊಂದು ತಾಲ್ಲೂಕಿನಲ್ಲಿ ಸುಮಾರು 25000 ಅರ್ಜಿಗಳನ್ನು ವಿಲೇ ಮಾಡದೇ ಬಾಕಿ ಇಟ್ಟುಕೊಂಡರೆ ಹೇಗೆ? ಬಹುತೇಕ ಕಷ್ಟಕರವಾದಂತಹ ಮಾಹಿತಿಯನ್ನು ತಾವು ಕೊಟ್ಟಿದ್ದೀರಿ. ತಾವು ಕಂದಾಯ ಸಚಿವರಾಗಿ ಬಂದ ನಂತರ ರೈತರಿಗೆ ಆಶಾದಾಯಕವಾದಂತಹ ಒಂದು ಬೆಳವಣಿಗೆ ಆಗಿದೆ. ಅವರ ಕನಸು ಈಡೇರುತ್ತದೆ ಎನ್ನುವ ಒಂದು ಆಸೆಯನ್ನು ಇಟ್ಟುಕೊಂಡಿದ್ದೆವು. ಆದ್ದರಿಂದ ತಾವು ದಯಮಾಡಿ ನಿರ್ದೇಶನ ಕೊಡಬೇಕು. ಪ್ರತಿ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಅರ್ಜಿ ಬಾಕಿ ಇದೆಯೋ ಕನಿಷ್ಟಪಕ್ಷ ಈ ತಿಂಗಳ ಕೊನೆಯಲ್ಲಿ ಈ ಅರ್ಜಿಗಳು ವಿಲೇವಾರಿಯಾಗಲು ಸರ್ಕಾರ ಕ್ರಮವನ್ನು ಕೈಗೊಳ್ಳಬೇಕೆಂದು ಸನ್ಮಾನ್ಯ ಕಂದಾಯ ಸಚಿವರಿಗೆ ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ, ಕಂದಾಯ ಸಚಿವರು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳವಳ ನನಗೆ ಅರ್ಥವಾಗಿದೆ. ಹೌದು, ನಮ್ಮ ಬದುಕಿನಲ್ಲಿ ಭೂಮಿಯೇ ನಮಗೆ ಮಾರ್ಗದರ್ಶನ ನೀಡುತ್ತಾ ಬಂದಿದೆ. ಇದಕ್ಕೆ ಪರಿಹಾರ ಕಾಣಬೇಕೆಂದು ನಾನು ಈ ಕಂದಾಯ ಇಲಾಖೆಯ ಸಚಿವನಾಗಿ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ, ವ್ಯವಸ್ಥಿತವಾದಂತಹ ರೀತಿಯಲ್ಲಿ ಒಂದು ಸುತ್ತೋಲೆಯನ್ನು ಕೂಡ ನಾವು ಸರ್ಕಾರದಿಂದ ಹೊರಡಿಸಿದ್ದೇವೆ. ಎಲ್ಲಾ ಮಾನ್ಯ ಸದಸ್ಯರು ಕೂಡ ಕೇಳಿಕೊಳ್ಳಬೇಕೆಂಬುದು ನನ್ನ ಪ್ರಾರ್ಥನೆ. ವಾರಕ್ಕೊಂದು ಸಭೆ ಕರೆಯಬೇಕು. ಎರಡು ಜನ ಸದಸ್ಯರು ಬಂದರೂ ಕೂಡ ಸಭೆ ಮಾಡಬೇಕು. ಆ ಎರಡನೇ ಸಭೆ ಆದ ತಕ್ಷಣವೇ ಅವರಿಗೆ ಹಕ್ಕುಪತ್ರ ಕೊಡಬೇಕು. ಹಕ್ಕುಪತ್ರ ಕೊಟ್ಟ ಕೂಡಲೇ ಆರ್.ಟಿ.ಸಿಯಲ್ಲಿ ಅವರ ಹೆಸರನ್ನು ಎಂಟ್ರಿ ಮಾಡಬೇಕೆಂದು ಇವೆಲ್ಲವನ್ನು ಮಾಡಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಹೇಳುವುದನ್ನು ನಾನು ಕೇಳಿದಾಗ, ನನಗೆ ನಾಚಿಕೆ ಆಗುತ್ತದೆ. ನಾನು ಅದಕ್ಕೆ ಹಿಂಜರಿಯುವುದಿಲ್ಲ. ಆದರೆ, ನೀವು ಕೊಟ್ಟ ಸಲಹೆ ಮೇರೆಗೆ, ಇವತ್ತೇ ಸಂಬಂಧಪಟ್ಟವರೊಂದಿಗೆ ಮಾತನಾಡಿ ಈ ಕೆಲಸವನ್ನು ಈ ತಿಂಗಳೊಳಗೆ ಪೂರೈಸುವುದಕ್ಕೆ ಎಷ್ಟು ಪ್ರಯತ್ನ ಬೇಕೋ ಮಾಡುತ್ತೇನೆ. ಸಾಧ್ಯವಾದರೆ ಮಂಡ್ಯ ಜಿಲ್ಲೆಗೂ ಕೂಡ ನಾನು ಹೋಗಿ ಬರುತ್ತೇನೆ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ಆ ವಿಷಯವನ್ನು ಹೇಳಿ ಮುಗಿಸುತ್ತೇನೆ. ದಯಮಾಡಿ ನಮ್ಮದೊಂದು ಮನವಿ ಇದೆ. ಈ ಬಗರ್‌ಹುಕುಂ ಸಮಿತಿಗಳಿಗೆ ಬರೀ ಶಾಸಕರಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನ ಸಭಾ ಸದಸ್ಯರನ್ನು ಮಾತ್ರ ನೇಮಿಸಿದ್ದೀರಿ. ಆ ಸಮಿತಿಯಲ್ಲಿ ವಿಧಾನ ಪರಿಷತ್ತಿನ ಶಾಸಕರಿಗೆ ಅವಕಾಶವಿಲ್ಲ. ಆದ್ದರಿಂದ ದಯಮಾಡಿ ಆ ಸಮಿತಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಿದರೆ, ಈ ತರಹದ ಸಮಸ್ಯೆಗಳು ಕಡಿಮೆ ಆಗುತ್ತದೆ. ಕನಿಷ್ಟ ನಾವು ಒತ್ತಾಯ ಮಾಡಿ, ಸ್ಥಳೀಯವಾಗಿ ಅರ್ಜಿ ವಿಲೇವಾರಿ ಮಾಡುವುದಕ್ಕೆ ಇನ್ನಿತರೆ ಕೆಲಸ ಮಾಡುವುದಕ್ಕೆ ಸಹಾಯ ಮಾಡುತ್ತೇವೆ. ಆದ್ದರಿಂದ ದಯವಿಟ್ಟು ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಆ ಸಮಿತಿಗಳಲ್ಲಿ ಅವಕಾಶ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಸಮಾನ್ಯವಾಗಿ ನೀವು ವಿಧಾನ ಸಭೆಯ ಶಾಸಕರನ್ನು ಆ ಸಮಿತಿಗೆ ಹಾಕುತ್ತೀರಿ. ಆದರೆ, ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಏಕೆ ನೇಮಿಸಬಾರದು.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಈಗ ವಿಧಾನ ಪರಿಷತ್ತಿನ ಶಾಸಕರಿಗೆ ಏನೂ ಬೇಕು ಎನ್ನುವುದಕ್ಕಲ್ಲ. ಮಾನ್ಯ ಸಚಿವರು ನನಗೆ ನಾಚಿಕೆ ಆಗುತ್ತಿದೆ ಎಂದು ಹೇಳಿದಿರಿ. ಆದರೆ, ನಿಮಗೆ ನಾಚಿಕೆ ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಯಾವುದೇ ಶಾಸಕರು ಸಭೆಗಳನ್ನೇ ಕರೆಯುವುದಿಲ್ಲ. ಏಕೆ ಇದು ಹಾಗೆ ಬಿದ್ದಿದೆ. ಬಗರ್ ಹುಕುಂ ಅರ್ಜಿಗಳನ್ನು ಇತ್ಯರ್ಥ ಮಾಡದಿದ್ದರೆ ನಿಮ್ಮ ಉದ್ದೇಶವೇನು? ಎಷ್ಟು ವರ್ಷಗಳಿಂದ ನೀವು ಹೋರಾಟ ಮಾಡಿಕೊಂಡು ಬಂದಿದ್ದೀರಿ.

**(ಮುಂದು...)**

<u>(038)7.02.2018/11.10/ಎಂಎಂ-ಎಂಡಿ</u>

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು)**:-

ನೀವು ಕಂದಾಯ ಮಂತ್ರಿಯಾದ ಮೇಲೆಯೂ ಇದಾಗುವುದಿಲ್ಲ ಎಂದರೆ ಅವರ ಕತೆ ಮುಗಿಯಿತು. ಬಗರ್ ಹುಕುಂ ಸಾಗುವಳಿದಾರರು ಯಾರ್‍ಯಾರಿದ್ದಾರೆ ಅವರನ್ನು ಗುಂಡಿ ತೋಡಿ ಮುಚ್ಚಿ ಬಿಡಿ. ನಿಮಗೆ ಭೂಮಿಯನ್ನು ಕೊಡಲು ಆಗುವುದಿಲ್ಲವೆಂದು ಸ್ಪಷ್ಟಪಡಿಸಿಬಿಡಿ. ನಿಮ್ಮ ಕೈಲಾಗದಿದ್ದರೆ ಮತ್ಯಾರ ಕೈಯಲ್ಲಿ ಆಗುತ್ತದೆ? ನಿಮ್ಮ ಕೈಲಾಗದಿದ್ದಕ್ಕೆ ಶಾಸಕರು ಸಭೆಯನ್ನು ಕರೆಯುವುದಿಲ್ಲವೆಂದು ಕಾರಣ ಕೊಡುತ್ತಿದ್ದೀರಿ. ನಾನು ನಿಮಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರ ಕಳಕಳಿ ನಮಗೂ ಇದೆ. ಯಾವ ಶಾಸಕರಿಗೆ ಕಳಕಳಿ ಇದೆಯೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಬಗರ್ ಹುಕುಂ ಸಾಗುವಳಿದಾರರು ಇವರಿಗೆ ಕಮಿಷನ್ ಕೊಡುವುದಿಲ್ಲ. ಕಮಿಷನ್ ಕೊಡದಿದ್ದರೆ ಅವರಿಗೆ ಖಾಯಂ ಆಗುವುದಿಲ್ಲ. ನಿಮಗೆ ನಿಜಕ್ಕೂ ಕಳಕಳಿ ಇದೆಯೆಂಬ ನಂಬಿಕೆ ನನಗಿದೆ. ಇದಕ್ಕೆ alternative ಬೇರೆ ಇಲ್ಲ. ಶಾಸಕರನ್ನು ತೆಗೆದು ಇನ್ಯಾರೋ ಅಧಿಕಾರಿಗಳನ್ನು ಮಾಡುವುದಕ್ಕೆ ಹೇಳಿದರೆ ಆಮೇಲೆ ನಿಮ್ಮನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೇವರೇ ಕಾಪಾಡಬೇಕು. ಎಂ.ಎಲ್.ಎ ಗಳ ಜೊತೆಗೆ ಎಂ.ಎಲ್.ಸಿ ಗಳನ್ನು ಆ ಕಮಿಟಿಗೆ ಹಾಕಿ. ಸಹ ಅಧ್ಯಕ್ಷರನ್ನು ಮಾಡಲು ಸುತ್ತೋಲೆ ಹೊರಡಿಸಿ. ಸಭೆಯನ್ನು ಕರೆಯದಿದ್ದರೆ ಸಹ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಆಗಲಿ. ಯಾರಿಗೆ ಈ ಸಾಗುವಳಿ ಚೀಟಿ ಸಿಗುವುದಿಲ್ಲ ನೋಡೋಣ. ಈ ದಿಕ್ಕಿನಲ್ಲಿ ತಾವು ಮಾಡಿ ಎಂಬುದು ನನ್ನ ಪ್ರಾರ್ಥನೆಯಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಹಿಂದೆ ಕಾನೂನು ಮಾಡುವಾಗ ಕ್ಷೇತ್ರವಾರು ಎಂದು ಮಾಡಿಬಿಟ್ಟಿದ್ದಾರೆ. ಆ ಕ್ಷೇತ್ರವಾರುಗೆ ಆ ಕ್ಷೇತ್ರದ ಶಾಸಕರೇ ಅಧ್ಯಕ್ಷರಾಗಿದ್ದಾರೆ. ಈಗ ಅದನ್ನು ಬದಲಾವಣೆ ಮಾಡಬೇಕೆಂದು ಹೇಳಿದರೆ, ಅದಕ್ಕೆ ಹೊಸ ತಿದ್ದುಪಡಿ ತಂದು ವಗೈರೆ ಮಾಡಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ,

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಪೂಜಾರಿಯವರೇ, ನನ್ನದೇನೂ ಇಲ್ಲ. ಈಗ ಹೆಚ್ಚುವರಿ ಸಮಿತಿಯನ್ನೂ ಮಾಡುವುದಕ್ಕಾಗುವುದಿಲ್ಲ. ಆ ಸಮಿತಿಯಲ್ಲಿ ನಿಮ್ಮನ್ನು ಸೇರಿಸಲು ಅವಕಾಶ ಇದೆ. ಈಗ ನಾವೆಲ್ಲರೂ ರಾಜಕೀಯದಲ್ಲಿದ್ದೇವೆ. ನೀವು ಕೂಡ ಆಡಳಿತಪಕ್ಷದಲ್ಲಿ ಕೆಲಸ ಮಾಡಿದಂತಹವರಾಗಿದ್ದೀರಿ. ಸಮಿತಿಗಳನ್ನು ನೇಮಿಸುವಾಗ ಯಾವ್ಯಾವ ರೀತಿಯಲ್ಲಿ ಅನುಸರಿಸಬೇಕೆಂಬುದು ನಿಮಗೂ ನಮಗೂ ಗೊತ್ತಿದೆ. ನನಗೆ ವಿಧಾನಪರಿಷತ್ತಿನ ಸದಸ್ಯರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಸಾಧ್ಯವಾದರೆ ಅದನ್ನು ಮಾಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಚಾರದಲ್ಲಿ ನಾನು ತಲೆ ತಗ್ಗಿಸುವಂತಹ ರೀತಿ ಇದೆ. ಕಾರಣವೇನೆಂದರೆ, ಶಾಸಕರನ್ನು ಕೇಳಿ ಸಭೆಯನ್ನು ಕರೆಯಬೇಕಾದುದಿಲ್ಲ. ತಹಸೀಲ್ದಾರ್‌ರವರೆ ಕರೆಯಬೇಕು. ಆದರೆ ಇವರು 'ಏ ಬಿಡೋ, ಕರೆಯಬೇಡ, ನಾನು ನೋಡಿಕೊಳ್ಳುತ್ತೇನೆ' ಎಂದು ಹೆದರಿಸುತ್ತಾರೆ. ಅದನ್ನು ನನಗೆ ತಹಸೀಲ್ದಾರ್‌ರವರು ಸೂಕ್ಷ್ಮವಾಗಿ ಹೀಗೆ ಮಾಡುತ್ತಾರೆ ನಾನೇನು ಮಾಡಲಿ ಎಂದು ಹೇಳುತ್ತಾರೆ. ಈ ಸಂದಿಗ್ಧದಲ್ಲಿ ನಾನು ಸಿಕ್ಕಿ ಹಾಕಿಕೊಂಡಿದ್ದೇನೆ. ಈ ಸದನದ ಮುಖಾಂತರ ನಾನು ಎಲ್ಲಾ ಶಾಸಕ ಮಿತ್ರರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ ಹಾಗೂ ನಿಮ್ಮಲ್ಲಿ ಕೂಡ ಕೇಳುತ್ತಿದ್ದೇನೆ. 'ಇದೊಂದು ಕೆಲಸವನ್ನು ಮಾಡಿಕೊಡ್ರೋ ಮಾರಾಯ, ನಿಮ್ಮ ಕಾಲಿಗೆ ಬೀಳುತ್ತೇನೆ' ಎಂದು ನಾನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಇದು ಸುಮ್ಮನೆ ಆಗುವ ಕೆಲಸವಲ್ಲ. ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರವನ್ನು ನಾವು ಕೊಡುವುದಿಲ್ಲ ಎಂಬ ತೀರ್ಮಾನವನ್ನಾದರೂ ತೆಗೆದುಕೊಳ್ಳಲಿ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಈಶ್ವರಪ್ಪನವರೇ, ಇಲ್ಲ ಹಾಗಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮತ್ತೆ ಇದೇನಿದು? ಮಾನ್ಯ ಸಚಿವರು ನಾಚಿಕೆಯಾಗುತ್ತದೆ ಎಂದು ಕೂಡ ಹೇಳುತ್ತಿದ್ದಾರೆ. ಶಾಸಕರು ಸಭೆಯನ್ನು ಕರೆಯುವುದಿಲ್ಲವೆಂದೂ ಹೇಳುತ್ತಾರೆ, ತಹಸೀಲ್ದಾರ್‌ರವರಿಗೆ ಸುಮ್ಮನೆ ಕುಳಿತುಕೊಳ್ಳಲು ಹೇಳುತ್ತೀರಿ, ಮತ್ತೆ ಅವರಿಗೆ 'ಏಕೆ ಮೀಟಿಂಗ್ ಕರೆಯಿರಿ ಎಂದು ಹೇಳುತ್ತೀರಿ?

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧಪಕ್ಷದ ನಾಯಕರು, ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಆಡಳಿತದಲ್ಲಿದ್ದಾಗ ಹೇಗೆ ಎಂಬುದು ಅವರಿಗೂ ಅನುಭವವಿದೆ. ನಾನು ಹೊಸದಾಗಿ ಹೇಳಿಕೊಡಬೇಕಾಗಿಲ್ಲ. ನನ್ನ ಸಂಕಟವನ್ನು ನಾನು ಹೇಳಿಕೊಂಡಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಒಪ್ಪಿಕೊಳ್ಳುತ್ತೇನೆ. ಬರೀ ಸಂಕಟ ಪಟ್ಟರೆ ಲಾಭವೇನಿದೆ?

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಈಶ್ವರಪ್ಪನವರ ಕಳಕಳಿ ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಈ ಸನ್ನಿವೇಶವನ್ನು ಹೇಗೆ ಬಗೆಹರಿಸಬೇಕೆಂಬ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಿದ್ದುಪಡಿ ಮಾಡುವಾಗ ಶಾಸಕರ ಅಧ್ಯಕ್ಷತೆಯಲ್ಲಿ ಎಂದು ಮಾಡಿದ್ದೀರಿ. ಉಳಿದ ಐದು ಜನ . . .

**ಸಭಾಪತಿಯವರು:–** ಇದು ಪ್ರಶ್ನೋತ್ತರ ಅವಧಿ, ಸಾಕು ಪ್ರಶ್ನೋತ್ತರ ವೇಳೆಯಲ್ಲಿ policy decision ತೆಗೆದುಕೊಳ್ಳಲು ಬರುವುದಿಲ್ಲ.

**ಚುಕ್ಕೆ ಪ್ರಶ್ನೆ ಸಂಖ್ಯೆ: 17**

**ಸಭಾಪತಿಯವರು:–** ಸದರಿ ಪ್ರಶ್ನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ. ಆರ್.ಡಿ.ಪಿ.ಆರ್ ಪ್ರಶ್ನೆ ಬರುವ ದಿನ ನಿಮ್ಮ ಪ್ರಶ್ನೆ ಬರುತ್ತದೆ. ಮುಂದಿನ ಪ್ರಶ್ನೆಯನ್ನು ಮಾನ್ಯ ಶ್ರೀಕಂಠೇಗೌಡರ ಪರವಾಗಿ ಶ್ರೀ ರಮೇಶ್‌ಬಾಬುರವರು ಕೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ 179**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ರಮೇಶ್‌ಬಾಬು (ಶಿಕ್ಷಕರ ಕ್ಷೇತ್ರ) (ಶ್ರೀ ಕೆ.ಟಿ. ಶ್ರೀಕಂಠೇಗೌಡರ ಪರವಾಗಿ):–** ಮಾನ್ಯ ಸಭಾಪತಿಯವರೇ, ನನ್ನ ಅ) ಮತ್ತು ಆ) ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಉಪ ಪ್ರಶ್ನೆಯೇನೆಂದರೆ, ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಅನಧಿಕೃತ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ಸರ್ವೆ ಸಿಬ್ಬಂದಿಯಿಲ್ಲ ಎಂದು ಈ ಸದನದಲ್ಲಿ ಚರ್ಚೆಯಾಗಿ ಉತ್ತರವನ್ನು ಮತ್ತು ಮಾಹಿತಿಗಳೆಲ್ಲವನ್ನೂ ಕಂದಾಯ ಸಚಿವರು ಕೊಟ್ಟಿದ್ದಾರೆ. ನೀವು ಇಲ್ಲಿಂದ ಸರ್ವೇ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುತ್ತೇವೆಂದರೆ, ಅದು ಸಾಧ್ಯವಾಗದಿರುವ ಮಾತು. ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ತುಂಬುವುದು ಮತ್ತು ಬೆಂಗಳೂರಿನಲ್ಲಿ ಕೊರತೆಯಿದೆ ಎಂದು ಕಂದಾಯ ಇಲಾಖೆಯ ಸಚಿವರೇ ಈ ಸದನಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿ ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಇಲಾಖೆಯು ಸರ್ವೇಯರ್‌ಗಳ ನೇಮಕಾತಿ ರೆವಿನ್ಯೂ ಇಲಾಖೆಗೆ ಬರುತ್ತದೆ. ಈಗಾಗಲೇ ಸುಮಾರು 1000 ಸರ್ವೇಯರ್‌ಗಳ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಿದ್ದು, ಅದರ verification ನಡೆಯುತ್ತಿದೆ. ಸ್ವಲ್ಪ ದಿನಗಳಲ್ಲೇ ಸುಮಾರು 1000 ಸರ್ವೇಯರ್‌ಗಳು ಲಭ್ಯವಾಗುತ್ತಾರೆ. ಆ ಪ್ರಕ್ರಿಯೆ ನಡೆದಿದೆ. ಆರ್ & ಆರ್ ಕಮಿಷನರ್ ಮತ್ತು ಸರ್ವೇಯರ್‌ಗಳು ಕಂದಾಯ ಇಲಾಖೆಗೆ ಬರುತ್ತಾರೆ. ಶೀಘ್ರದಲ್ಲಿಯೇ ಸರ್ವೇ ಸಿಬ್ಬಂದಿಗಳ ಕೊರತೆ ನೀಗುತ್ತದೆ.

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೇ ನನ್ನ ಪ್ರಶ್ನೆ ಬಹಳ ಸ್ಪಷ್ಟವಾಗಿದೆ.

**ಶ್ರೀ ಎಂ.ಬಿ. ಪಾಟೀಲ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ.

**ಶ್ರೀ ರಮೇಶ್‌ಬಾಬು:–** ಮಾನ್ಯ ಸಭಾಪತಿಯವರೇ, ಸಚಿವರ ಉತ್ತರ ಸ್ಪಷ್ಟವಾಗಿಲ್ಲ. ನಾನು ಕೇಳುತ್ತಿರುವುದು ನಿಮ್ಮ ಇಲಾಖೆಯಲ್ಲಿ ಸರ್ವೇಯರ್‌ಗಳ ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದೇನೆ. ಅವರು 47 ಹುದ್ದೆಗಳು ಖಾಲಿ ಇವೆಯೆಂದು ಉತ್ತರ ಕೊಟ್ಟಿದ್ದಾರೆ. ಆ ಹುದ್ದೆಗಳನ್ನು ಕಂದಾಯ ಇಲಾಖೆಯವರು ತುಂಬುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, All surveyors are appointed through Revenue Department. R & R Commissioner, General Manager, SLA's and Surveyors in Irrigation Department are from Revenue Department. ಇವೆಲ್ಲವೂ ಕಂದಾಯ ಇಲಾಖೆಯ ಮೂಲಕವೇ ಆಗುತ್ತಿದೆ.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ ಕಾವೇರಿ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಯ ವಲಯಗಳ ವ್ಯಾಪ್ತಿಯಲ್ಲಿ ಒಟ್ಟು 58 ಮಂಜೂರಾದ ಭೂಮಾಪಕರುಗಳ ಹುದ್ದೆ ಇದ್ದು, ಕಾರ್ಯನಿರ್ವಹಿಸುತ್ತಿರುವ ಭೂಮಾಪಕರು 47 ಎಂದು ತಿಳಿಸಿದ್ದಾರೆ.

**ಶ್ರೀ ಎಂ.ಬಿ. ಪಾಟೀಲ:-** ಹೌದು ಕಂದಾಯ ಇಲಾಖೆಯಿಂದ ಭೂಮಾಪಕರುಗಳು ನಮ್ಮ ಇಲಾಖೆಗೆ ಬರುವುದು.

**ಸಭಾಪತಿಯವರು:-** ಕಂದಾಯ ಇಲಾಖೆಯವರೇ ಕೊಡಬೇಕು.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೇ, ನಾನು 1000 ಹುದ್ದೆಗಳನ್ನು ತುಂಬುತ್ತಿರುವ ಬಗ್ಗೆ ಕೇಳುತ್ತಿಲ್ಲ. ನೀರಾವರಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ಯಾವ ಕ್ರಮಗಳನ್ನು ಕೈಗೊಂಡಿದ್ದೀರಿ ಎಂದು ಕೇಳುತ್ತಿದ್ದೇನೆ.

**ಸಭಾಪತಿಯವರು:-** ನೀರಾವರಿ ಇಲಾಖೆಯವರು ಕಂದಾಯ ಇಲಾಖೆಗೆ ಸರ್ವೇಯರ್‌ಗಳನ್ನು ಕೊಡಿ ಎಂದು ಕೇಳಿದ್ದಾರೆ, ಕಂದಾಯ ಇಲಾಖೆಯವರು ಕೊಟ್ಟ ನಂತರ ತೆಗೆದುಕೊಳ್ಳುತ್ತಾರೆ.

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯೇ ನಮಗೆ ಕೊಡುತ್ತದೆ.

**ಸಭಾಪತಿಯವರು:-** ಸರ್ವೇಯರ್‌ಗಳನ್ನು ಕಂದಾಯ ಇಲಾಖೆಯವರೆ ತುಂಬಿಕೊಡಬೇಕು. ನೀರಾವರಿ ಇಲಾಖೆಯವರು ಸರ್ವೇಯರ್‌ಗಳ ಹುದ್ದೆಗಳನ್ನು ತುಂಬಲು ಬರುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ:-** ಅವರನ್ನು ನಾವು ನೇಮಕ ಮಾಡುವುದಿಲ್ಲ.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಉತ್ತರವನ್ನು ಒಪ್ಪಿಕೊಂಡರೂ ಕೂಡ ಅವರು ಸದನಕ್ಕೆ ಕೊಡಬೇಕಾದಂತಹ ಮಾಹಿತಿ ಈ ಹುದ್ದೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತುಂಬುವುದಕ್ಕೆ ಏನೇನು ಪ್ರೋಗ್ರೆಸ್ ಆಗಿದೆ, ಪತ್ರ ಬರೆದಿದ್ದಾರೆಯೇ ಎಂಬುದನ್ನು ಇವರು ಹೇಳಬೇಕಲ್ಲವೇ.

**ಶ್ರೀ ಎಂ.ಬಿ. ಪಾಟೀಲ:-** ಮಾನ್ಯ ಸಭಾಪತಿಯವರೇ, ಈ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ 1000 ಸರ್ವೇಯರ್ಸ್‌ಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. ಅದರ ದಾಖಲೆಗಳ ಪರಿಶೀಲನೆಯು ನಡೆಯುತ್ತಿದೆ. ಅವರನ್ನು ನೇಮಕ ಮಾಡಿಕೊಂಡ ನಂತರ ಕಾವೇರಿ ನೀರಾವರಿ ನಿಗಮದಲ್ಲಿರುವ ಖಾಲಿ ಹುದ್ದೆಗಳು ಭರ್ತಿಯಾಗುತ್ತವೆ.

**ಸಭಾಪತಿಯವರು:-** ಧನ್ಯವಾದಗಳು.

**ಚುಕ್ಕೆ ಪ್ರಶ್ನೆ ಸಂಖ್ಯೆ: 143**

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ)

**ಚುಕ್ಕೆ ಪ್ರಶ್ನೆ ಸಂಖ್ಯೆ: 139**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸವಿಸ್ತಾರವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಆ ಕ್ರೀಡಾಂಗಣ ಸಮುಚ್ಛಯಕ್ಕೆ ಶಾಸಕರ ನಿಧಿಯಿಂದ ನಾನು 10 ಲಕ್ಷ ರೂಪಾಯಿಗಳನ್ನು ಆ ಕ್ರೀಡಾಂಗಣಕ್ಕೆ ಕೊಟ್ಟಿದ್ದೇನೆ. ಏಕೆಂದರೆ ನನಗೆ ಆ ಕ್ರೀಡಾಂಗಣದ ಮೇಲೆ ಭಾವನಾತ್ಮಕ ಸಂಬಂಧವಿದೆ. ಆ ಕ್ರೀಡಾಂಗಣವು ನನ್ನ ದೊಡ್ಡಪ್ಪನವರ ಹೆಸರಿನಲ್ಲಿದೆ. ಅಲ್ಲಿ ಯಾವ ಕಾಮಗಾರಿಗಳಾಗಿವೆಂದು ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಗಾರ್ಡನ್ ನಿರ್ಮಾಣ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು 10 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆಯೆಂದು ತೋರಿಸಲಾಗಿದೆ. ಆದರೆ ವಾಸ್ತವವಾಗಿ ಅಲ್ಲಿ ಈಗತಾನೇ ಕಾಮಗಾರಿ ಪ್ರಾರಂಭವಾಗಿದ್ದು, ಆಮೆಗತಿಯಲ್ಲಿ ನಡೆಯುತ್ತಿದೆ. ಮತ್ತೆ ಅಲ್ಲಿ ಶೌಚಾಲಯ ಬ್ಲಾಕ್ ನಿರ್ಮಾಣಕ್ಕೆ 10 ಲಕ್ಷ ರೂಪಾಯಿಗಳೆಂದು ಮೂರು ಹಂತಗಳಲ್ಲಿ ತೋರಿಸಿದ್ದಾರೆ. ಆದರೆ ಹಾಸ್ಟೆಲ್‌ಗಳಲ್ಲಿ ಕೂಡ ಶೌಚಾಲಯದ ಸ್ಥಿತಿಗತಿಗಳು ಸರಿಯಾಗಿಲ್ಲ. Pavilion sitting ದುರಸ್ಥಿಗೆ ಸುಮಾರು 4.66 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ರದ್ದು ಮಾಡಲಾಗಿದೆಯೆಂದು ತೋರಿಸಿದ್ದಾರೆ. ಸದರಿ ಕ್ರೀಡಾಂಗಣದ ಮೇಲ್ಕಂಡ ಕಾಮಗಾರಿಗಳು ವಿಳಂಬವಾಗುತ್ತಿರುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಹೌದು, ಈ ನಿರ್ಮಾಣ ಏಜೆನ್ಸಿ ನಿರ್ಮಿತಿ ಕೇಂದ್ರದವರಿಗೆ ಕೊಟ್ಟಿದ್ದೇವೆ, ಬಾಕಿ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆಂದು ತಿಳಿಸಿದ್ದಾರೆ. ಆದರೆ ಅಲ್ಲಿ ಏನಾಗುತ್ತಿದೆ ಎಂದರೆ, ಇದೊಂದು ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿರಬಹುದೆಂದು ಅನಿಸುತ್ತಿದೆ. ಈ ಕ್ರೀಡಾಂಗಣದ ಬಗ್ಗೆ ದಿನಾಂಕ 28.02.2018ರ ವಿಜಯಕರ್ನಾಟಕ ಪತ್ರಿಕೆಯಲ್ಲಿ "ಕ್ರೀಡಾಂಗಣ ಗ್ಯಾಲರಿ – ಕೂತರೆ ಡೇಂಜರ್ ರೀ" ಎಂದು ವರದಿಯಾಗಿದೆ.

(ಮುಂದು . . .

(39) 07-02-2018/11-20/ಕೆಹೆಚ್/ಎಕೆ

**ಶ್ರೀ ಅಮರನಾಥ ಪಾಟೀಲ್ (ಮುಂದು):-** ಈಗಾಗಲೇ ಅಲ್ಲಿ ಕಾಮಗಾರಿಗಳು ಪ್ರಾರಂಭವಾಗಿ stands ಮತ್ತು ಸುತ್ತುಗೋಡೆಗಳನ್ನು ಕಟ್ಟಿದ್ದಾರೆ. ಈಗಾಗಲೇ ಈ ಸುತ್ತುಗೋಡೆಗಳು ಬಿದ್ದು ಹೋಗಿದ್ದು, ಇದನ್ನು ರಿಪೇರಿ ಮಾಡಲಾಗಿದೆ. ಮತ್ತೆ ಇದು ಶಿಥಿಲಾವಸ್ಥೆಯಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ಈ ಕಾಮಗಾರಿಗಳ ಬಗ್ಗೆ ಮೂರ್ನಾಲ್ಕು ಬಾರಿ ಪ್ರಸ್ತಾಪ ಮಾಡಿದ್ದೇನೆ. ಸರಿಯಾಗಿ ಕಾಮಗಾರಿಗಳಾಗುತ್ತಿಲ್ಲ. ನಿಖರವಾದಂತಹ ತನಿಖೆಯಾಗಬೇಕು ಮತ್ತು ಕಾಮಗಾರಿ ಕೆಲಸವನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿಯ ಕೊರತೆಯನ್ನು ಸಹ ಕಾಣುತ್ತಿದ್ದೇವೆ. ಹೀಗಾಗಿ ಮಾನ್ಯ ಸಚಿವರು ನಿಖರವಾದಂತಹ ಉತ್ತರವನ್ನು ಕೊಡಬೇಕು. ನಮ್ಮ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಗಾರ್ಡನ್ ನಿರ್ಮಾಣಕ್ಕೆ 10.00 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇನೆ. ಆದರೆ ಇನ್ನು ಕಾಮಗಾರಿ ಪ್ರಾರಂಭವಾಗಿಲ್ಲ. ಯಾವ ಯಾವ ಕಾಮಗಾರಿಗಳನ್ನು ಮಾಡಿದ್ದಾರೆ ಎಂದು ಕೇಳುವುದಕ್ಕೆ ಹೋದರೆ ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ಯಾರು ತಯಾರಿಲ್ಲ.

**ಶ್ರೀ ಯು.ಟಿ.ಖಾದರ್ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) (ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಈಗಾಗಲೇ ಶ್ರೀ ಚಂದ್ರಶೇಖರ ಪಾಟೀಲ ಕ್ರೀಡಾಂಗಣಕ್ಕೆ ಸುಮಾರು 3.5 ಕೋಟಿ ರೂಪಾಯಿಗಳು ಮಂಜೂರಾಗಿದೆ. 40 ಕಾಮಗಾರಿಗಳಲ್ಲಿ 25 ಕಾಮಗಾರಿಗಳು ಪೂರ್ಣಗೊಂಡಿದ್ದು, 11 ಕಾಮಗಾರಿಗಳು ಪ್ರಗತಿಯಲ್ಲಿವೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಿರ್ಮಿತಿ ಕೇಂದ್ರದ ಕಾಮಗಾರಿಗಳನ್ನು ವಹಿಸಲಾಗಿದ್ದು, ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದೇಶಿಸಲಾಗುವುದು.

ಎರಡನೆಯದು, ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ಏನು ತಿಳಿಸಿದ್ದಾರೆ, ಆ ವಿಚಾರಗಳ ಮಾಹಿತಿಯನ್ನು ಪಡೆದುಕೊಂಡು ಅಧಿಕಾರಿಗಳ ಮುಖಾಂತರ ಅದನ್ನು ಕೂಡ ಸರಿಪಡಿಸಲಾಗುವುದು. ಮಾನ್ಯ ಸದಸ್ಯರು ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಗಾರ್ಡನ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿರ್ಮಾಣಕ್ಕೆ 10.00 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಈಗಾಗಲೇ ಈ ಕಾಮಗಾರಿಯು ಪ್ರಾರಂಭವಾಗಿದ್ದು, ಇದರಲ್ಲಿ 2.50 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. 7.50 ಲಕ್ಷ ರೂಪಾಯಿಗಳು ಇನ್ನು ಬಿಡುಗಡೆಯಾಗಿಲ್ಲ ಮತ್ತು ಈಗಾಗಲೇ ಈ ಕಾಮಗಾರಿಯು ಪ್ರಗತಿಯಲ್ಲಿದ್ದು ಇದರ ಮಾಹಿತಿಯನ್ನು ತಮಗೆ ಒದಗಿಸುತ್ತೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಈ ನಿರ್ಮಿತಿ ಕೇಂದ್ರದ ಕಾಮಗಾರಿಯು ಬಹಳ ಕಳಪೆಯಿಂದ ಕೂಡಿದೆ.

**ಶ್ರೀ ಯು.ಟಿ.ಖಾದರ್**:- ಮಾನ್ಯ ಸಭಾಪತಿಯವರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಿರ್ಮಿತಿ ಕೇಂದ್ರ ಕಾಮಗಾರಿಯು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದೆ. ಹಾಗೆಯೇ ಶ್ರೀ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣ ಕಾಮಗಾರಿಯು ಸಹ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇದೆ. ಜಿಲ್ಲಾಧಿಕಾರಿಯವರು ಮಾತನಾಡಿ ಈ ಎಲ್ಲಾ ಕಾಮಗಾರಿಗಳನ್ನು ಸಮರ್ಪಕವಾಗಿ, ಸರಿಯಾದ ಸಮಯದಲ್ಲಿ ಪೂರ್ಣಗೊಳಿಸುವುದಕ್ಕೆ ಮತ್ತು ಇದರ ಸಂಪೂರ್ಣ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ . . .

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಬೇಕು. ಏಕೆಂದರೆ ಇದು ಇಡೀ ರಾಜ್ಯಕ್ಕೆ ಎರಡನೆ ಅತಿದೊಡ್ಡ ಸಮುಚ್ಚಯ ಮತ್ತು ಕ್ರೀಡಾಂಗಣವಾಗಿದ್ದು, ಈ ಕಾಮಗಾರಿಯ ಪಟ್ಟಿಯಲ್ಲಿ ಕೊಟ್ಟಿರುವ ಕಾಮಗಾರಿಯ ಪ್ರಗತಿಯನ್ನು ನೋಡುವುದಕ್ಕೆ ಮಾನ್ಯ ಶಾಸಕರೊಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು ಘೋಷಣೆ ಮಾಡಬೇಕು. ನಾವು ಆ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲನೆ ಮಾಡುತ್ತೇವೆ. ಸರ್ಕಾರದ ಹಣ ಪೋಲಾಗುತ್ತಿದೆ. ಪದೇ ಪದೇ ರಿಪೇರಿ ಮಾಡುವುದು, ಕೆಟ್ಟು ಹೋಗುವುದು, ಶಿಥಿಲಾವಸ್ಥೆಗೆ ಹೋಗುವುದು, stands ಪರಿಸ್ಥಿತಿ, ಸುತ್ತುಗೋಡೆಯ ಪರಿಸ್ಥಿತಿ ಸರಿಯಿಲ್ಲ. ಶೌಚಾಲಯಗಳ ವ್ಯವಸ್ಥೆ ಇಲ್ಲ. ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ ಎಂಬ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ ಇವರು ಉತ್ತರದಲ್ಲಿ ಕೊಟ್ಟಿರುವಂತೆ ಯಾವುದೇ ವ್ಯವಸ್ಥೆಗಳು ಇಲ್ಲ. ಹೀಗಾಗಿ routine ಉತ್ತರ ನಮಗೆ ಬೇಡ. ಇದಕ್ಕೆ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ 10.00 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಈ 10.00 ಲಕ್ಷ ರೂಪಾಯಿಗಳಲ್ಲಿ ಏನೇನು ಕಾಮಗಾರಿಗಳಾಗಿವೆ ಎಂಬುದು ನನಗೆ ಗೊತ್ತಿಲ್ಲ. ಹೀಗಾಗಿ ಇದಕ್ಕೆ ನಿಖರವಾದಂತಹ ಒಂದು ಸಮಿತಿಯನ್ನು ರಚನೆ ಮಾಡಲು ಘೋಷಣೆ ಮಾಡಿ, ಯಾವ ರೀತಿಯಲ್ಲಿ ಕಾಮಗಾರಿಗಳು ನಡೆಯುತ್ತಿವೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ನಾವು ಹೋಗಿ ನೋಡುತ್ತೇವೆ. ಆ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಹ ನಮ್ಮ ಜೊತೆಯಲ್ಲಿ ಬರಲಿ.

**ಶ್ರೀ ಯು.ಟಿ.ಖಾದರ್**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ಜಿಲ್ಲಾ ಕ್ರೀಡಾಂಗಣ ಮೇಲುಸ್ತುವಾರಿ ಎಂದು ಒಂದು ಸಮಿತಿ ಇದೆ. ಇದರ ಜೊತೆ ನಿರ್ಮಿತಿ ಕೇಂದ್ರದ ಕಾಮಗಾರಿಗಳನ್ನು ನೋಡಿಕೊಳ್ಳಲು ಅಧ್ಯಕ್ಷರು ಇದ್ದಾರೆ. ಜಿಲ್ಲಾ ಕ್ರೀಡಾಂಗಣ ಮೇಲುಸ್ತುವಾರಿ ಸಮಿತಿಯ ಸಭೆಗೆ ಮಾನ್ಯ ಶಾಸಕರು ಸಹ ಹೋಗಬಹುದು. ಇದರಿಂದ ವರದಿಯನ್ನು ತರಿಸಿ, ಅಗತ್ಯವಿದ್ದಲ್ಲಿ ಅದನ್ನು . . .

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಇದು ಬಹಳ ಅಗತ್ಯವಿದೆ. ಸಾಕಷ್ಟು ಬಾರಿ allegation ಇದೆ.

**ಸಭಾಪತಿಯವರು**:- ಮಾನ್ಯ ಸಚಿವರು ಈ ಕಾಮಗಾರಿಗಳ ಕೆಲಸವನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೆ, ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಂದ ಇದರ ಬಗ್ಗೆ ತನಿಖೆಯಾದರೆ ಒಳ್ಳೆಯದು, ಏಕೆಂದರೆ ಸರ್ಕಾರದ ವತಿಯಿಂದ ಕಾಮಗಾರಿಗಳಿಗೆ ಅನುದಾನವನ್ನು ಕೊಡಲಾಗುತ್ತಿದೆ. ಶಾಸಕರಾಗಿ ನಾವು ಸಹ ಅನುದಾನವನ್ನು ಕೊಡುತ್ತಿದ್ದೇವೆ. ಕಲಬುರ್ಗಿ ನಗರದಲ್ಲಿ ಕಾಮಗಾರಿಗಳು ಸರಿಯಾಗಿ ಆಗುತ್ತಿಲ್ಲ. ಇಡೀ ರಾಜ್ಯದಲ್ಲಿ ಅತಿದೊಡ್ಡ ಸಂಕೀರ್ಣವಾಗಿದ್ದು, ಒಳ್ಳೆಯ ರೀತಿಯಲ್ಲಿ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಭಾಗಕ್ಕೆ ಸಂಪೂರ್ಣವಾಗಿ ಉಪಯೋಗವಾಗಲಿ ಎನ್ನುವುದು ನನ್ನ ಉದ್ದೇಶವಾಗಿದೆ. ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಂದ ಇದರ ಬಗ್ಗೆ ತನಿಖೆಯಾದರೆ ಏನು ಸಮಸ್ಯೆಯಿಲ್ಲ. ಇದರಿಂದ ಸರ್ಕಾರಕ್ಕೆ ಒಂದು ಒಳ್ಳೆಯ ಹೆಸರು ಬರುತ್ತದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಂದ ಕಾಮಗಾರಿಗಳ ಬಗ್ಗೆ ಒಂದು ತನಿಖೆಯನ್ನು ಮಾಡಿಸಲು ಘೋಷಣೆಯನ್ನು ಮಾಡಬೇಕು.

**ಶ್ರೀ ಯು.ಟಿ.ಖಾದರ್**:- ಮಾನ್ಯ ಸಭಾಪತಿಯವರೆ, ಈ ಕಾಮಗಾರಿಗಳನ್ನು ಖಾಸಗಿಯವರು ಯಾರು ನಿರ್ವಹಣೆ ಮಾಡುತ್ತಿಲ್ಲ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವಂತಹ ಮತ್ತು ಅವರ under ನಲ್ಲಿ ಇರುವಂತಹವರೇ ನಿರ್ಮಿತಿ ಕೇಂದ್ರದ ಕೆಲಸವನ್ನು ಮಾಡುವಂತಹದ್ದು. ಈಗಾಗಲೇ ಜಿಲ್ಲಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ರೀಡಾಂಗಣ ಮೇಲುಸ್ತುವಾರಿ ಎಂದು ಒಂದು ಸಮಿತಿ ಇದೆ. ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಗಳನ್ನು ಸಮರ್ಪಕವಾಗಿ ಮತ್ತು ಒಳ್ಳೆಯ ಪ್ರಶ್ನೆಗಳನ್ನು ಎತ್ತಿದ್ದಾರೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಈ ನಿರ್ಮಿತಿ ಕೇಂದ್ರಗಳ ಕಾಮಗಾರಿಗಳ ಬಗ್ಗೆ ಜಿಲ್ಲಾ ಕ್ರೀಡಾಂಗಣ ಮೇಲುಸ್ತುವಾರಿ ಸಮಿತಿಯವರು ಏನು ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಅದಕ್ಕೆ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಯವರಿಂದ ಈಗಲೇ ಒಂದು ತನಿಖೆಗೆ ಆದೇಶ ಮಾಡಬೇಕು.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಉದ್ದೇಶ ಮತ್ತು ನಮ್ಮ ಉದ್ದೇಶ ಎರಡು ಒಂದೇ. ಈ ಕಾಮಗಾರಿಗಳನ್ನು ಹೇಗೆ ಕಾರ್ಯಗತಗೊಳಸಬೇಕೆನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದ್ದು, ಮಾನ್ಯ ಸದಸ್ಯರ ಸಲಹೆ ತಪ್ಪು ಎಂದು ನಾನು ಹೇಳುತ್ತಿಲ್ಲ. ಇದರ ಬಗ್ಗೆ ಜಿಲ್ಲಾಧಿಕಾರಿಯವರಿಂದ ಒಂದು ವರದಿಯನ್ನು ತೆಗೆದುಕೊಳ್ಳೋಣ. ಇದಕ್ಕೆ ಒಂದು ಸಮಿತಿಯು ಅಗತ್ಯವಿದೆ ಎಂದು ಅನಿಸಿದರೆ ಒಂದು ಸಮಿತಿಯನ್ನು ನೇಮಿಸೋಣ.

**Mr. CHAIRMAN:** Wonderful.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೆ, ಇದಕ್ಕೆ ಒಂದು ಸಮಿತಿಯನ್ನು ಘೋಷಣೆ ಮಾಡಬೇಕು. ಕಲಬುರ್ಗಿ ನಗರದಲ್ಲಿ ಕಳಪೆ ಕಾಮಗಾರಿಗಳು ನಡೆಯುತ್ತಿದೆ ಎಂದು ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಜಿಲ್ಲಾಧಿಕಾರಿಯವರ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದ್ದಾರೆ.

**ಪ್ರಶ್ನೆ ಸಂಖ್ಯೆ: 105**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಪ್ರಶ್ನೆಯನ್ನು ಕೇಳಿದ ಉದ್ದೇಶವೇನೆಂದರೆ "ಕಾಂಗ್ರೆಸ್ ನಡಿಗೆ, ಕೃಷ್ಣ ಕಡೆಗೆ" ಎನ್ನುವಂತಹ ಆಶ್ವಾಸನೆಯನ್ನು ಕೊಟ್ಟು, ಪ್ರತಿವರ್ಷ ಕೃಷ್ಣ ಮೇಲ್ದಂಡೆ ಯೋಜನೆಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಇಡುತ್ತೇವೆ ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಪ್ರಸ್ತಾಪ ಮಾಡಿದ್ದರು. ಇದರ ಬಗ್ಗೆ ಎಲ್ಲಾ ಕಡೆಯಲ್ಲೂ ಭಾಷಣ ಮಾಡಿಕೊಂಡು ಪ್ರಚಾರವನ್ನು ಸಹ ಪಡೆದರು. ಆದರೆ ನನ್ನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆಯಿರುವುದೇನೆಂದರೆ, 5 ವರ್ಷದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ 17719.26 ರೂಪಾಯಿಗಳ ಅನುದಾನವನ್ನು ಕೊಡಲಾಗಿದೆ. ಆದರೆ ಈ ಯೋಜನೆಗೆ 12897.71 ಅನುದಾನವನ್ನು ಖರ್ಚು ಮಾಡಲಾಗಿದೆ. ಶೇಕಡಾ 30 ರಷ್ಟು ಅನುದಾನವನ್ನು ಕೊಟ್ಟಿದ್ದು, ಇದರಲ್ಲಿ ಶೇಕಡಾ 25ರಷ್ಟು ಅನುದಾನವನ್ನು ಮಾತ್ರ ಖರ್ಚು ಮಾಡಲಾಗಿದೆ. ತಾವು ಕೊಟ್ಟಿರುವ ಆಶ್ವಾಸನೆ ಏನಾಯಿತು. ಉತ್ತರ ಕರ್ನಾಟಕ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಜನರಿಗೆ ತಾವು ಮೋಸ ಮಾಡಿದರಲ್ಲವೇ ಮತ್ತು ಸುಳ್ಳು ಹೇಳಿದ ಹಾಗೆ ಆಗಲಿಲ್ಲವೇ?

**ಶ್ರೀ ಎಂ.ಬಿ.ಪಾಟೀಲ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. "ಕಾಂಗ್ರೆಸ್ ನಡಿಗೆ, ಕೃಷ್ಣಾ ಕಡೆಗೆ" ಎನ್ನುವಂತಹ ಆಶ್ವಾಸನೆಯನ್ನು ಮಾಡಲಾಗಿದೆ. ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರು ಲೆಕ್ಕ ಹಾಕಿರುವಂತಹದ್ದು. ಈ ರಾಜ್ಯದಲ್ಲಿರುವ ಒಟ್ಟು ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಸುಮಾರು 47 ಸಾವಿರ ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆ ಇದೆ ಎಂದು ತಾವು ಅಂದಾಜು ಮಾಡಿದ್ದೀರಿ. ಆ ಪ್ರಕಾರವಾಗಿ ಈ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಪ್ರತಿವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, 5 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳಾದರೆ, ತಾವು ಲೆಕ್ಕ ಹಾಕಿರುವ ಪ್ರಕಾರ ಈ ಯೋಜನೆಯ ಕಾಮಗಾರಿಯು ಮುಗಿಯುತ್ತದೆ. ಕೃಷ್ಣ ಮೇಲ್ದಂಡೆ ಯೋಜನೆಗೆ ಮಾತ್ರವಲ್ಲ, ನಾನು ಹೇಳುವ ಮಾತನ್ನು ಪೂರ್ತಿಯಾಗಿ ಮಾನ್ಯ ಸದಸ್ಯರು ಕೇಳಬೇಕು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಡಿಸೆಂಬರ್‌ವರೆಗೆ ಖರ್ಚು ಮಾಡಿರುವಂತಹ ಹಣ ಸುಮಾರು 43 ಸಾವಿರ ಕೋಟಿ ರೂಪಾಯಿಗಳು ದಾಟಿದೆ. ಇನ್ನು ಮೂರ್ನಾಲ್ಕು ತಿಂಗಳಿನಲ್ಲಿ ಇಲ್ಲಿಯವರೆಗೆ 50 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದೆಯಲ್ಲವೇ, ಪ್ರತಿವರ್ಷ 10 ಸಾವಿರ ಕೋಟಿ ರೂಪಾಯಿಗ್ಳಾದರೆ, 5 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳನ್ನು ನಾವು ದಾಟುತ್ತೇವೆ. ಉಳಿದಂತಹ ಪ್ರಶ್ನೆಗಳಿಗೂ ಸಹ ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರೆ, ತಮ್ಮ ಸರ್ಕಾರವಿದ್ದಾಗ ಉತ್ತರ ಕರ್ನಾಟಕಕ್ಕೆ 12 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ನಾವು ಇಲ್ಲಿಯವರೆಗೆ ಅಂದರೆ, ಡಿಸೆಂಬರ್ ಅಂತ್ಯದವರೆಗೆ ಉತ್ತರ ಕರ್ನಾಟಕಕ್ಕೆ 26 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದು 30 ಸಾವಿರ ಕೋಟಿ ರೂಪಾಯಿಗಳನ್ನು ಸಹ ದಾಟುತ್ತದೆ.

ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತವನ್ನು ತೆಗೆದುಕೊಂಡರೆ ಅವರ ಸರ್ಕಾರವಿದ್ದಾಗ 652 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ಆದರೆ ನಾವು ಇಲ್ಲಿಯವರೆಗೆ ಅಂದರೆ, ಡಿಸೆಂಬರ್ ಅಂತ್ಯದವರೆಗೆ ಸುಮಾರು 7 ಸಾವಿರ ಕೋಟಿ ರೂಪಾಯಿಗಳನ್ನು ನಾವು ಖರ್ಚು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದೇವೆ. ಕೃಷ್ಣ ಮೇಲ್ದಂಡೆ ಯೋಜನೆ ಮತ್ತು 9 ಉಪ ಯೋಜನೆಗಳನ್ನು ಕೂಡಿದರೆ 12897.71 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ತೆಗೆದುಕೊಂಡರೆ ತಮ್ಮ ಸರ್ಕಾರವಿದ್ದಾಗ 82 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿತ್ತು. ನಾವು ಭದ್ರಾ ಮೇಲ್ದಂಡೆ ಯೋಜನೆಗೆ ಡಿಸೆಂಬರ್ ಅಂತ್ಯದವರೆಗೆ ಸುಮಾರು 1500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕಾವೇರಿ ಕೊಳ್ಳದ ಯೋಜನೆಯನ್ನು ತೆಗೆದುಕೊಂಡರೆ ಅವರ ಸರ್ಕಾರವಿದ್ದಾಗ 4127 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಿದ್ದೇನೆ. ಈ ಯೋಜನೆಗೆ ನಾವು ಡಿಸೆಂಬರ್ ಅಂತ್ಯದವರೆಗೆ 7113.63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ದಕ್ಷಿಣ ಕರ್ನಾಟಕದ ಯೋಜನೆಯನ್ನು ತೆಗೆದುಕೊಂಡರೆ ಅವರ ಸರ್ಕಾರವಿದ್ದಾಗ 4127 ಕೋಟಿ ರೂಪಾಯಿಗಳಾದರೆ, ಉಳಿದ ಮಧ್ಯ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಎಲ್ಲಾ ಯೋಜನೆಗಳಿಗೆ 13396.51 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಕೃಷ್ಣ ಮೇಲ್ದಂಡೆ ಯೋಜನೆಗೆ ಮಾತ್ರ 10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿರಲಿಲ್ಲ. ರಾಜ್ಯದ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ 47500 ಕೋಟಿ ರೂಪಾಯಿಗಳಾಗುತ್ತವೆ. ಹೀಗಾಗಿ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೆ, 5 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳಾಗುತ್ತದೆ ಎಂದು ಹೇಳಲಾಗಿತ್ತು. ತದನಂತರ ಈ ಕೃಷ್ಣ ಮೇಲ್ದಂಡೆ ಯೋಜನೆಯ 3ನೇ ಹಂತ ಅಂದರೆ, ಹೊಸ ಭೂ ಸ್ವಾಧೀನ ಕಾಯ್ದೆ ಬಂದ ನಂತರ  ನಾಲ್ಕು ಪಟ್ಟು ಇದೆಲ್ಲವೂ ಕೂಡ ಸೇರಿ ಈಗ 30 ಸಾವಿರ ಕೋಟಿ land acquisition ಮತ್ತು R & R ಗೆ  ಬೇಕಾಗುತ್ತದೆ. ಎತ್ತಿನ ಹೊಳೆ ಯೋಜನೆಗೆ ಸುಮಾರು 14 ಸಾವಿರ ಕೋಟಿ ರೂಪಾಯಿಗಳಾಯಿತು. ಭದ್ರಾ ಮೇಲ್ದಂಡೆ ಯೋಜನೆಗೆ ಸುಮಾರು 13 ಸಾವಿರ ಕೋಟಿ ರೂಪಾಯಿಗಳಾಗಿವೆ. ಹೀಗಾಗಿ ಒಂದು ಲಕ್ಷ ಕೋಟಿ ರೂಪಾಯಿಗಳು ಇವತ್ತಿನ ದಿವಸ ಆಗಿದೆ. ನಮ್ಮ ಸರ್ಕಾರ ನುಡಿದಂತೆ, ಪ್ರತಿವರ್ಷ 10 ಸಾವಿರ ಕೋಟಿ ರೂಪಾಯಿ ಮತ್ತು 5 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದೆಯಲ್ಲವೆ, ಅದೇ ರೀತಿ ನಾವು ಖರ್ಚು ಮಾಡುತ್ತಿದ್ದೇವೆ. ತಮ್ಮ ಸರ್ಕಾರಕ್ಕಿಂತ ಗಣನೀಯ ಪ್ರಮಾಣದಲ್ಲಿ ಸಾಧನೆಯನ್ನು ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 105 (ಮುಂದು)**

**ಶ್ರೀ ಎಂ.ಬಿ.ಪಾಟೀಲ್(ಮುಂದು):-**

ಸಿಂಗಟಾಲೂರು ಯೋಜನೆಯ ಮಾಹಿತಿಯನ್ನೂ ಸಹ ನಾನು ಒದಗಿಸುತ್ತೇನೆ. ಪ್ರತಿಯೊಂದು ಜಿಲ್ಲೆಯ ಪ್ರತಿಯೊಂದು ಯೋಜನೆಯ ವಿಸ್ತೃತ ವಿವರಗಳನ್ನು ನೀಡುತ್ತೇವೆ. ಸಿಂಗಟಾಲೂರು ಯೋಜನೆಯಲ್ಲಿ ಕಳೆದ 15 ವರ್ಷಗಳಲ್ಲಿ ಎಷ್ಟು ಹಣ ಖರ್ಚು ಆಗಿದೆ ಹಾಗೂ ನಮ್ಮ ಅಧಿಕಾರಾವಧಿಯ ಐದು ವರ್ಷದಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎಲ್ಲಾ ಮಾಹಿತಿಗಳನ್ನು ಒದಗಿಸುತ್ತೇನೆ. ಮಾನ್ಯ ಸದಸ್ಯರು ತಿಳಿದುಕೊಂಡಿರುವ ವಿಚಾರವು ತಪ್ಪಾಗಿದೆ. ಕೇವಲ ಕೃಷ್ಣಾ ಮೇಲ್ದಂಡೆ ಯೋಜನೆಗೆ ಮಾತ್ರವಲ್ಲದೇ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಖರ್ಚು ಮಾಡುತ್ತೇವೆ ಎಂಬುದಾಗಿ ಹೇಳಿದ್ದೇವೆ. ಅದರಂತೆ ಐದು ವರ್ಷಕ್ಕೆ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ 50 ಸಾವಿರ ಕೋಟಿ ರೂಪಾಯಿಗಳನ್ನು ಒದಗಿಸಬೇಕಾಗುತ್ತದೆ. ಇಲ್ಲಿಯವರೆಗೆ ಎಲ್ಲಾ ನೀರಾವರಿ ಯೋಜನೆಗಳಿಗೆ 47,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

**ಶ್ರೀ ಬಿ.ಹೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ನೀರಾವರಿ ವಿಚಾರದಲ್ಲಿ ಭಾಷಣವನ್ನು ಮಾಡಲಿ ಅದನ್ನು ನಾವುಗಳೆಲ್ಲರೂ ಕೇಳುತ್ತೇವೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂಬುದಾಗಿ ಸರ್ಕಾರ ಈ ಮುಂಚೆ ಹೇಳಿಕೆಯನ್ನು ನೀಡಿದ್ದು, ಈಗ ಆ ರೀತಿಯಾಗಿ ಹೇಳಿಕೆಯನ್ನು ನೀಡಿಲ್ಲ ಎಂಬುದಾಗಿ ವ್ಯತಿರಿಕ್ತವಾಗಿ ಹೇಳುತ್ತಿರುವ ಬಗ್ಗೆ ನಾನು ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದೇವೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಸ್ಪಷ್ಟೀಕರಣವನ್ನು ನೀಡಿದ್ದೇನೆ.

**ಶ್ರೀ ಬಿ.ಹೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ನಂತರ ಮಾನ್ಯ ಮಂತ್ರಿಗಳು ಮಾತನಾಡಲಿ. ಮಾನ್ಯ ಮಂತ್ರಿಗಳು ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿಲ್ಲ ಎಂಬ ವಿಚಾರವನ್ನು ನಮ್ಮ ಸದನದ ಯಾವುದೇ ಸದಸ್ಯರಿಗೆ ಹೇಳಲಿ. 'ಕಾಂಗ್ರೆಸ್ ನಡಿಗೆ ಕೃಷ್ಣಾ ಕಡೆಗೆ' ಎಂಬುದಾಗಿ ಭಾಷಣವನ್ನು ಮಾಡಿ, ಆ ಪ್ರದೇಶದಲ್ಲಿ walk ಮಾಡಿ entertainment ತೆಗೆದುಕೊಂಡಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಟ್ಟಾರೆಯಾಗಿ 12,897.71 ಕೋಟಿ ರೂಪಾಯಿಗಳನ್ನು ಈವರೆಗೆ ಖರ್ಚು ಮಾಡಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ನಾನು ಆಕ್ಷೇಪಣೆಯನ್ನು ವ್ಯಕ್ತಪಡಿಸುತ್ತೇನೆ. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಯೋಜನೆಯಲ್ಲಿ ಶೇಕಡಾ 25 ರಷ್ಟು ಅನುದಾನವನ್ನು ಕಡಿತಗೊಳಿಸಿದ್ದಾರೆ. ನಿಮ್ಮ ಸರ್ಕಾರ ಇಂತಿಷ್ಟು ಹಣವನ್ನು ಖರ್ಚು ಮಾಡಿದೆ ಆದರೆ ನಮ್ಮ ಸರ್ಕಾರ ಇಂತಿಷ್ಟು ಹಣವನ್ನು ಖರ್ಚು ಮಾಡಿರುವ ಬಗ್ಗೆ ತಿಳಿಸುತ್ತಾರೆ. . . . **(ಗೊಂದಲ)** . . . ಸರ್ಕಾರವು ಈಗಾಗಲೇ ಹೇಳಿದಂತೆ ಕೃಷ್ಣಾ ಮೇಲ್ದಂಡೆ ಯೋಜನೆಗೆ 10 ಸಾವಿರ ಕೋಟಿ ರೂಪಾಯಿಗಳನ್ನು ಎಲ್ಲಿ ಇಟ್ಟಿದ್ದೀರಿ?

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ನಾವು ಘೋಷಣೆ ಮಾಡಿರುವ manifesto copyನ್ನು ಒದಗಿಸುತ್ತೇನೆ.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಬೇರೆ ನೀರಾವರಿ ಯೋಜನೆಗಳ ಬಗ್ಗೆ ಕೇಳುತ್ತಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯ ವಿಚಾರದಲ್ಲಿ ಸರ್ಕಾರ ತಾನು ಕೊಟ್ಟಿರುವ ಮಾತನ್ನು ತಪ್ಪಿದೆಯೋ ಅಥವಾ ಇಲ್ಲವೋ? ನೀವು ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇವೆ ಎಂಬುದಾಗಿ ಹೇಳಿದ್ದೀರೋ ಅಥವಾ ಇಲ್ಲವೋ?

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಬಳಿ ನಾವು ಘೋಷಣೆ ಮಾಡಿರುವ manifesto copy ಇದೆ.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇವೆ ಎಂಬುದಾಗಿ ಹೇಳಿದ್ದಾರೋ ಅಥವಾ ಇಲ್ಲವೋ?

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ಬಳಿ ನಾವು ಘೋಷಣೆ ಮಾಡಿರುವ manifesto copy ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿಯಾಗಿದ್ದು, ಇದರಲ್ಲಿ manifesto ಗಳ ಚರ್ಚೆ ಅಲ್ಲ.

**(ಗೊಂದಲ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇವೆ ಎಂಬುದು ನಿಮ್ಮ ಮಾತು ಆಗಿದೆ. . . . **(ಗೊಂದಲ)** . . . . ಕೃಷ್ಣಾ ಕಡೆಗೆ ಕಾಂಗ್ರೆಸ್ ನಡಿಗೆ ಎಂಬುದಾಗಿ ಹೇಳಿದ್ದೀರಿ. ಅಂದರೆ ಅತೀ ಹೆಚ್ಚು ಹಣವನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ಉಪಯೋಗ ಮಾಡಬೇಕು.

**(ಗೊಂದಲ)**

**ಶ್ರೀ ಬಿ.ಜಿ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ನೀರಾವರಿ ಯೋಜನೆಗಳಿಗೆ 58 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂಬುದಾಗಿ ಹೇಳಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು manifesto copy ಯನ್ನು ತರಿಸುತ್ತಿದ್ದೇನೆ. I have clarified…

**(ಗೊಂದಲ)**

**ಶ್ರೀ ಬಿ.ಜಿ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಡಿ ಕರ್ನಾಟಕ ರಾಜ್ಯದಲ್ಲಿ ಈ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನನ್ನದೊಂದು ಪ್ರಶ್ನೆ ಇದೆ. ನೀವು ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರತಿ ವರ್ಷಕ್ಕೆ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ.... .

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಕೃಷ್ಣಾ ಮೇಲ್ದಂಡೆ ಯೋಜನೆಗೆ ಎಂಬುದಾಗಿ ಹೇಳಿಲ್ಲ. ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ 10 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದು ಎಂಬುದಾಗಿ ಹೇಳಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಈ ಮಾತುಗಳು ದಾಖಲೆಗೆ ಹೋಗುವುದಿಲ್ಲ. It will not go on record.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್**:- ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಇಲ್ಲಿ ಸುಮ್ಮನೆ ರಾಜಕಾರಣ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, 2013-14 ನೇ ಸಾಲಿನ ಆಯವ್ಯಯದಲ್ಲಿ ನಾನು ಹೇಳಿರುವ ಅಂಶಗಳನ್ನೊಳಗೊಂಡ manifesto copy ಯನ್ನು ತರಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು . . . .

**ಶ್ರೀ ಬಸನಗೌಡ ಆರ್.ಪಾಟೀಲ್ (ಯತ್ನಾಳ್)**:- ಮಾನ್ಯ ಸಭಾಪತಿಯವರೇ, ಕೇವಲ ಕೃಷ್ಣಾ ಮೇಲ್ದಂಡೆಯ ನೀರಾವರಿ ಯೋಜನೆಗೆ ಪ್ರತಿ ವರ್ಷಕ್ಕೆ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಹಾಗೂ ಡಾ॥ ಜಿ.ಪರಮೇಶ್ವರ್ ರವರುಗಳು ಕೃಷ್ಣಾ ನದಿಯ ಮೇಲೆ ಪ್ರಮಾಣ ಮಾಡಿ ಹೇಳಿದ್ದಾರೆ.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ನಾವು ನಮ್ಮ manifesto ಒದಗಿಸುತ್ತೇವೆ.

**(ಗೊಂದಲ)**

**ಶ್ರೀ ಬಸನಗೌಡ ಆರ್.ಪಾಟೀಲ್(ಯತ್ನಾಳ್)**:- ಮಾನ್ಯ ಸಭಾಪತಿಯವರೇ, ನೀವು ಮಾಡಿರುವ manifesto ಪ್ರಕಾರವೇ ನಾನು ಹೇಳುತ್ತಿರುವುದು.

**(ಗೊಂದಲ)**

**ಶ್ರೀ ಬಿ.ಜಿ.ಪುಟ್ಟಸ್ವಾಮಿ**:- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಪ್ರಮಾಣ ಮಾಡಿ ಹೇಳಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ತಮ್ಮ manifesto, ಹೇಳಿಕೆಗಳನ್ನು ತೆಗೆದುಕೊಂಡು ಬರಲಿ. ನಾವು ಬರುತ್ತೇವೆ. ಈ ವಿಚಾರದಲ್ಲಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

**(ಗೊಂದಲ)**

**Mr. CHAIRMAN:** Agreed.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನಾನು ಉತ್ತರವನ್ನು ನೀಡುತ್ತಿದ್ದೇನೆ. ಹೀಗಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಲಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದೇ ವಿಷಯಕ್ಕೆ ಸಂಬಂಧಪಟ್ಟ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನನಗೆ ಉತ್ತರವನ್ನು ನೀಡಲು ಅವಕಾಶವನ್ನು ಕೊಡಬೇಕಾಗುತ್ತದೆ. ಏಕೆಂದರೆ ದಾಖಲೆಗೆ ತಪ್ಪು ಮಾಹಿತಿ ಹೋಗಬಾರದು.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟ ಮೇಲೆ ಏಕೆ ತಪ್ಪು ಮಾಹಿತಿ ಹೋಗುತ್ತದೆ?

**ಶ್ರೀ ಎಂ.ಬಿ.ಪಾಟೀಲ್:–** ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಏಕೆ ಆಕ್ಷೇಪಣೆ? ನಾನು ಮಾನ್ಯ ಸಭಾಪತಿಯವರನ್ನು ಅವಕಾಶ ಕೇಳುತ್ತಿದ್ದೇನೆ, ಅವರು ಕೊಡುತ್ತಿದ್ದಾರೆ.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಂತ್ರಿಗಳಿಗೆ ಅವಕಾಶ ಕೊಟ್ಟ ಮೇಲೆ ನಮಗೂ ಸಹ ಅವಕಾಶವನ್ನು ಕೊಡಬೇಕಾಗುತ್ತದೆ.

**Sri M.B.PATIL:-** To set the records right ನಾನು ಹೇಳುವುದೇನೆಂದರೆ, 'ಕಾಂಗ್ರೆಸ್ ನಡಿಗೆ ಕೃಷ್ಣೆಗೆ ಕಡೆಗೆ' ಎಂಬುದಾಗಿ ಮಾಡಿದಾಗ, 47,500 ಕೋಟಿ ರೂಪಾಯಿಗಳಷ್ಟು ಹಣ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಅವಶ್ಯಕವಾಗಿತ್ತು. ಹೀಗಾಗಿ ಕೇವಲ ಕೃಷ್ಣಾ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲ್ದಂಡೆ ಯೋಜನೆಗೆ ಮಾತ್ರವೇ 50 ಸಾವಿರ ಕೋಟಿ ರೂಪಾಯಿಗಳನ್ನು ಕೊಡುವ ಪ್ರಶ್ನೆಯೇ ಬರುತ್ತಿರಲಿಲ್ಲ.

**(ಗೊಂದಲ)**

**Mr. CHAIRMAN:** It will not go on record. Nothing will go on record. ಮಂತ್ರಿಗಳೇ ತಾವು ಈಗಾಗಲೇ ಈ ವಿಚಾರದಲ್ಲಿ ಮಾತನಾಡಿದ್ದೀರಿ ಹೀಗಾಗಿ ದಯವಿಟ್ಟು ಕುಳಿತುಕೊಳ್ಳಿ. . . . **(ಗೊಂದಲ)** . . . . ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಿ.ಜಿ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಕೂಡಲ ಸಂಗಮದಲ್ಲಿ ಬಸವೇಶ್ವರ ರವರ ಮೇಲೆ ಪ್ರಮಾಣ ಮಾಡಿ ಹೇಳಲಿ.

**ಸಭಾಪತಿಯವರು:–** ಸಾಕು ಕುಳಿತುಕೊಳ್ಳಿ. ಇದೇ ವಿಚಾರದಲ್ಲಿ ಪ್ರಶ್ನೋತ್ತರದ ಆಧಾರದ ಮೇಲೆ ಅರ್ಧ ಗಂಟೆಗಳ ಕಾಲ ಚರ್ಚೆಯನ್ನು ಮಾಡಲು ಬಯಸಿದರೆ ನೋಟೀಸ್‌ನ್ನು ನೀಡಿ. ಆ ನಿಯಮದಡಿ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ. ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಮಾನ್ಯ ಮಂತ್ರಿಗಳು ಹೇಳಿರುವ ಅಂಶಗಳು ದಾಖಲಾಗಿವೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕೇವಲ ಅರ್ಧ ಗಂಟೆ ಮಾತ್ರವಲ್ಲದೇ ಒಂದು ದಿನ ಪೂರ್ತಿ ಚರ್ಚೆಗೆ ಅವಕಾಶವನ್ನು ನೀಡಿ. ನಮ್ಮ manifesto ಏನಿದೆ ಎಂದರೆ . . .

**ಸಭಾಪತಿಯವರು:–** ಅವಕಾಶವನ್ನು ಕೊಡುತ್ತೇನೆ ಎಂಬುದಾಗಿ ನಾನು ಹೇಳಿದ್ದೇನೆ. ಆದರೆ ಈಗ ಚರ್ಚೆ ಬೇಡ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ manifesto document ನ್ನು ನೀವು ತೆಗೆದುಕೊಂಡು ಬರುತ್ತೀರಾ? . . . (ಗೊಂದಲ) . . . ನಮ್ಮ ಆಯವ್ಯಯದ ಭಾಷಣ ನನ್ನ ಬಳಿ ಇದೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Mr. CHAIRMAN:-** It is on record. Whatever you have told has gone into record.

**(ಗೊಂದಲ)**

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಜಿಲ್ಲೆಗೆ ಅನ್ಯಾಯ ಮಾಡುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ವಿಜಯಪುರ ಜಿಲ್ಲೆಗೆ ಬಹಳವಾಗಿ ಅನುಕೂಲವಾಗುತ್ತದೆ. ಹೀಗೆ ಮಾಡುವುದರಿಂದ ನಿಮ್ಮ ಜಿಲ್ಲೆಗೆ ಅನ್ಯಾಯ ಮಾಡುತ್ತಿದ್ದೀರಿ. ಚುನಾವಣೆಯಲ್ಲಿ ಜನ ನಿಮಗೆ ಉತ್ತರವನ್ನು ಕೊಡುತ್ತಾರೆ ಹಾಗೂ ನಿಮ್ಮನ್ನು ಸೋಲಿಸುತ್ತಾರೆ.

**(ಗೊಂದಲ)**

**Sri M.B. PATIL:-** "Allocation of Rs.10,000 crores every year to implement irrigation projects in Kaveri/Krishna water basin" – This is our manifesto. ನಮ್ಮ 2014-15 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವಂತೆ . . .

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿಯಾಗಿದೆ. ತಾವು ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೀರಿ. ಸಾಕು.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುವ ಅಂಶಗಳು ದಾಖಲೆಗೆ ಹೋಗಬೇಕು. Records set right ಆಗಬೇಕು.

**ಸಭಾಪತಿಯವರು:-** ಮಾನ್ಯ ಮಂತ್ರಿಗಳು ಹೇಳಿರುವ ಅಂಶಗಳೆಲ್ಲವೂ ದಾಖಲೆಗೆ ಹೋಗಿದೆ. It is on record.

**ಶ್ರೀ ಬಿ.ಜಿ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಬಸವಣ್ಣನ ಅನುಯಾಯಿಗಳಾಗಿದ್ದಾರೆ. ಆದ್ದರಿಂದ ಕೂಡಲ ಸಂಗಮದಲ್ಲಿ ಪ್ರಮಾಣವನ್ನು ಮಾಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಪ್ರತಿ ವರ್ಷಕ್ಕೆ 10 ಸಾವಿರ ಕೋಟಿ ರೂಪಾಯಿಗಳಂತೆ ಐದು ವರ್ಷಗಳಿಗೆ 50 ಸಾವಿರ ಕೋಟಿ ರೂಪಾಯಿಗಳನ್ನು ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುತ್ತೇವೆ ಎಂಬುದಾಗಿ ಹೇಳಿದ್ದೇವೆ.

**(ಗೊಂದಲ)**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 118**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಪಹಣಿ ಪತ್ರಿಕೆಯಲ್ಲಿ ಸುಧಾರಿತ ತಂತ್ರಾಂಶ ವ್ಯವಸ್ಥೆಗೆ ಹೊಂದಾಣಿಕೆಯಾಗದೆ ಇರುವುದರಿಂದ, ಹೊಸ ಪಹಣಿ ಪತ್ರ (ಆರ್.ಟಿ.ಸಿ.) ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡಿರುವುದರಿಂದ ರೈತರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಸರ್ಕಾರವು ಗಮನಕ್ಕೆ ಬಂದಿದೆ ಎಂಬುದಾಗಿ ಲಿಖಿತ ಉತ್ತರವನ್ನು ನೀಡಿದೆ. ಆದರೆ ಈ ವಿಚಾರದಲ್ಲಿ ಈಗಾಗಲೇ ಸಂಬಂಧಪಟ್ಟ ತಂತ್ರಾಂಶವನ್ನು ನಿರ್ವಹಣೆ ಮತ್ತು ಬದಲಾವಣೆಗಳನ್ನು ಎನ್.ಐ.ಸಿ. ಸಂಸ್ಥೆಯು ಸ್ಥಗಿತಗೊಳಿಸಿರುತ್ತದೆ. ಆದ್ದರಿಂದ "ನಮ್ಮ ಭೂಮಿ" ಎಂಬ ನೂತನ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲು ತೀರ್ಮಾನಿಸಿ ಟೆಂಡರ್ ಮೂಲಕ ಖಾಸಗಿ ಸಂಸ್ಥೆಗೆ ನೀಡಲಾಗಿದೆ ಎಂಬುದಾಗಿ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಆದರೆ ಇವತ್ತಿಗೂ ಸಹ ಗ್ರಾಮೀಣ ಭಾಗದಲ್ಲಿರುವ ರೈತರಿಗೆ ಆರ್.ಟಿ.ಸಿ. ದೊರೆಯುವಂತಹ ಸಂದರ್ಭದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ರಾಜ್ಯದಲ್ಲಿನ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರವು ಆರ್.ಟಿ.ಸಿ. ಬದಲಾವಣೆಗಾಗಿ ಹೊಸ ತಂತ್ರಾಂಶವನ್ನು ಜಾರಿಗೆ ತರುವಂತಹ ಕೆಲಸವನ್ನು ಏಕಕಾಲದಲ್ಲಿ ಮಾಡಲು ಹೋಗುವುದರಿಂದ ಇಡೀ ರಾಜ್ಯದಲ್ಲಿನ ರೈತ ಸಮುದಾಯಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರವು ನೀಡಿರುವ ಲಿಖಿತ ಉತ್ತರದಲ್ಲಿ ಸದರಿ ತಂತ್ರಾಂಶವನ್ನು ಸರಿಪಡಿಸಲಾಗಿದೆ ಹಾಗೂ ರೈತರಿಗೆ ಯಾವುದೇ ತೊಂದರೆಯಿಲ್ಲದೆ ಆರ್.ಟಿ.ಸಿ. ದೊರೆಯುತ್ತಿದೆ ಎಂಬುದಾಗಿ ಸರ್ಕಾರವು ಹೇಳಿದೆ. ಆದರೆ, ಇವತ್ತಿಗೂ ಸಹ ಗ್ರಾಮೀಣ ಭಾಗದ ರೈತರಿಗೆ ಪಹಣಿ ಪತ್ರಗಳು ಸಿಗುತ್ತಿಲ್ಲ. ರೈತರು ಯಾವುದೇ ಹೊಸ ವ್ಯವಹಾರಗಳನ್ನು ಮಾಡಬೇಕಾದರೆ, ಬ್ಯಾಂಕ್‌ಗಳಿಗೆ ಹೋಗಬೇಕಾದರೆ ಅಲ್ಲಿ ಪಹಣಿ ಪತ್ರಗಳ ಅವಶ್ಯಕತೆ ಇದೆ. ಹೀಗಾಗಿ ಇಂದಿಗೂ ಸಹ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಇಂತಹ ತೊಂದರೆಗಳನ್ನು ಸರಿಪಡಿಸುವಂತಹ ಕೆಲಸಗಳನ್ನು ಸರ್ಕಾರವು ಮಾಡಬೇಕು ಎನ್ನುವಂತಹ ಪ್ರಶ್ನೆಯನ್ನು ನಾನು ಸದನದ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಹೊಸ ತಂತ್ರಾಂಶಗಳನ್ನು ಜಾರಿಗೆ ತಂದಿರುವ ಕಾರಣದಿಂದಾಗಿ ಕೆಲವು ತೊಂದರೆಗಳು ಕಂಡು ಬರುತ್ತಿದೆ. ಮಾನ್ಯ ಸದಸ್ಯರು ಹೇಳಿರುವ ಅಂಶಗಳು ನಿಜವಾಗಿವೆ. ಈ ಹಿಂದೆ ಖಾಸಗಿ ಸಂಸ್ಥೆಗೆ ಕೆಲಸವನ್ನು ವಹಿಸಲಾಗಿತ್ತು. ನಂತರದಲ್ಲಿ ಅವರು ಕೆಲಸವನ್ನು ಬಿಟ್ಟು ಹೋದರು. ಹೀಗಾಗಿ ಕೆಲಸವನ್ನು ನಿರ್ವಹಿಸಲು ಬೇರೆಯವರಿಗೆ ವಹಿಸಲಾಗಿತ್ತು. ಆದರೆ, ಅವರಿಗೂ ಸಹ ಕೆಲಸವು ಸರಿಹೊಂದಲಿಲ್ಲ. ಹೀಗಾಗಿ ಇಲಾಖೆಯ ವತಿಯಿಂದಲೇ ಹೊಸ ತಂತ್ರಾಂಶವನ್ನು ಅಳವಡಿಸಿ, ಅದನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

**(ಮುಂದು)**

(041) 11.40/07-02-2018/ಸಿಎಸ್/ಆರ್ಎನ್

**ಶ್ರೀ ಕಾಗೋಡು ತಿಮ್ಮಪ್ಪ(ಮುಂದು):-**

ಸ್ವಲ್ಪಮಟ್ಟಿಗೆ ನಾವು ಹೇಳುವ ರೀತಿಯಲ್ಲಿಯೇ ಎಲ್ಲಾ ವ್ಯವಸ್ಥೆಗಳು ಈ ರಾಜ್ಯದಲ್ಲಿಲ್ಲ. ನಮ್ಮ ಊರಿನಲ್ಲಿಯೂ ಈ ರೀತಿಯ ಸಮಸ್ಯೆಗಳಿರುವುದನ್ನು ನಾನು ಕಂಡಿದ್ದೇನೆ. ಭೂಮಿ ವೆಬ್‌ಸೈಟನ್ನು ನಾನೇ ನೋಡಿ, ಇದನ್ನೆಲ್ಲ ಸರಿಪಡಿಸದಿದ್ದರೆ ಎಲ್ಲವನ್ನು ಒಡೆದು ಹಾಕುತ್ತೇನೆ ಎಂದು ಕೂಡ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳುತ್ತಿರುವ ವಿಚಾರ ಸತ್ಯವಾದದ್ದು. ಆದರೆ ನಾವೆಲ್ಲರೂ ಈಗ ಹಳೆಯ ಪದ್ಧತಿಯನ್ನು ಬಿಟ್ಟು ಹೊಸ ತಂತ್ರಾಂಶವನ್ನು ಹಿಡಿದುಕೊಂಡು ಕುಳಿತಿದ್ದೇವೆ. ಇದರಲ್ಲಿ ವ್ಯತ್ಯಾಸಗಳು ಕಂಡು ಬಂದಾಗ ಸ್ವಲ್ಪಮಟ್ಟಿಗಿನ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಆದಾಗ್ಯೂ ಸಹ ಈ ವ್ಯವಸ್ಥೆಯನ್ನು ಶೀಘ್ರಗತಿಯಲ್ಲಿ ಸರಿಪಡಿಸಿ, ನಮ್ಮ ಜನರಿಗೆ ಅದರ ಅನುಕೂಲ ದೊರೆಯುವ ನಿಟ್ಟಿನ ಕ್ರಮ ಕೈಗೊಳ್ಳುತ್ತೇನೆ. ಯಾವುದೇ ನಿರ್ದಿಷ್ಟ ಪ್ರಕರಣಗಳಿದ್ದಲ್ಲಿ ಅಥವಾ ಮಾಹಿತಿಗಳನ್ನು ಕೊಟ್ಟಲ್ಲಿ, ಕೂಡಲೇ ನಮ್ಮ ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಲಾಗುವುದು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, CMS Consultantany ರವರು ನಮಗೆ ಪ್ರತಿಶತ 40 ರಷ್ಟು ತಂತ್ರಾಂಶವನ್ನು ಸರಿಪಡಿಸಲು ಸಾಧ್ಯವಾಗಿಲ್ಲ ಎಂದು ಹೇಳಿರುವ ವಿಚಾರವು ಕನ್ನಡಪ್ರಭ ಮತ್ತು ಉದಯವಾಣಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ತಂತ್ರಾಂಶವನ್ನು ಸರಿಪಡಿಸಲು ಸಾಧ್ಯವಿಲ್ಲವೆನ್ನುವುದನ್ನು consultancy ಯವರು ಒಪ್ಪಿಕೊಳ್ಳುತ್ತಿದ್ದಾರೆ, ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು consultancy ಅವರನ್ನು

ಕರೆದು; it is a software. It has to be implemented property. ಏಕೆ ಇದನ್ನು ಸರಿ ಮಾಡುವುದಕ್ಕೆ ಏಕೆ ಆಗುತ್ತಿಲ್ಲ ಎನ್ನುವುದನ್ನು ಏಜೆನ್ಸಿಯವರ ಜೊತೆಗೆ ಸಭೆಯಲ್ಲಿ ಚರ್ಚಿಸಿ, ಈ ಬಗ್ಗೆ ಸರ್ಕಾರ ಏಕೆ ಕ್ರಮ ಕೈಗೊಳ್ಳಬಾರದೆಂದು ಕೇಳಬಯಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 181**

**(ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ 128**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರಕಲಂ (ಎ) ಮತ್ತು 94 (ಬಿ) ರಡಿಯಲ್ಲಿ ನಮೂನೆ 50 ಮತ್ತು 53ರಲ್ಲಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳಿಗೆ ಮಂಜೂರಾಗಿರುವ ಜಮೀನಿನ ಖಾತೆ ಮತ್ತು ಪೋಡಿಯನ್ನು ಮಾಡದೇ ಇರುವುದಕ್ಕೆ ಕಾರಣ ಏನು ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಆದರೆ ಮಾನ್ಯ ಸಚಿವರು ಉತ್ತರದ ರೀತ್ಯಾ ಇಲಾಖೆಯಲ್ಲಿ ಕೆಲಸಗಳು ನಡೆಯುತ್ತಿಲ್ಲ. ಈ ಬಗ್ಗೆ ತಹಶೀಲ್ದಾರ್ ಅವರನ್ನು ಕೇಳಿದರೆ ಅವರಿಂದ ಸರಿಯಾದ ಮಾಹಿತಿ ಲಭ್ಯವಾಗುತ್ತಿಲ್ಲ. ಮಾಹಿತಿ ಇಲ್ಲದ ಕಾರಣ ಈ ಕೆಲಸಗಳನ್ನು ಮಾಡಲಿಕ್ಕೆ ಆಗುತ್ತಿಲ್ಲ ಎಂದು ಇಲಾಖೆಯವರು ಹೇಳುತ್ತಿದ್ದಾರೆ. ದಿನಾಂಕ 9-6-2014ರಲ್ಲಿ ಹೊರಡಿಸಿದ ಒಂದು ಸರ್ಕಾರಿ ಸುತ್ತೋಲೆಯ ಪ್ರಕಾರ ಬಗರ್ ಹುಕುಂ ಸಾಗುವಳಿ ಸಮಿತಿಗಳು ಸಕ್ರಮಾತಿಯನ್ನು ಇತ್ಯರ್ಥಗೊಳಿಸುವುದಕ್ಕೆ ಹಲವಾರು ವ್ಯಾಜ್ಯಗಳಿವೆ, ಅದನ್ನೆಲ್ಲ ಇತ್ಯರ್ಥಗೊಳಿಸಿದ ಹೊರತು ಸಕ್ರಮಗೊಳಿಸಲು ಸಾಧ್ಯವಿಲ್ಲವೆಂದು ತಹಶೀಲ್ದಾರ್‌ರವರು ಹೇಳುತ್ತಾರೆ. ಅದರ ಜೊತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 18 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಜಮೀನುಗಳನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯವಿಲ್ಲವೆಂದು ತಹಶೀಲ್ದಾರ್‌ರವರು ಹೇಳುತ್ತಿದ್ದಾರೆ. ಮಾನ್ಯ ಸಚಿವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ, ಅದೇನೆಂದರೆ 1960-61ರ ಸಾಲಿನಲ್ಲಿ ಸಾಗುವಳಿ ಮಾಡುತ್ತಿದ್ದವರಿಗೆ ಮಂಜೂರಾತಿ ಪತ್ರವನ್ನು ನೀಡಲಾಗಿದೆ. ಅವರು ಪಹಣಿಗಳನ್ನು ಕೂಡ ಮಾಡಿಕೊಂಡಿದ್ದಾರೆ. ಆದರೆ ಈಗ ಈ ಜಮೀನುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 18 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಕಾರಣ ಸರ್ಕಾರವೇ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹೇಳಲಾಗುತ್ತಿದೆ. ಈ ಬಗ್ಗೆ ಎಲ್ಲಾ ರೈತರಿಗೂ ಸಹ ನೋಟಿಸ್ ನೀಡಿರುವ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿನ್ನಲೆಯಲ್ಲಿ ಅವರೆಲ್ಲರೂ ತಮ್ಮ ತಮ್ಮ ಜಮೀನುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಿದ್ದಾರೆ. ಈ ಬಗ್ಗೆ ಡಿಸಿ ಕೋರ್ಟಿನಲ್ಲಿ ವ್ಯಾಜ್ಯಗಳು ನಡೆಯುತ್ತಿದ್ದು, ಇನ್ನೂ ಇತ್ಯರ್ಥಗೊಂಡಿರುವುದಿಲ್ಲ. ದಯಮಾಡಿ ಇದಕ್ಕೆಲ್ಲ ಒಂದು ಪರಿಹಾರ ಕೊಡಿಸಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ. ಏಕೆಂದರೆ ಇದರಿಂದ ಸಾವಿರಾರು ಜನ ರೈತರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಏಕೆಂದರೆ ತಮ್ಮ ತಾತ ಮುತ್ತಾತನ ಕಾಲದಿಂದಲೂ ಸಾಗುವಳಿ ಮಾಡಿಕೊಂಡು ತಮ್ಮ ಅನುಭವದಲ್ಲಿಟ್ಟುಕೊಂಡಿರುವ ಜಮೀನನ್ನು ಇವತ್ತು ಏಕಾಏಕಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುತ್ತದೆ ಎಂದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ದಯಮಾಡಿ ಸರ್ಕಾರ ಈ ರೈತರ ಸಹಾಯಕ್ಕೆ ಬರಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಕೆಲವು ಹೊಸ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಸಕ್ರಮಾತಿ ನೀಡಲು ಸಾಧ್ಯವಿಲ್ಲ ಎನ್ನುವ ಕಾನೂನು ಈಗಾಗಲೇ ಜಾರಿಯಲ್ಲಿದೆ. ಒಂದು ವೇಳೆ ಈ ಕಾನೂನು ಬರುವುದಕ್ಕೆ ಪೂರ್ವದಲ್ಲಿ ಮಂಜೂರಾತಿಯನ್ನು ಪಡೆದಿದ್ದರೆ ಅಥವಾ ಸಾಗುವಳಿ ಚೀಟಿಯನ್ನು ಪಡೆದಿದ್ದರೆ ಅದು ಕಾನೂನಿನ ಪ್ರಕಾರ ಸಿಂಧುವಾಗುತ್ತದೆ. ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರೀತಿಯ ಯಾವುದಾದರೂ ನಿರ್ದಿಷ್ಟ ಪ್ರಕರಣದಲ್ಲಿ ಅನ್ಯಾಯ ಆಗಿದ್ದಲ್ಲಿ ಅದರ ಮಾಹಿತಿಗಳನ್ನು ನನಗೆ ಒದಗಿಸಿದರೆ, ನಾನು ಈ ಕೂಡಲೇ ಜಿಲ್ಲಾಧಿಕಾರಿಗಳಿಗೆ ಈ ಮಾಹಿತಿಗಳನ್ನು ಕೊಟ್ಟು ಅದನ್ನು ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಹೊಸ ಕಾನೂನು ಬಂದ ಮೇಲೆ ಬೆಂಗಳೂರಿನಲ್ಲಿ ಸಾಕಷ್ಟು ಗೊಂದಲಗಳು ಉಂಟಾಗಿವೆ. ಇದರಲ್ಲಿ ಬಹಳಷ್ಟು ದುರುಪಯೋಗಗಳಾಗಿವೆ, ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಸಕ್ರಮಾತಿ ನೀಡಲಾಗಿದೆ ಎನ್ನುವ ಆರೋಪಗಳು ಕೂಡ ಬಂದಿದೆ. ಇದನ್ನೆಲ್ಲ ಪರಿಶೀಲಿಸುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. ಕಾನೂನಿಗೆ ವಿರೋಧವಾಗಿದ್ದರೆ ಅದನ್ನೆಲ್ಲ ಸರಿಪಡಿಸುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ನಿರ್ದಿಷ್ಟ ಪ್ರಕರಣಗಳಲ್ಲಿ ತಿದ್ದುಪಡಿ ಕಾನೂನು ಬರುವ ಪೂರ್ವದಲ್ಲಿ ಮಂಜೂರಾತಿ ಪಡೆದಿದ್ದಲ್ಲಿ ಅದರ ಬಗ್ಗೆ ಮಾನ್ಯ ಸದಸ್ಯರು ಮಾಹಿತಿ ನೀಡಿದರೆ ಸೂಕ್ತ ಕ್ರಮ ಕೈಗೊಂಡು ಕಾನೂನು ಬದ್ಧವಾಗಿ ಮುಂದುವರೆಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಲಾಗುವುದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ಸರ್ಕಾರವೇ ಹೊರಡಿಸಿರುವ ಸುತ್ತೋಲೆ ನನ್ನ ಕೈಯಲ್ಲಿದೆ. ಅದರ ಪ್ರಕಾರ ಆನೇಕಲ್‌ನ ಒಂದೆರಡು ಗ್ರಾಮಗಳನ್ನು ಬಿಟ್ಟು ಉಳಿದೆಲ್ಲ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಗಳಲ್ಲಿನ ಜಮೀನು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಕಾರಣ ಅದನ್ನೆಲ್ಲ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕೆಂದಿದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಆನೇಕಲ್ ವಿಚಾರ ನನಗೆ ಗೊತ್ತಿದೆ. ನಿನ್ನೆಯ ದಿವಸ ಕೂಡ ಅಲ್ಲಿನ ಕೆಲವು ರೈತರು ಬಂದು ನನ್ನನ್ನು ಭೇಟಿ ಮಾಡಿದ್ದರು. ಅನೇಕಲ್‌ನ ಮೂರು ಗ್ರಾಮಗಳು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಿಂದ ಹೊರಗಿರುವ ಕಾರಣ ಅವುಗಳನ್ನು ಮಂಜೂರಾತಿ ಮಾಡುತ್ತೇವೆಂದು ಹೇಳಿ ಕಳುಹಿಸಿದ್ದೇನೆ. ಉಳಿದ ಗ್ರಾಮಗಳ ಜಮೀನು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಕಾರಣ ಅವುಗಳಿಗೆ ಮಂಜೂರಾತಿಯನ್ನು ನೀಡುವುದಕ್ಕೆ ಬರುವುದಿಲ್ಲ. ಮತ್ತೊಂದು ವಿಚಾರ ಏನೆಂದರೆ ಪೋಡಿ ಮುಂತಾದ ವಿಚಾರಗಳಲ್ಲಿ ತಹಶೀಲ್ದಾರ್‌ರವರಿಗೆ ಅಧಿಕಾರವನ್ನು ನೀಡಲಾಗಿದೆ. ಮೊದಲು ಅರ್ಜಿದಾರರು ತಹಶೀಲ್ದಾರ್‌ಗೆ ಅರ್ಜಿ ಕೊಟ್ಟು, ಅವರಿಂದ ಅದು ಎಸಿಯವರಿಗೆ, ಎ.ಸಿ ಯಿಂದ ಡಿ.ಸಿಯವರಿಗೆ ಹೋಗಬೇಕಾಗಿತ್ತು. ಅಲ್ಲಿಂದ ಪುನಃ ಕೆಳಹಂತಕ್ಕೆ ಈ ಅರ್ಜಿ ಬರಬೇಕಾಗಿತ್ತು. ಈ ಮಧ್ಯೆದಲ್ಲಿ ಸಾಕಷ್ಟು ಕೊಕ್ಕೆಗಳನ್ನು ಅಧಿಕಾರಿಗಳು ಹಾಕುತ್ತಿದ್ದರು, ಈ ಕೊಕ್ಕೆಗಳನ್ನೆಲ್ಲ ನಿವಾರಿಸಿಕೊಂಡು ಬರುವಷ್ಟಲ್ಲಿ 6 ತಿಂಗಳು ಅಥವಾ ವರ್ಷ ಆಗುತ್ತಿತ್ತು. ನಮ್ಮ ಅಧಿಕಾರಿಗಳಿಗೆ ಕೊಕ್ಕೆಗಳನ್ನು ಹಾಕುವ ಒಂದು ಸಂಸ್ಕೃತಿ ಬೆಳದು ಬಂದುಬಿಟ್ಟಿದೆ. ನಮ್ಮಲ್ಲಿ ಒಬ್ಬರು Regional Commissioner ಇದ್ದರು. ಆಕೆ ನಮ್ಮ ಊರಿನಲ್ಲಿ ಆಶ್ರಯ ಮನೆಗಳನ್ನು ನೀಡುವ ವಿಚಾರದಲ್ಲಿ 30 ಕೊಕ್ಕೆಗಳನ್ನು ಹಾಕಿದ್ದರು. ಇಂತಹ ಸಮಸ್ಯೆಗಳನ್ನೆಲ್ಲ ನಿವಾರಿಸುವ ಸಲುವಾಗಿಯೇ ತಹಶೀಲ್ದಾರ್‌ರವರಿಗೆ ಪೂರ್ಣ ಅಧಿಕಾರ ನೀಡಿದ್ದೇನೆ. ಆದರೆ ನಮ್ಮಲ್ಲಿ ಭೂಮಾಪಕ ಕೊರತೆ ಇದ್ದು, ಅದನ್ನು ತುಂಬುವ ಪ್ರಕ್ರಿಯೆ ನಡೆಯುತ್ತಿದೆ. ಮಾನ್ಯ ಸದಸ್ಯರ ಸಮಸ್ಯೆಗಳನ್ನು ಗಮನಿಸಿದ್ದೇನೆ. ಖಂಡಿತ ಅದನ್ನು ಪರಿಹರಿಸುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಬೆಂಗಳೂರಿನ ಜಾಲ ಹೋಬಳಿ, ಮರಳುಕುಂಟೆ ಗ್ರಾಮದಲ್ಲಿ ಸುಮಾರು 250 ಎಕರೆ ಜಮೀನು ಇದೆ. ಅಲ್ಲಿ 1960ನೇ ಇಸವಿಗಿಂತಲೂ ಮೊದಲು ಕೆಲವರು ಸಾಗುವಳಿ ಚೀಟಿಯನ್ನು ಪಡೆದುಕೊಂಡಿದ್ದಾರೆ. ಶೇಕಡ 90 ರಷ್ಟು ರೈತರು ಆ ದಾಖಲೆಗಳನ್ನು ಇಟ್ಟುಕೊಂಡಿದ್ದಾರೆ. ಒಂದತ್ತು ಜನ ರೈತರು ಪೌತಿ ಖಾತೆಗಳನ್ನು ಮಾಡಿಕೊಂಡು ಬೇರೆಯವರಿಗೆ ಮಾರಿ,ಖರೀದಿಸಿದವರು ಅದರ ಖಾತೆಯನ್ನು ಬದಲಾವಣೆ ಮಾಡಿಕೊಂಡು conversion ಕೂಡ ಮಾಡಿಸಿಕೊಂಡಿದ್ದಾರೆ. ಅವರು ಈ ಕಾನೂನಿನಿಂದ ವಿನಾಯಿತಿಯನ್ನು ಪಡೆಯುತ್ತಿದ್ದಾರೆ. ಆದರೆ ಶೇಕಡ 90ರಷ್ಟು ರೈತರು ಹಳೆಯ ಪಹಣಿ ಇಟ್ಟುಕೊಂಡಿದ್ದವರು ಏನು ಪಾಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದಾರೆ? ಮಾನ್ಯ ಸಚಿವರು ಹೇಳಿದಂತೆ 2007ನೇ ಇಸವಿಗಿಂತ ಮೊದಲು ಯಾರು ಸಾಗುವಳಿ ಚೀಟಿಯನ್ನು ಪಡೆದಿದ್ದಾರೆ, ಅವರಿಗೆ ಜಮೀನನ್ನು ಮಂಜೂರಾತಿ ಮಾಡಿಕೊಟ್ಟರೆ ಸಾವಿರಾರು ಜನ ರೈತರಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ಮಾನ್ಯ ಸಚಚಿವರ ಗಮನಕ್ಕೆ ತರಬಯಸುತ್ತೇನೆ. ಈ ಬಗ್ಗೆ ಮಾನ್ಯ ಸಚಿವರನ್ನು ನಾನು ಮುಕ್ತವಾಗಿ ಭೇಟಿ ಮಾಡಿ, ಅವಶ್ಯವಿರುವ ಎಲ್ಲಾ ದಾಖಲೆಗಳನ್ನು ಒದಗಿಸಿಕೊಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ದಾಖಲೆಗಳನ್ನು ನೀಡಿದರೆ ಖಂಡಿತ ಪರಿಶೀಲಿಸುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಬಗರ್ ಹುಕುಂ ಸಾಗುವಳಿಯಂತೆ ಫಾರಂ 50 ಮತ್ತು 53ರಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಜಮೀನು ಬೆಂಗಳೂರು ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಿಂದ ಹೊರಗಿರಬೇಕು ಎನ್ನುವ ಕಾನೂನು ಇರಲಿಲ್ಲ. ಹಾಗಾಗಿ ಅವರು ಅರ್ಜಿಯನ್ನು ಸಲ್ಲಿಸಿದ್ದಾರೆ. 2017ರಲ್ಲಿ ಜಮೀನು ಬೆಂಗಳೂರು ನಗರದ ಗಡಿಯಿಂದ 18 ಕಿ.ಮೀ ವ್ಯಾಪ್ತಿಯಿಂದ ಹೊರಗಿದ್ದಲ್ಲಿ ಮಾತ್ರ ಮಂಜೂರಾತಿ ನೀಡಲಾಗುವುದು ಎಂದರೆ ಆ ಅರ್ಜಿದಾರ ಮಾಡಿರುವ ತಪ್ಪೇನು? ಅರ್ಜಿ ಕೊಡುವುದು ಮಾತ್ರ ಆತನ ಕೆಲಸ, ಆತ ಮಾಡಿರುವ ಕೃಷಿಯನ್ನು ನೋಡಿ ಮಂಜೂರಾತಿ ನೀಡುವುದು, ತಿರಸ್ಕರಿಸುವುದು ಸರ್ಕಾರದ ಕೆಲಸ. ಸರ್ಕಾರಗಳು ಮಾಡಿರುವ ವಿಳಂಬಕ್ಕೆ ಅರ್ಜಿದಾರರು ತೊಂದರೆ ಅನುಭವಿಸುವುದು ಸರಿಯಲ್ಲ. ಇದನ್ನು ಮಾನವೀಯತೆಯಿಂದ ಪರಿಶೀಲಿಸಬೇಕು. ಅಲ್ಲಿನ ಸತ್ಯಾಸತ್ಯತೆಯನ್ನು ಪರಿಶೀಲಿಸಿ ರೈತ ಕೃಷಿ ನಡೆಸುತ್ತಿದ್ದು, ಅದರ ಅನುಭೋಗದಲ್ಲಿದ್ದರೆ ಆ ಜಮೀನನ್ನು ಸಾಗುವಳಿಗಾಗಿ ಮಂಜೂರು ಮಾಡಬಹುದು. ಒಂದುವೇಳೆ ಕೃಷಿ ಮಾಡದೇ ಧರ್ಮಕ್ಕೆ ಕೊಟ್ಟಿದ್ದರೆ ಸರ್ಕಾರಕ್ಕೆ ಅಧಿಕಾರ ಇದೆ, ಅವರ ಅರ್ಜಿಯನ್ನು ತಿರಸ್ಕರಿಸಬಹುದು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರ ಪಾಂಡಿತ್ಯ ನನಗೆ ಅರ್ಥವಾಗಲಿಲ್ಲ. ಕಾನೂನಿನಲ್ಲಿ ಏನಿದೆ ಅದನ್ನು ಅನುಸರಿಸಿ ತೀರ್ಮಾನಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಬಗರ್ ಹುಕುಂ ಸಮಿತಿಯಲ್ಲಿ ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟರನ್ನೇ ಹಾಕಿದ್ದೆನು. ಅವರು ಅದನ್ನೆಲ್ಲ ಪರಿಶೀಲಿಸಬಹುದು. ಕಾನೂನಿನ ರೀತ್ಯಾ ನಾನು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೆ, ಇದರಲ್ಲಿ ರೈತರ ತಪ್ಪು ಏನಿದೆ? ಸರ್ಕಾರ ಕಾಯಿದೆಗಳನ್ನು ಮಾಡಿ, ರೈತರಿಗೆ ಅರ್ಜಿ ಸಲ್ಲಿಸಲು ಹೇಳಲಾಗುವುದು. ಆಗ ಅದಕ್ಕೆ ಒಂದು ಕಾಲಮಿತಿಯನ್ನು ಹಾಕಿದರೆ ಅದರಲ್ಲಿ ರೈತನ ತಪ್ಪೇನಿದೆ?

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ**(ಮುಂದು):- ಸಮಿತಿ ಮಾಡಿರುವ ವಿಳಂಬಕ್ಕೆ ರೈತರನ್ನು ಹೊಣೆಗಾರರನ್ನಾಗಿ ಮಾಡುವುದು ಎಷ್ಟು ಸರಿ?

**ಸಭಾಪತಿಯವರು:-** ಕಾನೂನು ಮಾಡಿರುವುದು ಮುಖ್ಯ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ನಾನು ಹೇಳುತ್ತಿರುವುದು ಅರ್ಥವಾಯಿತೊ ಇಲ್ಲವೋ ನನಗೆ ಗೊತ್ತಿಲ್ಲ.

**ಸಭಾಪತಿಯವರು:-** ಕಾನೂನು ಬಂದಿರುವ ದಿನಾಂಕಕ್ಕಿಂತ ಹಿಂದೆ ಇದ್ದರೆ ನಾವು ಅದನ್ನು ಛಿಣಿಟಿಜಜಿ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಅರ್ಜಿ ಕೊಟ್ಟಿದ್ದರೆ ಮಾತ್ರ ಕೊಡಿ ಎಂದು ನಾವು ಹೇಳುತ್ತಿಲ್ಲ, ಮಂಜೂರಾತಿಯಾಗಿದ್ದರೆ ಕೊಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಸಭಾಪತಿಗಳೆ, ಕಾನೂನಿನ ರೀತಿ ಮಾಡಬೇಕಾಗುತ್ತದೆ. ನಮ್ಮ ಸಾಗರದಲ್ಲಿ ಮೊದಲು 50,000 ಜನಸಂಖ್ಯೆ ಇತ್ತು, ಹಿಂದಿನ ಕಾನೂನು ಪ್ರಕಾರ 50,000 ಜನಸಂಖ್ಯೆಗಿಂತ ಕಡಿಮೆ ಇರುವ ಕಡೆಗಳಲ್ಲಿ ಕೊಡಲು ಅವಕಾಶವಿತ್ತು, ಅದಕ್ಕಾಗಿ ಅಲ್ಲಿ ಕೊಟ್ಟಿದ್ದೇವೆ. ನಂತರ 5 ಕಿ.ಮೀ ವ್ಯಾಪ್ತಿಯೊಳಗೆ ಕೊಡಲು ಆಗುವುದಿಲ್ಲ ಎಂದು ಕಾನೂನು ತಿದ್ದುಪಡಿಯಾಯಿತು. ಉದಾಹರಣೆಗೆ ಶಿವಮೊಗ್ಗದಲ್ಲಿ ಮೊದಲು 3 ಕಿ.ಮೀ ಒಳಗೆ ಕೊಡಲು ಅವಕಾಶವಿತ್ತು ಆದರೆ ಈಗ 8 ಕಿ.ಮೀ ಎಂದು ಮಾಡಿದ್ದಾರೆ. ಹೀಗಾಗಿ ಆಯಾ ಸಂದರ್ಭದಲ್ಲಿನ ಕಾನೂನು ಪ್ರಕಾರ ಏನು ಮಾಡಲು ಸಾಧ್ಯವಿತ್ತು ಅದನ್ನು ಮಾಡಿದ್ದೇವೆ.

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆಯಲ್ಲಿ ಎಲ್ಲಾ ವಿಷಯಗಳನ್ನು ಚರ್ಚೆ ಮಾಡಲು ಆಗುವುದಿಲ್ಲ. ಸದಸ್ಯರು ಕೇಳಿರುವುದಕ್ಕೆ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ.

**ಪ್ರಶ್ನೆ ಸಂಖ್ಯೆ:117**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ. ಆರ್. ರಮೇಶ್**:- ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ನಾನು ಪಂತರಪಾಳ್ಯ ಸರ್ವೆ ನಂಬರ್:47 ಮತ್ತು 59ರ ಜಮೀನಿನ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. 59ನೇ ಸರ್ವೆ ನಂಬರಿನ ಜಮೀನು ಸರ್ಕಾರಿ ಕೆರೆ ಎಂದು ಇದೆ. ಆದರೆ ಅದನ್ನು ಕೆರೆಯಾಗಿ ಉಳಿಸಿರುವುದಿಲ್ಲ. ಸಂಪೂರ್ಣವಾಗಿ ಮೈದಾನ ರೀತಿಯಲ್ಲಿ ಇದೆ. 1995ರಲ್ಲಿ ಏನು ಆಗಿರುವುದನ್ನು ಹೇಳಿದ್ದಾರೆ. ನಂತರ ಇದನ್ನು ಬಿಬಿಎಂಪಿ ಆಶ್ರಯ ಯೋಜನೆಗೆ ಕೊಟ್ಟಿರುವ ಬಗ್ಗೆ ಮಾಹಿತಿ ಇದೆ. ಆದರೆ ಆ ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿರುವುದಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ದಯಮಾಡಿ ಗಮನ ಹರಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ವೆ ನಂಬರ್ 47 ಬಿ ಖರಾಬು ಜಮೀನು ಆಗಿದೆ. 24 ಎಕರೆ 37 ಗುಂಟೆ ಹತ್ತಿರ 25 ಎಕರೆ ಜಮೀನು ಇದೆ. ಇವತ್ತು ಇದರ ಮೌಲ್ಯ ಸುಮಾರು 250 ಕೋಟಿ ರೂ.ಗಳಾಗುತ್ತದೆ. ಒಬ್ಬ ಖಾಸಗಿ ವ್ಯಕ್ತಿ ಇದು ನನ್ನ ಜಮೀನು ಎಂದು ಸುಮಾರು 40-45 ವರ್ಷಗಳಿಂದ ಭೂ ನ್ಯಾಯ ಮಂಡಳಿಯಲ್ಲಿ ದಾವೆ ಹಾಕಿಕೊಂಡಿದ್ದಾನೆ. ಆದರೆ ಭೂ ನ್ಯಾಯ ಮಂಡಳಿಯಲ್ಲಿ ಸರ್ಕಾರದ ಪರವಾಗಿ ಆದೇಶವಾಗಿದೆ. ನಂತರ ದಿನಾಂಕ: 2-7-2016 ರಂದು ಅದನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ. ನಂತರ ಖಾಸಗಿ ವ್ಯಕ್ತಿ ಸ್ಟೇ ತಂದಿದ್ದಾರೆ ಎಂದು ಸರ್ಕಾರದ ಉತ್ತರದಲ್ಲಿ ಹೇಳಿದ್ದಾರೆ. ಮಾನ್ಯ ಕಂದಾಯ ಸಚಿವರಿಗೆ ನಾನು ಕೇಳುವುದೇನೆಂದರೆ, ಸರ್ಕಾರ ಕೊಟ್ಟಿರುವ ದಾಖಲೆಗಳಲ್ಲಿ ಸ್ಟೇ ಆರ್ಡರ್ ಎಲ್ಲಿ ಇದೆ ತೋರಿಸಲಿ. ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಕೊನೆಯ ಎರಡು ಪ್ಯಾರಾವನ್ನು ನಾನು ಓದುತ್ತೇನೆ; *The memo is taken on record. The said respondents are permitted to be deleted from these proceedings but at the risk of the petitioner. Status-quo till the next date of hearing.* 'Status-quo' ಎಂದರೆ ಯಥಾಸ್ಥಿತಿ. ತಡೆ ಆಜ್ಞೆ ಇದೆ ಎಂದು ಸರ್ಕಾರ ಉತ್ತರ ಕೊಟ್ಟಿದೆ. ಸ್ಟೇ ಎಲ್ಲಿ ಕೊಟ್ಟಿದ್ದಾರೆ? ಸರ್ಕಾರ possession ತೆಗೆದುಕೊಂಡಿದೆ. ಸಂಪೂರ್ಣವಾಗಿ ಅದೊಂದು ಬೆಟ್ಟ, ಬಿ-ಖರಾಬು ಜಮೀನು, ಬಿ-ಖರಾಬು ಜಮೀನನ್ನು ಸರ್ಕಾರ ಯಾರಿಗೂ ಕೊಡಲು ಬರುವುದಿಲ್ಲ. ಆದರೂ ಅವರು ಯಾವ ಲೆಕ್ಕದಲ್ಲಿ claim ಮಾಡುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ. Status-quo ಕೊಟ್ಟಿದ್ದರೂ ಸಹ ಆ ವ್ಯಕ್ತಿ ಆ ಜಮೀನಿನಲ್ಲಿ ವ್ಯಾಪಾರ ಮಾಡಿಕೊಂಡು ಪ್ರತಿದಿನಕ್ಕೆ ಎರಡ ರಿಂದ ಎರಡುವರೆ ಲಕ್ಷ ರೂ.ಗಳ ಲಾಭವನ್ನು ಪಡೆಯುತ್ತಿದ್ದಾನೆ. ಪ್ರತಿ ದಿನ ಸುಮಾರು 300 ರಿಂದ 500 ಲೋಡ್‌ಗಳ ಮಣ್ಣನ್ನು ಅಲ್ಲಿ ತಂದು ಹಾಕುತ್ತಿದ್ದಾರೆ. ಈಗ ಮಾನ್ಯ ಸಚಿವರು ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ. ಆ

ಜಾಗವನ್ನು ಸಮತಟ್ಟು ಮಾಡುತ್ತಿದ್ದಾರೆ, ಗ್ಯಾಸ್ ಲಾರಿಗಳು ನಿಂತಿವೆ, ಕೋರ್ಟ್ ಆರ್ಡರ್ ಹೇಳುವುದು; "*Status-quo till the next date of hearing. Nobody shall use the land in question for any non-agricultural purpose including the purposes for parking the vehicles.*" This is the specific order passed by the High Court. ಸ್ಟೇ ಆರ್ಡರ್ ಕೊಟ್ಟಿದ್ದಾರೆ ನಾವು ಹೋಗಲು ಆಗುವುದಿಲ್ಲ ಎಂದು ಸರ್ಕಾರ ನಮಗೆ ಹೇಳುತ್ತಿದೆ. ಸರ್ಕಾರ 2ನೇ ತಾರೀಖಿನಿಂದ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ, 4ನೇ ತಾರೀಖು ಆ ವ್ಯಕ್ತಿ ಕೋರ್ಟ್‌ಗೆ ಹೋಗಿ Status-quo ತರುತ್ತಾನೆ. ನಮಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಸ್ಟೇ' ಇದೆ ಎಂದು ಸರ್ಕಾರ ಉತ್ತರ ಕೊಡುತ್ತಿದೆ. I think, ಅಧಿಕಾರಿಗಳು ಕೊಟ್ಟಿರುವ ತಪ್ಪು ಮಾಹಿತಿಯನ್ನು ಮಾನ್ಯ ಸಚಿವರು ನನಗೆ ಕೊಟ್ಟಿದ್ದಾರೆ. ಅಲ್ಲಿ ಬಸ್ ನಿಲ್ದಾಣವಾಗುತ್ತಿದೆ, ವರ್ಕ್‌ಶಾಪ್‌ಗಳು ಇವೆ, ಅಲ್ಲಿ ವಾಚ್‌ಮನ್ ಶೆಡ್ ಕಟ್ಟಿಕೊಂಡಿದ್ದಾನೆ, ವಾಹನಗಳು ಒಳಗೆ ಹೋದರೆ entry ಮಾಡಿಕೊಂಡು ಹಣ ತೆಗೆದುಕೊಳ್ಳುತ್ತಾನೆ. ಅದಕ್ಕಾಗಿ ಅವನು ಒಂದು ಬುಕ್ maintain ಮಾಡುತ್ತಿದ್ದಾನೆ.

**ಸಭಾಪತಿಯವರು:-** ತಮ್ಮ ಪ್ರಶ್ನೆ ಏನು?

**ಶ್ರೀ ಪಿ.ಆರ್.ರಮೇಶ್:-** Status-quo  ಇರುವುದನ್ನು ಸರ್ಕಾರ ಹೇಗೆ ಅವರಿಗೆ stay order ಎಂದು ಅವರಿಗೆ ಈ ಜಮೀನನ್ನು ಹೇಗೆ ಕೊಟ್ಟಿದ್ದಾರೆ?

**ಸಭಾಪತಿಯವರು:-** ಕೊಟ್ಟಿರುವುದು ತಪ್ಪು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. Status-quo  ಎಂದರೆ ಇರುವ ಹಾಗೆ ಇರಬೇಕಾಗಿತ್ತು ಅವರಿಗೆ ಏಕೆ ವಾಪಸ್ ಕೊಟ್ಟಿದ್ದೀರಿ ಎನ್ನುವುದಕ್ಕೆ ಉತ್ತರ ಹೇಳಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, 'ಸ್ಟೇ' ಸಿಕ್ಕಿದೆ. ನಾವು ಸ್ವಾಧೀನಪಡಿಸಿಕೊಂಡಿರುವುದು ನಿಜ. 'ಸ್ಟೇ' ಕೊಟ್ಟಿರುವುದು ನಾವು ಏನು ಕ್ರಮ ತೆಗೆದುಕೊಳ್ಳಲು ಆಗಿರುವುದಿಲ್ಲ. ಆದರೆ ಆ ಜಮೀನನ್ನು ದುರುಪಯೋಗಪಡಿಸಿಕೊಳುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇವತ್ತೆ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಪರಿಶೀಲಿಸಿ ವರದಿಯನ್ನು ತರಿಸುತ್ತೇನೆ. ಆ ರೀತಿ ಆ ಜಮೀನನ್ನು ಬಳಸಿಕೊಳ್ಳಲು ಅವರಿಗೆ ಅಧಿಕಾರವಿಲ್ಲ. ಸ್ಟೇ ಇರುವುದರಿಂದ ಮುಂದುವರೆಯಬಾರದು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-ಮಾನ್ಯ ಸಭಾಪತಿಗಳೆ,** ಮಾನ್ಯ ಸದಸ್ಯರು ತುಂಬಾ ಸ್ಪಷ್ಟವಾಗಿ 'status-quo'  ಎಂದು ಹೇಳುತ್ತಿದ್ದಾರೆ. ಅವರು ಇಷ್ಟೆಲಾ ಸ್ಟಡಿ ಮಾಡಿ ದಾಖಲೆಗಳನ್ನು ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ಆದ್ದರಿಂದ ಅವರನ್ನು ಕರೆಯಿಸಿಕೊಂಡು ಮಾತನಾಡಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, ಬೆಂಗಳೂರಿನಲ್ಲಿ ಈ ರೀತಿ ಅವ್ಯವಹಾರ ನಡೆಯುತ್ತಿದೆ ಎಂದು ಒಬ್ಬರಾದರೂ ಹೇಳಿದರಲ್ಲ, ಅದಕ್ಕೆ ನಾನು ಸಂತೋಷಪಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರನ್ನು ಕರೆಯಿಸಿ ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಗಳೆ, ಇಲ್ಲಿ ಯಾವ್ಯಾವ ರೀತಿ ವ್ಯವಹಾರ ನಡೆಯುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತು. ಇವತ್ತೆ ಖಂಡಿತವಾಗಿ ಅಧಿಕಾರಿಗಳನ್ನು ಕಳುಹಿಸಿ ಪರಿಶೀಲಿಸಿ ವರದಿಯನ್ನು ತರಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಮಾನ್ಯ ಚೌಡರೆಡ್ಡಿ ತೂಪಲ್ಲಿ ಯವರದು, ಅವರ ಪ್ರಶ್ನೆಗೆ ಮಂತ್ರಿಗಳು ಮುಂದಿನ ವಾರ ಬಂದು ಉತ್ತರ ಕೊಡುತ್ತೇನೆ ಎಂದು ಪತ್ರವನ್ನು ಬರೆದಿದ್ದಾರೆ. ಮೂರು ದಿನಗಳ ನಂತರ ಮಾನ್ಯ ಕಾರ್ಮಿಕ ಸಚಿವರು ಬಂದಾಗ ತಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುತ್ತದೆ.

**ಪ್ರಶ್ನೆ ಸಂಖ್ಯೆ: 137**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ರಾಜ್ಯದಲ್ಲಿ ಡೀಮ್ಡ್ ಫಾರೆಸ್ಟ್ ಎಂದು ಪರಿಗಣಿಸಿರುವ ಭೂ ಭಾಗವೆಷ್ಟು? ಡೀಮ್ಡ್ ಫಾರೆಸ್ಟ್ ವಿರಹಿತಪಡಿಸಲು ರಾಜ್ಯ ಸಚಿವ ಸಂಪುಟ ನಿರ್ಣಯ ಕೈಗೊಂಡಿದೆಯೇ? ಡೀಮ್ಡ್ ಫಾರೆಸ್ಟ್ ವಿರಹಿತಪಡಿಸಿ ಬಡವರಿಗೆ ಹಕ್ಕು ಪತ್ರಗಳನ್ನು ಯಾವಾಗ ಕೊಡುತ್ತೀರಿ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರ್ಕಾರದಿಂದ ಪುನರ್ಘಟಿತ ತಜ್ಞರ ಸಮಿತಿ ಗುರುತಿಸಿದ್ದ 9,94,881.11 ಹೆಕ್ಟೇರ್ ಪರಿಭಾವಿತ ಅರಣ್ಯದ ವಿಸ್ತೀರ್ಣವನ್ನು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಮಾಲೋಚಿಸಿ ಜಿಲ್ಲಾ ಸಮಿತಿಗಳು ಅಂತಿಮಗೊಳಿಸಿರುವ 3,94,941.31 ಹೆಕ್ಟೇರ್‌ಗಳಿಗೆ ಇಳಿಸುವ ಬಗ್ಗೆ, ಪರಿಭಾವಿತ ಅರಣ್ಯದ ವಿಸ್ತೀರ್ಣದ ಪುನರ್ಘಟಿತ ತಜ್ಞರ ಸಮಿತಿ ಗುರುತಿಸಿದ್ದ 9,94,881.11 ಹೆಕ್ಟೇರ್ ಬದಲಿಗೆ ಹೀಗೆ ಹೇಳುತ್ತಾ, ಕೊನೆಗೆ ಅಂತಿಮವಾಗಿ 3,30,186.938 ಹೆಕ್ಟೇರ್ ಭೂಮಿಯನ್ನು ಬಿಡಬಹುದು ಎಂದು ಸಚಿವ ಸಂಪುಟವು ಸ್ಥಿರೀಕರಿಸಿತು ಎಂದು ಹೇಳಿದ್ದಾರೆ. ನಾನು ಮುಂದುವರೆದು ಕೇಳಿರುವುದು, 3,30,186.938 ಹೆಕ್ಟೇರ್ ಭೂಮಿಯನ್ನು ವಿರಹಿತಗೊಳಿಸಿ ನಮೂನೆ 50,53ರಲ್ಲಿ ಅಕ್ರಮ ಸಕ್ರಮ 94ಸಿ, 94ಸಿಸಿ ಅಡಿ ಅರ್ಜಿದಾರರಿಗೆ ಭೂ ಮಂಜೂರಾತಿಯನ್ನು ಮಾಡುತ್ತೀರಿ? ಇದರ ಹಿಂದೆ ಇರುವ ಉದ್ದೇಶ, ಹಿನ್ನೆಲೆ ಬಗ್ಗೆ ತಮಗೆ ಗೊತ್ತಿದೆ. ಸುಮಾರು 9 ಲಕ್ಷ ಬಡ ಜನರು 94ಸಿ 94ಸಿಸಿ ಯಲ್ಲಿ ಹಕ್ಕುಪತ್ರಕ್ಕಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ಕಳೆದ ಸಾರಿ ಮಾನ್ಯ ಕಂದಾಯ ಸಚಿವರು ಇದನ್ನು ಆದಷ್ಟು ಬೇಗ ನಾವು ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು. ಆಗ ಮಾನ್ಯ ಅರಣ್ಯ ಸಚಿವರು ಮಧ್ಯೆ ಪ್ರವೇಶ ಮಾಡಿ ಇನ್ನು 15 ದಿನಗಳಲ್ಲಿ ಸಚಿವ ಸಂಪುಟದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಅಂತಿಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಇದಕ್ಕೆ ಎಲ್ಲ ದಾಖಲೆಗಳು ಇವೆ, ಇದನ್ನು ನಾನು ಹೇಳುತ್ತಿಲ್ಲ. 3,30,186.938 ಹೆಕ್ಟೇರ್ ಪ್ರದೇಶವನ್ನು ಕೈಬಿಡಲು ಸಚಿವ ಸಂಪುಟದಲ್ಲಿ ಸ್ಥಿರೀಕರಣ ಮಾಡಿದ್ದೇವೆ ಎಂದು ಹೇಳುತ್ತಾರೆ.

**(ಮುಂದು)**

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮುಂದು)

ಅದಕ್ಕೆ ಉತ್ತರವಾಗಿ " ಸಚಿವ ಸಂಪುಟದ ನಿರ್ಣಯದಂತೆ ಡೀಮ್ಡ್ ಫಾರೆಸ್ಟ್‌ನಿಂದ ಕೈಬಿಡಬಹುದಾದ ಭೂಮಿಯನ್ನು ಯಾವುದೇ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡದೇ ಆ ಭೂಮಿಯನ್ನು ಸಾರ್ವಜನಿಕ ಯೋಜನೆಗಳಿಗೆ ಹಾಗೂ ಉದ್ದೇಶಗಳಿಗೆ ಉಪಯೋಗಿಸಬೇಕೆಂದಿದೆ" ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಏನು ಮಾಡಿದಂತೆ ಆಯಿತು? ಈ 5 ವರ್ಷಗಳ ಕಾಲ ಹೋರಾಟ ಮಾಡಿರುವಂತಹದ್ದು, ಅವರು ಸರ್ವೆ ಮಾಡಿರುವಂತಹದ್ದು, ಡೀಮ್ಡ್ ಫಾರೆಸ್ಟ್ ಅನ್ನು ವಿರಹಿತಗೊಳಿಸುವ ಬಗ್ಗೆ ಹೇಳಿದ್ದು, ಮಾನ್ಯ ಕಂದಾಯ ಮಂತ್ರಿಯವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಬಡವರಿಗೆ ಹಕ್ಕುಪತ್ರ ಕೊಡುತ್ತೇವೆ ಎಂದು ಹೇಳಿದ್ದು ಹಾಗೂ ಅವರು 15 ದಿವಸದಲ್ಲಿ ತೀರ್ಮಾನ ಮಾಡುತ್ತೇನೆ ಎಂದೆಲ್ಲಾ ಹೇಳಿರುವುದರ ಬಗ್ಗೆ ಏನು ಮಾಡಿದಂತೆ ಆಯಿತು? ಇಷ್ಟೆಲ್ಲ ತೀರ್ಮಾನ ಮಾಡಿರುವ ಉದ್ದೇಶವೆಂದರೆ ಬಡವರಿಗೆ ಹಕ್ಕು ಪತ್ರ ಕೊಡಬೇಕು, ಇದಕ್ಕಾಗಿ ಸುಮಾರು 90 ಲಕ್ಷ ಜನರು ಕಾಯುತ್ತಿದ್ದಾರೆ. ಮಾನ್ಯ ಕಂದಾಯ ಮಂತ್ರಿಯವರು 94 ಸಿ ಮತ್ತು 94 ಸಿಸಿ ಗಳಂತೆ ಬಡವರಿಗೆ ಪೂರ್ಣ ಪ್ರಮಾಣದಲ್ಲಿ ಹಕ್ಕುಪತ್ರ ಕೊಡಬೇಕೆಂದರೆ 'ಡೀಮ್ಡ್ ಫಾರೆಸ್ಟ್ ಅನ್ನು ವಿರಹಿತಗೊಳಿಸುವ ಪ್ರಸ್ತಾವ ಸಚಿವ ಸಂಪುಟದ ಮುಂದೆ ಇದೆ' ಎಂದು ಹೇಳಿದ್ದರು. ಅಲ್ಲದೇ ಬಹಳ ವಿಳಂಬ ಮಾಡದೇ ಇನ್ನು 15 ದಿವಸಗಳಲ್ಲಿ ತೀರ್ಮಾನ ಮಾಡುವ ಬಗ್ಗೆ ಕಳೆದ ಮಾನ್ಯ ಅರಣ್ಯ ಮಂತ್ರಿಯವರು ಸದನದಲ್ಲಿ ಹೇಳಿದ್ದರು. ಈಗ ಬೇರೆ ಬೇರೆ ವಿಚಾರಗಳನ್ನು ಹೇಳುತ್ತಾ, ಕೊನೆಗೆ ನಾಲ್ಕೈದು ನಿರ್ಣಯಗಳನ್ನು ಮಾಡಿದ್ದು, ಅಂತಿಮವಾಗಿ ಕೊಕ್ಕೆಯನ್ನು ಪೂರ್ಣ ಪ್ರಮಾಣದಲ್ಲಿ ಹಾಕಿ, ಕೊನೆಯದಾಗಿ ಸುಮಾರು 3.90 ಲಕ್ಷ ಹೆಕ್ಟೇರ್ ಅನ್ನು ಬಿಡಬಹುದೆಂದು ಸಚಿವ ಸಂಪುಟದಲ್ಲಿ ಸ್ಥಿರೀಕರಿಸುವ ಬಗ್ಗೆ ಹೇಳಿದ್ದಾರೆ. ಅದನ್ನು ಅವರೂ ಒಪ್ಪಿಕೊಂಡಿದ್ದಾರೆ. ನನ್ನ ಮುಂದಿನ ಪ್ರಶ್ನೆ ಏನೆಂದರೆ, 3.90 ಲಕ್ಷ ಹೆಕ್ಟೇರ್‌ಗಳನ್ನು ವಿರಹಿತಗೊಳಿಸಿದ್ದು, ಇದಕ್ಕಾಗಿ ಸುಮಾರು 9 ಲಕ್ಷ ಜನರು 94 ಸಿ ಮತ್ತು 94 ಸಿಸಿ ಅರ್ಜಿಗಳನ್ನು ಹಾಕಿ ಕಾಯುತ್ತಿದ್ದಾರೆ. ಇದರಲ್ಲಿ ನಮೂನೆ 50 ಮತ್ತು 53 ಗಳನ್ನು ಬಿಡಲಾಗಿದೆ. ಇವರಿಗೆ ಕೊಡುವ ಬಗ್ಗೆ ಕೇಳಿದಾಗ ಮಾನ್ಯ ಮಂತ್ರಿಯವರು 'ಖಾಸಗಿ ಭೂಮಿ ಕೊಡಲು ಸಿದ್ಧರಿಲ್ಲ' ಎಂದು ಹೇಳುತ್ತಿದ್ದಾರೆ. ಅಂದರೆ ಇದೇನು ಅರ್ಥ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಿ. ರಮಾನಾಥ ರೈ:- ಮಾನ್ಯ ಸಭಾಪತಿಯವರೇ, 1997ನೇ ಇಸವಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯ ಮತ್ತು ಸುಪ್ರೀಂ ಕೋರ್ಟ್‌ಗೆ ಸುಮಾರು 10 ಲಕ್ಷ ಹೆಕ್ಟೇರ್ ಜಮೀನನ್ನು ಪರಿಭಾವಿತ ಅರಣ್ಯ ಪ್ರದೇಶ ಎಂದು ಅಫಿಡೇವಿಟ್ ಕೊಟ್ಟಿತ್ತು. ಈ ಪರಿಭಾವಿತ ಅರಣ್ಯ ಪ್ರದೇಶದಲ್ಲಿ ಸಾಕಷ್ಟು ಲೋಪಗಳಿವೆ. ಈ ರೀತಿ ಸರ್ವೆ ನಂಬರ್ ಸೇರಿದಂತೆ ಬೇರೆ ಬೇರೆ ವಿಷಯಗಳ ಲೋಪಗಳನ್ನು ಸರಿಪಡಿಸಿಕೊಂಡು ಮತ್ತೊಮ್ಮೆ ಮಾಹಿತಿ ನೀಡುವಂತೆ ಒಂದು ವರ್ಷದ ಅವಕಾಶ ಕೊಟ್ಟಿತ್ತು. ಇದು 1997ನೇ ಇಸವಿಯ ವಿಚಾರವನ್ನು ಹೇಳುತ್ತಿದ್ದೇನೆ. ಆಗ ನಾವು ತಜ್ಞರ ಸಮಿತಿಯನ್ನು ರಚನೆ ಮಾಡಿ 9.94 ಲಕ್ಷ ಹೆಕ್ಟೇರ್ ಜಾಗದಷ್ಟು ಆಗುತ್ತದೆ ಎಂದು ಅಂದಾಜು ಮಾಡಿದ್ದರು. ಆನಂತರ 2014ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ನಡೆಸಿ, ಅರಣ್ಯ ಜಮೀನನ್ನು ಕೊಡುವುದರಲ್ಲಿನ ಪರಿವರ್ತನೆ ಮತ್ತು ವರ್ಗೀಕರಣ, ಸರ್ವೆ ನಂಬರ್, ಸೇರ್ಪಡೆ ತಪ್ಪುಗಳು ಒಳಗೊಂಡಿದ್ದು, ಇದನ್ನು ಸರಿಪಡಿಸಲು ಬೇರೆ ಬೇರೆ ಹಂತದಲ್ಲಿ ಆಯಿತು. ಈಗ 3.30 ಲಕ್ಷ ಹೆಕ್ಟೇರ್ ಅನ್ನು ಬಿಟ್ಟಿಲ್ಲ. ಈಗ ಇರುವುದು 3.30 ಲಕ್ಷ ಹೆಕ್ಟೇರ್ ಆಗಿದ್ದು, ಉಳಿದಿದ್ದನ್ನು ಹೊರಗಿಟ್ಟಿದ್ದೇವೆ. ಮಾನ್ಯ ಸದಸ್ಯರು 3.30 ಲಕ್ಷ ಹೆಕ್ಟೇರ್ ಬಿಟ್ಟಿರುವ ಬಗ್ಗೆ ಹೇಳಿದರು. 10 ಲಕ್ಷ ಹೆಕ್ಟೇರ್‌ನಿಂದ 3.30 ಲಕ್ಷ ಹೆಕ್ಟೇರ್ ಎಂದು ನಾವು ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ತೆಗೆದುಕೊಂಡಿದ್ದೇವೆ. ಅದರಲ್ಲಿ ಖಾಸಗಿಯಾಗಿ ಕೃಷಿ ಮಾಡಿರುವವರು ಇರಬಹುದು, ಬೇರೆ ಬೇರೆ ವಿಚಾರಗಳಲ್ಲಿ ಇರುವವರು ಇರಬಹುದು. ಜೊತೆಯಲ್ಲಿ ಸುಮಾರು 1.35 ಲಕ್ಷ ಹೆಕ್ಟೇರ್ ತಪ್ಪಾಗಿ ಸೇರ್ಪಡೆಯಾಗಿದ್ದು, 1.72 ಲಕ್ಷ ಹೆಕ್ಟೇರ್ ಶಾಸನಬದ್ಧ ಅರಣ್ಯ, ಸರ್ಕಾರಿ ದಾಖಲೆಗಳಲ್ಲಿನ ಅರಣ್ಯಗಳು, ಶಬ್ದಕೋಶದ ಅರ್ಥದನ್ವಯ ಅರಣ್ಯಗಳೆಲ್ಲವೂ ಸೇರಿಕೊಂಡಿತ್ತು. ಅದನ್ನು ಹೊರಗೆ ಇಡುವ ಕೆಲಸ ಮಾಡಿದ್ದೇವೆ. ಕುಮ್ಕಿ, ಖಾನೆಬಾನೆ ಎಲವನ್ನೂ ಹೊರಗಿಟ್ಟು ಈಗ 3.30 ಲಕ್ಷ ಹೆಕ್ಟೇರ್ ಎಂದು ಮಾಡಿದ್ದೇವೆ. ನಂತರ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡುವಾಗ ಜಿಲ್ಲಾ ಮಂತ್ರಿಗಳ ಜೊತೆ ಚರ್ಚೆ ಮಾಡಿ, ಅಂತಿಮ ತೀರ್ಮಾನ ತೆಗೆದುಕೊಳ್ಳೋಣ ಎಂದು ಎಲ್ಲಾ ಜಿಲ್ಲೆಗಳಿಗೆ ಕಳುಹಿಸಿದೆವು. ಅಲ್ಲಿಯೂ ಚರ್ಚೆ ನಡೆದು, ಅಂತಿಮವಾಗಿ 3,30,180 ಹೆಕ್ಟೇರ್ ಎಂದು ಘೋಷಿಸಲು ತೀರ್ಮಾನವಾಯಿತು. ನಾವು ಜಂಟಿ ಸರ್ವೆ ಮಾಡಿ ಬಹಳ ಕೆಲಸ ಮಾಡಿದ್ದೇವೆ. ಏಕೆಂದರೆ ಇದು ಎಷ್ಟೋ ವರ್ಷಗಳಿಂದ ಬಾಕಿ ಇದ್ದ ಪ್ರಕರಣವಾಗಿದೆ. ಇದನ್ನೆಲ್ಲಾ ಸರಿಪಡಿಸಿದ್ದೇವೆ. ಇದರ ನಂತರವೂ ಪರಿಭಾವಿತ ಅರಣ್ಯಗಳಿಗೆ ಸಂಬಂಧಪಟ್ಟಂತೆ ಗ್ರಾಮಠಾರು ಪರಿಷ್ಕೃತ ಪಟ್ಟಿ ಸರಿಯಿಲ್ಲದ ಕಾರಣ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಮತ್ತೆ ವಿವಿಧ ಜಿಲ್ಲೆಗಳಿಂದ ಕೆಲವೊಂದು ಪ್ರದೇಶಗಳನ್ನು ಕೈಬಿಡುವಂತೆ ಕೋರಿ ಬಂದಿರುವ ಪ್ರಸ್ತಾವನೆಗಳನ್ನು ಸೇರಿಸಿ ಕ್ಯಾಬಿನೆಟ್‌ನಲ್ಲಿಟ್ಟು ಹೊರಗೆ ತರುವ ಕೆಲಸ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳ ಉದ್ದೇಶ ಸರಿಯಿದ್ದು, ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದಾರೆ. ದಿನಾಂಕ 22/6/2017ರಂದು ನಡೆದ ಸಭೆಯ ನಿರ್ಣಯವು ಅಂತಿಮವಾಗಿ 3,30,186 ಹೆಕ್ಟೇರ್ ಎಂದು ಘೋಷಿಸುವ ಮಾರ್ಪಾಡಿನೊಂದಿಗೆ ಸ್ಥಿರೀಕರಿಸಲಾಗಿರುತ್ತದೆ ಎಂದು ಸ್ಪಷ್ಟ ಮಾಡಿದ್ದಾರೆ. ಕೊನೆಗೆ ಸಚಿವ ಸಂಪುಟದ ನಿರ್ಣಯವನ್ನು ಕೈಗೊಂಡ ನಂತರವೂ ನಮೂನೆ 50, 53 ಮತ್ತು ಅಕ್ರಮ-ಸಕ್ರಮಕ್ಕೆ ಸಂಬಂಧಪಟ್ಟಂತೆ 94ಸಿ ಮತ್ತು 94 ಸಿಸಿ ಹಾಕಿರುವ ಅರ್ಜಿದಾರರಿಗೆ ಭೂ ಮಂಜೂರಾತಿ ಮಾಡದಿರುವ ಕಾರಣಗಳೇನು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಸಚಿವ ಸಂಪುಟದ ನಿರ್ಣಯದಂತೆ ಡೀಮ್ಡ್ ಫಾರೆಸ್ಟ್‌ನಿಂದ ಕೈಬಿಡಬಹುದಾದ ಭೂಮಿಯನ್ನು ಯಾವುದೇ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡದೇ ಆ ಭೂಮಿಯನ್ನು ಸಾರ್ವಜನಿಕ ಯೋಜನೆಗಳಿಗೆ ಹಾಗೂ ಉದ್ದೇಶಗಳಿಗೆ ಉಪಯೋಗಿಸಬೇಕೆಂದಿದೆ ಎಂದು ಹೇಳಿದ್ದಾರೆ. ಆದರೆ ತಲೆತಲಾಂತರಗಳಿಂದ ಭೂಮಿ ಮಾಡಿಕೊಂಡು ಬಂದಿರುವ ಬಡವರಿಗೆ ಕೊಡಬೇಕು ಎಂಬುದು ಎಲ್ಲರ ಹೋರಾಟವಾಗಿದೆ. ಸಚಿವ ಸಂಪುಟದ ತೀರ್ಮಾನ ಆಗಿದೆ. ಆದರೆ ಖಾಸಗಿ ವ್ಯಕ್ತಿಗಳನ್ನು ಬಿಟ್ಟು ಸರ್ಕಾರಿ ಯೋಜನೆ ಹಾಗೂ ಉದ್ದೇಶಗಳಿಗೆ ಉಪಯೋಗ ಮಾಡುವುದಾದರೆ ನಮೂನೆ 50, 53 ಮತ್ತು ಅಕ್ರಮ ಸಕ್ರಮಕ್ಕೆ ಸಂಬಂಧಪಟ್ಟಂತೆ 94ಸಿ ಮತ್ತು 94 ಸಿಸಿ ಹಾಕಿರುವ ಅರ್ಜಿದಾರರ ಕತೆ ಏನು? ಸರ್ಕಾರಿ ಉದ್ದೇಶಕ್ಕೆ ಬಳಸುವುದು ಯಾವ ನ್ಯಾಯ? ಆ ಅರ್ಜಿದಾರರಿಗೆ ಕೊಡುತ್ತಾರೋ ಅಥವಾ ಇಲ್ಲವೋ?

ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಉತ್ತರದ ಪ್ರಾರಂಭದಲ್ಲಿ 9,94,881 ಹೆಕ್ಟೇರ್ ಎಂದು ಹೇಳಿದ್ದಾರೆ. ಅದನ್ನು ಕಡಿಮೆ ಮಾಡಿಕೊಂಡು 3.30 ಲಕ್ಷ ಹೆಕ್ಟೇರ್‌ಗಳಿಗೆ ತಂದಿದ್ದಾರೆ. ಅವರು ಹೇಳಿದಂತೆ 3.30 ಲಕ್ಷ ಹೆಕ್ಟೇರ್ ಡೀಮ್ಡ್ ಫಾರೆಸ್ಟ್ ಆಗಿದ್ದು, ಅದನ್ನು ಸಾರ್ವಜನಿಕವಾಗಿ ಉಪಯೋಗ ಮಾಡುವುದಾಗಿದ್ದು, ವ್ಯಕ್ತಿಗಳಿಗೆ ಕೊಡುವುದಿಲ್ಲ ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ 9,94,881 ಹೆಕ್ಟೇರ್‌ನಿಂದ 3.30 ಲಕ್ಷ ಹೆಕ್ಟೇರ್‌ಗೆ ಇಳಿಸಿದ್ದು, ಇದರ ನಡುವಿನ ಸುಮಾರು ಆರೂವರೆ ಲಕ್ಷ ಹೆಕ್ಟೇರ್ ಜಮೀನನ್ನು ಏಕೆ ಕೊಡುತ್ತಿಲ್ಲ? ಅದನ್ನು ಏನು ಹೊರಗೆ ತೆಗೆದಿದ್ದಾರೆ. ಈ ಜಮೀನನ್ನು ರೈತರಿಗೆ ಕೊಡಲು ಯಾವ ಸಮಸ್ಯೆ ಇದೆ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ರಮಾನಾಥ ರೈಃ- ಮಾನ್ಯ ಸಭಾಪತಿಯವರೇ, ಇದಕ್ಕೆ ಸಾಕಷ್ಟು ಪ್ರೊಸೀಜರ್ ಇದೆ. ಇದರಲ್ಲಿ ಅಕ್ರಮ-ಸಕ್ರಮದಲ್ಲಿ ತೀರ್ಪು ನೀಡಿರುವ ಪ್ರದೇಶಗಳು ಇದೆ. ಬೇರೆ ಬೇರೆ ಕಾರಣಗಳಿಂದ ಕೆಲವರಿಗೆ ಮಂಜೂರಾತಿ ಆಗಿರುವುದೂ ಇದೆ. ಆ ಜಮೀನು ಸಹ ಅವರಿಗೆ ಹೋಗುತ್ತದೆ. ಸಾರ್ವಜನಿಕ ಉಪಯೋಗಕ್ಕಾಗಿ ಜಮೀನು ಬೇಕು ಎಂಬ ಉದ್ದೇಶ ನಮ್ಮದಾಗಿದೆ. ಅದರಲ್ಲಿಯೂ ಅರ್ಜಿ ಹಾಕಿರುವವರನ್ನು ಪರಿಗಣಿಸುವ ಕೆಲಸ ಮಾಡುತ್ತೇವೆ. (ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(044) 7.2.2018 12.10 ಪಿಕೆ:ವಿಕೆ

(ಪ್ರಶ್ನೆ 137 ಮುಂದುವರೆದಿದೆ)

**ಶ್ರೀ ಕೆ.ಎಸ್.ಈಶ್ವರಪ್ಪ**:-ಆದರೆ ನೀವು ಹೇಳುತ್ತಿರುವುದು ನಿಮ್ಮ ಲಿಖಿತ ಉತ್ತರದಲ್ಲಿ ಇಲ್ಲ.

**ಶ್ರೀ ಬಿ.ರಮಾನಾಥ್ ರೈ**:- ಮಾನ್ಯ ಸಭಾಪತಿಯವರೇ, ಇದನ್ನು ಮತ್ತೊಮ್ಮೆ ಕ್ಯಾಬಿನೆಟ್‌ನಲ್ಲಿ ಇಟ್ಟು ಅಂತಿಮಗೊಳಿಸುವ ಕೆಲಸ ಮಾಡುತ್ತೇವೆ. ಇದರಲ್ಲಿ ಕುಮ್ಕಿ, ಕಾನ, ಬಾನೆ ಭೂಮಿಯನ್ನು ಬಿಟ್ಟಿದ್ದೇವೆ. ಇಲ್ಲಿಯವರೆಗೂ ಏನು ಮಂಜೂರಾತಿ ಆಗಿತ್ತೋ ಅಂತಹ ಪ್ರದೇಶ ಕೂಡ ಇತ್ತು. ಈ ಜಾಗಕ್ಕೆ ಸಂಬಂಧಪಟ್ಟಂತೆ ಜನರ ಮಧ್ಯೆ ಘರ್ಷಣೆ ಇತ್ತು. ಈಗ ಬಗೈರ್ ಹುಕುಂ ಸಾಗುವಳಿಗೆ ಸಂಬಂಧಪಟ್ಟಂತೆ ಒಂದು ಜಡ್ಜ್‌ಮೆಂಟ್ ಆಗಿದೆ. ಜಡ್ಜ್‌ಮೆಂಟ್‌ನ ಅಡಿ ನಮೂದು ಮಾಡಿರುವ ಜಮೀನು ಕೂಡ ಈ ಒಂದು ಪಟ್ಟಿಯಲ್ಲಿ ಸೇರುತ್ತದೆ. Reserve Forest ಗೆ ಸಂಬಂಧಿಸಿದ ಜಮೀನು ಕೂಡ Deemed Forest ಪಟ್ಟಿಗೆ ಸೇರಿದೆ. ಉಳಿದ ಜಾಗಗಳನ್ನು ಬಿಡಬೇಕು ಎಂದೇನು ಬೇರೆ ಬೇರೆ ಜಿಲ್ಲೆಗಳಿಂದ ಬೇಡಿಕೆ ಬಂದಿದೆಯೋ ಅದನ್ನು ಪರಿಗಣಿಸಿ ಇದರಲ್ಲಿ include ಮಾಡಿ, ಸದರಿ ಉದ್ದೇಶಿತ ವಿಸ್ತೀರ್ಣ ಕಡಿಮೆ ಮಾಡುವ ಕೆಲಸವನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಮಾಡುತ್ತೇವೆ. ಆ ಜಾಗದಲ್ಲಿ ಈಗಾಗಲೇ ಯಾರು ಸಾಗುವಳಿ ಮಾಡುತ್ತಿದ್ದಾರೋ ಅವರಿಗೂ ನ್ಯಾಯ ಒದಗಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಹಾಗಾದರೆ ಈಗ ಕೊಟ್ಟಿರುವ ಉತ್ತರವನ್ನು ಮಾನ್ಯ ಸಚಿವರು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಉತ್ತರದಲ್ಲಿ "ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡದೇ ಆ ಭೂಮಿಯನ್ನು ಸಾರ್ವಜನಿಕ ಯೋಜನೆಗಳಿಗೆ ಹಾಗೂ ಉದ್ದೇಶಗಳಿಗೆ ಉಪಯೋಗಿಸಬೇಕಾಗಿದೆ" ಎಂದು ಹೇಳಿದ್ದೀರಿ. ಖಾಸಗಿ ವ್ಯಕ್ತಿಗಳಿಗೆ ಈ ಜಮೀನು ನೀಡುವುದಿಲ್ಲ ಎಂದು ಹೇಳುವುದಾದರೆ ಕೊಟ್ಟಿರುವ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಬಿ.ರಮಾನಾಥ್ ರೈ**:- ಮಾನ್ಯ ಸಭಾಪತಿಯವರೇ, ಇದು ಅಂತಿಮವಾಗಬೇಕಾದರೆ ಮತ್ತೆ Affidavit ಕೊಡಬೇಕು. ಈಗ ಯಾರು ಆ ಜಮೀನಿನಲ್ಲಿ ಕೃಷಿ ಮಾಡಿಕೊಂಡಿದ್ದಾರೋ ಅವರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ದಯವಿಟ್ಟು ಈಗ ಈ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಿ.

**ಶ್ರೀ ಬಿ.ರಮಾನಾಥ್ ರೈ**:- ಇದು ಇನ್ನೂ ಅಂತಿಮವಾಗಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮ್ಮ ಉತ್ತರದಲ್ಲಿ "ಯಾವುದೇ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡದೇ ಆ ಭೂಮಿಯನ್ನು ಸಾರ್ವಜನಿಕ ಯೋಜನೆಗಳಿಗೆ ಹಾಗೂ ಉದ್ದೇಶಗಳಿಗೆ ಉಪಯೋಗಿಸಬೇಕೆಂದಿದೆ" ಎಂದು ಹೇಳಿದ್ದೀರಿ. ಖಾಸಗಿ ವ್ಯಕ್ತಿಗಳಿಗೆ ಈ ಜಾಗ ಸಿಗುವುದಿಲ್ಲ ಎಂಬುದು ಸ್ಪಷ್ಟವಾಗಿ ಹೇಳಲಾಗಿದೆ. ಹಾಗಾದರೆ ತಲತಲಾಂತರಗಳಿಂದ ಸಾಗುವಳಿ ಮಾಡುತ್ತಿರುವವರು ಏನು ಮಾಡಬೇಕು?

**ಶ್ರೀ ಬಿ.ರಮಾನಾಥ್ ರೈ:-** ಯಾರಿಗೆ ಜಾಗ ಮಂಜೂರಾತಿ ಆಗಿದೆಯೋ ಅಂತಹ ಜಾಗವನ್ನು ನಾವು ಬಿಟ್ಟಿದ್ದೇವೆ. ಅದೂ ಕೂಡ ಇದರಲ್ಲಿ include ಆಗಿದೆ. ಸಾರ್ವಜನಿಕ ಉದ್ದೇಶ ಎಂದರೆ, ನಿವೇಶನಗಳನ್ನು ಹಂಚುವುದು ಇತ್ಯಾದಿಗಳಾಗಿರುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಅದು ನಮಗೆ ಅರ್ಥವಾಯಿತು. ನಿಮ್ಮ ಪ್ರಾಮಾಣಿಕತೆ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ತಮ್ಮ ಉತ್ತರದಲ್ಲಿ, ಖಾಸಗಿ ವ್ಯಕ್ತಿಗಳಿಗೆ ಭೂಮಿಯನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ, ಅದನ್ನು ಸಾರ್ವಜನಿಕ ಯೋಜನೆಗಳಿಗೆ ಬಳಸುತ್ತೇವೆ ಎಂದು ಹೇಳಿದ್ದೀರಿ.

**ಶ್ರೀ ಬಿ.ರಮಾನಾಥ್ ರೈ:-** ಸಾರ್ವಜನಿಕ ಉದ್ದೇಶ ಎಂದರೆ, ನಿವೇಶನಗಳನ್ನು ಕೊಡಬಹುದು. ಮತ್ತೆ, ಅಂತಿಮವಾಗಿ ಇದನ್ನು ಮತ್ತೊಮ್ಮೆ ಕ್ಯಾಬಿನೆಟ್‌ನಲ್ಲಿಟ್ಟು ಮುಂದಿನ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಖಾಸಗಿ ವ್ಯಕ್ತಿಗಳಿಗೆ ಭೂಮಿ ಕೊಡುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಿರುವುದರಿಂದ ಈ ಲಿಖಿತ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ.

**ಶ್ರೀ ಬಿ.ರಮಾನಾಥ್ ರೈ:-** ಮಾನ್ಯ ಸಭಾಪತಿಯವರೇ, ಅಕ್ರಮವಾಗಿ ಕೃಷಿ ಮಾಡುತ್ತಿರುವವರಿಗೆ ಸಮಸ್ಯೆಯಾಗದಂತೆ ನಾವು ತೀರ್ಮಾನ ಕೈಗೊಳ್ಳುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವ ಉತ್ತರಕ್ಕೂ ಮತ್ತು ಈಗ ಮಾನ್ಯ ಸಚಿವರು ಹೇಳುತ್ತಿರುವುದಕ್ಕೆ ಸಂಬಂಧವೇ ಇಲ್ಲ.

**ಶ್ರೀ ಬಿ.ರಮಾನಾಥ್ ರೈ:-** ಮಾನ್ಯ ಸಭಾಪತಿಯವರೇ, ಅಂತಿಮವಾಗಿ ನಾವಿನ್ನೂ Affidavit ಕೊಡಬೇಕಾಗಿದೆ. Affidavit ಕೊಡುವಂತಹ ಸಂದರ್ಭದಲ್ಲಿ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-**ಮಾನ್ಯ ಸಚಿವರೇ, ತಾವು ಕೊಟ್ಟಿರುವ ಉತ್ತರವನ್ನು ದಯವಿಟ್ಟು ಒಂದು ಸಲ ಓದಿ. ನೀವೀಗ ಕೇವಲ ಬಾಯಲ್ಲಿ ಹೇಳುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ರಮಾನಾಥ್ ರೈ:-**ಬಾಯಲ್ಲಿ ಅಲ್ಲ, ಕಾರ್ಯದಲ್ಲಿ ಮಾಡಿ ತೋರಿಸುತ್ತೇವೆ. ಅಂತಿಮವಾಗಿ Affidavit ಕೊಡುವಾಗ ಇವುಗಳನ್ನು ಪರಿಗಣಿಸುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೋ ಆ ಭಾಗವನ್ನು ನೀವು ಒಮ್ಮೆ ಓದಿ ಗೊತ್ತಾಗುತ್ತದೆ. ತಾವು ಇವತ್ತು ಕೊಟ್ಟಿರುವ ಉತ್ತರದಲ್ಲಿ, ಖಾಸಗಿ ವ್ಯಕ್ತಿಗಳಿಗೆ ಭೂಮಿ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಮಾತನಾಡುವಾಗ, ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಈ ಲಿಖಿತ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ.

**ಶ್ರೀ ಬಿ.ರಮಾನಾಥ್ ರೈ:-** ನಾನು ಸದನದಲ್ಲಿ ವಾಗ್ದಾನ ಮಾಡುತ್ತೇನೆ. ನಾವು ಇನ್ನೂ ಅಂತಿಮಗೊಳಿಸುವಂಥದ್ದು ಮಾಡಲಿಕ್ಕೆ ಇದೆ. Affidavit ಕೊಡುವ ಸಂದರ್ಭದಲ್ಲಿ ಪರಿಗಣಿಸುತ್ತೇವೆ. ಕೆಲವರಿಗೆ ನಿವೇಶನ ಕೊಡಬೇಕಾಗಿದೆ.

**ಸಭಾಪತಿಯವರು:-** ತಾವೇನು ಈಗ ಲಿಖಿತ ರೂಪದಲ್ಲಿ ಕೊಟ್ಟಿದ್ದೀರೋ ಅದರಲ್ಲಿ, ಭೂಮಿಯನ್ನು ಖಾಸಗಿಯವರಿಗೆ ಭೂಮಿ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದೀರಿ. ಆದರೆ ಇಲ್ಲಿ ಎದ್ದುನಿಂತು, ಕೊಡುತ್ತೇವೆ ಎಂದು ಹೇಳುತ್ತಿರುವುದು ವಿರೋಧಾಭಾಸವಾಗುತ್ತಿದೆ. ಆದ್ದರಿಂದ ಲಿಖಿತ ಉತ್ತರವನ್ನು ವಾಪಸ್ಸು ಪಡೆದುಕೊಳ್ಳಿ ಎಂದು ಕೇಳುತ್ತಿದ್ದಾರೆ. ವಾಪಸ್ಸು ತೆಗೆದುಕೊಳ್ಳುವುದು, ಬಿಡುವುದು ನಿಮ್ಮಿಷ್ಟ. ನಾನು ಬಲವಂತ ಮಾಡುವುದಿಲ್ಲ. ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವಾಗಿದೆ. Deemed Forest ನಿಂದ ಯಾವುದನ್ನು ಕೈಬಿಡಬೇಕೆಂದು ಪರಿಶೀಲನೆ ಮಾಡಲು ಆಯಾಯ ಜಿಲ್ಲಾ ಮಟ್ಟದಲ್ಲಿ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮಂತ್ರಿಗಳು ಕುಳಿತುಕೊಂಡು ಚರ್ಚೆ ನಡೆಸಿ ಅಪ್ರೂವ್ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಇನ್ನೂ ಕೆಲವು ಜಿಲ್ಲೆಗಳಿಂದ ಮಾಹಿತಿ ಬರಬೇಕಿದೆ. ಎಲ್ಲಾ ಕಡೆಯಿಂದ ಮಾಹಿತಿ ಬಂದಮೇಲೆ ಅದನ್ನು ಕ್ಯಾಬಿನೆಟ್ ಮುಂದೆ ಇಟ್ಟು ಸಕಾರಾತ್ಮವಾಗಿ ಸ್ಪಂದಿಸುವ ಕೆಲಸ ಮಾಡುತ್ತೇವೆ. ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯ Privilege land ಅಡಿ Section 79(2) ಜಮೀನು ಏನಿವೆ, ಅಂದರೆ, ಸೊಪ್ಪಿನ ಬೆಟ್ಟ, ಕಾನು, ಹಾಡಿ, ಕುಮ್ಕಿ ಇತ್ಯಾದಿ ಜಾಗಗಳೂ ಕೂಡ Deemed Forest ಗೆ ಸೇರಿಬಿಟ್ಟಿವೆ. ಕಂದಾಯ ಇಲಾಖೆಗೆ ಸಂಬಂಧಪಟ್ಟ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ್ಯಕ್ಟ್‌ನ 94(ಬಿ)ಅನ್ನು, amend ಮಾಡುವಾಗ ಬಿಟ್ಟು ಹೋದಂತಹ ಅರ್ಜಿದಾರರಿಗೆ ಫಾರಂ 50-53 ಕೊಡುವ ದೃಷ್ಟಿಯಿಂದ ತಿದ್ದುಪಡಿ ಮಾಡಲಾಗಿದೆ. ಮತ್ತೆ, 79(2) ಅಡಿ ಇರುವ Privilege land ಅನ್ನು, ಬಗ್ಗೈರ್ ಹುಕುಂ ಜಾಗವನ್ನೂ ಕೂಡ ಮಂಜೂರು ಮಾಡಬಹುದು ಎಂದಾಗಿದೆ. ಆದರೆ ಕೊನೆಗೆ "The above lands are Forest land and there should be a prior permission from the Central Government." ಎಂದು ಸೇರಿಸಿದ್ದಾರೆ. ಈ ತಿದ್ದುಪಡಿಯನ್ನು ತೆಗೆದು ಹಾಕಬೇಕೆಂದು ಸಲಹೆ ಮಾಡಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಿಮ್ಮ ಮತ್ತು ಮಾನ್ಯ ರಮಾನಾಥ್ ರೈ ಅವರ ಕಳಕಳಿಯ ಬಗ್ಗೆ ನನ್ನ ಪ್ರಶ್ನೆಯಿಲ್ಲ. ಕೊಟ್ಟಿರುವ ಉತ್ತರವನ್ನು ಓದಿ ಎಂದು ಹೇಳುತ್ತಿದ್ದೇನೆ. ಲಿಖಿತ ಉತ್ತರದಲ್ಲಿ, "ಸಚಿವ ಸಂಪುಟದ ನಿರ್ಣಯದಂತೆ ಡೀಮ್ಡ್ ಫಾರೆಸ್ಟ್‌ನಿಂದ ಕೈಬಿಡಬಹುದಾದ ಭೂಮಿಯನ್ನು ಯಾವುದೇ ಖಾಸಗಿ ವ್ಯಕ್ತಿಗಳಿಗೆ ಮಂಜೂರು ಮಾಡದೇ ಆ ಭೂಮಿಯನ್ನು ಸಾರ್ವಜನಿಕ ಯೋಜನೆಗಳಿಗೆ ಹಾಗೂ ಉದ್ದೇಶಗಳಿಗೆ ಉಪಯೋಗಿಸಬೇಕೆಂದಿದೆ" ಹೇಳಿದ್ದೀರಿ. ಸಾರ್ವಜನಿಕವಾಗಿ ಬಳಸುವ ಭೂಮಿಯನ್ನು ನಿವೇಶನಗಳನ್ನಾದರೂ ಮಾಡಿ ಅಥವಾ ಇನ್ನ್ಯಾವುದಕ್ಕಾದರೂ ಬಳಸಿ. ಆದರೆ ತಲತಲಾಂತರಗಳಿಂದ ಅರ್ಧ ಎಕರೆ, ಒಂದು ಎಕರೆಯಲ್ಲಿ ಸಾಗುವಳಿ ಮಾಡುತ್ತಿರುವ ಬಡವ ನಿಮ್ಮಿಂದ ಏನು ನಿರೀಕ್ಷಿಸುತ್ತಿದ್ದಾನೋ ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುವ ಕೆಲಸ ಮಾಡಿ. ನಿಮ್ಮ ಉತ್ತರದಲ್ಲಿ, ಅಂಥವರಿಗೆ ಕೊಡುವುದಿಲ್ಲ ಎಂದು ಹೇಳುತ್ತಿದ್ದೀರಿ.

**ಸಭಾಪತಿಯವರು:-** ಒಂದು ನಿಮಿಷ, ದಯವಿಟ್ಟು ಕೇಳಬೇಕು. ಇದು ಕ್ಯಾಬಿನೆಟ್‌ನಲ್ಲಿ ಆಗಿರುವ ತೀರ್ಮಾನವಾಗಿದೆ. ಕ್ಯಾಬಿನೆಟ್‌ನಲ್ಲಿ ಆಗಿರುವ ತೀರ್ಮಾನವನ್ನು ಬದಲಾವಣೆ ಮಾಡುವ ಅಧಿಕಾರ ಈ ಸದನಕ್ಕೆ ಇಲ್ಲ. ಸದಸ್ಯರ ಕಳಕಳಿಯ ಅಂಶಗಳನ್ನು ನಾನು ಗಮನಿಸಿದ್ದೇನೆ ಎಂದು ಮಾನ್ಯ ಅರಣ್ಯ ಸಚಿವರು ಹೇಳುತ್ತಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು, ಮುಂದಿನ ಕ್ಯಾಬಿನೆಟ್‌ನಲ್ಲಿ ಇದನ್ನು ಸರಿ ಮಾಡುವ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಈಗೇನು ಉತ್ತರ ಕೊಟ್ಟಿದ್ದಾರೋ ಅದನ್ನು ವಾಪಸ್ಸು ತೆಗೆದುಕೊಳ್ಳುವ ಅಧಿಕಾರ ಮಾನ್ಯ ಸಚಿವರಿಗಿಲ್ಲ. It is a statement made on behalf of the Cabinet.

**ಶ್ರೀ ಬಿ.ರಮಾನಾಥ್ ರೈ:-**ಮಾನ್ಯ ಸಭಾಪತಿಯವರೇ, ಅಕ್ರಮವಾಗಿ ಯಾರು ಸಾಗುವಳಿ ಮಾಡುತ್ತಿದ್ದಾರೋ ಅವರಿಗೆ ಸಮಸ್ಯೆ ಆಗುವುದಿಲ್ಲ. ಸುಮಾರು ಒಂದು ಲಕ್ಷ ಚಿಲ್ಲರೆ ಹೆಕ್ಟೇರ್ ಪ್ರದೇಶವನ್ನೇನು ಹೊರಗಿಡಲಾಗಿದೆಯೋ ಅದನ್ನು ಸಾರ್ವಜನಿಕ ಉದ್ದೇಶಕ್ಕೆ ಬಳಸಬೇಕು ಎನ್ನುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಉದ್ದೇಶವಾಗಿದೆ. ಯಾರು ಅಕ್ರಮವಾಗಿ ಕೃಷಿ ಮಾಡುತ್ತಿದ್ದಾರೋ ಅವರಿಗೆ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ:**-ಮಾನ್ಯ ಸಭಾಪತಿಯವರೇ, ಕ್ಯಾಬಿನೆಟ್ ಮಾಡುವ ತೀರ್ಮಾನವಾಗಲಿ ಅಥವಾ ಇನ್ನೊಂದು ತೀರ್ಮಾನವಾಗಲಿ, ಅದು ಅಂತಿಮ ಅಲ್ಲ. ಎರಡೂ ಸದನಗಳು ಒಪ್ಪಿದ ನಂತರ ಏನು ತೀರ್ಮಾನವಾಗುತ್ತದೆಯೋ ಅದು ಅಂತಿಮ.

**ಸಭಾಪತಿಯವರು:**- ಕಾನೂನಿನ ಪ್ರಕಾರ ಮಾಡಬೇಕು. ಪ್ರಶ್ನೋತ್ತರವ ಅವಧಿಯಲ್ಲಿ ಇದನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:**-ಕಾನೂನಿನ ಪ್ರಕಾರ, ಫಾರಂ 50 ಅಥವಾ 53ರ ಅಡಿ ಯಾರು ಅರ್ಹರಿದ್ದಾರೋ ಅವರಿಗೆ ಜಮೀನು ಕೊಡುವುದಕ್ಕೆ ಅವಕಾಶ ಇದೆ. ಅಂಥದ್ದನ್ನು ಸರ್ಕಾರ ಪರಿಗಣಿಸುತ್ತದೆ.

**ಸಭಾಪತಿಯವರು:**- ಆ ಮಾತನ್ನು ಮಾನ್ಯ ಕಾಗೋಡು ತಿಮ್ಮಪ್ಪನವರೂ ಕೂಡ ಹೇಳಿದ್ದಾರೆ.

**ಶ್ರೀ ಬಿ.ರಮಾನಾಥ್ ರೈ:**- ಯಾರು ಅರ್ಜಿ ಹಾಕಿಕೊಂಡಿದ್ದಾರೋ ಅವರಿಗೆ ಸಮಸ್ಯೆಯಿಲ್ಲ. ಲಭ್ಯವಿರುವ ಖಾಲಿ ಜಾಗದಲ್ಲಿ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಕೆಲಸಗಳನ್ನು ಮಾಡುತ್ತೇವೆ.

**ಸಭಾಪತಿಯವರು:**- ಧನ್ಯವಾದಗಳು. ಮುಂದಿನ ಪ್ರಶ್ನೆ ಸಂಖ್ಯೆ 96 ಮಾನ್ಯ ಗಣೇಶ್ ಕಾರ್ಣಿಕ್ ಅವರದು. ಇದಕ್ಕೆ ಉತ್ತರ ಕೊಡಬೇಕಾದ ಮಾನ್ಯ ಕಾರ್ಮಿಕ ಸಚಿವರು ಮೂರು ದಿವಸದ ನಂತರ ಬರುವುದರಿಂದ ಅವತ್ತೇ ಉತ್ತರ ಕೊಡುತ್ತಾರೆ.

<u>ಪ್ರಶ್ನೆ ಸಂಖ್ಯೆ : 169</u>

<u>(ಉತ್ತರ ಲಗತ್ತಿಸಲಾಗಿದೆ)</u>

**ಶ್ರೀ ಸೋಮಣ್ಣ ಮ. ಬೇವಿನಮರದ:**-ಮಾನ್ಯ ಸಭಾಪತಿಯವರೇ, 2013-14 ರಿಂದ 2017-2018ರವರೆಗೆ ಹಾವೇರಿ ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಬಂದ ಅನುದಾನ ಎಷ್ಟು ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ, 4 ವರ್ಷ 9 ತಿಂಗಳ ಅವಧಿಯಲ್ಲಿ ರೂ.16501.00 ಲಕ್ಷ ಅಂದಾಜು ವೆಚ್ಚದಲ್ಲಿ 1117 ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿಸಿದ್ದಾರೆ. ಆದರೆ ಇದುವರೆಗೂ ರೂ.6648.85 ಲಕ್ಷ ವೆಚ್ಚ ಮಾಡಲಾಗಿದೆ ಎಂದು ಹೇಳಿದ್ದಾರೆ. ಅನುಬಂಧ-1ರಲ್ಲಿ, ನಾಲ್ಕು ಮುಕ್ಕಾಲು ವರ್ಷದಲ್ಲಿ ಶೇಕಡ 40 ರಷ್ಟು ಕೆಲಸ ಮಾಡಿದ್ದಾರೆ ಎಂದಿದೆ.

(ಮುಂದು . . .)

ಶ್ರೀ ಸೋಮಣ್ಣ ಮ.ಬೇವಿನಮರದ(ಮುಂದು):-

ಪ್ರತಿಯೊಂದು ಷರಾ ಕಾಲಂ ನಲ್ಲಿ ಏನು ಕೊಟ್ಟಿದ್ದಾರೆಂದರೆ, ಅಂದಾಜು ವೆಚ್ಚ ತಯಾರಿಕೆಯಲ್ಲಿದೆ, ಟೆಂಡರ್ ಹಂತದಲ್ಲಿದೆ, ಪ್ರಗತಿಯಲ್ಲಿದೆ, ಮುಕ್ತಾಯ ಹಂತದಲ್ಲಿದೆ, ಕೆಲಸದ ಆದೇಶ ಕೊಡಲಾಗಿದೆ, ಬದಲಿ ಪ್ರಸ್ತಾವನೆ ಸಲ್ಲಿಸಲಾಗಿದೆ, ಬೋರ್‌ವೆಲ್ ಕೊರೆದಿದ್ದು, ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ, ಬೋರ್‌ವೆಲ್ ಹಾಕಿಸುವ ಕೆಲಸ ಪ್ರಗತಿಯಲ್ಲಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಾಲ್ಕುಮುಕ್ಕಾಲು ವರ್ಷದಲ್ಲಿ ಒಬ್ಬ BPL ಕಾರ್ಡುದಾರನು ಒಂದು ಬೋರ್‌ವೆಲ್‌ಗೆ ಉಪಕರಣವನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಪಡೆಯಲು ನಾಲ್ಕೂವರೆಯಿಂದ ಐದು ಲಕ್ಷ ರೂಪಾಯಿಗಳವರೆಗೆ ಅಂದಾಜಿಸಿದರೆ ನಾಲ್ಕು ಮುಕ್ಕಾಲು ವರ್ಷದ ಅವಧಿಯಲ್ಲಿ ಎಷ್ಟು ವರ್ಷಗಳು ಬೇಕಾಗುತ್ತದೆ? ದಯಮಾಡಿ ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ನಾನು ಮೂರು ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸಣ್ಣ ನೀರಾವರಿ ಇಲಾಖೆಯಲ್ಲಿ ಬಹಳಷ್ಟು BPL card holders ಗೆ ಬೋರ್‌ವೆಲ್‌ನ್ನು ಹಾಕಿಸಬೇಕೆನ್ನುವಂತಹ ನಿಯಮದ ಪ್ರಕಾರ ಮಂಜೂರು ಮಾಡಿದ್ದಾರೆ. ಬೋರ್‌ವೆಲ್ ಹಾಕಿಸುವ ಕೆಲಸ ಪ್ರಗತಿಯಲ್ಲಿದೆ ಎಂದು ಹೇಳಿದ್ದಾರೆ. ಮಷಿನ್ ಬಂದು ನಿಂತು ಒಬ್ಬ ಬಡವನ ಹೊಲದಲ್ಲಿ ಬೋರ್‌ವೆಲ್ ಹಾಕಿಸುವುದಕ್ಕೆ ಎಷ್ಟು ದಿವಸಗಳು ಅಥವಾ ಎಷ್ಟು ತಿಂಗಳುಗಳು, ಎಷ್ಟು ವರ್ಷಗಳು ಬೇಕು? ದಯಮಾಡಿ ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ನಾಲ್ಕೂಮುಕ್ಕಾಲು ವರ್ಷದಲ್ಲಿ ನನಗೆ ತಿಳಿದ ಮಟ್ಟಿಗೆ ಅಧಿಕಾರಿಗಳು ಬೋಗಸ್ ಪತ್ರಿಕೆಯನ್ನು ಕೊಟ್ಟಿದ್ದಾರೆ ಎಂದು ನಾನು ದೊಡ್ಡ ಆರೋಪವನ್ನು ಮಾಡುತ್ತಿದ್ದೇನೆ. ಕಳೆದ ಬಾರಿಯೂ ಕೆರೆ ಹುಡುಕಾಡುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡಿದ್ದಾರೆ. ನಾನು ಕೆರೆಗಳ ಬಗ್ಗೆ ಮಾಹಿತಿಯನ್ನು ತಂದು ಕೊಡುತ್ತೇನೆಂದು ಹೇಳಿದರು. ಯಾವ ಕೆರೆ ಇದೆಯೋ ಗೊತ್ತಿಲ್ಲ. ಯಾವ ಕೆರೆಗೆ ಹಣ ಖರ್ಚು ಮಾಡಿದ್ದಾರೆಯೋ ಗೊತ್ತಿಲ್ಲ. ಆದರೆ ಇದರಲ್ಲಿ ಬಹಳಷ್ಟು ನ್ಯೂನತೆಗಳಿವೆ. 2014-15 ರೊಳಗೆ ಬೋರ್‌ವೆಲ್ ಹಾಕಿಸುವುದಕ್ಕೆ ಪ್ರಾರಂಭ ಮಾಡಿ 2017-18 ಈ ಸರ್ಕಾರದ ಅವಧಿ ಮುಗಿಯುವುದಕ್ಕೆ ಬಂದರೂ ಒಂದು ಬೋರ್‌ವೆಲ್ ಹಾಕಿಸುವಂತಹ ಕೆಲಸ ಆಗುತ್ತಿಲ್ಲ. ಸ್ವತಃ ನನ್ನ ಹೊಲದಲ್ಲಿ ಬೋರ್‌ವೆಲ್ ಹಾಕಿಸುವುದಕ್ಕೆ ಎಷ್ಟು ಗಂಟೆಗಳು ಬೇಕು, ಅರ್ಜಿ ಕೊಡುವುದಕ್ಕೆ ಎಷ್ಟು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಯ ಬೇಕು, ವಿದ್ಯುಚ್ಛಕ್ತಿ ಸಂಪರ್ಕ ಒದಗಿಸುವುದಕ್ಕೆ ಎಷ್ಟು ಸಮಯ ಬೇಕು ಎಂದು ಕೇಳಬಯಸುತ್ತಿದ್ದೇನೆ. ಇನ್ನು ಎರಡು ಉಪಪ್ರಶ್ನೆಗಳಿವೆ ಅದನ್ನು ನಂತರ ಕೇಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ಕೇಳಿರುವ ಉಪ ಪ್ರಶ್ನೆಗೆ, ಒಟ್ಟು 2013-14 ರಿಂದ 2017-18 ರವರೆಗೆ 165 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 1,117 ಕಾಮಗಾರಿಗಳಿಗೆ ಅನುದಾನವನ್ನು ಒಗಿಸಲಾಗಿದೆ. ಇದುವರೆವಿಗೂ 66 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಅದರಲ್ಲಿ 409 ಕಾಮಗಾರಿಗಳು ಪೂರ್ಣಗೊಂಡಿವೆ. 614 ಕಾಮಗಾರಿಗಳು ಪ್ರಗತಿಯಲ್ಲಿವೆ. 9 ಕಾಮಗಾರಿಗಳನ್ನು ಬದಲಿ ಪ್ರಸ್ತಾವನೆಗೆ ಸಲ್ಲಿಸಲಾಗಿದೆ. 44 ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ. 3 ಕಾಮಗಾರಿಗಳು ತಾಂತ್ರಿಕ ಸಲಹಾ ಸಮಿತಿಯಲ್ಲಿ ಒಪ್ಪಿಗೆಯನ್ನು ಪಡೆದು ಅಂದಾಜು ಮಾಡತಕ್ಕಂಥ ಹಂತದಲ್ಲಿದೆ. 31 ಕಾಮಗಾರಿಗಳನ್ನು ಕೈಬಿಡಲಾಗಿದೆ. ಅದರಲ್ಲಿ 7 ಕಾಮಗಾರಿಗಳು ಪುನರಾವರ್ತನೆಯಾಗಿರುವಂತಹ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಬಿಟ್ಟಿದ್ದೇವೆ. ಬೋರ್‌ವೆಲ್ ಕೊರೆಯುವುದಕ್ಕೆ ಎಷ್ಟು ವರ್ಷಗಳು ಬೇಕು ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದರ ಮಾಹಿತಿಯನ್ನು ನಾನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ಏಕೆಂದರೆ, ಬೋರ್‌ವೆಲ್ ಕೊರೆಯತಕ್ಕಂಥದ್ದಕ್ಕೆ ಪ್ರಕ್ರಿಯೆಗಳು ಈಗಾಗಲೇ ಐದು ವರ್ಷಗಳಿಂದಲೂ ಕೂಡ ಇವೆ. ಅದು ಯಾವ್ಯಾವ ವರ್ಷದ್ದು ಎಂದು ನಾನು ವಿವರವನ್ನು ನಾನು ಹತ್ತು ನಿಮಿಷದಲ್ಲಿ ಹೇಳುತ್ತೇನೆ. ಬೇರೆ ಪ್ರಶ್ನೆಯನ್ನು ಕೇಳಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಅಧಿವೇಶನದಲ್ಲಿ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರವನ್ನು ಒದಗಿಸುತ್ತೇವೆಂದು ಹೇಳಿದ್ದರು. ಆದರೆ ಇದುವರೆವಿಗೂ ಉತ್ತರ ಬಂದಿಲ್ಲ. ಇವತ್ತು ಅಪೂರ್ಣವಾದ ಉತ್ತರ ಬಂದಿದೆ. ಶಿಗ್ಗಾಂವ-ಸವಣೂರ ಮತಕ್ಷೇತ್ರದ ವ್ಯಾಪ್ತಿಯಲ್ಲಿ 44 ಕೆರೆಗಳಿರುವವು ಎಂದು ಮಾನ್ಯ ಸಚಿವರು ಹೇಳಿದ್ದಾರೆ. 2013-14 ರಿಂದ 2017-18 ರವರೆಗೆ ರೂ.935.00 ಲಕ್ಷ ಅಂದಾಜು ವೆಚ್ಚದಲ್ಲಿ 25 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಕೆರೆಗಳಲ್ಲಿ 1,12,348 ಘನ ಮೀಟರ್‌ನಷ್ಟು ಹೂಳು ತೆಗೆಯಲಾಗಿದ್ದು, ಅದಕ್ಕಾಗಿ ರೂ.57.53 ಲಕ್ಷ ವೆಚ್ಚ ಮಾಡಲಾಗಿದೆ ಎಂದು ಹೇಳಿದ್ದಾರೆ.

ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಐದು ವರ್ಷಗಳಲ್ಲಿ 935 ಲಕ್ಷ ರೂಪಾಯಿಗಳಿಗೆ 25 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ ಕೇವಲ 57.53 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನು ಉಳಿದಂತಹ ಹಣವನ್ನು 15 ದಿವಸಗಳಲ್ಲಿ ಖರ್ಚು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗುತ್ತದೆಯೇ ಎಂದು ನಾನು ನೇರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆಗುತ್ತದೆಯೋ ಅಥವಾ ಆಗುವುದಿಲ್ಲವೋ? ಹಣ ಬಿಡುಗಡೆಯಾಗಿರುವುದರಲ್ಲಿ 40 ಪರ್ಸೆಂಟ್ ಕೆಲಸ ಆಗಿಲ್ಲ. ಬಹಳಷ್ಟು ಹೇಳುತ್ತೇವೆ, ಮಾಡುವುದು ಕಡಿಮೆ. ಅಂಕಿಅಂಶಗಳು ಪುಸ್ತಕದಲ್ಲಿ ಇರುವುದು ಬೇಡ. ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆಯಲ್ಲಿರುವುದನ್ನು ತೋರಿಸುತ್ತೇನೆ. ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಎಲ್ಲಾ ಕೆರೆಗಳು ಬರಿದಾಗಿವೆ. ಇವತ್ತು ಕೆಲಸ ಮಾಡುವುದಕ್ಕೆ ಅಲ್ಲಿ ತೊಂದರೆ ಏನಿದೆ? ಏನೇನು ತೊಂದರೆ ಇಲ್ಲ. ಹಾವೇರಿ ಜಿಲ್ಲೆಯಲ್ಲಿ ಒತ್ತುವರಿಯಾದ ಕೆರೆಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಈ ಒತ್ತುವರಿ ಪ್ರದೇಶವನ್ನು ತೆರವುಗೊಳಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಮತ್ತೆ ಏಕೆ ಇಷ್ಟು ವರ್ಷವಾದರೂ ಕೆಲಸ ಮಾಡುತ್ತಿಲ್ಲ? ಇನ್ನು ಯಾವಾಗ ಮಾಡುತ್ತಾರೆ? ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಮೂರನೆಯದಾಗಿ, ಹಾವೇರಿ ಜಿಲ್ಲೆಯಲ್ಲಿ 16 ಕೆರೆಗಳಲ್ಲಿ 7.72 ಹೆಕ್ಟೇರ್ ಪ್ರದೇಶ ಒತ್ತುವರಿಯಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ನಾನು ಬಡವರ ಬಗ್ಗೆ ಕಲ್ಲು ಹಾಕುವುದಕ್ಕೆ ಹೋಗುವುದಿಲ್ಲ. ನಾನು ಅಂತಹ ಮನುಷ್ಯನಲ್ಲ. ಈಗಾಗಲೇ ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ತೆರವುಗೊಳಿಸಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನನ್ನ ಹತ್ತಿರ ಸಂಪೂರ್ಣವಾದ ಮಾಹಿತಿ ಇದೆ. ಸವಣೂರು ತಾಲ್ಲೂಕಿನ ತಹಸೀಲ್ದಾರ್‌ರವರು, A.C. (Assistant Commissioner), D.C. (Deputy Commissioner) ರವರ ಮುಖಾಂತರ ಈಗಾಗಲೆ ಕೆರೆಗಳಲ್ಲಿ ಮನೆಗಳನ್ನು ಕಟ್ಟಿದ್ದಾರೆ ಅದನ್ನು ಏನು ಮಾಡಬೇಕೆಂದು ಸಣ್ಣ ನೀರಾವರಿ ಇಲಾಖೆಗೆ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರು ಎಲ್ಲವನ್ನು ತೆರವುಗೊಳಿಸಲಾಗಿದೆ ಎಂದು ಹೇಳುತ್ತಾರೆ. ಮಾನ್ಯ ಕಂದಾಯ ಸಚಿವರು ಕೂಡ ಇದರ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆ ಬಹಳಷ್ಟು ದೊಡ್ಡದಿರುವುದರಿಂದ ನಾನು ಓದುವುದಕ್ಕೆ ಹೋಗುವುದಿಲ್ಲ. ಈ ಪತ್ರಿಕೆಯನ್ನು ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ. ಆದರೆ ಒಂದು ಕಡೆ ಏನು ಹೇಳುತ್ತಿದ್ದಾರೆಂದರೆ, ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಅಥವಾ ಕೆರೆಗಳ ಹೂಳು ಎತ್ತುವುದಕ್ಕೆ, ಕೆರೆಗಳ pitching ಕಟ್ಟುವುದಕ್ಕೆ, ಕೆರೆಗಳಿಂದ ಕಾಲುವೆಗಳನ್ನು ಮಾಡುವುದಕ್ಕೆ ನಾವು ಹಣವನ್ನು ಮಂಜೂರು ಮಾಡಿದ್ದೇವೆಂದು ಹೇಳುತ್ತಾರೆ. ಮತ್ತೊಂದು ಕಡೆ ಉತ್ತರದಲ್ಲಿ ಕೆರೆಗಳನ್ನು ಯಾರು ಅತಿಕ್ರಮಣ ಮಾಡಿಲ್ಲ, ಮನೆ ಕಟ್ಟಿಲ್ಲ ಎಂದು ಹೇಳುತ್ತಾರೆ. ಒಂದು ಕಡೆ ತಹಸೀಲ್ದಾರ್, A.C., D.C., ರವರು ಕೆರೆಗಳಲ್ಲಿ ಮನೆ ಕಟ್ಟಿದ್ದಾರೆಂದು ಇಲಾಖೆಗೆ ವರದಿ ಕಳುಹಿಸಿ ಕೊಡುತ್ತಾರೆ. ಒಂದು ಕಡೆ ಕಂದಾಯ ಸಚಿವರು ಹೇಳುತ್ತಾರೆ, ಅದನ್ನು ಅಕ್ರಮ-ಸಕ್ರಮದಲ್ಲಿ ಸೇರಿಸಿಕೊಂಡು ಅವರಿಗೆ ಮನೆ ನಿರ್ಮಾಣ ಮಾಡುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ವಿಚಾರ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಾರೆ. ಇದು ಪತ್ರಿಕೆಯಲ್ಲಿದೆ, ನಾನು ಈ ಪತ್ರಿಕೆಯನ್ನು ಮಾನ್ಯ ಕಂದಾಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಕೆರೆಗಳಲ್ಲಿ ಮನೆ ಕಟ್ಟಿಕೊಂಡಿರುವುದನ್ನು ಮಂಜೂರು ಮಾಡುವುದಕ್ಕೆ ಅಧಿಕಾರ ಇಲ್ಲ. ಯಾರಾದರೂ ಕೆರೆಯನ್ನು ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ಖುಲ್ಲಾಪಡಿಸುತ್ತೇವೆ. ಅದನ್ನು ಮಾಡುವುದಕ್ಕೆ ಬರುವುದಿಲ್ಲ ಎಂದು ಕಾನೂನಿನಲ್ಲಿಯೇ ಇದೆ. ಆ ರೀತಿ ನಾನು ಹೇಳಿಲ್ಲ, ತಪ್ಪಾಗಿರಬಹುದು.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಪತ್ರಿಕೆಯಲ್ಲಿ ತಪ್ಪು ಬರೆದಿರಬಹುದೆಂದು ನಾನು ತಿಳಿದುಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಇಲ್ಲಿ ನಾನೇ ಸ್ವತಃ ಹೇಳುತ್ತಿದ್ದೇನೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಪತ್ರಿಕೆಯವರು ಹೇಳಿಕೆಯನ್ನು ತಪ್ಪು ಬರೆದಿರಬಹುದೆಂದು ನಾನು ಊಹಿಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ನಾನೇ ಜೀವಂತವಾಗಿ ಈ ಸದನದಲ್ಲಿ ಕುಳಿತುಕೊಂಡು ಹೇಳುತ್ತಿರಬೇಕಾದರೆ ಪತ್ರಿಕೆಯಲ್ಲಿ ತಪ್ಪು ಬಂದಿರಬಹುದೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ತಪ್ಪು ಎಂದು ನಾನು ತಿಳಿದುಕೊಳ್ಳುತ್ತೇನೆ. ಈ ಸದನದಲ್ಲಿ ಬಹಳಷ್ಟು ಹಿರಿಯ ಸದಸ್ಯರು ಪತ್ರಿಕೆಯನ್ನು ಹಿಡಿದು ಪ್ರಶ್ನೆ, ಉತ್ತರವನ್ನು ಕೇಳುತ್ತಿರುತ್ತಾರೆ. ಅದಕ್ಕೆ ನಾನು ಇದನ್ನು ಉಲ್ಲೇಖ ಮಾಡಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಕೆರೆಯಲ್ಲಿ ಯಾರಿಗೂ ಮಂಜೂರು ಮಾಡುವುದಕ್ಕೆ ಅವಕಾಶ ಇಲ್ಲ. ಖುಲ್ಲಾಪಡಿಸುತ್ತೇವೆಂದು ತಹಸೀಲ್ದಾರ್‌ರವರಿಗೂ ಆದೇಶ ನೀಡಿದ್ದೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಣ್ಣ ನೀರಾವರಿ ಸಚಿವರು ನನ್ನ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕೊಡಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, 44 ಕೆರೆಗಳಿವೆ. ಅದರಲ್ಲಿ ಅಭಿವೃದ್ಧಿಗೆ ಅವಶ್ಯವಿರುವಂತಹ ಹಣ 935 ಲಕ್ಷ ರೂಪಾಯಿಗಳು. ಅದರಲ್ಲಿ ವೆಚ್ಚವಾಗಿರುವಂಥದ್ದು 3,70,55,000 ರೂಪಾಯಿಗಳು. 12 ಕಾಮಗಾರಿಗಳು ಮುಗಿದಿವೆ. 13 ಪ್ರಗತಿಯಲ್ಲಿವೆ. ಆದರೆ 25 ಕೆರೆಗಳ ಅಭಿವೃದ್ಧಿಯ ಜೊತೆಗೆ ನಾವು ಹೂಳನ್ನು ತೆಗೆಯುವುದಕ್ಕೆ ಖರ್ಚು ಮಾಡಿರುವಂಥದ್ದು 57.53

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಕ್ಷ ರೂಪಾಯಿಗಳು. ಇದು ಉತ್ತರದಲ್ಲೂ ಕೂಡ ಇದೆ. ಅವಶ್ಯಕತೆಗೆ ಅನುಗುಣವಾಗಿ 1,58,537 ಘನ ಮೀಟರ್‌ನಷ್ಟು ಹೂಳನ್ನು ತೆಗೆಯಬೇಕಾಗಿತ್ತು. ಅದರಲ್ಲಿ ತೆಗೆದಿರುವಂಥದ್ದು 1,12,348 ಘನ ಮೀಟರ್‌ನಷ್ಟು ಹೂಳನ್ನ ತೆಗೆದಿರುವಂಥದ್ದು. ಅದಕ್ಕಾಗಿ 57.53 ಲಕ್ಷ ಖರ್ಚು ಮಾಡಲಾಗಿದೆ. ಹಾವೇರಿ ಜಿಲ್ಲೆಯಲ್ಲಿರತಕ್ಕಂಥ 263 ಕೆರೆಗಳಲ್ಲಿ ಒತ್ತುವರಿಯಾಗಿರುವಂಥದ್ದು 95 ಕೆರೆಗಳ ಸರ್ವೆ ಕಾರ್ಯ ಮುಗಿದಿದೆ. 82 ಕೆರೆಗಳ ಸರ್ವೆ ಕಾರ್ಯ ಪೂರ್ಣಗೊಳಿಸಲಾಗಿದೆ ಹಾಗೂ 13 ಕೆರೆಗಳ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. 16 ಕೆರೆಗಳಲ್ಲಿ 7.72 ಹೆಕ್ಟೇರ್ ಪ್ರದೇಶ ಒತ್ತುವರಿಯಾಗಿದೆ. ಒತ್ತುವರಿಯಾಗಿರುವುದನ್ನು ತೆರವುಗೊಳಿಸುವ ಕೆಲಸ ಮಾಡಲಾಗಿದೆ. ಒತ್ತುವರಿಯನ್ನು ತೆರವುಗೊಳಿಸಿರುವಂಥದ್ದು ಎಂದರೆ ಹಾನಗಲ್ ತಾಲ್ಲೂಕಿನಲ್ಲಿ 6.91 ಹೆಕ್ಟೇರ್‌ನಷ್ಟು ಒತ್ತುವರಿಯಾಗಿತ್ತು. ಅದೇರೀತಿಯಾಗಿ ಹಿರೇಕೇರೂರಿನಲ್ಲಿ 0.81 ಹೆಕ್ಟೇರ್‌ನಷ್ಟು ಒತ್ತುವರಿಯಾಗಿದೆ. ಒಟ್ಟು 7.72 ಹೆಕ್ಟೇರ್‌ನಷ್ಟು ಒತ್ತುವರಿಯಾಗಿದೆ.

(ಮುಂದು)

(046 ) 07-02-2018/12-30/bkp/bns

**ಶ್ರೀ ಟಿ.ಬಿ.ಜಯಚಂದ್ರ(ಮುಂದು). . .**

ಒತ್ತುವರಿಯಾಗಿರುವುದನ್ನು ತೆರವುಗೊಳಿಸಲಾಗಿದೆ. ಇನ್ನು ಕೂಡ 263 ಕೆರೆಗಳ ಪೈಕಿ ಕೇವಲ 95 ಕೆರೆಗಳಿಗೆ ಮಾತ್ರ ಸರ್ವೆಯಾಗಿದೆ. ಅದರಲ್ಲಿ 82 ಕೆರೆಗಳ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿರುತ್ತದೆ. ಮತ್ತೆ 13 ಕೆರೆಗಳ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಇದರಲ್ಲಿ 16 ಕೆರೆಗಳ ಒತ್ತುವರಿಯಾಗಿದ್ದು, ಅವುಗಳನ್ನು ತೆರವುಗೊಳಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೊದಲನೆ ಪ್ರಶ್ನೆಗೆ ಹತ್ತು ನಿಮಿಷ ಕಾಲಾವಕಾಶವನ್ನು ತೆಗೆದುಕೊಂಡಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಲ್ಲವನ್ನೂ ಮೊದಲು ಕೇಳಲಿ ಎಂದು ಹೇಳಿದೆ. ನಮ್ಮಲ್ಲಿ on going works ತುಂಬಾ ಇದೆ. ನಮ್ಮ ಬಜೆಟ್‌ಗಿಂತ on going works ನಲ್ಲಿ ಸುಮಾರು ಆರೂವರೆ ಸಾವಿರ ಕೋಟಿ ರೂಪಾಯಿಗಳ ಕಾಮಗಾರಿಗಳು ಇವೆ. ಹಣಕಾಸಿನ ಲಭ್ಯತೆಯನ್ನು ಆಧಾರಿಸಿಯೇ ನಾವು ಕಾಮಗಾರಿಯನ್ನು ಮಾಡಬೇಕಾಗುತ್ತದೆ. ನಾವು ಒಂದು ಕಡೆ estimate ಮಾಡುತ್ತೇವೆ. ಅದು escalation ಆಗುತ್ತದೆ. ಹಣಕಾಸಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಭ್ಯತೆಯು ಕೂಡ ಬಹಳ ಮುಖ್ಯವಾಗುತ್ತದೆ. ನಾವು ಸಾಮಾನ್ಯವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಾದಾಗ 1/3rd ಹಣವನ್ನು provision ಮಾಡುತ್ತೇವೆ. 1/3rd ಹಣವನ್ನು provision ಮಾಡಿದಾಗ ಅದು carry over ಆಗಬೇಕು. ಅದು spill over ಆಗಿ, ಈಗಾಗಲೇ ಅದು ಆರು-ಆರೂವರೆ ಸಾವಿರ ಕೋಟಿ ರೂಪಾಯಿಗಳಾಗಿದೆ. ಅದರೆ, ನಮ್ಮಲ್ಲಿ ಹಣ ಲಭ್ಯತೆ ಎರಡು-ಎರಡೂವರೆ ಸಾವಿರ ಕೋಟಿ ರೂಪಾಯಿಗಳು ಮಾತ್ರ ಇದೆ. ಆ spill over ಗೆ ನಮಗೆ ಹೆಚ್ಚು ಹಣ ಖರ್ಚಾಗುತ್ತಿದೆ. ಹಣಕಾಸಿನ ಲಭ್ಯತೆಯನ್ನು ಆಧಾರಿಸಿ, ಕಾಮಗಾರಿಯನ್ನು ಮುಗಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ದಯಮಾಡಿ ದೊಡ್ಡ ದೊಡ್ಡ ಕೆಲಸ-ಕಾರ್ಯಗಳನ್ನು ನಿಮ್ಮ ಹಣಕಾಸಿನ ಲಭ್ಯತೆ ಮೇರೆಗೆ ಮಾಡಿ. ನಾನು ಬೇಡವೆಂದು ಹೇಳುವುದಿಲ್ಲ. ಬಡವರಿಗೆ ಫಲಾನುಭವಿಗಳೆಂದು ಏನು ಆಯ್ಕೆ ಮಾಡಿಕೊಂಡು 2 ಲಕ್ಷ, 3 ಲಕ್ಷ, 4 ಲಕ್ಷ, 5 ಲಕ್ಷ ರೂಪಾಯಿಗಳ ಒಳಗಡೆ ಬೋರ್‌ವೆಲ್ ತೆಗೆಸುವಂತಹ ಕೆಲಸಗಳನ್ನು ಏನು ಮಾಡುತ್ತಿದ್ದಾರೆಂದು ಅದರ ಬಗ್ಗೆ ಮಾನ್ಯ ಸಚಿವರು ದಯಮಾಡಿ ಹೇಳಬೇಕು. ಏಕೆಂದರೆ, ಅದಕ್ಕೇನೂ ದೊಡ್ಡ ಹಣ ಬೇಕಾಗಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರು ಹೇಳಿದ್ದನ್ನು ಒಪ್ಪುತ್ತೇನೆ. ಈಗ ಆ ಕಾಮಗಾರಿಗಳಲ್ಲಿ ಬದಲಾವಣೆಯಾಗಿರುವಂತಹದ್ದು ಇದೆ. ಈ ರೀತಿಯ ಎಲ್ಲಾ ಪ್ರಕ್ರಿಯೆಗಳು ಕೂಡ ಇದೆ. ಹಣದ ಲಭ್ಯತೆ ಕಡಿಮೆ ಇರತಕ್ಕಂತಹ ಹಿನ್ನೆಲೆಯಲ್ಲಿ ಈ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಮಾನ್ಯ ಸದಸ್ಯರು ಹೇಳುವಂಥಹದ್ದರ ಬಗ್ಗೆ ಹೇಳುವುದಾದರೆ, ನಾನು ಹೊಸದಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ನಾವು ಏನು ರಚನೆ ಮಾಡಿದ್ದೇವೆ, ಅದಕ್ಕೆ ಚಾಲನೆಯನ್ನು ನೀಡುವಂತಹ ಕೆಲಸವನ್ನು ಮಾಡಿದ್ದೇವೆ. ಆದರೆ, ಮಾನ್ಯ ಸದಸ್ಯರು ಸಣ್ಣ ಸಣ್ಣ ಕಾಮಗಾರಿಗಳನ್ನು ಮಾಡಲಿಕ್ಕೆ ದುಡ್ಡಿಲ್ಲವೆಂದು ಹೇಳುತ್ತಾ, ದೊಡ್ಡ ದೊಡ್ಡ ಕಾಮಗಾರಿಗಳನ್ನು ಮಾಡುತ್ತಿದ್ದೀರಿ ಎಂದು ಹೇಳುತ್ತಾರೆ. ಈಗ ಆ ಒಂದು ಉದ್ದೇಶಕ್ಕೋಸ್ಕರವೇ ರಾಜ್ಯದಲ್ಲಿ ಇರುವಂತಹ ಸುಮಾರು 36 ಸಾವಿರ ಕೆರೆಗಳ ಪೈಕಿ ಕೆಲವು ಕೆರೆಗಳು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿದ್ದವು, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿದ್ದವು. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿದ್ದವು. ಮತ್ತೆ ಸಣ್ಣ ನೀರಾವರಿ ಕೆರೆ ವ್ಯಾಪ್ತಿಯಲ್ಲಿಯೂ ಸಹ ಇದ್ದವು. ಈ ಎಲ್ಲಾ ಕೆರೆಗಳನ್ನೂ ಕೂಡ ಕೆರೆ ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿ ತಂದು ಕೆರೆಗಳ ಅಭಿವೃದ್ಧಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಪ್ರಪ್ರಥಮವಾಗಿ ಕಾನೂನಿನಲ್ಲಿಯೂ ಕೆಲವು ಬದಲಾವಣೆಗಳನ್ನು ಮಾಡುವ ಪ್ರಕ್ರಿಯೆ ಕೂಡ ಇದೆ. ಕೆಲವೇ ದಿವಸಗಳಲ್ಲಿ ಆ ಸಂಬಂಧ ಸದನದಲ್ಲಿಯೂ ಕೂಡ ಮಂಡಿಸುತ್ತಿದ್ದೇವೆ. ಇದುವರೆವಿಗೂ ಕೆರೆಗಳ ಹೂಳು ಎತ್ತುವಂತಹ ಕೆಲಸ ನಿರಂತರವಾಗಿ ನಡೆಯುತ್ತಿರಲಿಲ್ಲ. ಆ ಕೆಲಸವನ್ನು ಮಾಡಬೇಕೆನ್ನುವ ಕಾರಣಕ್ಕೋಸ್ಕರ ಈ ವರ್ಷ ಒಟ್ಟಾರೆ ರಾಜ್ಯದಲ್ಲಿ 1,251 ಕರೆಗಳ ಹೂಳು ಎತ್ತುವಂತಹ ಕೆಲಸವನ್ನು ಮಾಡಬೇಕೆಂದು ಹೇಳಿ, ತೀರ್ಮಾನ ಮಾಡಿ, 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹದ್ದು 972 ಕೆರೆಗಳು. JSYS (Jala Samvardhane Yojana Sangha) ಎಂದು ಇತ್ತು. ಜಲಸಂವರ್ಧನ ಸಂಘಗಳಿಂದ ಇತ್ತು. ಅವುಗಳನ್ನು ಸಹ ಕೆರೆ ಅಭಿವೃದ್ಧಿ ವ್ಯಾಪ್ತಿಯಲ್ಲಿಯೇ ತಂದು, ಆ ಕೆರೆಗಳಲ್ಲಿ ಹಿಂದಿನ ಕಾಮಗಾರಿಗಳನ್ನು ಬಿಟ್ಟು, ಈಗ ಹೊಸದಾಗಿ 316 ಸಂಘಗಳ ಮೂಲಕ ಕಾಮಗಾರಿಗಳನ್ನು ಚಾಲನೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಸಣ್ಣ ನೀರಾವರಿ ಕೆರೆಗಳಿಗೆ ಸುಮಾರು 4 ಲಕ್ಷ ರೂಪಾಯಿಗಳು, ಇತರೆ ಕೆರೆಗಳಿಗೆ 2 ಲಕ್ಷ ರೂಪಾಯಿಗಳು.

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುತ್ತಿರುವುದನ್ನು ಕೇಳಬೇಕು. ಏಕೆಂದರೆ, ಈ ವಿಚಾರವಾಗಿ ನಾನು ಹೇಳುತ್ತಿರುವುದು ಮೊದಲನೆಯ ಹೇಳಿಕೆಯಾಗಿದೆ. ಏಕೆಂದರೆ, ಕೆರೆ ಅಭಿವೃದ್ಧಿ ಪ್ರಾಧಿಕಾರ ಆದ ಮೇಲೆ . . .

**ಸಭಾಪತಿಯವರು:–** ಬಡವರಿಗೆ ಬೋರ್‌ವೆಲ್‌ಗೆ ಹಣ ಕೊಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ನಾನು ಅದೇ ವಿಷಯವನ್ನು ಹೇಳುತ್ತಿದ್ದೇನೆ. ತಾವು ಹೇಳಿದ್ದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಏಕೆಂದರೆ, ಸಣ್ಣ ಕೆಲಸಗಳ ವಿಚಾರ ಎಂದು ಮಾನ್ಯ ಸದಸ್ಯರು ಹೇಳಿದರು.

**ಸಭಾಪತಿಯವರು:–** ಅಂದರೆ, ರೈತರ ಸಣ್ಣ ಕೆಲಸಗಳು ಎಂದು ಹೇಳುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಬೋರ್‌ವೆಲ್‌ಗೂ ಕೂಡ ಹಣದ ಲಭ್ಯತೆಯನ್ನು ಆಧಾರಿಸಿ, ಕಾಮಗಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ. ಹಣದ ಲಭ್ಯತೆ ಕಡಿಮೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವ ಕಾರಣ ಈ ಒಂದು ಕೆಲಸ ಆಗಿರುವುದಿಲ್ಲ. ನಾವು ಬೋರ್‌ವೆಲ್ ಕೊರೆದ ತಕ್ಷಣ ಅದಕ್ಕೆ ವಿದ್ಯುತ್ ಸಂಪರ್ಕ, ಮೋಟರ್ ಎಲ್ಲವೂ ಸೇರಿಸಿ ಮುಗಿಸುವಂತಹ ಕೆಲಸವನ್ನು ನಾವು ಅಲ್ಲಿ ಮಾಡಿದ್ದೇವೆ. ಪಟ್ಟಿಯಲ್ಲಿ ಸಾಕಷ್ಟಿವೆ. ಆದರೆ, ಅಲ್ಲಿ ಕಾಮಗಾರಿಗಳಲ್ಲಿ ವಿಳಂಬವಾಗುತ್ತಿದೆ. ಅದನ್ನು ಮುಗಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಅದಲ್ಲ. ನಾನು ಒಂದೇ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಬಯಸುತ್ತೇನೆ. 2014 ರಲ್ಲಿ ಅಂದಿನ ಸಣ್ಣ ನೀರಾವರಿ ಸಚಿವರಾದ ಶ್ರೀಮಾನ್ ಶಿವರಾಜ ತಂಗಡಗಿಯವರು ಶ್ರೀ ಬಸಪ್ಪ ಹರಿಜನ ಎನ್ನುವವನಿಗೆ ನೀಡಿದ ಬೋರ್‌ವೆಲ್ ಕೆಲಸ ಕಾಮಗಾರಿಯಲ್ಲಿ ಇದೆ ಎಂದದ್ದು, ಇವತ್ತು ಆತನ ಕಾಮಗಾರಿಯ ಪ್ರಾರಂಭದಲ್ಲಿದೆ. ಇದು ಬೋರ್‌ವೆಲ್ ವಿಚಾರ. ಶ್ರೀಯುತ ಶಿವರಾಜ ತಂಗಡಗಿಯವರು ಕೊಟ್ಟಂತಹ 4 ಲಕ್ಷ, 3.80 ಲಕ್ಷ, 2.60 ಲಕ್ಷದ ಕೆಲಸ ಇದಾಗಿದೆ. ನನ್ನ ಪ್ರಶ್ನೆ ಏನೆಂದರೆ, ಹರಿಜನ-ಗಿರಿಜನರಿಗೆ, ಬಡವರಿಗೆ ಸಂಬಂಧಪಟ್ಟಂತಹ ಕಾಮಗಾರಿಗಳ 2014 ರ ಪ್ರಶ್ನೆ ಇದಾಗಿದೆ. ಇದು ಸಣ್ಣ ಹಣದ ಪ್ರಶ್ನೆಯಾಗಿದೆ. ಕೇವಲ 3 ಲಕ್ಷ, 4 ಲಕ್ಷ ರೂಪಾಯಿಗಳ ಕಾಮಗಾರಿಗಳು ಬಡವರಿಗೆ ಏನಿದೆ, ಏನು ಅಲ್ಲಿ ಗಂಗಾ ಕಲ್ಯಾಣ ಬರುತ್ತದೆ, ಮತ್ತೊಂದು ಕಲ್ಯಾಣ ಯೋಜನೆಯಲ್ಲಿ ಬರುತ್ತದೆ, ಅದರಿಂದ ನೀರು ತೆಗೆಯುತ್ತೇನೆ, ಅದರಿಂದ ನಾನು ಉತ್ಪನ್ನ ತೆಗೆಯುತ್ತೇನೆಂದು ಹೇಳಿಕೊಂಡು ಓಡಾಡುತ್ತಿದ್ದಾರೆ, ಅವರ ಕಾಮಗಾರಿಯ ವಿಚಾರವಾಗಿ ನಾನು ಕೇಳುತ್ತಿದ್ದೇನೆ. ಅದು ಸಣ್ಣ, ಅತಿ ಸಣ್ಣ ಹಿಡುವಳಿದಾರರಿಗೆ ಕೊಡುವಂತಹ ಬೋರ್‌ವೆಲ್ ಕೆಲಸದ ವಿಚಾರ. ನಾನು ದೊಡ್ಡವರದ್ದನ್ನು ಕೇಳುತ್ತಿಲ್ಲ. ಬಡವರದ್ದನ್ನು ನಾನು ಕೇಳುತ್ತಿದ್ದೇನೆ. ಇದನ್ನೂ ಸಹ ಮಾಡಲಿಕ್ಕೆ ಆಗುವುದಿಲ್ಲವೆಂದರೆ, ಅದನ್ನೂ ಸಹ ಹಣದ ಲಭ್ಯತೆ ಮೇರೆಗೆ ಎಂದು ಹೇಳಿದರೆ ಹೇಗೆ? ಮತ್ತೆ ಏತಕ್ಕೆ ಈ ಯೋಜನೆಗಳು ಇರಬೇಕು? ಈ ರೀತಿಯಲ್ಲಿ 2013-14 ರಲ್ಲಿ ಆಗಿನ ಮಂತ್ರಿಗಳು ಸಹ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಸೋಮಣ್ಣ ಬೇವಿನಮರದ ಗಂಗಾ ಕಲ್ಯಾಣ ಎಂದು ಹೇಳುತ್ತಾ ಬಂದು ಇವತ್ತಿಗೂ ಅಂದರೆ 2018 ರಲ್ಲಿಯೂ ಸೋಮಣ್ಣ ಬೇವಿನಮರದ ಗಂಗಾ ಕಲ್ಯಾಣ ಎಂದು ಚಾಲ್ತಿಯಲ್ಲಿದೆ. ಇದೇ ಉತ್ತರವೇ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈಗ ಒಂದು ಬಾರಿ action plan ನಲ್ಲಿ ಸೇರಿದಾಗ ಅದು ಮುಂದಿನ ವರ್ಷಕ್ಕೆ spill over ಆಗುತ್ತಾ ಹೋಗುತ್ತದೆ. ಈ ರೀತಿಯಾಗಿ spill over ಆಗುತ್ತಾ, ಆಗುತ್ತಾ, accumulate ಆಗಿ ಇಲ್ಲಿಗೆ ಅದು ಆರೂವರೆ ಸಾವಿರ ಕೋಟಿ ರೂಪಾಯಿಗಳಾಗಿ ಬಂದಿದೆ. ನಿಮ್ಮ ಪ್ರಶ್ನೆ ಏನೆಂದರೆ, ಬಡವರಿಗೆ ಕೊಡತಕ್ಕಂತಹ ಬೋರ್‌ವೆಲ್‌ಗಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲಸವನ್ನು ಮುಗಿಸಬೇಕೆನ್ನುವುದಾಗಿದೆ. ಈಗ ಅದಕ್ಕೆ ನಾವು ಆದ್ಯತೆಯನ್ನು ಕೊಡುತ್ತೇವೆ. ಅದಕ್ಕೆ ಹೆಚ್ಚು ಹಣವನ್ನು ಕೊಡುವುದರ ಮೂಲಕ ಕೆಲಸ ಮುಗಿಸುವಂತಹದ್ದನ್ನು ಮಾಡುತ್ತೇವೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಗಂಗಾ ಕಲ್ಯಾಣದ ಬೋರ್‌ವೆಲ್ ತೆಗೆದು, ಅದಕ್ಕೆ ವಿದ್ಯುತ್ ಸಂಪರ್ಕ ಕೊಟ್ಟು, ಅವರಿಗೆ ನೀರಾವರಿ ಮಾಡಲಿಕ್ಕೆ ಎಷ್ಟು ದಿವಸಗಳಲ್ಲಿ ಪೂರ್ಣಗೊಳಿಸುತ್ತಾರೆಂದು ಹೇಳಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಹಣಕಾಸಿನ ಲಭ್ಯತೆಯನ್ನು ಆಧಾರಿಸಿಯೇ ಈ ಕೆಲಸವನ್ನು ಮಾಡಬೇಕಾಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸರ್ಕಾರದ ಅವಧಿ ಒಂದೇ ತಿಂಗಳು ಬಾಕಿ ಇರುವುದಾಗಿದೆ. ಒಂದು ತಿಂಗಳಿನಲ್ಲಿ ಏನು ಮಾಡಲಿಕ್ಕೆ ಆಗುತ್ತದೆ?

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇಲ್ಲಿ ಗಮನಿಸಬೇಕು. 2013-14 ರಿಂದ ಪೆಂಡಿಂಗ್ ಇರುವಂತಹ ಕಾಮಗಾರಿಗಳಿಗೆ ಆದ್ಯತೆ ಮೇಲೆ ಹಣವನ್ನು ನೀಡಿ ಕಾಮಗಾರಿಯನ್ನು ಮುಗಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, 2013-14 ರಲ್ಲಿ ಸೋಮಣ್ಣ ಬೇವಿನ ಮರದ ರವರ ಗಂಗಾ ಕಲ್ಯಾಣದ ಬೋರ್‌ವೆಲ್ ಎಂದು ಹೇಳುತ್ತಾ ಬಂದು ಇವತ್ತಿಗೂ ಅಂದರೆ 2017-18 ರಲ್ಲಿಯೂ ಸೋಮಣ್ಣ ಬೇವಿನಮರದ ಗಂಗಾ ಕಲ್ಯಾಣದ ಬೋರ್‌ವೆಲ್ ಎಂದು ಚಾಲ್ತಿಯಲ್ಲಿದೆ.

**ಸಭಾಪತಿಯವರು:-** ಈಗ ನೀವು specific ಆಗಿ ಎಷ್ಟು ಬೋರ್‌ವೆಲ್‌ಗಳು ಎಂದು ಹೇಳಿ. ನೀವು ಒಟ್ಟು ಹೇಳಿದರೆ ಆಗುವುದಿಲ್ಲ. 5, 8, 9 ಎಂದು ರೀತಿಯಲ್ಲಿ ಎಷ್ಟು ಎಂದು ಹೇಳಬೇಕು.

**ಶ್ರೀ ಸೋಮಣ್ಣ ಮ. ಬೇವಿನಮರದ:-** ಮಾನ್ಯ ಸಭಾಪತಿಯವರೇ, 2013-14 ರಿಂದ 2017-18 ರ ವರೆಗೆ ಎಷ್ಟು ಬೋರ್‌ವೆಲ್‌ಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ, ಅಷ್ಟೂ ಬೋರ್‌ವೆಲ್‌ಗಳನ್ನು ತೆಗೆದು, ಆ ಮೂಲಕ ನೀರಾವರಿ ಮಾಡಲಿಕ್ಕೆ ಒಂದು ತಿಂಗಳಿನಲ್ಲಿ ವ್ಯವಸ್ಥೆ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳುವುದೇನೆಂದರೆ, ಆದ್ಯತೆ ಮೇರೆಗೆ 2013–14 ರಿಂದ ಮಂಜೂರಾದ ಕಾಮಗಾರಿಗಳಗೆ ಆದ್ಯತೆ ಮೇರೆಗೆ ಹಣವನ್ನು ಬಿಡುಗಡೆ ಮಾಡುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶನ):–** ಮಾನ್ಯ ಸಭಾಪತಿಯವರೇ, ಹಣಕಾಸು ಅವರ ಹತ್ತಿರ ಇಲ್ಲದೇ why do they plan for it?

**ಸಭಾಪತಿಯವರು:–** ಅವರ ಹತ್ತಿರ ಹಣ ಇಲ್ಲ. ಹಣ ಬಂದ ಮೇಲೆ ಕೊಡುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಯಾವ್ಯಾವುದೋ ಕಾರಣದಿಂದ ಅದು ಮುಂದಕ್ಕೆ ಹೋಗಿರುತ್ತದೆ.

**ಸಭಾಪತಿಯವರು:–** ಹಣ ಬಂದ ಮೇಲೆ ಕೊಡುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೇ, 4–5 ಲಕ್ಷ ರೂಪಾಯಿಗಳ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲವೆಂದರೆ ಹೇಗೆ? ಇರುವಂತಹ 200–300 ಫಲಾನುಭವಿಗಳಿಗೆ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲವೆಂದರೆ ಹೇಗೆ?

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, SCP (Special Component Plan)/TSP (Tribal Sub Plan) ನಲ್ಲಿಯೇ ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಂಡಿರುವುದಾಗಿದೆ. ಇಲ್ಲಿ ಮುಚ್ಚಿಡುವಂತಹದ್ದು ಏನೂ ಇಲ್ಲ. ಕಳೆದ ವರ್ಷ ನಾವು SCP/TSP ನಲ್ಲಿ ಕಾಮಗಾರಿಗಳನ್ನು ಬೋರ್‌ವೆಲ್‌ಗೋಸ್ಕರ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಅದು ತಡವಾಗಿದೆ. ಅದು ಫೆಬ್ರವರಿ ತಿಂಗಳಿನಲ್ಲಿ ಅಪ್ರೂವಲ್ ಆಗಿದೆ. ಆ ಕಾರಣಕ್ಕೋಸ್ಕರ ಹಣ ಲ್ಯಾಪ್ಸ್ ಆಗಿ ಅದು ಮುಂದಿನ ವರ್ಷ ಬರುತ್ತದೆ.

**ಶ್ರೀ ಸೋಮಣ್ಣ ಮ.ಬೇವಿನಮರದ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳಲೇ ಇಲ್ಲ. 2014–15 ರಿಂದ ಮಂಜೂರಾದ ಕಾಮಗಾರಿಗಳ ಉದಾಹರಣೆಯನ್ನು ಕೊಟ್ಟಿದ್ದಾರೆ. ಇದು ಸೋಮಣ್ಣ ಬೇವಿನಮರದ ರವರ ಬೋರ್‌ವೆಲ್ ಚಾಲ್ತಿಯಲ್ಲಿದೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೋರ್‌ವೆಲ್ ತೆಗೆಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಸಿವಿಲ್ ಕಾಮಗಾರಿ ಚಾಲ್ತಿಯಲ್ಲಿದೆ. Electrical works ಚಾಲ್ತಿಯಲ್ಲಿದೆ. 4 ವರ್ಷಗಳಾದರೂ ಸಹ ವಿದ್ಯುತ್ ಕಂಬಗಳು ಅಲ್ಲಿಗೆ ಬಂದಿಲ್ಲ. ಅದಕ್ಕೆ ಕರೆಂಟ್ ಇಲ್ಲ. ಮೋಟರ್‌ಗಳನ್ನು ಇಳಿಸಿಲ್ಲ. ಬೋರ್‌ವೆಲ್ ಮೋಟರ್ ಬಂದಿದೆ. ಇದರ ಪರಿಸ್ಥಿತಿ ಏನು ಎಂದು ಕೇಳುತ್ತಿದ್ದೇನೆ. ನನ್ನ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ, ಉತ್ತರ ಕೊಡಬೇಕಾದಾಗ ನಮಗೂ constraint ಇದೆ. ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಕೊಡಬೇಕಾಗುತ್ತದೆ. ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೋಡಿ, ಅಧಿವೇಶನದ ನಂತರ ಈ ಬಗ್ಗೆ ಮಾನ್ಯ ಸದಸ್ಯರೊಂದಿಗೆ ಸಭೆಯನ್ನು ಕರೆದು, ಯಾವ್ಯಾವ ಕಾಮಗಾರಿಗಳು, ಯಾವ ಸಾಲಿನಲ್ಲಿ ಪೆಂಡಿಂಗ್ ಇವೆ ಎನ್ನುವುದನ್ನು ಚರ್ಚೆ ಮಾಡಿ ಈ ಬಗ್ಗೆ ತೀರ್ಮಾನ ಮಾಡುತ್ತೇನೆ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪ್ರತಿಯವರೇ, ಆಗಬಹುದು.

**ಪ್ರಶ್ನೆ ಸಂಖ್ಯೆ 100**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ 4 ಪ್ರಶ್ನೆಗಳನ್ನು ಕೇಳಿದ್ದೇನೆ. ಸನ್ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ನಮಗೆ ಒಂದು ನಂಬಿಕೆ ಇದೆ. ಶ್ರೀಯುತ ಕಾಗೋಡು ತಿಮ್ಮಪ್ಪನವರು ಯಾವುದೇ ಪ್ರಶ್ನೆಯನ್ನು ಮುಚ್ಚುಮರೆಯಿಲ್ಲದೇ, ನೇರವಾಗಿ ಉತ್ತರವನ್ನು ಕೊಡುವಂತಹ ಕೆಲಸವನ್ನು ಮಾಡುತ್ತಾರೆ. ಆದರೆ, ನನ್ನ ಪ್ರಶ್ನೆಗಳ ಪೈಕಿ 2 ಮತ್ತು 3ನೇ ಪ್ರಶ್ನೆಗಳಿಗೆ ವಿವರವನ್ನು ಕೇಳಿದ್ದೇನೆ, ಕೊಟ್ಟಿಲ್ಲ. ಏತಕ್ಕೆಂದು ನನಗೆ ಅರ್ಥವಾಗುತ್ತಿಲ್ಲ.

**ಮುಂದು. .**

(047) 07.02.2018 12.40 ಎಸ್‌ವಿ-ಕೆಎಸ್

**ಶ್ರೀ ರಮೇಶ್ ಬಾಬು (ಮುಂದು):-**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎಲ್ಲೋ ಒಂದು ಕಡೆ ಅಧಿಕಾರಿಗಳ ಮೇಲೆ depend ಆಗಿ ಮಾನ್ಯ ಸಚಿವರು ಈ ರೀತಿಯ ಅಪೂರ್ಣವಾದ ಮಾಹಿತಿಯನ್ನು ನೀಡಿದರೆ, ನಾವು ಪ್ರಶ್ನೆಯನ್ನು ಕೇಳುವ ಉದ್ದೇಶ ಬಹುತೇಕ ಸಫಲವಾಗುವುದಿಲ್ಲ. ನಾನು ಕೇಳಿರುವ ಎರಡನೆಯ ಪ್ರಶ್ನೆ "ಕಂದಾಯ ಇಲಾಖೆಯಲ್ಲಿ ನಿಯೋಜನೆಯ ಮೇಲೆ ತಹಶೀಲ್ದಾರರ ಮತ್ತು ಉಪವಿಭಾಗಾಧಿಕಾರಿಗಳ ಹುದ್ದೆಯನ್ನು ತುಂಬಲು ಅನುಸರಿಸುತ್ತಿರುವ ಮಾನದಂಡಗಳು ಯಾವುವು?" ಎಂಬುದಾಗಿದೆ. ಆದರೆ ಉತ್ತರದಲ್ಲಿ ಮಾನದಂಡಗಳು ಯಾವುವು ಎಂಬುದನ್ನು ಕೊಟ್ಟಿರುವುದಿಲ್ಲ. "ಮಂಜೂರಾಗಿರುವ ಉಪ ವಿಭಾಗಾಧಿಕಾರಿಗಳ ಹುದ್ದೆಗಳು ಎಷ್ಟು? ಇವುಗಳಲ್ಲಿ ಬಾಕಿ ಇರುವ ಹುದ್ದೆಗಳೆಷ್ಟು? ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಉಪ ವಿಭಾಗಾಧಿಕಾರಿಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು)" ಅಂದರೆ, ನಿಯೋಜನೆಯ ಮೇಲೆ ಬಂದಿರುವ ತಹಶೀಲ್ದಾರ್‌ಗಳ ಮಾಹಿತಿಯನ್ನು ಕೊಡಲು ಕೇಳಿದರೆ ಒಟ್ಟು ಸಂಖ್ಯೆಯನ್ನು ನೀಡಿರುತ್ತಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 50ರ ಅಡಿಯಲ್ಲಿ ಅವಕಾಶ ಕಲ್ಪಿಸಿರುವಂತೆ ತಹಶೀಲ್ದಾರ್ ಹುದ್ದೆಯ ಸಮಾನಾಂತರ ಹುದ್ದೆ/ವೇತನ ಶ್ರೇಣಿಯನ್ನು ಪರಿಗಣಿಸಿ ನಿಯೋಜನೆಯ ಮೇಲೆ ನೇಮಿಸಲಾಗುತ್ತದೆ ಎಂದು ಹೇಳಿದ್ದಾರೆ. ಈ ಪ್ರಶ್ನೆಯನ್ನು ಏಕೆ ಕೇಳುತ್ತಿದ್ದೇನೆಂದರೆ ಮೊದಲನೆಯ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ 'ಮಂಜೂರಾಗಿರತಕ್ಕಂತಹ ಹುದ್ದೆ 258, ಖಾಲಿ ಇರುವ ಹುದ್ದೆಗಳು 123' ಎಂದು ಹೇಳಿದೆ. ಅಂದರೆ, ಶೇಕಡ 50ರಷ್ಟು ಹುದ್ದೆಗಳು ಖಾಲಿ ಇವೆ. ಬೇರೆ ಬೇರೆಯವರನ್ನು ನಿಯೋಜನೆಯ ಮೇಲೆ ತೆಗೆದುಕೊಳ್ಳಲಾಗಿದೆ.

ಮಾನ್ಯ ಕಂದಾಯ ಸಚಿವರ ಪಕ್ಕದಲ್ಲಿಯೇ ಮಾನ್ಯ ಕಾನೂನು ಸಚಿವರು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ಸಹ ಕುಳಿತಿದ್ದಾರೆ. ಅವರ ತಾಲ್ಲೂಕಿನ ತಹಶೀಲ್ದಾರ್‌ರವರು ರಾತ್ರಿ 08.00 ಗಂಟೆಯಲ್ಲಿ ಕಡತಕ್ಕೆ ಸಹಿ ಮಾಡುತ್ತಿರುವುದು photo ಸಮೇತ ಪತ್ರಿಕೆಗಳಲ್ಲಿ ವರದಿಯಾಗಿದೆ. ಅವರು ಕಾರ್ಮಿಕ ಇಲಾಖೆಯಿಂದ ನಿಯೋಜನೆಯ ಮೇರೆಗೆ ಬಂದಿರತಕ್ಕಂಥವರು. ಅವರು ಹಿಂದೆ ಚಿಕ್ಕನಾಯಕನಹಳ್ಳಿಯಲ್ಲಿದ್ದಾಗ ಅವರ ವಿರುದ್ಧ ಮಾನ್ಯ ಸಚಿವರಿಗೆ ಲಿಖಿತ ದೂರು ಬಂದಿತ್ತು. ಚಿಕ್ಕನಾಯಕನಹಳ್ಳಿಯಲ್ಲಿ ಒಬ್ಬ ತಹಶೀಲ್ದಾರ್ ಇದ್ದಾರೆ. ಅವರು ಮದ್ಯಪಾನ ಮಾಡಿ ತಾಲ್ಲೂಕು ಕಛೇರಿಗೆ ಬಂದು ಕುಳಿತುಕೊಳ್ಳುತ್ತಾರೆ. ಯಾರಾದರೂ Second Division Clerk (SDC) ಅಥವಾ First Division Clerk (FDC) ತಮ್ಮ ಬಳಿಗೆ ಬಂದರೆ ಅವರ ಜೇಬಿಗೆ ಕೈ ಇಡುತ್ತಾರೆ. ಇಂತಹ ತಹಶೀಲ್ದಾರರುಗಳನ್ನು ಇಟ್ಟುಕೊಂಡು ಏನು ಕೆಲಸ ಮಾಡಲು ಸಾಧ್ಯ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳ ಬಯಸುತ್ತೇನೆ. ಮಾನ್ಯ ಸಚಿವರು ಆಗಲೇ ನೀಡಿದ ಮಾಹಿತಿಯಂತೆ ಮಂಡ್ಯದಲ್ಲಿ 25,000 ಬಗರ್‌ಹುಕುಂ ಅರ್ಜಿಗಳು ಬಾಕಿ ಇವೆ. MLA ಗಳು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರೂ ಸಹ ಇವರು ಸಭೆಗಳನ್ನು ಕರೆಯುವುದಿಲ್ಲ. ಇಲಾಖೆಯಲ್ಲಿ ತಹಶೀಲ್ದಾರ್ ಹುದ್ದೆಗಳು ಖಾಲಿ ಇವೆ ಎಂದು ಮಾನ್ಯ ಸಚಿವರು ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ಈ ಹುದ್ದೆಗಳನ್ನು ಭರ್ತಿ ಮಾಡುವಂತೆ ಬರೆಯಲಾಗಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಇದನ್ನು ನಾನು ಒಪ್ಪುತ್ತೇನೆ. ಆದರೆ ಅಸಮರ್ಥರನ್ನು ತಂದು ಇಲಾಖೆಯಲ್ಲಿ ಹಾಕಿಬಿಟ್ಟರೆ, ಕೆಲಸ ಮಾಡುವುದು ಹೇಗೆ? ಚಿಕ್ಕನಾಯಕನಹಳ್ಳಿಯ ತಹಶೀಲ್ದಾರರು ಮದ್ಯಪಾನ ಮಾಡಿ ಬಂದು ಕಛೇರಿಯಲ್ಲಿ ಕುಳಿತುಕೊಳ್ಳುತ್ತಾರೆಂದರೆ, ಅಂಥವರಿಂದ ನಾವು ಏನು ಕೆಲಸವನ್ನು ನಿರೀಕ್ಷೆ ಮಾಡಲು ಸಾಧ್ಯ? ಮಾನ್ಯ ಕಾನೂನು ಸಚಿವರ ತಾಲ್ಲೂಕಾದ ಶಿರಾ ತಾಲ್ಲೂಕಿನಲ್ಲಿಯೂ ಇದೇ ಸಮಸ್ಯೆ ಇದೆ. ಶಿರಾ ತಾಲ್ಲೂಕಿನ ತಹಶೀಲ್ದಾರರು ಹೋಟೆಲ್‌ನಲ್ಲಿ ಚಹಾ ಸೇವಿಸುತ್ತಾ, ಸಹಿ ಮಾಡುತ್ತಿರುವುದು photo ಸಮೇತ ಪತ್ರಿಕೆಗಳಲ್ಲಿ ಬಂದಿದೆ. ಇದು ಅವರ ಗಮನಕ್ಕೂ ಬಂದಿದೆ. ದಯಮಾಡಿ ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ನನ್ನ ಮೂರನೆಯ ಪ್ರಶ್ನೆ ಏನೆಂದರೆ, ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಎಷ್ಟು ತಹಶೀಲ್ದಾರರ ಮೇಲೆ ಭ್ರಷ್ಟಾಚಾರ ಆರೋಪದ ದೂರುಗಳು ಬಂದಿರುತ್ತವೆ; ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವ ತಹಶೀಲ್ದಾರರ ಸಂಖ್ಯೆ ಎಷ್ಟು; ಕ್ರಿಮಿನಲ್ ಪ್ರಕರಣಗಳನ್ನು ಹೂಡಲು ಅನುಮತಿಗಾಗಿ ಬಾಕಿ ಇರುವ ಕಡತಗಳೆಷ್ಟು? (ವಿವರವಾದ ಮಾಹಿತಿಯನ್ನು ನೀಡುವುದು) ಎಂಬುದಾಗಿದೆ. ಇದಕ್ಕೆ ಉತ್ತರವಾಗಿ ಸಂಖ್ಯೆಗಳನ್ನಷ್ಟೇ ನೀಡಿದ್ದು, ಯಾವ ಯಾವ ತಹಶೀಲ್ದಾರ್‌ಗಳೆಂದು ವಿವರಗಳನ್ನು ನೀಡಿರುವುದಿಲ್ಲ. ಒಟ್ಟು 32 ತಹಶೀಲ್ದಾರರುಗಳ ವಿರುದ್ಧ ಲೋಕಾಯುಕ್ತ ಟ್ರ್ಯಾಪ್/ಭ್ರಷ್ಟಾಚಾರ ನಿಗ್ರಹ ದಳದಲ್ಲಿ ದಾಳಿ ಪ್ರಕರಣ ದಾಖಲಾಗಿರುತ್ತದೆ. ಇವುಗಳಲ್ಲಿ 10 ಪ್ರಕರಣಗಳಲ್ಲಿ ಅಭಿಯೋಜನಾ ಮಂಜೂರಾತಿಯನ್ನು ಈಗಾಗಲೇ ನೀಡಲಾಗಿದೆ. 2 ಪ್ರಕರಣಗಳಲ್ಲಿ ಅಭಿಯೋಜನಾ ಮಂಜೂರಾತಿಗಾಗಿ ಪ್ರಸ್ತಾವನೆಗಳು ಡಿಸೆಂಬರ್ 2017 ಮತ್ತು ಜನವರಿ 2018ರಂದು ಸ್ವೀಕೃತವಾಗಿದ್ದು, ಬಾಕಿ ಇರುತ್ತವೆ. ಅಂದರೆ, ಸುಮಾರು 20 ಜನರ ಮೇಲೆ ಏನೂ ಕ್ರಮ ಜರುಗಿಸಿರುವುದಿಲ್ಲ. ಮರಳು ವಿಚಾರವಾಗಿ ಅವರಿಗೆ ಅಧಿಕಾರವನ್ನು ನೀಡಲಾಗಿದ್ದು, ಅವರು ದಂಧೆ ಮಾಡುತ್ತಿದ್ದಾರೆ. ಸರ್ಕಾರವು ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್‌ಗಳ ಮೇಲೆ control ಇಟ್ಟುಕೊಳ್ಳದೆ ಹೋದರೆ ತಾಲ್ಲೂಕುಗಳ ಅಭಿವೃದ್ಧಿಯು ಕಷ್ಟಕರವಾಗುತ್ತದೆ.

ಮುಂದುವರೆದು ನನ್ನ ನಾಲ್ಕನೆಯ ಪ್ರಶ್ನೆ, "ತಾಲ್ಲೂಕು ದಂಡಾಧಿಕಾರಿ/ತಹಶೀಲ್ದಾರರಿಗೆ ಒಂದು ತಾಲ್ಲೂಕಿನಲ್ಲಿ ಎಷ್ಟು ಆಡಳಿತಾತ್ಮಕ ಹಾಗೂ ಅರೆ ನ್ಯಾಯಿಕ ಅಧಿಕಾರಿಗಳನ್ನು ನೀಡಲಾಗಿದೆ" ಎಂದು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಳಿದ್ದೇನೆ. ಏಕೆಂದರೆ ಸುಮಾರು 40ರಿಂದ 45 ಸಮಿತಿಗಳು ಅವರ ಅಧೀನದಲ್ಲಿ ಬರುತ್ತದೆ. MLA ಗಳಿಗೂ ಸಹ ಅಧಿಕಾರ ಇರುವುದಿಲ್ಲ. ಇವರೇ ಎಲ್ಲವನ್ನೂ ಮಾಡುತ್ತಾರೆ. ಬರಗಾಲದ ಸಂದರ್ಭದಲ್ಲಿ ಎಲ್ಲಾ ಕಡೆಗಳಲ್ಲಿಯೂ ಗೋಶಾಲೆಗಳನ್ನು ತೆರೆದಂತಹ ಸಂದರ್ಭದಲ್ಲಿ ಬಹಳಷ್ಟು ಕಡೆ ದುರುಪಯೋಗ ಆಗಿರುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಎಲ್ಲಿಯವರೆವಿಗೆ ಸಮರ್ಥವಾದಂತಹ ತಹಶೀಲ್ದಾರ್‌ಗಳ ನೇಮಕ ಆಗುವುದಿಲ್ಲವೋ, ಅಲ್ಲಿಯವರೆವಿಗೂ ಮಾನ್ಯ ಸಚಿವರು ಪಟ್ಟಂತಹ ಶ್ರಮ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಮಾನ್ಯ ಸಚಿವರಿಗೆ ಬದ್ಧತೆ ಇದೆ, ಕಳಕಳ ಇದೆ. ಅವರು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡಿದವರಾಗಿದ್ದಾರೆ. ಇವರಿಗೆ ನೀಡಿರುವ ಕಾರ್ಯಭಾರವನ್ನು ಆಡಳಿತದ ದೃಷ್ಟಿಯಿಂದ ಕಡಿಮೆಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಶೇ.50ರಷ್ಟು ತಹಶೀಲ್ದಾರ್ ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ಅನುಭವ ಇಲ್ಲದವರನ್ನು ಎರವಲು ಸೇವೆಯ ಮೇಲೆ ತೆಗೆದುಕೊಂಡರೆ ಸಾಕಷ್ಟು ಕೆಲಸಗಳು ನಿಂತು ಹೋಗುತ್ತವೆ. ಸರ್ಕಾರದಿಂದ ಬರುವಂತಹ ಅನುದಾನಗಳು ಖರ್ಚಾಗುವುದಿಲ್ಲ. ಅಲ್ಲದೆ ಬೇರೆ ಬೇರೆ ರೀತಿಯಲ್ಲಿ ದಂಧೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ದಯಮಾಡಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಆಗಬೇಕು. ಗ್ರೇಡ್ – 1ನಲ್ಲಿ ಶೇ.50 ಹುದ್ದೆಗಳು ಮತ್ತು ಗ್ರೇಡ್ –2 ನಲ್ಲಿ ಶೇ.40 ಹುದ್ದೆಗಳು ಖಾಲಿ ಇವೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸವಿಸ್ತಾರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಬೇರೆ ಇಲಾಖೆಗಳಿಂದ ನಿಯೋಜನೆ ಮಾಡಿಕೊಳ್ಳುವಂತಹ ಸಂದರ್ಭ ಏಕೆ ಒದಗಿ ಬಂದಿದೆಯೆಂದರೆ ಸಕಾಲದಲ್ಲಿ ತಹಶೀಲ್ದಾರ್‌ಗಳ ನೇಮಕಾತಿಯನ್ನು ಮಾಡುತ್ತಾ ಬಂದಿರುವುದಿಲ್ಲ. ಹಾಗಾಗಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದನ್ನು ತಕ್ಷಣ ಮಾಡುವುದಕ್ಕೆ ಬರುವುದಿಲ್ಲ. ಒಬ್ಬರನ್ನು ತೆಗೆದರೆ ಆ ಜಾಗಕ್ಕೆ ಬೇರೆಯವರನ್ನು ನಿಯುಕ್ತಿಗೊಳಿಸಬೇಕಾಗುತ್ತದೆ. ಪರ್ಯಾಯವಾಗಿ ಸಿಕ್ಕಂತಹ ಸಂದರ್ಭದಲ್ಲಿ ಬೇರೆ ಇಲಾಖೆಗಳಿಂದ ಬಂದಿರುವವರನ್ನು ಒಬ್ಬೊಬ್ಬರನ್ನಾಗಿ ಹಿಂದಕ್ಕೆ ಕಳುಹಿಸಲಾಗುತ್ತಿದೆ. ಈಗ ನೇಮಕಾತಿಯಾಗಿದೆ. ಅವರು ಬಂದ ಮೇಲೆ ಈ ತೊಂದರೆ ಇರುವುದಿಲ್ಲ. ನಮ್ಮ ನಿರೀಕ್ಷೆಯ ಪ್ರಕಾರ ತಹಶೀಲ್ದಾರರ ಪ್ರಾಮಾಣಿಕತೆ, ಜವಾಬ್ದಾರಿ ಮತ್ತು ಕರ್ತವ್ಯ ನಿರ್ವಹಿಸಲು ಬೇಕಾದ ಅರ್ಹತೆ ಇಲ್ಲದಿರುವುದನ್ನು ನಾನೂ ಸಹ ಒಪ್ಪುತ್ತೇನೆ. ಆದ್ದರಿಂದ ತಹಶೀಲ್ದಾರ್ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಹೊಸ ನೇಮಕಾತಿಯು ಕೆ.ಪಿ.ಎಸ್.ಸಿ ಯಿಂದ ಬರಬೇಕು. ಅವರು ಬಂದ ಕೂಡಲೇ ಈ ಸಮಸ್ಯೆಯು ಸ್ವಲ್ಪಮಟ್ಟಿಗೆ ನಿವಾರಣೆಯಾಗುತ್ತದೆ. ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಯನ್ನು ಗಂಭೀರವಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಗಣಿಸಲಾಗುತ್ತದೆ. ಕಂದಾಯ ಇಲಾಖೆಯೇ ಮಾತೃ ಇಲಾಖೆ. ಆ ಇಲಾಖೆಯು ಶುದ್ಧವಾಗಿ ಒಳ್ಳೆಯ ಆಡಳಿತವನ್ನು ನೀಡಿದರೆ ಅದು ಎಲ್ಲಾ ಇಲಾಖೆಗಳ ಮೇಲೆಯೂ ಪರಿಣಾಮ ಬೀರುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ನಾವು ಕೆಲಸವನ್ನು ಮಾಡುತ್ತಿದ್ದೇವೆ.

ಈಗ ಮಾನ್ಯ ಸದಸ್ಯರು ಚಿಕ್ಕನಾಯಕನಹಳ್ಳಿಯ ಪ್ರಕರಣವನ್ನು ಹೇಳಿದರು. ಆ ರೀತಿಯ ಪ್ರಕರಣಗಳೇನಾದರೂ ಕಂಡು ಬಂದಲ್ಲಿ ತಕ್ಷಣವೇ ಅದನ್ನು ನನ್ನ ಗಮನಕ್ಕೆ ತೆಗೆದುಕೊಂಡು ಬಂದ್ರರೆ, ಕ್ರಮ ತೆಗೆದುಕೊಳ್ಳಲಾಗುವುದು. ಈಗ ಅವಧಿಪೂರ್ವ ವರ್ಗಾವಣೆಯನ್ನು ಮಾಡಿದರೆ Tribunalಗೆ ಹೋಗಿ ತಡೆಯಾಜ್ಞೆಯನ್ನು ತರುತ್ತಾರೆ. ಹಾಗಾಗಿ ವರ್ಗಾವಣೆಯಂತಹ ಕ್ರಮವನ್ನು ಕೈಗೊಳ್ಳಬೇಕಾದರೆ ಕೆಲವು ನಿರ್ದಿಷ್ಟವಾದ ಆಪಾದನೆಗಳನ್ನು ಗುರುತಿಸಿಕೊಂಡು ಮಾಡಬೇಕಾಗುತ್ತದೆ. ಉತ್ತಮ ಆಡಳಿತವನ್ನು ನೀಡುವ ದೃಷ್ಟಿಯಲ್ಲಿ ಮಾನ್ಯ ಸದಸ್ಯರ ಕಳಕಳಿಯಿರುವುದು ನಿಜ. ಉತ್ತಮವಾದ ತಹಶೀಲ್ದಾರ್ ಅಭ್ಯರ್ಥಿಗಳನ್ನು ಹಾಕಬೇಕು ಎಂಬುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಇದನ್ನು ಗಂಭೀರವಾಗಿ ನಾನು ಸ್ವೀಕಾರ ಮಾಡುತ್ತೇನೆ.

ಸಭಾಪತಿಯವರು:- ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

**<u>ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 07ನೇ ಫೆಬ್ರವರಿ 2018ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಸಮೂಹ - IIIರಲ್ಲಿನ ಲಿಖಿತ ಮೂಲಕ ಉತ್ತರಿಸುವ ಒಟ್ಟು 81 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಸರ್ಕಾರವು ತನ್ನ ಹಳೆಯ ಚಾಳಿಯನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಒಟ್ಟು 81 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರವನ್ನು ನೀಡಿದೆ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಶೇ.90 ರಷ್ಟು ಉತ್ತರಗಳನ್ನು ಒದಗಿಸಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, 'ಮುದುಕಿ ತನ್ನ ತುರುಬು ನೆನಪಿಸಿಕೊಂಡಂತೆ' ಎನ್ನುವ ರೀತಿಯಲ್ಲಿ ಮಾನ್ಯ ಸಭಾನಾಯಕರು ಹಳೆಯದನ್ನು ಹೇಳುತ್ತಿದ್ದಾರೆ. ಸಚಿವರಿಗೆ ಉತ್ತರವನ್ನು ನೀಡಲು ಇರುವ ತೊಂದರೆಯಾದರೂ ಏನು.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಸಚಿವರ ಜೊತೆಯಲ್ಲಿಯೂ ಮಾತನಾಡಿದ್ದೇನೆ. ಕೆಲವು ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಹೆಚ್ಚು ಕಾಲಾವಕ್ಾಶ ಬೇಕಾಗಿರುತ್ತದೆ. ಅದನ್ನು ನಂತರ ಒದಗಿಸಲಾಗುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸಚಿವರನ್ನು defend ಮಾಡಿಕೊಂಡರೆ, ಮಲಗಿಕೊಳ್ಳುವವರಿಗೆ ಚಾಪೆ ಹಾಸಿಕೊಟ್ಟಂತಾಗುತ್ತದೆ. ಉತ್ತರ ಕೊಡದಂತಹ ಸಚಿವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎನ್ನುವ ಮಾತು ಅವರ ಬಾಯಿಂದ ಬರುವುದಿಲ್ಲ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳಿಗೆ ಉತ್ತರಗಳನ್ನು ಕಳುಹಿಸಿಕೊಡುವ ನಿಟ್ಟಿನಲ್ಲಿ ನಾನು ಎಲ್ಲಾ ಸಚಿವರ ಜೊತೆಯಲ್ಲಿಯೂ ಮಾತನಾಡಿದ್ದೇನೆ. ಉತ್ತರವನ್ನು ಒದಗಿಸದಂತಹ ಸಚಿವರ ಮೇಲೆ ನಿರ್ದಿಷ್ಟವಾದ ಕ್ರಮವನ್ನು ಕೈಗೊಳ್ಳಲಾಗುವುದು ಎಂಬ ಮಾತನ್ನು ಈ ಸದನದ ಮುಂದೆ ಹೇಳಬಯಸುತ್ತೇನೆ.

## 2. <u>ಸಭಾಪತಿಯವರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>

### ಅ) ಬಿಸಿಯೂಟ ಕಾರ್ಯಕರ್ತರ ಧರಣಿಯ ಕುರಿತು

---

**ಶ್ರೀಮತಿ ತಾರ ಅನೂರಾಧ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ ತಯಾರಿಸಿ ಮಕ್ಕಳಿಗೆ ಉಣಬಡಿಸುತ್ತಿರುವ ರಾಜ್ಯದ 1 ಲಕ್ಷಕ್ಕೂ ಹೆಚ್ಚು ಮಹಿಳೆಯರು ರಾಜಧಾನಿಯ ಸ್ವಾತಂತ್ರ್ಯ ಉದ್ಯಾನವನದ ರಸ್ತೆಯಲ್ಲಿ ಕುಳಿತು ಧರಣಿ ಮಾಡುತ್ತಿದ್ದಾರೆ. ರಾಜ್ಯದ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಖಾಸಗಿ ಅನುದಾನಿತ ಶಾಲೆಗಳಲ್ಲಿ ಸರ್ಕಾರದ ಮಧ್ಯಾಹ್ನದ ಬಿಸಿಯೂಟದ ಯೋಜನೆಯಡಿ ಕಳೆದ 15 ವರ್ಷಗಳಿಂದ ಈ ಮಹಿಳೆಯರು ಬಿಸಿಯೂಟದ ಅಡುಗೆ ಮಾಡುತ್ತಿದ್ದು, ಇವರಿಗೆ ಸರ್ಕಾರ ಗೌರವ ಧನದ ಹೆಸರಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಂಗಳಿಗೆ 1800 ರೂಪಾಯಿಯಿಂದ 2000 ರೂಪಾಯಿ ನೀಡುತ್ತಿದ್ದು, ಉದ್ಯೋಗ ಖಾತ್ರಿಗಿಂತಲೂ ಕಡಿಮೆ ಸಂಬಳವಾಗಿರುವುದು ಮಾತ್ರವಲ್ಲ, ಇತರ ಯಾವುದೇ ಸೌಲಭ್ಯವನ್ನು ಸಹ ಅವರಿಗೆ ನೀಡಲಾಗುತ್ತಿಲ್ಲ. ನೂರಕ್ಕೆ ನೂರು ಮಹಿಳಾ ಸಿಬ್ಬಂದಿಗಳೇ ಇರುವ ಬಿಸಿಯೂಟ ಯೋಜನೆಯಲ್ಲಿ 16 ವರ್ಷಗಳಿಂದ ಕೆಲಸ ಮಾಡುವ ಸಿಬ್ಬಂದಿಗಳ ವೇತನ ಮಾಸಿಕ 2000 ರೂಪಾಯಿ ಮೀರುವುದಿಲ್ಲ. ಕೊಡುವ ಸಂಬಳದಲ್ಲಿ ಭಾನುವಾರದ ಸಂಬಳವನ್ನು ಕಡಿತಗೊಳಿಸುತ್ತಿದ್ದಾರೆ ಎಂದು ಈ ನತದೃಷ್ಟ ಸಿಬ್ಬಂದಿಗಳು ಆರೋಪಿಸುತ್ತಾರೆ. ವರ್ಷಕ್ಕೆ ಕೇವಲ 11 ತಿಂಗಳ ಸಂಬಳವನ್ನು ಮಾತ್ರ ಅವರಿಗೆ ನೀಡಲಾಗುತ್ತಿದೆ.

(...ಮುಂದು)

**ಶ್ರೀಮತಿ ತಾರಾ ಅನುರಾಧ (ಮುಂದು..):-**

ನೋವಿನ ಸಂಗತಿಯೆಂದರೆ 16 ವರ್ಷಗಳಿಂದ ದುಡಿಯುತ್ತಿರುವ ನಮಗೆ ದಿನಕ್ಕೆ 60 ರೂಪಾಯಿಗಳು ಕೂಡ ಮೀರುವುದಿಲ್ಲ. ನಮಗೂ ಶಾಲೆಗೆ ಹೋಗುವ ಹೆಣ್ಣು ಮಕ್ಕಳಿದ್ದಾರೆ. ನಮ್ಮಲ್ಲಿ ಸಾವಿರಾರು ಮಂದಿ ವಿಧವೆಯವರಿದ್ದಾರೆ. ಅಡಿಗೆ ತಯಾರಿಸುವಾಗ ಸಣ್ಣಪುಟ್ಟ ಸಮಸ್ಯೆಗಳಾದರೆ ಅಥವಾ ಅನಾಹುತಗಳಾದರೆ ಒಂದು ರೂಪಾಯಿ ಕೂಡ ಚಿಕಿತ್ಸಾ ಭಧ್ರತೆಯಿಲ್ಲ. ಆದ್ದರಿಂದ, "ಮಾಡು ಇಲ್ಲವೆ ಮಡಿ" ಎಂಬ ಹೋರಾಟಕ್ಕೆ ನಾವಿಳಿದಿದ್ದೇವೆ. ನಮಗೆ ಸರ್ಕಾರ ಕನಿಷ್ಠ ಸಮಾನ ಕೆಲಸಕ್ಕೆ ಸಮಾನ ವೇತನವಾದರೂ ನೀಡಬೇಕು. ಅಲ್ಲಿಯವರೆಗೆ ಧರಣಿಯಿಂದ ಹಿಂದೆಗೆಯುವುದಿಲ್ಲ ಎಂದು ರೋಧಿಸಿ ಮಾತನಾಡುತ್ತಿದ್ದಾರೆ.

**ಮಾನ್ಯ ಸಭಾಪತಿಯವರೇ,** ಒಂದು ಕೋಟಿ ಮಕ್ಕಳಿಗೆ ಬಿಸಿಯೂಟ ಬಡಿಸುವ ಈ ನತದೃಷ್ಟ ಮಹಿಳೆಯರ ಪೈಕಿ ಕೆಲವರಂತೂ ಅನಾರೋಗ್ಯ ಪೀಡಿತರಾಗಿ ಆಸ್ಪತ್ರೆ ಸೇರಿದ್ದಾರೆ ಮತ್ತು ಕೆಲ ಮಹಿಳೆಯರು ಚಳುವಳಿ ಮುಗಿಸಿ ಊರಿಗೆ ತೆರಳಲು ನಮ್ಮಲ್ಲಿ ಹಣವಿಲ್ಲ ಎಂದು ನೊಂದು ನುಡಿಯುತ್ತಾರೆ. ನಾನು ತಮ್ಮ ಮೂಲಕ ರಾಜ್ಯ ಸರ್ಕಾರವನ್ನು ಮತ್ತು ಶಿಕ್ಷಣ ಮಂತ್ರಿಗಳಿಗೆ ಅಗ್ರಹ ಪಡಿಸುವುದೇನೆಂದರೆ, ತಕ್ಷಣ ನೀವು ಆ ಸ್ಥಳಕ್ಕೆ ಭೇಟಿ ನೀಡಿ ಬಿಸಿಯೂಟ ಮಾಡುವ ಮಹಿಳಾ ನೌಕರರ ಬೇಡಿಕೆಗಳನ್ನು ಗಮನಿಸಿ ಮಾನವೀಯ ನೆಲೆಯಲ್ಲಿ 16 ವರ್ಷಗಳಿಂದ ದುಡಿಯುತ್ತಿರುವ ಈ ಮಹಿಳಾ ಸಿಬ್ಬಂದಿಗಳಿಗೆ ಕನಿಷ್ಠ ವೇತನವನ್ನು ಕೊಡಲು ಹಾಗೂ ಭವಿಷ್ಯ ನಿಧಿ, ಇ.ಎಸ್.ಐ ಗಳನ್ನು ಮಂಜೂರು ಮಾಡಿ ಅವರಿಗೆ ಕೆಲಸದ ಭದ್ರತೆಯನ್ನು ನೀಡಬೇಕೆಂದು ಶೂನ್ಯವೇಳೆಯಲ್ಲಿ ಈ ಮೂಲಕ ಸರ್ಕಾರವನ್ನು ಅಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಗಮನಕ್ಕೆ ತಂದು ಆದಷ್ಟು ಶೀಘ್ರದಲ್ಲಿ ಅದಕ್ಕೊಂದು ಸಲಹೆಯನ್ನು ಕೊಡುತ್ತೇನೆ.

**ಸಭಾಪತಿಯವರು:-** ಇದೇ ವಿಷಯದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ್ ಪೂಜಾರಿಯವರು ಸಹ ಒಂದು ನೋಟಿಸ್ ಕೊಟ್ಟಿದ್ದರು. ಅವರಿಬ್ಬರ ಪರವಾಗಿ ಶ್ರೀಮತಿ ತಾರ ಅನುರಾಧರವರು ಓದಿದ್ದಾರೆ. ಮುಂದಿನದ್ದು ಮಾನ್ಯ ಸದಸ್ಯರಾದ ಬಿ.ಎಂ.ಎಲ್.ಕಾಂತರಾಜ್‌ರವರದ್ದು.

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಿ.ಎಂ.ಎಲ್.ಕಾಂತರಾಜ್‌ರವರ ಪರವಾಗಿ ನನ್ನ ಒಂದು ಮನವಿ ಇದೆ. ಅವರು ಒಂದು ಪತ್ರವನ್ನು ಕಳುಹಿಸಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಶೂನ್ಯವೇಳೆಯಲ್ಲಿ ಆಗುವುದಿಲ್ಲ. ಮುಂದಿನದ್ದು ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರಸನ್ನಕುಮಾರ್‌ರವರದ್ದು.

**ಆ)** ಶಿವಮೊಗ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆದಿರುವ ಮೆಕ್ಕೆಜೋಳವನ್ನು ಸರ್ಕಾರದ ವತಿಯಿಂದ ಖರೀದಿ ಮಾಡದಿರುವ ಬಗ್ಗೆ.

\- - -

**ಶ್ರೀ ಆರ್.ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಶಿವಮೊಗ್ಗ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಮೆಕ್ಕೆಜೋಳವನ್ನು ರೈತರು ಬೆಳೆದಿದ್ದು, ಅದರಲ್ಲೂ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಭತ್ತ ಬೆಳೆಯುವಂತಹ ಪ್ರದೇಶವಿದ್ದು, ಅಲ್ಲಿ ಭತ್ತ ಬೆಳೆಯಲು ನೀರು ಸಿಗದೇ ಇರುವುದರಿಂದ ಈ ಪ್ರದೇಶದಲ್ಲೂ ಸಹ ಬೃಹತ್ ಪ್ರಮಾಣದಲ್ಲಿ ಮೆಕ್ಕೆಜೋಳವನ್ನು ಬೆಳೆದಿರುತ್ತಾರೆ. ಆದರೆ, ರೈತರಿಗೆ ತಮ್ಮ ಬೆಳೆಗಳಿಗೆ ಸೂಕ್ತವಾದ ಬೆಲೆ ಸಿಗದೇ ಸ್ಥಳೀಯ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಅಂದರೆ, ರೂ.1000 ರಿಂದ ರೂ.1,100 ರವರೆಗೆ ಮಾರಾಟ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರವು ಎಲ್ಲಾ ಬೆಳೆಗಳಿಗೆ ಬೆಂಬಲ ಬೆಲೆಯನ್ನು ನೀಡಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ರೈತರ ಬೆಳೆಗಳನ್ನು ಖರೀದಿ ಮಾಡುವ ಮೂಲಕ ಬೆಳೆಗಳ ಬೆಲೆಯನ್ನು ಮಾರುಕಟ್ಟೆಯಲ್ಲಿ ಸ್ಥಿರವಾಗಿರುವಂತೆ ನೋಡಿಕೊಂಡಿರುತ್ತದೆ. ಮೆಕ್ಕೆಜೋಳಕ್ಕೂ ಸಹ ದರವನ್ನು ನಿಗದಿ ಪಡಿಸಿರುತ್ತಾರೆ. ಆದರೆ, ಇದುವರೆವಿಗೂ ಮೆಕ್ಕೆಜೋಳದ ಖರೀದಿಗಾಗಿ ಯಾವುದೇ ಖರೀದಿ ಕೇಂದ್ರಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಾಪಿಸಿರುವುದಿಲ್ಲ. ಇದರಿಂದ ಮಾರುಕಟ್ಟೆಯಲ್ಲಿ ಮೆಕ್ಕೆಜೋಳವನ್ನು ಬೆಳೆದ ರೈತರು ಸರ್ಕಾರದ ಖರೀದಿ ಕೇಂದ್ರಗಳಿಲ್ಲದಿರುವುದರಿಂದ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಮೆಕ್ಕೆಜೋಳವನ್ನು ಖರೀದಿ ಮಾಡಲು ಇರುವ ಸಮಸ್ಯೆ ಏನು? ಈ ಸಮಸ್ಯೆಯನ್ನು ತಕ್ಷಣ ಪರಿಹರಿಸಿ ರೈತರು ಬೆಳೆದಂತಹ ಮೆಕ್ಕೆಜೋಳವನ್ನು ತಕ್ಷಣದಿಂದಲೇ ಖರೀದಿ ಮಾಡುವಂತೆ ಕ್ರಮಕೈಗೊಳ್ಳಬೇಕಾಗಿ ಸದನದ ಮೂಲಕ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಕೃಷಿ ಸಚಿವರ ಗಮನಕ್ಕೆ ತಂದು ಆದಷ್ಟು ಶೀಘ್ರದಲ್ಲಿ ಅದಕ್ಕೊಂದು ಸಲಹೆಯನ್ನು ಕೊಡುತ್ತೇನೆ.

**ಇ)** ವಿಜಯಪುರ ನಗರ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನಕಲಿ ಮತದಾರರ ಹೆಸರು ಅವ್ಯಾಹತವಾಗಿ ಸೇರ್ಪಡೆಗೊಳ್ಳುತ್ತಿರುವುದನ್ನು ತಡೆಗಟ್ಟುವ ಬಗ್ಗೆ.

\- - -

**ಶ್ರೀ ಬಸನಗೌಡ ರಾ.ಪಾಟೀಲ(ಯತ್ನಾಳ):-** ವಿಜಯಪುರ ನಗರ ಮತದಾರರ ಪಟ್ಟಿಯನ್ನು ತಯಾರಿಸಲು ಈಗಾಗಲೇ ನೇಮಿಸಿರುವ ಬಿಎಲ್‌ಓ (ಬೂತ್ ಲೆವೆಲ್ ಆಫೀಸರ್) ಗಳ ಪೈಕಿ ಬಹುತೇಕ ಶಿಕ್ಷಕರುಗಳಿಗೆ ಕಳೆದ ಅಕ್ಟೋಬರ್ ತಿಂಗಳಿಂದ ಮನೆ-ಮನೆಗೆ ತೆರಳಿ ಮತದಾರರನ್ನು ಸೇರ್ಪಡೆಗೊಳಿಸಬೇಕೆಂದು ಆದೇಶವಿದ್ದರೂ ಸಹ ಬಿಎಲ್‌ಓಗಳು ಇದುವರೆಗೂ ವಾರ್ಡ್ ಮಟ್ಟದಲ್ಲಿ ಮನೆ-ಮನೆಗೆ ತೆರಳಿ ಮತದಾರರ ಪಟ್ಟಿ ತಯಾರಿಸಿಲ್ಲದರ ಬಗ್ಗೆ ನನಗೆ ತಿಳಿದುಬಂದಿದ್ದು, ಸದರಿಯವರುಗಳ ಈ ರೀತಿಯ ಕರ್ತವ್ಯ ಲೋಪದಿಂದಾಗಿ ಹೊಸ ಮತದಾರರನ್ನು ಸೇರ್ಪಡೆ ಮಾಡುವಲ್ಲಿ ನಿರ್ಲಕ್ಷ್ಯತೆಯನ್ನು ತೋರಿಸಿದ್ದು, ಇದರಿಂದ ನಕಲು ಮತದಾರರನ್ನು ಅಕ್ರಮವಾಗಿ ಸೇರ್ಪಡೆಗೊಳಿಸಿರುವ ಬಗ್ಗೆ ಸಂಶಯ ವ್ಯಕ್ತವಾಗಿರುತ್ತದೆ.

ಹಾಗೂ ದಿನಾಂಕ 22.01.2018 ರಂದು ಮತದಾರರನ್ನು ಸೇರ್ಪಡೆ ಮಾಡಿಕೊಳ್ಳಲು ಕೊನೆಯ ದಿನಾಂಕವಾಗಿದೆ ಎಂದು ತಿಳಿದುಬಂದಿದ್ದು, ಈ ಸಮಯದಲ್ಲಿ ಹೊಸದಾಗಿ ಸೇರ್ಪಡೆಗೊಳಿಸುವ ಮತದಾರರ ಹೆಸರು ನೋಂದಣಿ ಬಗ್ಗೆ ಅಭಿಯಾನ/ಪ್ರಚಾರ ಕೈಗೊಳ್ಳುವುದು ಸಮಂಜಸವಲ್ಲ. ಈ ಅಭಿಯಾನವು ಮತದಾರರ ಸೇರ್ಪಡೆಯ ಕೊನೆ ದಿನಾಂಕವನ್ನು ನಿಗಧಿಪಡಿಸುವುದಕ್ಕಿಂತ ಒಂದು ತಿಂಗಳ ಮುಂಚೆಯೇ ಆಗಬೇಕಾಗಿರುತ್ತದೆ.

ಈ ಹಿಂದೆ ವಿಜಯಪುರ ನಗರ ಮತದಾರರ ಪಟ್ಟಿಯಲ್ಲಿ ಬಾಂಗ್ಲಾ ದೇಶಿಗಳ ನಿವಾಸಿಗಳು ಅಕ್ರಮವಾಗಿ ನಗರಕ್ಕೆ ವಲಸೆ ಬಂದು ಆಧಾರ್ ಕಾರ್ಡ್ ಮತ್ತು ಚುನಾವಣಾ ಗುರುತಿನ ಚೀಟಿಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಂಡಿದ್ದರ ಬಗ್ಗೆ ಹೋರಾಟ ಮಾಡಲಾಗಿತ್ತು. ಆ ಕಾರಣದಿಂದಾಗಿ ಬೇಕಾಬಿಟ್ಟಿಯಾಗಿ ಸದರಿ ವಲಸೆ ನಕಲಿ ಮತದಾರರನ್ನು ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದು ತಿಳಿದುಬಂದಿರುತ್ತದೆ.

ಈಗಾಗಲೇ ವಿಜಯಪುರ ನಗರ ಕ್ಷೇತ್ರದಲ್ಲಿ ಮಿತಿಗಿಂತ 20,000 ಕ್ಕೂ ಅಧಿಕ ಮತದಾರರ ಹೆಸರುಗಳನ್ನು ಸೇರ್ಪಡೆಗೊಳಿಸಿರುವುದು ನಕಲಿ ಮತದಾರರ ಹೆಸರು ಮತಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದಕ್ಕೆ ತೀವ್ರ ಸಂಶಯಕ್ಕೆ ಕಾರಣವಾಗಿರುತ್ತದೆ. ಮತದಾರರ ಪಟ್ಟಿಯಲ್ಲಿರುವ ಕೆಲವು ಮತದಾರರ ಹೆಸರು ವಿಜಯಪುರ ನಗರದ ವ್ಯಾಪ್ತಿಯಲ್ಲಿ ಬರುವ ಓಣಿಯ/ಗಲ್ಲಿಯ/ಕಾಲೋನಿಯಲ್ಲಿ ವಾಸವಾಗಿರುವುದಿಲ್ಲವೆಂದು ತಿಳಿದುಬಂದಿರುತ್ತದೆ. ಈ ರೀತಿಯ ಅಕ್ರಮಕ್ಕೆ ಕಾರಣ ಬಿಎಲ್‌ಓಗಳು ಮನೆ-ಮನೆಗೆ ತೆರಳದೆ ತಮ್ಮ ತಮ್ಮ ಶಾಲೆಗಳಲ್ಲಿಯೇ ಕುಳಿತು ಮತದಾರರ ಪಟ್ಟಿಯನ್ನು ರಚಿಸಿರುವುದರಿಂದ ಅಕ್ರಮವಾಗಿರುವ ಬಗ್ಗೆ ತೀವ್ರವಾಗಿ ಕೇಳಿಬಂದಿರುತ್ತದೆ. ಉದಾಹರಣೆಗೆ, ನಗರದ ವಾರ್ಡ್ ನಂಬರ್ 32ರಲ್ಲಿಯ ಭಾಗ ಸಂಖ್ಯೆ 114 ರಲ್ಲಿ ಕೆಲವೇ ಕೆಲವು ಅಲ್ಪಸಂಖ್ಯಾತರ ಮನೆಗಳು ಇದ್ದು, ಅದರಲ್ಲಿ ಕೆಲವರು ಅಲ್ಲಿನ ನಿವಾಸಿಗಳಾಗಿರುವುದಿಲ್ಲ. ಆದರೂ ಸಹ ಅವರು ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುತ್ತದೆ.

ಮುಂದುವರೆದು ಅಲ್ಪಸಂಖ್ಯಾತರ ಮತದಾರರ ಪಟ್ಟಿಯಲ್ಲಿ ಏರಿಕೆ ಮಾಡಿದ್ದು, ಹಿಂದೂ ಮತದಾರರ (ಮೂಲ ಮತದಾರರ) ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಕೈಬಿಟ್ಟಿರುತ್ತಾರೆ. ಕಳೆದ ಬಾರಿಯ ಚುನಾವಣೆಯಲ್ಲಿ ಹಿಂದೂ ಮತದಾರರನ್ನು ಗುರಿಯಾಗಿಸಿಕೊಂಡು ಈ ರೀತಿ ಮಾಡಲಾಗಿದ್ದು, ಸಾಲು ಸಾಲಾಗಿ ಹಿಂದು ಮತದಾರರು ಮತಗಟ್ಟೆಗೆ ಚುನಾವಣೆಗೆ ಮತ ಹಾಕಲು ಬಂದರೂ ಸಹ ಅವರು ಮತ ಚಲಾಯಿಸಿ ಮರಳಿ ಹೋದ ಪ್ರಸಂಗಗಳು ಕಂಡುಬಂದಿವೆ.

ಕಳೆದ ಚುನಾವಣೆಯಲ್ಲಿ ಜೀವಂತ ಮತದಾರರನ್ನು ಮೃತರಾಗಿದ್ದಾರೆಂದು ಮತ್ತು ಒಂದೇ ಕುಟುಂಬದ ಸದಸ್ಯರನ್ನು ಬೇರೆ ಬೇರೆ ಬೂತ್ (ಉದಾ: ಗಂಡ ಒಂದು ಕಡೆ, ಹೆಂಡತಿ ಮತ್ತೊಂದು ಕಡೆ) ಹಾಕಲಾಗಿದ್ದು, ಸಹ ಕಂಡು ಬಂದಿದೆ. ಅಲ್ಲದೆ ಕೆಲವರನ್ನು ಬೇರೆ ಬೇರೆ ವಾರ್ಡ್‌ಗಳ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದು ಸಹ ಮತದಾರರ ಪಟ್ಟಿಯಲ್ಲಿನ ದೋಷಗಳನ್ನು ಗುರುತಿಸಬಹುದಾಗಿದೆ.

ಅದೇ ರೀತಿ ವಿಜಯಪುರ ನಗರ ಮತಕ್ಷೇತ್ರ ಸುತ್ತಮುತ್ತಲಿನ ಗ್ರಾಮಗಳ ಅಲ್ಪ ಸಂಖ್ಯಾತರನ್ನು ವಿಜಯಪುರ ನಗರದ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುವುದು ತಿಳಿದು ಬಂದಿದೆ. ಇದರ ತನಿಖೆ ಮಾಡಿ ಯಾವ ರೀತಿ ಸೇರ್ಪಡೆ ಮಾಡಲಾಗಿದೆ ಮತ್ತು ಅದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣೀಭೂತವಾದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಕಟ್ಟು ನಿಟ್ಟಿನ ಕ್ರಮ ಜರುಗಿಸುವುದು ಅವಶ್ಯಕವಾಗಿರುತ್ತದೆ.

ಚುನಾವಣಾ ಮತದಾರರ ಪಟ್ಟಿಯ ತಯಾರಿಕೆಯನ್ನು (ಪ್ರಿಂಟಿಂಗ್) ಸ್ಥಳೀಯರಿಗೆ ನೀಡುವುದರಿಂದ ಅವರಿಗೆ ಬೇಕಾದಂತಹ ಮತದಾರರನ್ನು ಪಟ್ಟಿಯಲ್ಲಿ ಸೇರ್ಪಡೆಗೊಳಸುವುದು ಮತ್ತು ಬೇಕಾಬಿಟ್ಟಿಯಾಗಿ ಮತದಾರರ ಪಟ್ಟಿಯಿಂದ ಮತದಾರರ ಹೆಸರನ್ನು ತೆಗೆದುಹಾಕುವುದು (ಡಿಲೀಟ್) ಮಾಡುವುದರ ಬಗ್ಗೆ ಆರೋಪಗಳರುತ್ತವೆ. ಕಾರಣ ಮತದಾರರ ಪಟ್ಟಿಯ ತಯಾರಿಕೆಯನ್ನು ಬೇರೆ ಬೇರೆ ಜಿಲ್ಲೆಗಳಿಗೆ ವಹಿಸಬೇಕು. ಸದರಿ ಮತದಾರರ ಪಟ್ಟಿಯನ್ನು ಪ್ರಿಂಟ್ ಹಾಕುವುದನ್ನು ಸ್ಥಳೀಯರಿಗೆ ನೀಡಬಾರದು ಹಾಗೂ ಮತದಾರರ ಪಟ್ಟಿ ಪ್ರಕಟವಾದ ನಂತರ ಆಯಾ ವಾರ್ಡ್‌ಗಳಲ್ಲಿ ಸಾರ್ವಜನಿಕವಾಗಿ ಮತದಾರರ ಪಟ್ಟಿಯನ್ನು ಪ್ರಕಟಿಸಬೇಕು. ನಂತರ ಮತದಾರರ ಪಟ್ಟಿಯಲ್ಲಿ ಆಕ್ಷೇಪಣೆ/ತಿದ್ದುಪಡಿಗಳಿಗೆ ಅವಕಾಶ ನೀಡಿ ನಂತರದಲ್ಲಿ ಮತದಾರರ ಪಟ್ಟಿಯನ್ನು ಅಂತಿಮವಾಗಿ ಪ್ರಕಟಿಸಬೇಕು.

ಮತದಾರರ ಪಟ್ಟಿಯಲ್ಲಿ ಭಾವಚಿತ್ರ ಇರದಿದ್ದರೆ, ಅಂತಹ ಹೆಸರನ್ನು ಮತದಾರರ ಹೆಸರನ್ನು ಮತಪಟ್ಟಿಯಿಂದ ತೆಗೆದು ಹಾಕಬಾರದು ಮತ್ತು ಬಿಎಲ್‌ಓಗಳು ಮನೆ-ಮನೆಗೆ ತೆರಳಿದಾಗ ಮತದಾರರು ಸಿಗದಿದ್ದರೆ ಯಾವುದೇ ಕಾರಣಕ್ಕೂ ಸಹ ಅಂತಹ ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಡಬಾರದು.

ಮತದಾನದ ವೇಳೆ ಕಡ್ಡಾಯವಾಗಿ ಯಾರೇ ತಮ್ಮ ಮುಖಕ್ಕೆ ಖರ್ಚೀಫ್ ಅಥವಾ ಬುರ್ಖಾ ಧರಿಸಿದರೆ ಅಂತಹವರ ಮುಖದ ಬಟ್ಟೆಯನ್ನು ತೆರವುಗೊಳಿಸಿ ಭಾವಚಿತ್ರವನ್ನು ಮತ್ತು ಅವರ ಮುಖವನ್ನು ನೋಡಿ ಮತಚಲಾವಣೆ ಮಾಡುವಂತೆ ಕಟ್ಟುನಿಟ್ಟಿನ ಆದೇಶ ನೀಡಬೇಕು. ಇದಕ್ಕಾಗಿ ಬಹಿರಂಗ ಪ್ರಚಾರದ ಜೊತೆಗೆ ಚುನಾವಣಾ ಸಿಬ್ಬಂದಿಗಳಿಗೂ ಸೂಕ್ತ ಭದ್ರತೆಯನ್ನು ಒದಸಬೇಕು.

ಮತದಾರರ ಪಟ್ಟಿಯಲ್ಲಿ ಕೆಲ ಹೆಸರುಗಳು ಒಂದಕ್ಕಿಂತ (ಡಬಲ್) ಎರಡೆರಡು ಬಾರಿ ನಮೂದಾಗಿರುವುದು ತಿಳಿದುಬಂದಿದೆ. ಇದರಿಂದ ಎರಡು ಬಾರಿ ಮತ ಹಾಕುವ ಸಂಭವವಿದ್ದು, ಈ ಬಗ್ಗೆ ಸೂಕ್ತವಾಗಿ ಪರಿಷ್ಕರಣೆ ಮಾಡಿ ಮತದಾರರ ಪಟ್ಟಿಯಲ್ಲಿ ಒಬ್ಬ ಮತದಾರನ ಹೆಸರು ಒಂದೇ ಕಡೆ ನಮೂದಾಗುವಂತೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ವಿಜಯಪುರ ನಗರ ಮತಕ್ಷೇತ್ರದ ಮತದಾರರ ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಆಧಾರ್ ನಂಬರನ್ನು ಜೋಡಣೆ ಮಾಡಿ ಮತದಾರರ ಪಟ್ಟಿ ತಯಾರಿಸುವಂತೆ ಮತ್ತು ಬಿಎಲ್‌ಓ ಗಳು ಮನೆ-ಮನೆಗೆ ತೆರಳಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರತಿಯೊಬ್ಬ ಮತದಾರನ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವಂತೆ ಕಟ್ಟಿನಿಟ್ಟಿನ ಆದೇಶ ಹೊರಡಿಸುವ ಬಗ್ಗೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತಂದು ಆದಷ್ಟು ಶೀಘ್ರದಲ್ಲಿ ಅದಕ್ಕೊಂದು ಸಲಹೆಯನ್ನು ಕೊಡುತ್ತೇನೆ.

**3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಭಾರತೀಯ ಸಂವಿಧಾನದ 151 (2)ನೇ ಅನುಚ್ಛೇಧದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ನೀಡಿರುವಂತಹ 2016-2017ನೇ ಸಾಲಿನ ಧನವಿನಿಯೋಗದ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು ಸಂಪುಟ-1 ಮತ್ತು 2 ಅನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**4. ನಿಯಮ 68 ರಡಿಯಲ್ಲಿ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ.**

**ರಾಜ್ಯದಲ್ಲಿ ನಡೆಯುತ್ತಿರುವ ನಿರಂತರ ಕೊಲೆ, ಸುಲಿಗೆ, ಅತ್ಯಾಚಾರ, ಸರಗಳ್ಳತನ, ಗ್ಯಾಂಗ್‌ವಾರ್‌ಗಳು ಅಲ್ಲದೆ, ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಮೇಲೆ ಹಲ್ಲೆ ಹಾಗೂ ಜೈಲಿನ ಆವರಣದಲ್ಲೇ ಗುಂಪು ಘರ್ಷಣೆ, ಕೊಲೆ ಇತ್ಯಾದಿಗಳಿಂದಾಗಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯು ವಿಫಲಗೊಂಡಿರುವ ವಿಷಯದ ಬಗ್ಗೆ.**

.........

**ಸಭಾಪತಿಯವರು:-** ಮಾನ್ಯ ಗೃಹ ಸಚಿವರಿಂದ. Written answers ಇದ್ದರೆ, ಅದರ copy ಗಳನ್ನು ಕಳುಹಿಸಿಕೊಡಿ. ಅದು ಇಲ್ಲವೆಂದರೆ, ಹೇಳಿ.

**ಶ್ರೀ ರಾಮಲಿಂಗರೆಡ್ಡಿ, ಗೃಹ ಸಚಿವರು:-** ಮಾನ್ಯ ಸಭಾಪತಿಯವರೇ, ಕೆಲವು written ಕೊಡುತ್ತೇನೆ. ಕೆಲವನ್ನು oral ಆಗಿ ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷ ನಾಯಕರು ಹಾಗೂ ಇತರೆ ಸದಸ್ಯರು ಮತ್ತು ಈ ಭಾಗದಲ್ಲೂ ಸಹ ಕರ್ನಾಟಕ ರಾಜ್ಯದಲ್ಲಿ ಭಯದ ವಾತಾವರಣ ಇದೆ, ಹಾಗೆಯೇ ಕಾನೂನು ಸುವ್ಯವಸ್ಥೆ ಸರಿ ಇಲ್ಲ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಲಿಂಗರೆಡ್ಡಿ (ಮುಂದು):-**

ಕೊಲೆಗಡುಕರಿಗೆ ಸರ್ಕಾರ ರಕ್ಷಣೆ ಕೊಡುತ್ತಿದೆ, ಕೊಲೆಗಡುಕರಿಗೆ ನಮ್ಮ ಬೆಂಗಳೂರು ಸ್ವರ್ಗವಾಗುತ್ತಿದೆ ಎಂದೆಲ್ಲಾ ಟೀಕೆ ಮಾಡಿದ್ದಾರೆ. ಸಹಜವಾಗಿ ವಿರೋಧ ಪಕ್ಷದಲ್ಲಿ ಇರುವವರು ಇದನ್ನೆಲ್ಲಾ ಮಾಡಲೇಬೇಕು ಅಲ್ಲವೆ?

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಕೊಲೆ ಮಾಡಬೇಕೆ? ಈಗ ವಿರೋಧ ಪಕ್ಷದಲ್ಲಿ ಇದ್ದಂತಹ ಸಂದರ್ಭದಲ್ಲಿ ಇವುಗಳನ್ನೆಲ್ಲಾ ಮಾಡುತ್ತಿರಬೇಕು ಎಂದರೆ, ನಾವು ಏನು ಕೊಲೆ ಮಾಡುತ್ತಿರಬೇಕೆ? ನೀವು ಹೇಳುತ್ತಿರುವುದು ಏನೆಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ರಾಮಲಿಂಗರೆಡ್ಡಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಕೊಲೆ ಮಾಡುವುದು ಅಲ್ಲ, ಅವರು ಟೀಕೆ ಮಾಡಬೇಕು. ನೀವು ಇರುವುದನ್ನು ಹೇಳಿದ್ದಿರೋ, ಅಥವಾ ಇಲ್ಲದೇ ಇರುವುದನ್ನು ಹೇಳಿದ್ದಿರೋ ಎಂಬುದಕ್ಕೆ ಅಂಕಿ-ಅಂಶಗಳನ್ನು ತೆಗೆದುಕೊಂಡರೆ ಗೊತ್ತಾಗುತ್ತದೆ. ಆ ತರಹದ ವಾತಾವರಣ ಏನೂ ಇಲ್ಲ. ಇವತ್ತಿನ ದಿವಸ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ. ನಾನು ಸೆಪ್ಟೆಂಬರ್ ತಿಂಗಳಿನಲ್ಲಿ ಹೊಸದಾಗಿ ಮಂತ್ರಿಯಾದ ಸಂದರ್ಭದಲ್ಲಿ ಬೈಕ್ ರ್‍ಯಾಲಿ ಮಾಡಬೇಕೆಂದು ಹೊರಟರು. ಅಂದು ಅದಕ್ಕೆಲ್ಲಾ ಅವಕಾಶ ಮಾಡಿಕೊಟ್ಟಿದ್ದರೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿತ್ತು. ಏಕೆಂದರೆ ಆಗ ತಾನೆ ಮಂಗಳೂರಿನಲ್ಲಿ ಶಾಂತಿಯುತ ವಾತಾವರಣ ನಿರ್ಮಾಣವಾಗಿತ್ತು. ಅದೇ ರೀತಿ ಮೈಸೂರು, ಬೆಂಗಳೂರು, ಶಿವಮೊಗ್ಗ, ಹುಬ್ಬಳ್ಳಿ ಮತ್ತು ಧಾರವಾಡ ಈ ಕಡೆಗಳಿಂದ ಬೈಕ್ ರ್‍ಯಾಲಿ ಹೋಗಬೇಕೆಂದು ಇದ್ದರು. ಅದಕ್ಕೆ ನಾವು ಅವಕಾಶ ಕೊಡಲಿಲ್ಲ. ಕಾರಣವೇನೆಂದರೆ, ಆಗ ತಾನೆ ಶಾಂತಿಯುತ ವಾತಾವರಣ ನಿರ್ಮಾಣವಾಗುತ್ತಿತ್ತು. ಅದೇ ರೀತಿ ಟಿಪ್ಪು ಜಯಂತಿಗೂ ಕೂಡ ಹೋದ ವರ್ಷ ಮತ್ತು ಅದರ ಹಿಂದಿನ ವರ್ಷ ಅಲ್ಲಲ್ಲಿ ಸ್ವಲ್ಪ ಪರ ಮತ್ತು ವಿರೋಧ ಪ್ರತಿಭಟನೆಗಳು ನಡೆದವು. ಆದರೆ, ಈ ಬಾರಿ ಎಲ್ಲವೂ ಸಹ ಸುಸೂತ್ರವಾಗಿ ನಡೆಯಿತು. ಅದೇ ರೀತಿ ಹನುಮ ಜಯಂತಿ ಸಹ ಸುಸೂತ್ರವಾಗಿ ನಡೆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಬೈಕ್ ರ್‍ಯಾಲಿ ಮಾಡಲು ಅವಕಾಶ ಕೊಟ್ಟಿದ್ದರೆ ಕಾನೂನು ಸುವ್ಯವಸ್ಥೆ ಹೇಗೆ ಹದಗೆಡುತ್ತಿತ್ತು? ಬೇರೆ ಬೇರೆ ಭಾಗದಿಂದ ಬೈಕ್ ರ್‍ಯಾಲಿ ಬಂದಿರುತ್ತಾರೆ, ಅವರು ಒಂದು ಸಮಾವೇಶ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ನಾವೆಲ್ಲಾ ಚರ್ಚೆ ಮಾಡಿದ ಹಾಗೆ, ಸಚಿವರು ತಮ್ಮ ಉತ್ತರವನ್ನು ನೀಡಲಿ, ಆಮೇಲೆ ಮಾನ್ಯ ಸದಸ್ಯರು ಅದರ ಬಗ್ಗೆ ಕೇಳಲಿ. ಬೈಕ್ ರ್‍ಯಾಲಿ ಮಾಡುವುದಕ್ಕೆ ಏಕೆ ಬಿಡಲಿಲ್ಲ ಎನ್ನುವುದು ಇದಕ್ಕೆ ಪ್ರಾಸ್ತವ ಅಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನನಗೆ ಬೇಕಾದಂತಹ ಸ್ಪಷ್ಟೀಕರಣ ಕೇಳುವುದಕ್ಕೆ ಅಧಿಕಾರವಿದೆ ಅದಕ್ಕೆ ಅದನ್ನು ಕೇಳುತ್ತಿದ್ದೇನೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಎಲ್ಲಾ ಅಧಿಕಾರವಿದೆ, ನಾನು ಇಲ್ಲವೆಂದು ಹೇಳಿಲ್ಲ. ಆದರೆ, ಮಾನ್ಯ ಗೃಹಮಂತ್ರಿಗಳು ಉತ್ತರವನ್ನು ಕೊಟ್ಟ ಮೇಲೆ ಅವರು ಸ್ಪಷ್ಟೀಕರಣ ಕೇಳುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಮಗೆ ಮಾನ್ಯ ಗೃಹಮಂತ್ರಿಗಳ ಮೇಲೆ ವಿಶ್ವಾಸವಿದೆ, ಅವರು ನಮಗೆ ಉತ್ತರವನ್ನು ಕೊಡುತ್ತಾರೆ, ಅವರು ನಮಗೆ convince ಮಾಡುತ್ತಾರೆ ಎಂಬ ವಿಶ್ವಾಸವಿದೆ. ಆದರೆ, ಮಾನ್ಯ ಸಭಾನಾಯಕರಿಗೆ ಏಕೆ ಅನುಮಾನ ಬಂದಿದೆ, ನಾನು ಕೇಳುತ್ತಿದ್ದೇನೆ ಅವರು ಉತ್ತರ ಕೊಡುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಈ ಚರ್ಚೆಯಲ್ಲಿ ಮಧ್ಯ ಪ್ರವೇಶಿಸುವಂತಹ ಅಧಿಕಾರ ನಮಗೆ ಇದೆ.

**ಶ್ರೀ ಎಂ.ಆರ್.ಸೀತಾರಾಂ:-** ಮಾನ್ಯ ಸಭಾಪತಿಯವರೇ, ತಾವು ನಿನ್ನೆಯ ದಿವಸ ಹೇಳಿದ್ದೀರಿ, ಮಾತನಾಡುವಾಗ ಯಾರೂ ಮಧ್ಯ ಬಾಯಿ ಹಾಕಬಾರದೆಂದು. ಆದರೆ, ಮಾನ್ಯ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಇದು ಅಭ್ಯಾಸವಾಗಿರುವುದರಿಂದ ನಾನು ಅವರಿಗೆ ಹೇಳುತ್ತಿದ್ದೇನೆ. ಆದುದರಿಂದ ದಯವಿಟ್ಟು ಸರ್ಕಾರ ಉತ್ತರ ನೀಡಿದ ನಂತರ ಅವರು ಮಾತನಾಡಲಿ.

**ಸಭಾಪತಿಯವರು:-** ಈಗ ಮಾನ್ಯ ಗೃಹ ಸಚಿವರು ಮಾತನಾಡುತ್ತಾರೆ.

**ಶ್ರೀ ರಾಮಲಿಂಗರೆಡ್ಡಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಈಗಲೇ ಉತ್ತರವನ್ನು ನೀಡುತ್ತೇನೆ. ಈಗ ಅಲ್ಲೆಲ್ಲಾ ಗಲಭೆಗಳಾಗಿ, ಸೆಕ್ಷನ್ 144 ಐ.ಪಿ.ಸಿ., ಅಡಿಯಲ್ಲಿ ಆದೇಶವನ್ನು ಹೊರಡಿಸಲಾಗಿದ್ದು, ಆಗ ತಾನೆ ಶಾಂತಿಯುತವಾದ ವಾತಾವರಣ ನಿರ್ಮಾಣವಾಗಿತ್ತು, ಅಲ್ಲಿ ಮತ್ತೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೈಕ್ ರ್ಯಾಲಿ ಹೋದರೆ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತದೆ ಎಂಬುದು ಅಷ್ಟೆ, ಮತ್ತೇನೂ ಇಲ್ಲ. ಆಮೇಲೆ ಲಕ್ಷಾಂತರ ಜನ ಸೇರುವಂತಹ ಜಾತ್ರೆಗಳು ಆಗುತ್ತದೆ, ಧಾರ್ಮಿಕ ಕಾರ್ಯಕ್ರಮಗಳು ಆಗುತ್ತದೆ. ಅಂತಹ ಸಂದರ್ಭದಲ್ಲಿ ಎಲ್ಲೂ ಕೂಡ ರಾಜ್ಯದಲ್ಲಿ ಸಣ್ಣ ಅನಾಹುತ ಆಗಲಿಲ್ಲ, ಮತ್ತೆ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಕೊಲೆಗಡುಕರಿಗೆ ರಕ್ಷಣೆ ಕೊಡುತ್ತಿದ್ದಾರೆ, ಸಾರ್ವಜನಿಕರಿಗೆ ರಕ್ಷಣೆ ಇಲ್ಲ, ಕಾನೂನು ಮತ್ತು ಸುವ್ಯವಸ್ಥೆ ಇಲ್ಲವೆಂದಾಗ ನಾವು ಯಾರಿಗಾದರೂ ಹೋಲಿಕೆ ಮಾಡಬೇಕಲ್ಲವೆ. ಅಂದರೆ, ಕೇಂದ್ರದ ಜೊತೆ ಮತ್ತು ಇತರೇ ರಾಜ್ಯಗಳ ಜೊತೆ ಹೋಲಿಕೆ ಮಾಡಿಕೊಳ್ಳಬೇಕು ಅಥವಾ ನಮ್ಮ ಈ ಹಿಂದಿನ ಸರ್ಕಾರದ ಜೊತೆ ಹೋಲಿಕೆ ಮಾಡಿಕೊಳ್ಳಬೇಕು. ಈಗ ಕಾನೂನು ಸುವ್ಯವಸ್ಥೆ ಹೇಗಿದೆ ಮತ್ತು ಹಿಂದೆ ಹೇಗೆ ಇತ್ತು ಎಂಬುದು ಗೊತ್ತಾಗುತ್ತದೆ.

ಮಾನ್ಯ ಸಭಾಪತಿಯವರೇ, ನಾವು 2013ರಿಂದ ನಮ್ಮ ಸರ್ಕಾರ ಅಧಿಕಾರದಲ್ಲಿದೆ. ಕೊಲೆ, ಸುಲಿಗೆ, ಅತ್ಯಾಚಾರ, ಸರ ಅಪಹರಣ, ಹಲ್ಲೆ ಪ್ರಕರಣಗಳು ಮತ್ತು ಖೋಟಾ ನೋಟು ಪ್ರಕರಣಗಳು ಇವುಗಳು ಬಹಳ ಪ್ರಮುಖವಾಗಿ ಇರುತಕ್ಕಂಥವುಗಳು. ರಾಜ್ಯದಲ್ಲಿ 2013ರಿಂದ 2017ರವರೆಗೆ ಸುಮಾರು 7,759 ಕೊಲೆಗಳು ಆಗಿವೆ. 2008ರಿಂದ 2012ರವರೆಗೆ ಬಿಜೆಪಿ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 8,885 ಕೊಲೆಗಳು ಆಗಿವೆ. ಅಂದರೆ, ಸಾವಿರದ ನೂರಕ್ಕಿಂತಲ್ಲೂ ಹೆಚ್ಚು ಕೊಲೆಗಳು ಈ ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಆಗಿದೆ. ಈಗ ಸುಲಿಗೆ ಪ್ರಕರಣಗಳು 5,542 ನಮ್ಮ ಸರ್ಕಾರದ ಅವಧಿಯಲ್ಲಿ ಆಗಿದೆ. ಬಿಜೆಪಿ ಸರ್ಕಾರ ಇದ್ದಾಗ ಸುಮಾರು 9,648 ಸುಲಿಗೆ ಪ್ರಕರಣಗಳು ದಾಖಲಾಗಿದ್ದವು. ಅಂದರೆ ನಾಲ್ಕು ಸಹಸ್ರ ಸುಲಿಗೆ ಪ್ರಕರಣಗಳು ನಮ್ಮ ಆಡಳಿತಕ್ಕಿಂತಲೂ ಹೆಚ್ಚು ಅವರ ಆಡಳಿತದ ಅವಧಿಯಲ್ಲಿ ಆಗಿದೆ. ನಮ್ಮ ಆಡಳಿತದ ಅವಧಿಯಲ್ಲಿ ಸುಮಾರು 3,833 ಅತ್ಯಾಚಾರದ ಪ್ರಕರಣಗಳು ದಾಖಲಾಗಿವೆ. ಈಗ ಅತ್ಯಾಚಾರ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಕೋರ್ಟ್ ತೀರ್ಮಾನ ಮಾಡುತ್ತದೆ. ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ ಸುಮಾರು 2,922 ಪ್ರಕರಣಗಳು ದಾಖಲಾಗಿದ್ದವು. ಆದರೆ, ಈಗ 3,833 ಅಂದರೆ ಹತ್ತಿರ ಹತ್ತಿರ ಸಾವಿರದ ನೂರಕ್ಕಿಂತಲ್ಲೂ ಈಗ ಹೆಚ್ಚಾಗಿದೆ. ಈ ರೀತಿ ಹೆಚ್ಚಾಗಲು ಕಾರಣವೇನೆಂದರೆ, POCSO (The Protection of Children from Sexual Offences) Act ಬಂತು, ಚಿಕ್ಕ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಆದಂತಹ ಸಂದರ್ಭದಲ್ಲಿ ಅದು ಸಣ್ಣ ಘಟನೆ ಆಗಿರಬಹುದು ಅಥವಾ ಅತ್ಯಾಚಾರವಾಗಿರಬಹುದು, ಕಡ್ಡಾಯವಾಗಿ ಅದನ್ನು POCSO (The Protection of Children from Sexual Offences) Act ಅಡಿಯಲ್ಲಿ ಅದನ್ನು register ಮಾಡಬೇಕೆಂದು ಇರುವುದಕ್ಕೆ ಅದರ ಸಂಖ್ಯೆ ಜಾಸ್ತಿಯಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಈಗ ನಮ್ಮ ಸರ್ಕಾರದ ಅವಧಿಯಲ್ಲಿ ಸರಗಳ್ಳತನ 5,359 ಆಗಿದೆ. ಅದೇ ಬಿಜೆಪಿ ಸರ್ಕಾರದ ಅವಧಿಯಲ್ಲಿ 4,675 ಇದರಲ್ಲಿ ಜಾಸ್ತಿಯಾಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಸುಮಾರು 650 ಪ್ರಕರಣಗಳು ಜಾಸ್ತಿಯಾಗಿದೆ. ಅದೇ ರೀತಿ ಹಲ್ಲೆ ಪ್ರಕರಣಗಳು, ನಮ್ಮ ಸರ್ಕಾರದ ಅವಧಿಯಲ್ಲಿ 93,886 ಪ್ರಕರಣಗಳು ದಾಖಲಾಗಿವೆ. ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ 1,06,342 ಪ್ರಕರಣಗಳು ದಾಖಲಾಗಿವೆ. ಅಂದರೆ ಸುಮಾರು 13 ಸಹಸ್ರ ಪ್ರಕರಣಗಳು ನಮ್ಮ ಅವಧಿಗಿಂತ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾಸ್ತಿಯಾಗಿದೆ. ಅನಂತರ ಖೋಟಾ ನೋಟು ಪ್ರಕರಣಗಳು ನಮ್ಮ ಅವಧಿಯಲ್ಲಿ ಆಗಿರುವಂಥದ್ದು 306 ಪ್ರಕರಣಗಳು ದಾಖಲಾಗಿವೆ. ಹಿಂದೆ ಬಿಜೆಪಿ ಸರ್ಕಾರವಿದ್ದಾಗ 660 ಪ್ರಕರಣಗಳು ದಾಖಲಾಗಿವೆ. ಸರಗಳ್ಳತನ ಮತ್ತು ಅತ್ಯಾಚಾರ ಪ್ರಕರಣಗಳು ಇವೆರಡನ್ನು ಬಿಟ್ಟರೆ, ಉಳಿದಿರುವಂತಹ ಕೊಲೆ, ಸುಲಿಗೆ, ಹಲ್ಲೆ ಪ್ರಕರಣಗಳು, ಖೋಟಾ ನೋಟು ಪ್ರಕರಣಗಳು ಇವೆಲ್ಲವೂ ಕೂಡ ಬಿಜೆಪಿ ಸರ್ಕಾರದ ಅವಧಿಯಲ್ಲೇ ಜಾಸ್ತಿಯಾಗಿರುವುದು.

ಮಾನ್ಯ ಸಭಾಪತಿಯವರೇ, NCRB (National Crime Research Bureau) ಎಂದು ಇದೆ. ನಮ್ಮ ದೇಶದಲ್ಲಿ ಎಷ್ಟು ಕೊಲೆ ಪ್ರಕರಣಗಳು ಆಗುತ್ತವೆ ಮತ್ತು ಬೇರೆ ಬೇರೆ ಪ್ರಕರಣಗಳು ಆಗುತ್ತವೆ. ಅದು ರಕ್ಷಣಾ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಅವರು ಇಂತಹ ಪ್ರಕರಣಗಳನ್ನೆಲ್ಲಾ ಪಟ್ಟಿ ಮಾಡಿ ಅದನ್ನು ಪ್ರತಿವರ್ಷ ಬಿಡುಗಡೆ ಮಾಡುತ್ತಾರೆ. ಅದರ ಪ್ರಕಾರ ಎಲ್ಲಾ ಪ್ರಕರಣಗಳು ಸೇರಿ ನಮ್ಮ ರಾಜ್ಯ 10ನೇ ಸ್ಥಾನದಲ್ಲಿ ಬರುತ್ತದೆ. ಅವರು ಈ ಕೊಲೆ, ಸುಲಿಗೆಗೆ ಸಂಬಂಧಿಸಿದಂತೆ ಬೇರೆ ಬೇರೆ ತೆಗೆದುಕೊಳ್ಳುವುದಿಲ್ಲ, ಅವರು overall ತೆಗೆದುಕೊಳ್ಳುತ್ತಾರೆ. ಈ ರೀತಿ ತೆಗೆದುಕೊಂಡಾಗ ನಮ್ಮ ರಾಜ್ಯ 10ನೇ ಸ್ಥಾನದಲ್ಲಿದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಈಶ್ವರಪ್ಪನವರು ಮಹಿಳೆಯರ ರಕ್ಷಣೆಯ ಬಗ್ಗೆ ಮಾತನಾಡಿದ್ದಾರೆ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಐಪಿಸಿ ಮತ್ತು ಇತರೆ 2016ರಲ್ಲಿ ದೆಹಲಿ, ಅಸ್ಸಾಂ, ಒರಿಸ್ಸಾ, ತೆಲಂಗಾಣ ಮತ್ತು ರಾಜಸ್ಥಾನ ಇವುಗಳು ಮೊದಲ ಐದು ರಾಜ್ಯಗಳು. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಕರ್ನಾಟಕ ರಾಜ್ಯ 19ನೇ ಸ್ಥಾನದಲ್ಲಿ ಇದೆ. ಮಹಿಳೆಯರ ಅಪಹರಣ ಮತ್ತು ಅಪಹರಣ ಪ್ರಕರಣಗಳು ದೆಹಲಿ, ಅಸ್ಸಾಂ, ಹರಿಯಾಣ, ಚಂಡಿಗಡ ಮತ್ತು ಮಧ್ಯಪ್ರದೇಶ ಈ ಐದು ರಾಜ್ಯಗಳಲ್ಲಿ ಕರ್ನಾಟಕ 20ನೇ ಸ್ಥಾನದಲ್ಲಿದೆ. ಅಂದರೆ ಕೆಳಗಡೆ ಇದ್ದೇವೆ. ಅಂದರೆ, ಇದು ಕಡಿಮೆ ಇದೆ. ಅತ್ಯಾಚಾರ ಪ್ರಕರಣಗಳು, ಗೋವಾ, ಸಿಕ್ಕಿಂ, ದೆಹಲಿ, ಅರುಣಾಚಲ ಪ್ರದೇಶ ಮತ್ತು ಮೇಘಾಲಯ ಇದಕ್ಕೆ ಸಂಬಂಧಪಟ್ಟಂತೆ ನಮ್ಮ ಕರ್ನಾಟಕ ರಾಜ್ಯ 6ನೇ ಸ್ಥಾನದಲ್ಲಿದೆ. ಈಗ ನಾನು ಹೇಳುತ್ತಿರುವುದು ರಾಜ್ಯ ಮಟ್ಟಕ್ಕೆ ಸಂಬಂಧಪಟ್ಟಿರುವುದು. ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ನಂತರ ಹೇಳುತ್ತೇನೆ. ಈಗ ಐಪಿಸಿ ಪ್ರಕರಣಗಳು ದೆಹಲಿ, ಕೇರಳ, ಮಧ್ಯಪ್ರದೇಶ,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹರಿಯಾಣ ಮತ್ತು ಅಸ್ಸಾಂ ಇದಕ್ಕೆ ಸಂಬಂಧಿಸಿದಂತೆ ನಮ್ಮ ಕರ್ನಾಟಕ ರಾಜ್ಯ 10ನೇ ಸ್ಥಾನದಲ್ಲಿದೆ. ನಾವು ಇದನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿಕೊಂಡಿರುವುದು.

ಮಾನ್ಯ ಸಭಾಪತಿಯವರೇ, ಈ Metropolitan Citiesಗೆ ಸಂಬಂಧಪಟ್ಟಂತೆ, ಅಂದರೆ Metropolitan Cities ಎಂದರೆ, ದೆಹಲಿ, ಪಾಟ್ನ, ಲಕ್ನೋ, ನಾಗಪುರ, ಜೈಪುರ ಮತ್ತು ಚೆನ್ನೈ ಈ ತರಹದ ಸಿಟಿಗಳು ಬರುತ್ತವೆ. 'Kidnapping and Abduction of Women' ಇದರಲ್ಲಿ ದೆಹಲಿ, ಪಾಟ್ನ, ಲಕ್ನೋ, ನಾಗಪುರ ಮತ್ತು ಜೈಪುರ ಈ ಐದು ಸಿಟಿಗಳಲ್ಲಿ ನಾವು ಬರುವುದಿಲ್ಲ. ಇದರಲ್ಲಿ ನಾವು 19ನೇ ಸ್ಥಾನದಲ್ಲಿ ಇದ್ದೇವೆ. ಹಾಗೆಯೇ ಅತ್ಯಾಚಾರ ಇದರಲ್ಲಿ ದೆಹಲಿ, ಜೈಪುರ, ಇಂದೋರ್, ಪುಣೆ ಮತ್ತು ನಾಗಪುರ, ಇದರಲ್ಲಿ ಪ್ರಥಮ ಐದು ಸ್ಥಾನಗಳು ಅಲ್ಲಿ ಹೋಗುತ್ತವೆ. ನಾವು ಅತ್ಯಾಚಾರಕ್ಕೆ ಸಂಬಂಧಪಟ್ಟಂತೆ ಈ ಐದರಲ್ಲಿ ಇಲ್ಲ. ಆಮೇಲೆ ಈ ದೊಂಬಿ ಮತ್ತು ಗಾಯ – Violent Crimes ಅದರಲ್ಲಿ ದೆಹಲಿ, ಮುಂಬೈ, ಪಾಟ್ನ, ಬೆಂಗಳೂರು ಮತ್ತು ಪುಣೆ ಇದರಲ್ಲಿ ನಮ್ಮ ಬೆಂಗಳೂರು ನಗರ ದೊಂಬಿ ಪ್ರಕರಣದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇದು ಬೆಂಗಳೂರು ನಗರಕ್ಕೆ ಸಂಬಂಧಪಟ್ಟಿರುವುದು. ನಾವು ರಾಜ್ಯಗಳಿಗೆ ಹೋಲಿಕೆ ಮಾಡಿದರೆ, ನಮ್ಮ ಕರ್ನಾಟಕ ರಾಜ್ಯ ಇದರಲ್ಲಿ ಬರುವುದಿಲ್ಲ. ಅಪಹರಣ ಮತ್ತು ಸಾಮಾನ್ಯ, ಈ ಅಪಹರಣ ಎಂದರೆ ಏನಾಗುತ್ತದೆ ಎಂದರೆ, missing ಆಗುವವರು ಎಲ್ಲರೂ ಕೂಡ automatic ಆಗಿ kidnapping case ಆಗಿ convert ಆಗಿ ಬಿಡುತ್ತದೆ.

**(ಮುಂದು...)**

**ಶ್ರೀ ರಾಮಲಿಂಗಾರೆಡ್ಡಿ(ಮುಂದುವರೆದಿದ್ದು...):-**

ಇದರಲ್ಲಿ ದೆಹಲಿ, ಮುಂಬೈ, ಬೆಂಗಳೂರು, ಲಕ್ನೋ ಮತ್ತು ಪುಣೆ ಇದೆ. ಅದರಲ್ಲಿ ನಮ್ಮ ರಾಜ್ಯದ ಅಂಕಿ-ಅಂಶ ಶೇಕಡ 6.5 ರಷ್ಟು ಇದೆ, ದೆಹಲಿ ಶೇಕಡ 39 ರಷ್ಟು ಇದೆ. ಮಿಸ್ಸಿಂಗ್ ಪ್ರಕರಣಗಳು ಎಂದು ಹೇಳಿದರೆ, ಅದು ಚಿಕ್ಕ ಮಗು ಇರಬಹುದು ಅಥವಾ 70-80 ವಯಸ್ಸಾಗಿರುವಂತಹ ಎಲ್ಲರೂ ಕಳೆದು ಹೋಗಿರಬಹುದು. ಆ ರೀತಿಯ ಪ್ರಕರಣಗಳು ಕಿಡ್ನಾಪಿಂಗ್ ಕೇಸ್‌ಗಳು ಎಂದು ಬರುತ್ತವೆ. ಆ ನಂತರ ಪೋಲೀಸರು ಸಂಬಂಧಪಟ್ಟ ಸೆಕ್ಷನ್‌ಗಳನ್ನು ಹಾಕಿಕೊಳ್ಳುತ್ತಾರೆ. ಅದರಿಂದಾಗಿ, ಇವು ನಮಗೆ ಜಾಸ್ತಿ ಕಾಣುತ್ತಿದೆ ಮತ್ತು ಮೆಟ್ರೋಪಾಲಿಟನ್ ಸಿಟಿಗಳಲ್ಲಿ ನಡೆದಂತಹ 229 ಕೊಲೆ ಪ್ರಕರಣಗಳು ನಮ್ಮಲ್ಲಿ ದಾಖಲಾಗಿದ್ದು, ಅದರಲ್ಲಿ ನಮ್ಮ ಬೆಂಗಳೂರು 2 ನೇ ಸ್ಥಾನದಲ್ಲಿದೆ. ಇನ್ನು ಐ.ಪಿ.ಸಿ., ಪ್ರಕರಣಗಳು ದೆಹಲಿಯಲ್ಲಿ 1,99,000, ಬೆಂಗಳೂರಿನಲ್ಲಿ 45,000, ಮುಂಬೈನಲ್ಲಿ 39,000, ಜೈಪುರದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

23,000, ಕಲ್ಕತ್ತಾದಲ್ಲಿ 22,000 ಪ್ರಕರಣಗಳು ದಾಖಲಾಗಿದೆ. ಡ್ರಿಂಕ್ ಅಂಡ್ ಡ್ರೈವ್ ಮತ್ತು ಇನ್ನಿತರ ಟ್ರಾಫಿಕ್‌ಗೆ ಸಂಬಂಧಪಟ್ಟ ಎಲ್ಲಾ ಕೇಸ್‌ಗಳಲ್ಲಿಯೂ ಕೂಡ 10,851 ಕೇಸ್‌ಗಳನ್ನು ಐ.ಪಿ.ಸಿ., ಕಲಂ 283 ಪ್ರಕಾರ ರಿಜಿಸ್ಟ್ರೇಷನ್ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆ ಸೆಕ್ಷನ್ 283 ರ ಪ್ರಕಾರ ಟ್ರಾಫಿಕ್ ಪ್ರಕರಣಗಳು ದಾಖಲೆಯಾಗಿದ್ದರಿಂದ ಒಟ್ಟಾರೆಯಾಗಿ 10,851 ಪ್ರಕರಣ ನಮ್ಮಲ್ಲಿ ದಾಖಲಾಯಿತು. ಅದರಿಂದಾಗಿ, ನಮಗೆ ಜಾಸ್ತಿ ಕಾಣಿಸುತ್ತದೆ. ಟ್ರಾಫಿಕ್‌ಗೆ ಸಂಬಂಧಪಟ್ಟ ಪ್ರಕರಣಗಳನ್ನು ತೆಗೆದು ಬಿಟ್ಟರೆ ನಮ್ಮಲ್ಲಿ ಒಟ್ಟಾರೆಯಾಗಿ 35,000 ಪ್ರಕರಣ ಬರುತ್ತದೆ. ಈ ಪ್ರಕಾರ ರಾಷ್ಟ್ರ ಮಟ್ಟದಲ್ಲಿರುವ ಶೇಕಡವಾರು ಕ್ರೈಮ್ಸ್ ರೇಟ್‌ನಲ್ಲಿ ನಮ್ಮ ರಾಜ್ಯ 4 ನೇ ಸ್ಥಾನಕ್ಕೆ ಬಂದುಬಿಟ್ಟಿದೆ. ಆ ನಂತರ ಟ್ರಾಫಿಕ್ ಮತ್ತು ಡಿ.ಡಿ., ಕೇಸ್‌ಗಳನ್ನು ಯಾವಾಗ ಇದಕ್ಕೆ ಸೇರಿಸಿದರೋ ಅದನ್ನು ತೆಗೆಯಬೇಕು ಎಂದು ನಾನು ಹೇಳಿದ್ದೇನೆ. ರೆಗ್ಯೂಲರ್ ಆಗಿ ನಮ್ಮ ಟ್ರಾಫಿಕ್ ಕೇಸ್‌ಗೆ ಸಂಬಂಧಪಟ್ಟ ಹಾಗೆ ದಂಡ ವಿಧಿಸಿ, ಐ.ಪಿ.ಸಿ., ಕಲಂಗಳನ್ನು ಹಾಕಬೇಡಿ ಎಂದು ನಾನು ಹೇಳಿದ್ದೇನೆ. ಅದರಿಂದಾಗಿ, ಈ ಪ್ರಕರಣಗಳು ಜಾಸ್ತಿಯಾಗಿವೆ. ಇದಕ್ಕೆ ಯಾರು ವರದಿ ತಯಾರು ಮಾಡಿದರೋ ಅವರೇ ಕಾರಣ ಕೊಡುತ್ತಾರೆ "Increase in population, influx in casual labourer from other states" ಎಂದು ಅವರು ಕಾರಣವನ್ನು ಕೊಟ್ಟಿರುವುದು. 'Traffic accidents and booking of traffic related offences' ಜಾಸ್ತಿ ಆಗುವುದಕ್ಕೆ ಅವರು ಕೂಡ ಕಾರಣ ಕೊಟ್ಟಿದ್ದಾರೆ.

ಆಮೇಲೆ, increase in free registrations. ನಾನು ಬಂದ ತಕ್ಷಣವೇ ಪೋಲೀಸ್ ಠಾಣೆಗಳಲ್ಲಿ ಯಾರಾದರೂ ದೂರು ನೀಡುವುದಕ್ಕೆ ಬಂದಾಗ ಅದನ್ನು ನಿರಾಕರಿಸದೇ ಕಡ್ಡಾಯವಾಗಿ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ಜೊತೆಗೆ, ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೂಡ ಎಫ್.ಐ.ಆರ್., ಅನ್ನು ಯಾರು ಕೂಡ ನಿರಾಕರಣೆ ಮಾಡಬಾರದೆಂದು ಆದೇಶ ನೀಡಿದೆ. ಎಲ್ಲಾ ಪೋಲೀಸ್ ಠಾಣೆಗಳಲ್ಲಿಯೂ ಕೂಡ ದೂರನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಆ ನಂತರ ಎಫ್.ಐ.ಆರ್., ಆಗುತ್ತದೆ, ತನಿಖೆ ಸಂದರ್ಭದಲ್ಲಿ 'ಬಿ' ರಿಪೋರ್ಟ್ ಆಗುವುದು ಅಥವಾ ಚಾರ್ಜ್‌ಶೀಟ್ ಹಾಕುವುದು ಅದು ಬೇರೆ ಪ್ರಶ್ನೆ. ಇದರಿಂದಾಗಿ ಪ್ರಕರಣಗಳು ಜಾಸ್ತಿಯಾಗಿದೆಯೇ ಹೊರತು ಬೇರೆ ಏನೂ ಇಲ್ಲ.

ಇನ್ನೊಂದು ಬಹಳ ಮುಖ್ಯವಾಗಿ 23 ಜನ ಬಿಜೆಪಿ ಮತ್ತು ಸಂಘ ಪರಿವಾರದವರ ಕೊಲೆಯಾಗಿವೆ ಎಂದು ಭಾಷಣಗಳಲ್ಲಿ ಎಲ್ಲಾ ಬಿಜೆಪಿ ಮುಖಂಡರು ಮಾತನಾಡುತ್ತಾರೆ. ಇತ್ತೀಚೆಗೆ ಅರಮನೆ ಮೈದಾನದಲ್ಲಿ ನಡೆದ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಶ್ರೀ ರಾಜನಾಥ್‌ಸಿಂಗ್‌ರವರು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಮಾರಿ ಶೋಭ ಕರಂದ್ಲಾಜೆಯವರು ಕೂಡ ಮಾತನಾಡಿದ್ದಾರೆ. ಅವರು ಈ ಸದನದಲ್ಲಿ ಇಲ್ಲದೇ ಇರುವುದರಿಂದ ಅವರು ಹೆಸರು ಹೇಳಬಾರದು. ಕೇಂದ್ರ ಗೃಹ ಸಚಿವರಾದಂತಹ ಶ್ರೀ ರಾಜನಾಥ್‌ಸಿಂಗ್‌ರವರು 23 ಜನ ನಮ್ಮ ಪಕ್ಷದ ಕಾರ್ಯಕರ್ತರನ್ನು ಕೊಲೆ ಮಾಡಿದ್ದಾರೆ. ಆ ಕೊಲೆಯಲ್ಲಿ ಕೊಲೆಗಡುಕರಿಗೆ ಸರ್ಕಾರ ರಕ್ಷಣೆ ಕೊಡುತ್ತಿದೆ ಎಂದು ಹೇಳಿ ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಶ್ರೀ ಪ್ರಶಾಂತ್ ಪೂಜಾರಿ, ಶ್ರೀ ಡಿ.ಕೆ. ಪುಟ್ಟಪ್ಪ, ಶ್ರೀ ಮೈಸೂರು ರಾಜು, ಶ್ರೀ ರಮೇಶ್ ಕೊಟ್ಯಾನ್, ಮಡಿಕೇರಿ ಪ್ರವೀಣ್ ಪೂಜಾರಿ, ಶ್ರೀ ಚರಣ್ ಪೂಜಾರಿ, ಶಿವಮೊಗ್ಗ ವಿಶ್ವನಾಥ್, ಶ್ರೀ ರುದ್ರೇಶ್, ಶ್ರೀ ಶರತ್ ಮಡಿವಾಳ, ಶ್ರೀ ದೀಪಕ್ ರಾವ್ ಇಷ್ಟು ಪ್ರಕರಣಗಳು ಕೂಡ ಹಿಂದೂ ಮತ್ತು ಮುಸ್ಲಿಮರ ನಡುವೆ ಆಗಿರುವಂಥದ್ದು. ಅದರಲ್ಲಿ ಶ್ರೀ ಪರೇಶ್ ಮೇಸ್ತ ಎಂಬುವವರ ಪ್ರಕರಣದಲ್ಲಿ ಸಿಬಿಐ ತನಿಖೆ ನಡೆಸುತ್ತಿದೆ. ಆ ಕೊಲೆಗೆ ಏನು ಕಾರಣ ಎಂದು ಸಿಬಿಐ ನವರು ನಂತರ ಉತ್ತರ ನೀಡುತ್ತಾರೆ. ಒಟ್ಟು 11 ಪ್ರಕರಣಗಳು. ಶ್ರೀ ಸಂತೋಷ್ ಪ್ರಕರಣದಲ್ಲಿ ತನಿಖೆ ನಡೆಯುತ್ತಿದೆ. ಈ ಪ್ರಕರಣಗಳಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ಜಗಳ ಆಗಿರುವಂಥದ್ದು, ಅದರಲ್ಲಿ ಇಷ್ಟು ಜನರ ಕೊಲೆಯಾಗಿದೆ.

ಶ್ರೀ ಪರೇಶ್ ಮೇಸ್ತರವರ ಪ್ರಕರಣದಲ್ಲಿ ಸಿಬಿಐ ತನಿಖೆ ನಡೆಸುತ್ತಿದೆ. ನಂತರ ಅದು ಯಾವ ಕಾರಣಕ್ಕಾಗಿ ಕೊಲೆಯಾಗಿದೆ ಎಂದು ಅವರು ವರದಿ ನೀಡುತ್ತಾರೆ. ಈ ಎಲ್ಲಾ ಪ್ರಕರಣಗಳಲ್ಲಿಯೂ ಕೂಡ ಚಾರ್ಜ್‌ಶೀಟ್ ಹಾಕಿದ್ದೇವೆ. ಶ್ರೀ ಸಂತೋಷ್ ಪ್ರಕರಣದಲ್ಲಿ ಚಾರ್ಜ್‌ಶೀಟ್ ಹಾಕಿರುವುದಿಲ್ಲ. ಶ್ರೀ ದೀಪಕ್ ರಾವ್ ಪ್ರಕರಣದಲ್ಲಿ ಚಾರ್ಜ್‌ಶೀಟ್ ಹಾಕಿದ್ದಾರೆ. ಎಲ್ಲಾ ಆರೋಪಿಗಳನ್ನು ಬಂಧಿಸಿದ್ದಾರೆ ಮತ್ತು ಅವರೆಲ್ಲರ ವಿರುದ್ಧ ಚಾರ್ಜ್‌ಶೀಟ್ ಹಾಕಿದ್ದಾರೆ. ನಾನು ಕೂಡ ಮಂಗಳೂರಿಗೆ ಹೋದಂತಹ ಸಂದರ್ಭದಲ್ಲಿ ಇದನ್ನು ಗಮನಿಸಿದ್ದೇನೆ. ಅಲ್ಲಿ ಯಾರೋ 4 ಜನರ ಕೊಲೆಯಾಗುತ್ತದೆ. ಆ ಸಂದರ್ಭದಲ್ಲಿ 4 ಜನ ಯಾರು ಆ ಸ್ಥಳದಲ್ಲಿರುತ್ತಾರೆ ಅವರ ವಿರುದ್ಧ ಪ್ರಕರಣ ದಾಖಲಿಸುತ್ತಾರೆ. ಇನ್ನೊಂದು ಕಡೆ ಕೊಲೆಯಾಗುತ್ತದೆ. ಅಲ್ಲಿ ಯಾರು 4 ಜನ ಸ್ಥಳದಲ್ಲಿರುತ್ತಾರೆ ಅವರ ವಿರುದ್ಧ ಪ್ರಕರಣದ ದಾಖಲಿಸುತ್ತಾರೆ. ಆ ನಂತರ ಸಂಬಂಧಪಟ್ಟ ಕೊಲೆಗಳ ಹಿಂದೆ ಯಾರು ಇರುತ್ತಾರೆ ಅದನ್ನು ಪತ್ತೆ ಹಚ್ಚುವುದಕ್ಕೆ ಹೋಗುವುದಿಲ್ಲ. ನಾನು ಅಂತಹ ಕೊಲೆಗಳ ಹಿಂದೆ ಯಾರು ಇದ್ದಾರೆ conspirators ಯಾರಿದ್ದಾರೆ, ಇನ್ನು ಮುಂದೆ ಅಂತಹವರ ವಿರುದ್ಧ ತನಿಖೆ ಮಾಡಿದಾಗ ಮಾತ್ರ ಈ ಕೊಲೆಗಳು ಕಡಿಮೆಯಾಗುತ್ತವೆ ಎಂದು ಹೇಳಿದ್ದೆನು.

ಆದಾದ ನಂತರ conspiracy ಯಲ್ಲಿ ಯಾರಿದ್ದಾರೆ ಅವರನ್ನು ಕೂಡ ಸೇರಿಸಿದ್ದಾರೆ. ಆಗ ಏನಾಗುತ್ತದೆಯೆಂದರೆ, ಕೊಲೆಗಳು ಖಂಡಿತ ಕಡಿಮೆಯಾಗುತ್ತದೆ. ಕೊಲೆ ಮಾಡಿದವರನ್ನು ಬಿಡಿಸಿಕೊಂಡು ಬರುವವರು ನಮ್ಮ ಪಕ್ಷದಲ್ಲಿಯೂ ಇದ್ದಾರೆ, ವಿರೋಧ ಪಕ್ಷದಲ್ಲಿಯೂ ಸಹ ಇದ್ದಾರೆ. ಆ ನಂತರ ಸಾಕ್ಷಿ ಇರುತ್ತದೋ ಇಲ್ಲವೋ ಅದು ನಂತರ ನ್ಯಾಯಾಲಯದಲ್ಲಿ ತೀರ್ಮಾನವಾಗುತ್ತದೆ. ಶಿಕ್ಷೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವುದು ಬಿಡುವುದು ಬೇರೆ. ಆದರೆ conspiracy ಯಲ್ಲಿ ಇದ್ದವರನ್ನು ಸೇರಿಸದೇ ಇದ್ದರೆ ಕೊಲೆಗಳು ಸಹಜವಾಗಿ ಎರಡು ಕಡೆ ಆಗುತ್ತಲೇ ಇರುತ್ತವೆ. ಆ ನಂತರ ವಿರೋಧ ಪಕ್ಷದವರು ಒಟ್ಟು 23 ಕೊಲೆಗಳೆಂದು ಹೇಳುತ್ತಾರೆ. ನಾನು ಅದರ ಜೊತೆಗೆ ಶ್ರೀ ದೀಪಕ್ ರಾವ್ ರವರ ಮತ್ತು ಶ್ರೀ ಸಂತೋಷ್‌ರವರ ಪ್ರಕರಣ ಕೂಡ ಸೇರಿಸಿಕೊಂಡಿದ್ದೇನೆ. ಉಳಿದಿರತಕ್ಕಂಥದ್ದು, 25 ಪ್ರಕರಣಗಳೆಂದು ಇಟ್ಟುಕೊಳ್ಳೋಣ. ಶ್ರೀ ದೀಪಕ್ ರಾವ್ ಮತ್ತು ಶ್ರೀ ಸಂತೋಷ್ ಪ್ರಕರಣಗಳ ಬಗ್ಗೆ ಹೇಳುತ್ತಿದ್ದಾರೆ. ಈ 11 ಪ್ರಕರಣಗಳು ಹಿಂದೂ ಮತ್ತು ಮುಸ್ಲಿಮರ ನಡುವೆ ನಡೆದಿವೆ. ಇದರಲ್ಲಿ ಚಾರ್ಜ್‌ಶೀಟ್ ಆಗಿದೆ. ಈ ಪ್ರಕರಣಗಳು ಮತೀಯ ಗಲಭೆಗಳಿಂದ ಅಥವಾ ಬೇರೆ ಬೇರೆ ಕಾರಣಗಳಿಂದ ಆಗಿರುವಂಥದ್ದು. ಅಂದರೆ, ಈ ರಾಜಕೀಯ ದ್ವೇಷದಿಂದ ಆಗಿರುವಂಥದ್ದು ಎಂದು ಭಾವಿಸೋಣ. ಉಳಿದಿರುವಂತಹ ಪ್ರಕರಣಗಳಲ್ಲಿ ಶ್ರೀ ಅಶೋಕ್ ಪೂಜಾರಿ ಸತ್ತು ಹೋಗಿದ್ದಾರೆಂದು ಮೊದಲನೇ ಹೆಸರು ಹಾಕಿ ಶ್ರೀ ರಾಜನಾಥ್‌ಸಿಂಗ್ ಅವರಿಗೆ ಬರೆದುಕೊಡುತ್ತಾರೆ. ಆದರೆ, ಶ್ರೀ ಸಂತೋಷ್ ಎಂಬುವವರು ಇನ್ನು ಬದುಕಿದ್ದಾರೆ. ಆ ನಂತರ ಶ್ರೀ ವಾಮನ್ ಪೂಜಾರಿಯವರದು ಆತ್ಮಹತ್ಯೆ ಪ್ರಕರಣ. ಇವರೆಲ್ಲರೂ ಕೂಡ ಬಿಜೆಪಿ ಕಾರ್ಯಕರ್ತರೇ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಅದಕ್ಕೆ ಕಾರಣ ಬೇರೆ. ಆಮೇಲೆ ಇವರೆಲ್ಲರನ್ನೂ ಕೊಲೆ ಮಾಡಿರುವವರು ಅಥವಾ ಕೊಲೆ ಮಾಡಿದ್ದಾರೆಂಬ ಆಪಾದನೆ ಇರತಕ್ಕಂತಹವರು ಕೂಡ ಬಂದಿದ್ದಾರೆ. ಇವರೆಲ್ಲರೂ ಕೂಡ ಹಿಂದೂಗಳೇ. ಶ್ರೀ ಅಶೋಕ್ ಪೂಜಾರಿಯವರು ಬದುಕಿದ್ದಾರೆ, ಶ್ರೀ ವಾಮನ್ ಪೂಜಾರಿ ಮತ್ತು ಶ್ರೀ ರಾಜನ್ ಮಡಿಕೇರಿ ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶ್ರೀ ಕಾರ್ತಿಕ್‌ರಾಜ್ ಎಂಬುವವರನ್ನು ಕೊಲೆ ಮಾಡಿದ್ದಾರೆಂದು ಹೇಳಿದರು. ಆದರೆ, ಕೊನೆಯಲ್ಲಿ ಅವರ ಸಹೋದರಿಯೇ ಈ ಕೊಲೆಯನ್ನು ಮಾಡಿಸಿದ್ದು ಎಂದು ಗೊತ್ತಾಯಿತು. ಅವರ ವಿರುದ್ಧ ಚಾರ್ಜ್‌ಶೀಟ್ ಆಗಿದೆ.

ಆ ನಂತರ ಮ್ಯಾಗಡಿ ರವಿಯವರು ರಸ್ತೆ ಅಪಘಾತದಲ್ಲಿ ಬಿದ್ದು ಹೋಗಿದ್ದರು. ಆ ನಂತರ ನಮ್ಮ ಆನೇಕಲ್ ತಾಲ್ಲೂಕಿನ ಶ್ರೀನಿವಾಸ್ ಪ್ರಸಾದ್‌ರವರು ಜಮೀನು ವಿವಾದದಲ್ಲಿ ಕೊಲೆಯಾಗಿದ್ದರು. ಅದನ್ನು ಮೊದಲು ಕಾಂಗ್ರೆಸ್ ಪಕ್ಷದ ಶಾಸಕರಾದ ಶ್ರೀ ಶಿವಣ್ಣನವರೇ ಮಾಡಿಸಿದ್ದಾರೆಂದು ಪ್ರತಿಭಟನೆಗಳನ್ನು ಮಾಡಿದರು. ಕೊನೆಯಲ್ಲಿ ತನಿಖೆಯಲ್ಲಿ ಇದು ಜಮೀನು ವಿವಾದದಿಂದ ಕೊಲೆಯಾಗಿದೆ ಎಂದು ಗೊತ್ತಾಯಿತು. ಆ ನಂತರ ಶ್ರೀ ಹರೀಶ್ ಎಂಬುವವರು ಮೀನು ಸಾಕಾಣಿಕೆಗೆ ಜಾಗವನ್ನು ಲೀಸ್ ತೆಗೆದುಕೊಳ್ಳುವಂತಹ ವಿಚಾರದಲ್ಲಿ ಕೊಲೆಯಾಗಿರುವಂಥದ್ದು. ದಾಸರಹಳ್ಳಿ ಶ್ರೀ ಚಿಕ್ಕತಿಮ್ಮೇಗೌಡ ಎಂಬುವವರು ಮೊದಲು ಜೆಡಿಎಸ್ ಪಕ್ಷದಲ್ಲಿದ್ದು, ನಂತರ ಬಿಜೆಪಿ ಪಕ್ಷಕ್ಕೆ ಸೇರಿಕೊಂಡಿದ್ದಾರೆಂದು ಕೊಲೆ ಮಾಡುತ್ತಾರೆ. ಆ ನಂತರ ಇವರು ಕೂಡ ಅವರನ್ನು ಕೊಲೆ ಮಾಡುತ್ತಾರೆ. ಇದು ಇತ್ತೀಚೆಗೆ ನಡೆಯಿತು. ಶ್ರೀ ಅಶ್ವತ್ ಎಂಬುವವರ ಪ್ರಕರಣ ಸಹ ನಮ್ಮ ಆನೇಕಲ್ ತಾಲ್ಲೂಕಿಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೇರಿದ್ದು, ಇದು ಕೂಡ ಜಮೀನು ವಿವಾದದ ವೈಯಕ್ತಿಕ ವಿಚಾರದಲ್ಲಿ ಕೊಲೆಯಾಯಿತು. ಶ್ರೀ ಸಿ.ಎನ್. ಶ್ರೀನಿವಾಸ್, ಶ್ರೀ ಮಹದೇವ್ ಕಾಳೆ, ಶ್ರೀ ತಿಪ್ಪೇಶ್, ಶ್ರೀ ಬಂಡಿ ರಮೇಶ್ ಇವೆಲ್ಲವೂ ಕೂಡ ವೈಯಕ್ತಿಕ ಕಾರಣಗಳಿಂದಾಗಿ ಕೊಲೆಯಾಗಿವೆ. ಬಹಳಷ್ಟು ವರ್ಷಗಳಿಂದ ಅವರವರಿಗೆ ಆಗದೇ ಇರತಕ್ಕಂತಹದ್ದರಿಂದ ಈ ಕೊಲೆಗಳಾಗಿವೆ.

ಶ್ರೀ ಯೋಗಿಶ್‌ಗೌಡ ಎಂಬುವವರು ಜಮೀನು ವಿಚಾರದಲ್ಲಿ ಕೊಲೆಯಾಗಿದ್ದಾರೆಂದು ಎಲ್ಲರಿಗೂ ಗೊತ್ತು, ಆ ನಂತರ ಅದರಲ್ಲಿ ನಮ್ಮ ಪಕ್ಷದ ಮಂತ್ರಿಗಳ ವಿರುದ್ಧ ಕೂಡ ಆಪಾದನೆ ಮಾಡಿದರು. ಈ 14 ಪ್ರಕರಣಗಳಲ್ಲಿಯೂ ಕೂಡ ಹಿಂದೂಗಳು ಹಿಂದೂಗಳನ್ನೇ ಹೊಡೆದುಹಾಕಿದ್ದಾರೆ. ಒಂದು ಪ್ರಕರಣ ಬಿಟ್ಟು ಇಷ್ಟು ಪ್ರಕರಣಗಳಲ್ಲಿಯೂ ಕೂಡ ಚಾರ್ಜ್‌ಶೀಟ್ ಆಗಿದೆ. ಅದರಲ್ಲಿ ಎಲ್ಲಾ ಆರೋಪಿಗಳನ್ನು ಬಂಧಿಸಲಾಗಿದೆ. ಇದರಲ್ಲಿ ಸರ್ಕಾರದವರು ಅಪರಾಧಿಗಳನ್ನು ಹೇಗೆ ಬಿಟ್ಟು ಬಿಡುತ್ತಾರೆಂದು ಹೇಳುತ್ತಾರೆ? ಅಲ್ಲದೇ, ಇವೆಲ್ಲವೂ ಕೂಡ ವೈಯಕ್ತಿಕ ಕಾರಣಗಳು. ಉದಾಹರಣೆಗೆ, ಆತ್ಮಹತ್ಯೆ, ರಸ್ತೆ ಅಪಘಾತ, ಜಮೀನು ಜಗಳ, ರಾಜಕೀಯ ವೈಷಮ್ಯ, ಇವರೆಲ್ಲರೂ ಕೂಡ ಬಿಜೆಪಿ ಕಾರ್ಯಕರ್ತರೆಂದು ನಾನು ಒಪ್ಪಿಕೊಳ್ಳುತ್ತೇನೆ. ಬಿಜೆಪಿ ಕಾರ್ಯಕರ್ತರು ಎಂದು ಒಬ್ಬ ವ್ಯಕ್ತಿ ಸತ್ತ ತಕ್ಷಣ ರಾಜಕೀಯಕ್ಕೆ ಸೇರಿಸಬಹುದೇ? ಈಗ ಶ್ರೀ ಪರೇಶ್ ಮೇಸ್ತ ಎಂಬ 19 ವರ್ಷದ ಹುಡುಗ ಸತ್ತು ಹೋಗಿದ್ದಾನೆ. ಅಲ್ಲಿಗೆ ಪಕ್ಷದ ಮುಖಂಡರು ಎಲ್ಲಾ ಹೋಗಿ ಭಾಷಣ ಮಾಡುತ್ತಾರೆ. ನಮ್ಮ ಪಕ್ಷದ ಕಾರ್ಯಕರ್ತರನ್ನು ಸಾಯಿಸಿಬಿಟ್ಟಿದ್ದಾರೆಂದು ಹೇಳುತ್ತಾರೆ. ಆದರೆ, ಮೃತನ ತಂದೆ ನಮ್ಮ ಹುಡುಗ ಯಾವ ಪಕ್ಷದ ಜೊತೆಯಲ್ಲಿಯೂ ಕೂಡ affiliation ಇಲ್ಲವೆಂದು ಹೇಳುತ್ತಾರೆ.

(ಮುಂದುವರೆದಿದೆ...)

(51) 07.02.2018 1.20 ವೈಎಲ್-ಎಚಿಡಿ

ಶ್ರೀ ರಾಮಲಿಂಗಾ ರೆಡ್ಡಿ(ಮುಂದು):-

ಎಲ್ಲಾ ಪ್ರಕರಣಗಳನ್ನು ನೋಡಿದಾಗ ಒಂದೆರಡು ಪ್ರಕರಣಗಳಲ್ಲಿ Charge Sheet ಹಾಕದೇ ಇರುವುದನ್ನು ಬಿಟ್ಟರೆ, ಶ್ರೀ ಸಂತೋಷ್ ಮತ್ತು ಇನ್ನೊಬ್ಬ ವ್ಯಕ್ತಿಯ ಇತ್ತೀಚಿನ ಪ್ರಕರಣಗಳಲ್ಲಿ ಈಗಾಗಲೇ ದೋಷಾರೋಪಣಾ ಪಟ್ಟಿ ಜಾರಿಗೊಳಿಸಿ, ಬಂಧಿಸಿ ಜೈಲಿಗೂ ಕಳುಹಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಹೊರಗೂ ಬಂದಿರಬಹುದು. ಆ ಪ್ರಶ್ನೆ ಬೇರೆ. ಎರಡೂ ಕೈ ಹೊಡೆದಾಗ ಮಾತ್ರ ಚಪ್ಪಾಳೆ ಆಗುತ್ತದೆ. ಒಂದೇ ಕೈಯಲ್ಲಿ ಚಪ್ಪಾಳೆ ಹೊಡೆಯುವುದಕ್ಕೆ ಆಗುವುದಿಲ್ಲ. ಕಾಂಗ್ರೆಸ್ ಸರ್ಕಾರ PFI (Popular Front of India), SDPI (Social Democratic Party of India)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂತಾದವುಗಳಿಗೆ, ಬೆಂಬಲ ನೀಡುತ್ತಾರೆ ಎಂದು ನಮ್ಮ ಮೇಲೆ ಆಪಾದನೆ ಮಾಡುತ್ತಿರುತ್ತಾರೆ. PFI ಎಂಬ ಒಂದು ಪಕ್ಷ ಇತ್ತು. ಆ ಪಕ್ಷವನ್ನು ನಿಷೇಧಿಸಿದ್ದರು. ಈ ಎಲ್ಲಾ activities 15 ವರ್ಷಗಳಿಂದ ನಡೆಯುತ್ತಿದೆ. ಬೇರೆ ಸರ್ಕಾರ ಇದ್ದಾಗ ಸಹ ಈ ಚಟುವಟಿಕೆಗಳು ನಡೆಯುತ್ತಿತ್ತು. ವಿರೋಧ ಪಕ್ಷದ ಸದಸ್ಯರುಗಳೇ ಇದನ್ನು ಬಹಿಷ್ಕರಿಸಬಹುದಾಗಿತ್ತು ಅಥವಾ ನಿಷೇಧಿಸಬಹುದಾಗಿತ್ತು. ಆದರೆ 5 ವರ್ಷದಿಂದ ಆ ರೀತಿ ಮಾಡಲಿಲ್ಲ. ಏಕೆಂದರೆ ವಿರೋಧ ಪಕ್ಷದ ಸದಸ್ಯರುಗಳು ಕಾಂಗ್ರೆಸ್ ಪಕ್ಷಕ್ಕೆ ಬರುವ ಮತವನ್ನು ವಿಂಗಡಿಸುತ್ತಾರೆ ಎಂದು ಅವರುಗಳನ್ನು ಬೆಳೆಸಿಕೊಂಡೇ ಬಂದಿದ್ದಾರೆ. ಬಿಜೆಪಿ ಸರ್ಕಾರ 5 ವರ್ಷ ಅಧಿಕಾರದಲ್ಲಿದ್ದಾಗ ಏತಕ್ಕಾಗಿ ನಿಷೇಧಿಸಲಿಲ್ಲ? ಆ ಸಂದರ್ಭದಲ್ಲಿ ಸಹ ಎಲ್ಲಾ ರೀತಿಯ ಚಟುವಟಿಕೆಗಳು ಇದ್ದವು. ಆಗ ನಿಷೇಧಿಸಲಿಲ್ಲ. ಏಕೆಂದರೆ ಕಾಂಗ್ರೆಸ್ ಪಕ್ಷಕ್ಕೆ ಬರುವಂತಹ ಮತಗಳು ಉಳಿಯುತ್ತದೆ ಎಂದು ಬೆಳೆಸಿಕೊಂಡೇ ಬಂದಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಈಗ ಸಹ ನಮ್ಮ ಅಗ್ರಹ ಹಾಗೆ ಇದೆ. ಅವರುಗಳನ್ನು ತಲೆ ಎತ್ತಿ ಓಡಾಡುವುದಕ್ಕೆ ಬಿಟ್ಟು, ಇಂದಿನ ಗಲಾಟೆಗೆ ಅವರು ಹೆಚ್ಚು ಸಕ್ರಿಯರಾಗಿದ್ದಾರೆ. ಅವರನ್ನು ಏತಕ್ಕೆ ಸಚಿವರು ಬಿಟ್ಟಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಸಚಿವರು ನಿಂತಿದ್ದಾರೆ ಉತ್ತರ ಕೊಡುತ್ತಾರೆ.

**ಶ್ರೀ ರಾಮಲಿಂಗಾ ರೆಡ್ಡಿ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದೇ ಕೈಯಲ್ಲಿ ಚಪ್ಪಾಳೆ ಹೊಡೆಯುವುದಕ್ಕೆ ಆಗುವುದಿಲ್ಲ. Action and Reaction means; 'for every action, there is an equal and opposite reaction'. ಎಂದಿರುತ್ತದೆ. ಹಿಂದೂ ಜಾಗರಣಾ ವೇದಿಕೆ, ಶ್ರೀರಾಮಸೇನೆ, ಭಜರಂಗ ದಳ, ಪಿ.ಎಫ್.ಐ. ಈ ಪಕ್ಷಗಳ ವತಿಯಿಂದಲೂ ಅಷ್ಟೇ ಕೊಲೆಗಳಾಗಿವೆ. 2013ನೇ ಸಾಲಿನಲ್ಲಿ ನಾಸೀರ್ ಉಸೇನ್ ಸಾಬ್, ಧಾರವಾಡ; ಉಸೇನ್ ಸಾಬ್ ಮದ್ದಲ್, ಹುಬ್ಬಳಿ.

(ಈ ಹಂತದಲ್ಲಿ ವೈಸ್ ಚೇರ್ಮನ್‌ರಾದ ಶ್ರೀ ರಾಮಚಂದ್ರಗೌಡರವರು ಪೀಠವನ್ನು ಅಲಂಕರಿಸಿದರು)

2014ನೇ ಸಾಲಿನಲ್ಲಿ ಇಸ್ಮಾಯಿಲ್ ಸಾಬ್, ಧಾರವಾಡ; ರೋಹನ್ ಸಾಬ್ ಸನ್ನೂಜೀ ಬಾಯಿ, ಅಣ್ಣಿಗೇರಿ. 2015ನೇ ಸಾಲಿನಲ್ಲಿ ಯೂಸುಫ್ ಮಂಡೂರು, ಉಲ್ಲಾಳ; ಸಾಹುಲ್ ಹಮ್ಮಿದ್, ಮಡಿಕೇರಿ. 2016ನೇ ಸಾಲಿನಲ್ಲಿ ಸಫಾಲ್ ಕಲ್ಲಾಪುರ್, ಮಸ್ತಾಕಾಫ್ ಕಫೂರ್; 2017ನೇ ಸಾಲಿನಲ್ಲಿ ಹನಿಫ್ ದೊಡ್ಡನಗುಡಿ, 2017ನೇ ಸಾಲಿನಲ್ಲಿ ಜಲೀಲ್ ಕಾರಪುಡಿ, 2017ನೇ ಸಾಲಿನಲ್ಲಿ ಅಬ್ದುಲ್ ಬಸೀರ್,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಸ್ತಫಾ ನಾಸೀರ್, ಅಶ್ರಫ್ ಬಂಟ್ವಾಳ್ ಒಟ್ಟು 13 ಮಂದಿಗಳನ್ನು ಪಿ.ಎಫ್.ಐ., ಭಜರಂಗ ದಳ, ಹಿಂದೂ ಜಾಗರಣಾ ವೇದಿಕೆ ಈ ಪಕ್ಷಗಳ ವತಿಯಿಂದ ಕೊಲೆಗಳಾಗಿವೆ. ಕಾಂಗ್ರೆಸ್ ಸರ್ಕಾರದವರಿಂದ ಕೊಲೆಯಾಗುತ್ತದೆ ಎಂದು ಹೇಳುತ್ತಾರೆ. ಈ ಪಕ್ಷಗಳ ವತಿಯಿಂದ ಕೊಲೆ ಮಾಡಿದವರು ಯಾರು? ಒಂದೇ ಕಡೆ ಕೊಲೆಯಾಗುತ್ತಿಲ್ಲ. ಯಾವುದೇ ಪ್ರಕರಣದಲ್ಲಿಯೂ ಸಹ ಕಾಂಗ್ರೆಸ್ ಸರ್ಕಾರ ಭಾಗಿಯಾಗಿಲ್ಲ. ಈ ಗಲಾಟೆಗಳಲ್ಲಿ ಕಾಂಗ್ರೆಸ್ ಪಕ್ಷದ involvement ಇಲ್ಲ. ಕಾಂಗ್ರೆಸ್ ಪಕ್ಷಕ್ಕೆ ಸೇರಿದವರನ್ನೇ ಕೊಲೆ ಮಾಡಿದ್ದಾರೆ. ಇದು ಇವರಿಗೂ ಅವರಿಗೂ ಆಗುತ್ತಿರತಕ್ಕಂಥ ಗಲಭೆಗಳು. SDPI (Social Democratic Party of India), PFI (Popular Front of India), ಪಕ್ಷವನ್ನು ನಿಷೇಧಿಸಿ ಎಂದು ಏನು ಹೇಳುತ್ತಾರೆ, ಈಗಾಗಲೇ 13 ಜನರನ್ನು ಕೊಲೆ ಮಾಡಿರುವವರನ್ನು ನಿಷೇಧಿಸಬೇಕಲ್ಲವೇ? ಒಬ್ಬರಿಗೆ ಒಂದು ರೀತಿಯ ನ್ಯಾಯ, ಮತ್ತೊಬ್ಬರಿಗೂ ಇನ್ನೊಂದು ರೀತಿಯ ನ್ಯಾಯವನ್ನು ಒದಗಿಸಿದರೆ ಆಗುತ್ತದೆಯೇ? ನ್ಯಾಯವನ್ನು ಒದಗಿಸಿದ್ದರೆ ಇಬ್ಬರಿಗೂ ಒಂದೇ ರೀತಿ ಮಾಡಬೇಕು. ಇಲ್ಲದಿದ್ದರೆ ಇಬ್ಬರಿಗೂ ಮಾಡಬಾರದು. ಅವರು ಕೊಲೆ ಮಾಡಿದ್ದರೆ ಸರಿ; ಇವರು ಕೊಲೆ ಮಾಡಿದ್ದರೆ ತಪ್ಪಾಗುತ್ತದೆಯೇ? ಮಂಗಳೂರಿನ ಶ್ರೀ ಕೇಶವಶೆಟ್ಟಿ ಎಂಬಾತನನ್ನು ಬಿಜೆಪಿ ಪಕ್ಷದವರೆ ಹೊಡೆದು ಹಾಕುತ್ತಾರೆ. ಶ್ರೀ ಪ್ರತಾಪ್ ಎಂಬಾತನನ್ನು ಹಿಂದೂ ಜಾಗರಣಾ ವೇದಿಕೆಯವರು ಹೊಡೆದು ಹಾಕುತ್ತಾರೆ. ಹಾಗೆಯೇ ಯಾರೋ ಒಬ್ಬ ವ್ಯಕ್ತಿ ಗಡ್ಡ ಬಿಟ್ಟುಕೊಂಡು ಹಸುವನ್ನು ಓಡಿಸಿಕೊಂಡು ಹೋಗುತ್ತಿರುವಾಗ ಆತ ಮುಸ್ಲಿಂ ಜಾತಿಗೆ ಸೇರಿದವನೆಂದು ಹೊಡೆದು ಹಾಕುತ್ತಾರೆ. ಹಿಂದೂ ಜಾತಿಗೆ ಸೇರಿದವನೆಂದು ಗೊತ್ತಾಗುವುದೇ ಇಲ್ಲ. ಹರೀಶ್ ಪೂಜಾರಿ ಮತ್ತು ಪ್ರವೀಣ್ ಪೂಜಾರಿ ಇವರುಗಳನ್ನು ಜಿಹಾದಿಗಳು ಮಾಡಿರುವುದು. ಹರೀಶ್ ಪೂಜಾರಿ ಎಂಬಾತನನ್ನು ಭಜರಂಗ ದಳದವರು ಹೊಡೆದು ಹಾಕುತ್ತಾರೆ. ಮೂಡಿಗೆರೆಯಲ್ಲಿ ದನ್ಯಶ್ರೀ ಎಂಬ ಹುಡುಗಿ ಮುಸ್ಲಿಂ ಯುವಕನ ಜೊತೆ ಮಾತನಾಡುತ್ತಿರುವುದನ್ನು ನೋಡಿ, ಮೂಡಿಗೆರೆಯ ಯುವ ಮೋರ್ಚಾ ಅಧ್ಯಕ್ಷ ನಾಲ್ಕೈದು ಜನರನ್ನು ಕರೆದುಕೊಂಡು ಆಕೆಯ ಮನೆಗೆ ಹೋಗಿ ಹೆದರಿಸುತ್ತಾರೆ. ಇದರಿಂದಾಗಿ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಪರೇಶ್ ಮೆಸ್ತಾ ಎಂಬಾತ ಹೊನ್ನಾವರದಲ್ಲಿ ಸತ್ತಾಗ ಬೆಂಗಳೂರಿನಲ್ಲಿದ್ದವರೆಲ್ಲ ನಮ್ಮ ಪಕ್ಷದ ಕಾರ್ಯಕರ್ತನೆಂದು ಹೊನ್ನಾವರಕ್ಕೆ ಹೋಗಿ ಪ್ರತಿಭಟನೆಯನ್ನು ಮಾಡುತ್ತಾರೆ. ಆದರೆ, ಆ ಪಕ್ಷದ ಕಾರ್ಯಕರ್ತನ್ನೆ ಅಲ್ಲವೆಂದು ಆತನ ತಂದೆ ಹೇಳುತ್ತಾರೆ. ಹಾಗೆಯೇ ಬಡ ಕುಟುಂಬದಲ್ಲಿ ಆಟೋ ಓಡಿಸಿಕೊಂಡು ಜೀವನ ಸಾಗಿಸುತ್ತಿದ್ದ ಶ್ರೀ ಸಂತೋಷ್ ಎಂಬಾತ ತೀರಿಕೊಂಡ. ಆತ ಸತ್ತಿದ್ದು ಕೂಡ ಬಹಳ ದುಃಖವೇ. ಮೂಡಿಗೆರೆಯಲ್ಲಿ ಯುವ ಮೋರ್ಚಾ ಪಕ್ಷದ ಅಧ್ಯಕ್ಷನಿಂದ ಆ ಹುಡುಗಿ ಸಾಯುತ್ತಾಳೆ. ಏತಕ್ಕಾಗಿ ಅಂಥವರನ್ನು ಪ್ರತಿಭಟಿಸುವುದಿಲ್ಲ. ಹಾಗೆಯೇ ಬಿಜಾಪುರದಲ್ಲಿ ದಾನಮ್ಮ ಎಂಬುವವಳು ಸಾಯುತ್ತಾಳೆ. ಆಕೆಯ ಬಗ್ಗೆ ಸಹ ಸಿ.ಓ.ಡಿ. ತನಿಖೆಯಾಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಅತ್ಯಾಚಾರ ಮಾಡಿ, ಕೊಲೆ ಮಾಡಲಾಗಿದೆ ಎಂದು ದೂರು ಬಂದಿದೆ. ತನಿಖೆಯಾದ ಮೇಲೆ ಏನೆಂಬುದು ಗೊತ್ತಾಗುತ್ತದೆ. ಇಂತಹ ಕಡೆಗಳಲ್ಲಿ ಇವರುಗಳ್ಯಾರು ಪ್ರತಿಭಟನೆ ಮಾಡುವುದಿಲ್ಲ. ಏಕೆಂದರೆ, ಅದರಲ್ಲಿ ಸೇರಿರುವವರು ಬೂತ್‌ಮಠ ಸಂಘಟನೆಯಲ್ಲಿರತಕ್ಕಂಥವರು. ಹಾಗೆಯೇ ಇದೇ ಸಂಘಟನೆಗೆ ಸೇರಿದಂತಹ ವಿನಾಯಕ ಬಾಳಿಗ ಎಂಬಾತನನ್ನು ದಕ್ಷಿಣ ಕರ್ನಾಟಕದಲ್ಲಿ ಹೊಡೆದು ಹಾಕಿದರು. ಎರಡೂ ಕೈ ಸೇರಿದರೆ ಮಾತ್ರವೇ ಚಪ್ಪಾಳೆ ಹೊಡೆಯುವುದಕ್ಕಾಗುವುದು. ದಕ್ಷಿಣ ಕನ್ನಡ ಜಿಲ್ಲೆ ಸುಮಾರು 15-20 ವರ್ಷಗಳಿಂದ ಒಂದು ರೀತಿಯಲ್ಲಿ ಭಯೋತ್ಪಾದನಾ ಕಾರ್ಖಾನೆಯಂತಾಗಿದೆ. ನಾನು ಸೆಪ್ಟೆಂಬರ್ ಮಾಹೆಯಲ್ಲಿ ಗೃಹ ಸಚಿವನಾಗಿ ಅಧಿಕಾರಕ್ಕೆ ಬಂದಿರುವುದರಿಂದ ನನಗೆ ಸಿಕ್ಕಿರುವ ಸಮಯ ಬಹಳ ಕಡಿಮೆಯಾಗಿದೆ. ಎರಡೂ ವರ್ಷಕ್ಕೂ ಮೊದಲೆ ನನಗೆ ಈ ಇಲಾಖೆಯನ್ನು ನೀಡಿದ್ದರೆ, ಭಯೋತ್ಪಾದಕ ಕಾರ್ಖಾನೆಗಳೆಲ್ಲವನ್ನೂ ಮುಚ್ಚಿ ಹಾಕುತ್ತಿದ್ದೆ. ಆದರೂ ನಮ್ಮ ಸರ್ಕಾರಕ್ಕೆ ಇನ್ನೂ ಒಂದು ತಿಂಗಳು ಸಮಯ ಇರುವುದರಿಂದ ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ. ಯಾರು ಏನೂ ಹರಿಶ್ಚಂದ್ರ ಅಲ್ಲ. ಈ ಕಡೆಯೂ ಇರುತ್ತಾರೆ. ಆ ಕಡೆಯೂ ಇರುತ್ತಾರೆ. ಆದರೆ, ಕಾಂಗ್ರೆಸ್ ಪಕ್ಷದವರಾದ ನಾವು ಎಲ್ಲಿಯೂ ಸೇರಿಕೊಂಡಿರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ಮೊದಲೆ ನಿಮ್ಮನ್ನು ಗೃಹ ಸಚಿವರಾಗಿ ಮಾಡಿದರೆ ಈ ಸಮಸ್ಯೆಯಾಗುತ್ತಿರಲಿಲ್ಲ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅಪರಾಧಗಳು ಕಡಿಮೆಯಾಗುತ್ತಿತ್ತು.

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಿಡಿ ಮುಂದೆಯೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ ಅಪರಾಧಗಳನ್ನು ತಡೆಹಿಡಿಯುತ್ತಾರೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾ ನಾಯಕರು):-** ಕಾಂಗ್ರೆಸ್ ಪಕ್ಷದವರು ಅಧಿಕಾರಕ್ಕೆ ಬರುತ್ತಾರೆ ಎಂದು ಹೇಳುವುದು ಬೇಡ. ಬರುತ್ತೇವೆ ಎಂದು ಹೇಳಿ.

(ಗೊಂದಲ)

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಗ್ಯಾರಂಟಿ ಬರುತ್ತೇವೆ. ಇಬ್ರಾಹಿಂರವರು ಗ್ಯಾರಂಟಿ ಬರುತ್ತಾರೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಇಬ್ರಾಹಿಂರವರಿಗೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಗ್ಯಾರಂಟಿ ಇಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ವಿಷಯಕ್ಕೆ ಬರುತ್ತೇನೆ. ಸಂತೋಷ್ ಎಂಬಾತ ಕೊಲೆಯಾಗುತ್ತಾನೆ. ಹಾಗೆಯೇ ದೀಪಕ್ ರಾವ್ ಎಂಬಾತ ಸತ್ತಾಗ ಗೃಹ ಸಚಿವರೆ ಬರಬೇಕು ಎಂದು ಹೇಳಿದ್ದರು. ಆಮೇಲೆ ನಾನು ಸಹ ಹೋಗಿದ್ದೆ. ಆ ಪ್ರಶ್ನೆ ಬೇರೆ. ಶ್ರೀ ಸಂತೋಷ್ ಮನೆಗೂ ಸಹ ಚೆಕ್ ಕೊಡುವಂತಹ ಸಂದರ್ಭದಲ್ಲಿ ಹೋಗುತ್ತೇನೆ. ಅದು ಬೇರೆ ವಿಚಾರ. ಶ್ರೀ ಅಬ್ದುಲ್ ಬಶೀರ್ ಸತ್ತಾಗ ಸಹ ನಾನು ಹೋಗಿದ್ದೆ. ಅಲ್ಲಿಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಬರಬೇಕು ಎಂದು ಹೇಳಿದ್ದರು. ಆನಂತರ ಮಾನ್ಯ ಮುಖ್ಯಮಂತ್ರಿಗಳು ಇಬ್ಬರ ಮನೆಗೂ ಹೋಗಿ ಅವರ ಕುಟುಂಬದವರನ್ನು ಮಾತನಾಡಿಸಿಕೊಂಡು ಬಂದರು. ದೀಪಕ್ ರಾವ್ ಮತ್ತು ಅಬ್ದುಲ್ ಬಶೀರ್ ಇಬ್ಬರೂ ಒಂದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಆದರೆ, ಅಬ್ದುಲ್ ಬಶೀರ್ ಎಂಬಾತನನ್ನು ಆಸ್ಪತ್ರೆಗೆ ಸೇರಿದ ರಾತ್ರಿಯೇ ಹೊಡೆದು ಹಾಕಿ ಬಿಡುತ್ತಾರೆ. ದೀಪಕ್ ರಾವ್ ನೋಡುವುದಕ್ಕೆ ಬಿಜೆಪಿ ಮುಖಂಡರು ಹಿಂಡು ಹಿಂಡೇ ಹೋಗುತ್ತಾರೆ. ಐಸಿಯು ನಲ್ಲಿದ ಅಬ್ದುಲ್ ಬಶೀರ್‌ನನ್ನು ನೋಡುವುದಕ್ಕೆ ವರು ಯಾರು ಹೋಗುವುದಿಲ್ಲ. ಆದರೆ, ಬಿಜೆಪಿ ಕಡೆಯವರು ಸತ್ತರೆ ಮಾತ್ರ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಬರಲಿಲ್ಲ, ನೋಡಲಿಲ್ಲವೆಂದು ಹೇಳುತ್ತಾರೆ. ಸೌಜನ್ಯಕ್ಕಾದರೂ ಸಹ ಇವರು ಅಲ್ಲಿ ಹೋಗಿ ನೋಡಬಹುದಾಗಿತ್ತಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೂಡುಬಿದಿರೆಯಲ್ಲಿ ಪ್ರಶಾಂತ್ ಎಂಬಾತ ಕೊಲೆಯಾದಾಗ ಶಾಸಕರಾಗಲೀ, ಮಂತ್ರಿಗಳಾಗಲೀ, ಯಾರಾದರೂ ಹೋಗಿ ನೋಡಿದ್ದಾರೆಯೇ?

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಹೋಗಿ ನೋಡುವುದಕ್ಕೆ ಊರಿಗೆ ಬೆಂಕಿ ಹಾಕಿಸಿ ಬಿಟ್ಟರು. ಅಂಗಡಿಗಳನ್ನು ಬಂದ್ ಮಾಡಿದ್ದರು. ಯಾರಾದರೂ ನೋಡುವುದಕ್ಕೆ ಬಂದರೆ ಹೊಡೆದು ಹಾಕುತ್ತೇವೆ ಎಂದು ಹೇಳಿದರೆ ನಾವು ಹೇಗೆ ಹೋಗಿ ನೋಡುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕೇಳುವ ಪ್ರಶ್ನೆಗೆ ಅವರು ಉತ್ತರವನ್ನು ನೀಡಲಿ. ಕಥೆಯನ್ನು ಹೇಳುವುದಕ್ಕೆ ಹೋಗುವುದು ಬೇಡ.

(ಗೊಂದಲ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ನಾವು ಹೋಗಿ ನೋಡುವುದಕ್ಕೆ ರಕ್ಷಣೆ ಬೇಕಲ್ಲವೇ, ಹೇಗೆ ಹೋಗುತ್ತಾರೆ?

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಹರೀಶ್ ಪೂಜಾರಿ ಕೊಲೆಯಾಯಿತೆಂದು ಐವನ್ ಡಿ'ಸೋಜಾರವರು ಮಂಗಳೂರಿನಿಂದ ಉಡುಪಿಗೆ ಬಂದಿದ್ದಾರೆ. ಉಡುಪಿ ಜಿಲ್ಲೆ ಮಂಗಳೂರಿನ ಹತ್ತಿರವೇ ಇಲ್ಲ. ಮೃತನ ಕುಟುಂಬದವರಿಗೆ 25,000/- ರೂಪಾಯಿಗಳನ್ನು ನೀಡಿ, ಬಿಜೆಪಿಯವರಿಂದ ಇಷ್ಟೆಲ್ಲಾ ಆಯಿತೆಂದು ಕಥೆ ಹೇಳ ಬರುತ್ತಾರೆ. ಅದೇ ರೀತಿ ಪ್ರಶಾಂತ್ ಪೂಜಾರಿಗೆ ತೊಂದರೆಯಾದಾಗ ಅವರೇನಾದರೂ ಹೋಗಿದ್ದಾರೆಯೇ? ಅವರು ಹೇಳುತ್ತಿರುವಾಗ ಅವರಿಗೂ ಸಹ ಒಂದೇ ಮಾನದಂಡವಲ್ಲವೇ?

(ಮುಂದು) . . .

(052)/07.02.2018/1.30/ಎಸ್‌ಕೆ-ಎಂಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಮೂಡಬಿದರೆಯಲ್ಲಿ ಪ್ರಶಾಂತ್ ಪೂಜಾರಿ ಅವರ ಕೊಲೆಯಾದಾಗ ನೀವು ಹೋಗಬೇಕಾಗಿತ್ತು. ಮತ್ತೊಂದು ಕಡೆ ಕೊಲೆಯಾದಾಗ ನಾವು ಹೋಗಬೇಕಾಗಿತ್ತು. ಅದು ಸರಿಯಿದೆ, ನೀವು ಈ ಮಾತು ಏಕೆ ಹೇಳುತ್ತೀರಿ.

**ಶ್ರೀ ಐವನ್ ಡಿ'ಸೋಜಾ**:- ಮಾನ್ಯ ಸಭಾಪತಿಯವರೇ, ನಾವು ಮತ್ತೆ ಹೋಗಿದ್ದೇವೆ.

**(ಗೊಂದಲ)**

**ವೈಸ್ ಛೇರ್ಮನ್**:- ಈ ದುರ್ಘಟನೆ ಏತಕ್ಕೆ ಆಗಿದೆ ಏನು ಎಂಬುದರ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಇಲ್ಲಿ ಯಾರು ಹೋಗಿದ್ದರು ಮತ್ತು ಯಾರು ಬಿಟ್ಟಿದ್ದರು ಎಂಬುದು ಬೇಡ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನೀವು ಕನಿಷ್ಟ ಐವತ್ತು ಸಾವಿರ ರೂಪಾಯಿಗಳನ್ನು ಪರಿಹಾರವಾಗಿ ಕೊಟ್ಟಿದ್ದೀರಿ.

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು)**:- ಮಾನ್ಯ ಸಭಾಪತಿಯವರೆ, ಇದು ಏನಾಗುತ್ತದೆಂದರೆ, ಸರ್ಕಾರ ನಮ್ಮದು ಇದೆ ಎಂದು ಅಲ್ಲ. ಯಾವ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಇಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟನೆಗಳು ಸಂಭವಿಸಿದಾಗ, ಅಲ್ಲಿದ್ದಂತಹ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿಗೆ ಯಾರಾದರೂ ಸಹಜವಾಗಿ ಹೋಗಬೇಕಾಗಿರುವಂತಹದ್ದು ಅವರ ಕರ್ತವ್ಯ ಕೂಡ ಆಗಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುವಾಗ ಎಲ್ಲದಕ್ಕೂ ಅವರು interfere ಆಗುತ್ತಾರೆ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ಸಹಜವಾಗಿ ಅಧಿಕಾರದಲ್ಲಿ ಇರುವಂತಹವರು ಇಂತಹ ಕೆಲಸವನ್ನು ಮಾಡಬೇಕಾಗುತ್ತದೆ. ನೀವು ಹೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ, ನೀವು ಅಲ್ಲಿ ಹೇಳಿದಾಗ, ದೀಪಕ್ ರಾವ್, ಬಷೀರ್ ಒಂದೇ ಆಸ್ಪತ್ರೆಯಲ್ಲಿದ್ದಾಗ ನೀವು ನೋಡುವುದಕ್ಕೆ ಹೋಗಬೇಕಾಗಿತ್ತಲ್ಲ ಎಂದು ನಾನು ಹೇಳಿದ್ದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮ ಮುಖಂಡರು ಅಲ್ಲಿಗೆ ಹೋಗಿದ್ದಾರೆ. ನಿಮ್ಮ ಗಮನಕ್ಕೆ ಇರಲಿ. ಬಷೀರ್‌ನನ್ನು ನೋಡುವುದಕ್ಕೆ ಹೋಗಿದ್ದಾರೆ. ಇವರು ಹೇಳಿದ ರೀತಿಯಲ್ಲಿ ಆಗಿಲ್ಲ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ಜೆಸಿ ನಗರದಲ್ಲಿ ಸಂತೋಷ್ ಎಂಬ ಹುಡುಗನ ಹತ್ಯೆ ಆಗುತ್ತದೆ. ಜೆಸಿ ನಗರದ ಪಕ್ಕದಲ್ಲಿ ಮಾನ್ಯ ಖಾದರ್ ರವರ ಮನೆ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಖಾದರ್‌ರವರ ಮನೆಗೆ ಹೋಗುತ್ತಾರೆ. ಅಲ್ಲಿ minorities ಗೆ ಸಂಬಂಧಿಸಿದಂತೆ ಸಭೆ ಇರುತ್ತದೆ. ಆ ಸಭೆ ಮುಗಿದ ಮೇಲೆ, ಮರು ದಿನ ಮಹಿಳಾ ಲೋಕಸಭಾ ಸದಸ್ಯರಾದ ಶ್ರೀಮತಿ ಶೋಭಾ ಕರಂದ್ಲಾಜೆಯವರು ಮುಖ್ಯಮಂತ್ರಿಗಳು ಖಾದರ್‌ರವರ ಮನೆಗೆ ಹೋಗಿ, ಊಟ ಮಾಡಿ ಸಂತೋಷ್ ಸತ್ತಿದ್ದಕ್ಕೆ ಸಂಭ್ರಮ ಪಡುತ್ತಾರೆಂದು ಒಂದು ಪತ್ರಿಕೆಯಲ್ಲಿ ಮತ್ತು ಇನ್ನೊಂದರಲ್ಲಿ ಮುಖ್ಯಮಂತ್ರಿಗಳು ಥಕ ಥೈ ಎಂದು ಕುಣಿಯುತ್ತಾರೆ ಹಾಗೂ ಮುಖ್ಯ ಮಂತ್ರಿಗಳು ನೃತ್ಯ ಮಾಡುತ್ತಾರೆ ಎಂದು ಹೇಳಿಕೆ ಕೊಡುತ್ತಾರೆ. ಅವರ ಮೇಲೆ ನಿಮ್ಮ ಪಕ್ಷದಲ್ಲಿ control ಇಲ್ಲ ಎಂದು ಅನಿಸುತ್ತದೆ. ವೈಸ್ ಛೇರ್ಮನ್‌ರವರಿಗೂ ಬಹಳ ಪರಿಚಯ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಎಂ.ಪಿ ಎಂದು ಹೇಳಿರುವುದು ಸರಿ ಇದೆ. ನಾನು ಹೇಳುತ್ತೇನೆ. ಒಂದು ನಿಮಿಷ ಇರಿ. ನೀವು ಹೇಳುತ್ತಿರುವುದನ್ನು ನಾವು ಕೇಳುತ್ತಾ ಇರಬೇಕಾ? ಲೋಕಸಭಾ ಸದಸ್ಯರ ಹೆಸರು ಹೇಳದ ಮೇಲೆ ನಾವು ಹೇಳಬೇಕೋ ಬೇಡವೋ.

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ನೀವು ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾಡತನಾಡುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ನೀವು ಯಾರು?

**(ಗೊಂದಲ)**

**ಶ್ರೀ ಸುನೀಲ್ ಸುಬ್ರಮಣಿ:-** ಮಾನ್ಯ ಸಚಿವರನ್ನು ಮಾತನಾಡುವುದಕ್ಕೆ ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ನೀವು ಸಭಾಪತಿಗಳಲ್ಲ.

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ ಬಿಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ. ನಾವು ಅವರ ಮಾತನ್ನು ತಾಳ್ಮೆಯಿಂದ ಕೇಳುತ್ತಿದ್ದೇವೆ. ಲೋಕಸಭಾ ಸದಸ್ಯರಾದ ಕುಮಾರಿ ಶೋಭಾ ಕರಂದ್ಲಾಜೆಯವರ ಬಗ್ಗೆ ಹೇಳುವಾಗ, ನೀವು ಹೇಳದ ಮಾತಿಗೆ ನಮ್ಮ ವಿರೋಧ ಎಂದಲ್ಲ. ಆದರೆ ಅದನ್ನು ಪೂರ್ತಿ ಕೇಳುತ್ತಾ ಇರುವುದಕ್ಕೆ ಆಗುವುದಿಲ್ಲ, ಏಕೆಂದರೆ ಅವರು ನಮ್ಮ ಪಕ್ಷದ ಎಂ.ಪಿ. ಇದ್ದಾರೆ. ನಿಮ್ಮ ಕಡೆಯವರು ಹೇಗೆ ಹೇಳುತ್ತಾರೆಯೋ ಹಾಗೆಯೇ ನಾವೂ ಸಹ ನಮ್ಮ ಕಡೆಯುವರ ಪರವಾಗಿ ಹೇಳುತ್ತೇವೆ. ಎಂ.ಪಿಯವರು ಸಂತೋಷ್ ಮನೆಗೆ ಹೋದಾಗ, ಅವರ ತಾಯಿ ಏನು ಹೇಳುತ್ತಾರೆಂದರೆ, ಇಲ್ಲಿ ನಮಗೆ ಊಟ ಮಾಡುವ ಪರಿಸ್ಥಿತಿ ಇಲ್ಲ, ನನ್ನ ಮಗ ಸತ್ತಿರುವ ವಿಚಾರ ಬೇರೆ. ರೌಡಿಗಳು ಮಾದಕ ದ್ರವ್ಯಗಳನ್ನು ಸೇವನೆ ಮಾಡಿಕೊಂಡು ಬಂದು ಇಡೀ ಊರಿಗೆ ತೊಂದರೆ ಕೊಡುತ್ತಿದ್ದಾರೆ. ಯಾವುದೇ ಒಬ್ಬ ಸಾಮಾನ್ಯ ಮನುಷ್ಯ ರಸ್ತೆಯಲ್ಲಿ ಓಡಾಡುವುದು ಕಷ್ಟವಾಗಿದೆ. ಇಲ್ಲಿ ನೀವು ರಕ್ಷಣೆ ಕೊಡಿ ಎಂದು ಹೇಳುತ್ತಾರೆ. ಸರ್ಕಾರ ಏನು ಮಾಡುತ್ತಿದೆ? ಖಾದರ್ ಮನೆಯಲ್ಲಿ ಊಟ ಮಾಡುತ್ತಿದ್ದೀರಿ. ಮುಖ್ಯಮಂತ್ರಿಗಳು ಏನು ನೋಡುತ್ತಿದ್ದೀರಿ ಎಂದು ಗದರಿಸಿದ್ದಾರೆ. ಇವು ನೊಂದವರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆಗೆ ಹೋದಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಉಂಟಾಗುವ ಕೆಲವು ಭಾವನೆಗಳು. ಅದಕ್ಕೆ ನೀವು ಉತ್ತರ ಕೊಟ್ಟು ಏನು ಹೇಳಬೇಕೆಂದರೆ, ಎಂ.ಪಿ ಯವರು ಹೇಳಿರುವುದನ್ನು ಗಮನಿಸುತ್ತೇವೆ ಮತ್ತು ಸರಿ ಮಾಡುತ್ತೇವೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ತರುತ್ತೇವೆಂದು ಹೇಳುವುದನ್ನು ಬಿಟ್ಟು, ನೀವು ಎಂ.ಪಿಯವರ ಮೇಲೆ ತಪ್ಪು ಹಾಕುತ್ತೀರಲ್ಲವೆ?

**ವೈಸ್ ಛೇರ್ಮನ್**:- ಈಗ ನೀವು ಹೇಳಿದ್ದೀರಲ್ಲ, ಆಯಿತು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮ ನಿರ್ದೇಶಿತರು)**:- ಮಾನ್ಯ ಸಭಾಪತಿಯವರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಹೇಗೆ ಹೇಳುತ್ತಾರೆ ಹಾಗೆ ಮಾನ್ಯ ಗೃಹ ಸಚಿವರು ಹೇಳಲಿ. ಪಾಪ ಅವರು ಪಾಠವನ್ನು ಹೇಳಿಕೊಡುತ್ತಿದ್ದಾರೆ. ಈ ರೀತಿಯಾಗಿ ಮಾತನಾಡಲಿ ಎಂದು ಹೇಳಿಕೊಡುತ್ತಿದ್ದಾರೆ. ಅವರು ಪಾಠ ಹೇಳುವ ಹಾಗೇ ಹೇಳಲಿ.

**(ಗೊಂದಲ)**

**ವೈಸ್ ಛೇರ್ಮನ್**:- ನೀವು clarify ಮಾಡಿದ್ದು ಆಯಿತು. ದಯವಿಟ್ಟು, ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ**:- ಮಾನ್ಯ ಸಭಾಪತಿಯವರೇ, ದಯವಿಟ್ಟು, ಬಿಟ್ಟು ಬಿಡಿ. ಮಾನ್ಯ ಗೃಹ ಸಚಿವರು ಉತ್ತರ ಕೊಡುತ್ತಾರೆ. ಅಲ್ಲಿಯವರೆಗೂ ಮಾತನಾಡುವುದಕ್ಕೆ ಹೋಗಬೇಡಿ.

**(ಗೊಂದಲ)**

**ವೈಸ್ ಛೇರ್ಮನ್**:- ಕೋಟ ಶ್ರೀನಿವಾಸ ಪೂಜಾರಿಯವರೇ, ನೀವು ಅವರಿಗೆ ಕೈ ತೋರಿಸಬೇಡಿ. ನೀವು ಮಾತನಾಡಿ. ದಯವಿಟ್ಟು, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ನೀವು ಯಾರ ಹತ್ತಿರ ಮಾತನಾಡುತ್ತೀರಾ ...

**ಶ್ರೀ ಎಂ.ಆರ್. ಸೀತಾರಾಂ**:- ಮಾನ್ಯ ಪೂಜಾರಿಯವರೇ,...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಪೂಜಾರಿಯವರೇ ನನ್ನ ಅನುಮತಿಯನ್ನು ಪಡೆದು ಮಾತನಾಡಿದ್ದೀರಿ. ಅದನ್ನು clarify ಮಾಡಿದ್ದೀರಿ. ಇದಕ್ಕೆ ಮಂತ್ರಿಗಳು ಉತ್ತರ ಕೊಡುತ್ತಾರೆ. ಅದನ್ನು ಬಿಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದ ಮೇಲೆ ತಾವು ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಗೃಹ ಮಂತ್ರಿಗಳು ಸಮರ್ಥರಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ಪದೇ ಪದೇ interfere ಆಗಬೇಡಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಹೇಳಲೇಬೇಕೆಂದರೆ ಪ್ರತಿಯೊಂದಕ್ಕೂ ನಾವು ಸಹ ಹೇಳಬೇಕಾಗುತ್ತದೆ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ದಯವಿಟ್ಟು, ತಾವು ಅವರಿಗೆ ಹೇಳಿ.

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಗೃಹ ಮಂತ್ರಿಗಳೇ ಎದ್ದು ನಿಂತು ಮಾತನಾಡಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಮಧ್ಯೆ ಪ್ರವೇಶ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶಿತರು):-**ಮಾನ್ಯ ಸಭಾಪತಿಯವರೇ, ಅವರು ನೋಟ್ ಮಾಡಿಕೊಂಡು, clarifications ಇದ್ದರೆ ಆನಂತರ ಕೇಳುವುದಕ್ಕೆ ಹೇಳಿ.

**ವೈಸ್ ಛೇರ್ಮನ್:-** ಆಯಿತು. ನಾನು ಕೇಳುವುದಕ್ಕೆ ಹೇಳಿದ್ದೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ...

**ವೈಸ್ ಛೇರ್ಮನ್:-** ಮಾನ್ಯ ಪೂಜಾರಿಯವರೇ, ನೀವು ನೋಟ್ ಮಾಡಿಕೊಂಡು ಆನಂತರ clarifications ಇದ್ದರೆ ಕೇಳಿ.

**ಶ್ರೀ ಎಂ.ಆರ್. ಸೀತಾರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಮಾತನಾಡಿದಾಗ, ನೀವು ಕೇಳಿ.

**(ಗೊಂದಲ)**

**ವೈಸ್ ಛೇರ್ಮನ್:-** ನೀವು ಕ್ಲಾರಿಫೈ ಮಾಡಿದ್ದೀರಾ. ದಯವಿಟ್ಟು, ಕುಳಿತುಕೊಳ್ಳಿ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಸಂತೋಷ ಮತ್ತು ಇನ್ನೊಬ್ಬ ಹುಡುಗ ಚಿಕ್ಕ ವಯಸ್ಸಿನ ಸ್ನೇಹಿತರು ಹಾಗೂ ಅವರೆಲ್ಲರೂ ಜೊತೆಯಲ್ಲಿ ಬೆಳೆದವರು. ಅವರು ಮೂರು ತಿಂಗಳ ಹಿಂದೆ ಗಲಾಟೆ ಮಾಡಿಕೊಂಡರು. ಆಮೇಲೆ ಇದು Law and Order ಪ್ರಶ್ನೆಯಲ್ಲ. ಗಾಂಜಾ ಕುಡಿಯುವ ವಿಚಾರದಲ್ಲಿ ಇವರಿಗೆ ಜಗಳವಾಯಿತು ಎಂದು ಅವರ ತಾಯಿಯೇ ಹೇಳುತ್ತಾರೆ. ಜೆಸಿ ನಗರ ಮತ್ತು ಶಿವಾಜಿ ನಗರಗಳೆಲ್ಲಾ thickly populated area. ಅಲ್ಲಿಯೂ ಕೂಡ ಎರಡು ಗಲಾಟೆಯನ್ನು ಬಿಟ್ಟರೆ, ಮೂರು-ನಾಲ್ಕು ವರ್ಷಗಳಿಂದ ಯಾವುದೇ ಗಲಾಟೆಯೂ ಕೂಡ ಸಂಭವಿಸಿಲ್ಲ. ಇದು ಹಿಂದೆ ಆಗಿರುವಂಥದ್ದು, ಅದು communal clashes. ಒಂದು ವರ್ಷಕ್ಕೆ ಮುಂಚೆ ಒಂದು ರುದ್ರೇಶ್ ಗಲಾಟೆಯಾಯಿತಲ್ಲ. ಈ ಕೇಸ್ communal clash ಅಲ್ಲವೇ ಅಲ್ಲ. ಅವರವರ ಸ್ನೇಹಿತರೇ ಕಿತ್ತಾಡಿಕೊಂಡಿದ್ದು. ಅವರ ತಾಯಿ ಏನು ಹೇಳುತ್ತಾರೆಂದರೆ, ಈ ಹುಡುಗರಿಗೆ ಕರೆದು ಬೈದು, ಬುದ್ಧಿ ಮಾತು ಹೇಳಿ, ಇನ್ನು ಮುಂದೆ ಚೆನ್ನಾಗಿ ಇರಬೇಕು ಎಂದು ಹೇಳಿ ಕಳುಹಿಸಿದ್ದಾರೆ. ಇದು ಮುಗಿದಂತಹ ವಿಚಾರ. ಬಿಜೆಪಿ ಮುಖಂಡರ ಬಗ್ಗೆ ನಾನೇನು ಟೀಕೆ ಮಾಡಲಲ್ಲ. ಮುಖ್ಯಮಂತ್ರಿಗಳು ಏನು ನೃತ್ಯ ಮಾಡುತ್ತಾರೆ, ಥಕ ಥೈ ಕುಣಿಯುತ್ತಾರೆ, ಸಂಭ್ರಮ ಮಾಡುತ್ತಾರೆ ಎಂದು ನಾನು ಬೇರೆ ಮುಖಂಡರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಹೇಳಲಿಲ್ಲ. ಅವರು ಒಬ್ಬರ ಬಗ್ಗೆ ಮಾತನಾಡಿದಾಗ ಮಾತ್ರ ಆ ರೀತಿ ಹೇಳಿದ್ದೇನೆ. ಆಮೇಲೆ ಮಾನ್ಯ ಈಶ್ವರಪ್ಪನವರು ವಿರೋಧ ಪಕ್ಷದಲ್ಲಿದ್ದಾರೆ. ಇನ್ನೂ ಮಾನ್ಯ ಜಗದೀಶ್ ಶೆಟ್ಟರ್, ಮಾನ್ಯ ಯಡಿಯೂರಪ್ಪನವರು, ಮಾನ್ಯ ಶೋಭಾ ಕರಂದ್ಲಾಜೆಯವರು ಇವರು ಬೇರೆಯವರ ಮನೆಗಳಿಗೆ ಊಟಕ್ಕೆ ಹೋಗುತ್ತಾರಲ್ಲ, ಖಾದರ್‌ರವರ ಮನೆಗೆ ಮಾನ್ಯ ಮುಖ್ಯಮಂತ್ರಿಗಳು ಹೋದ ಹಾಗೇ. ಬೆಂಗಳೂರಿನಲ್ಲಿಯೂ ಹೋಗುತ್ತಾರೆ. ಆಚೆ ಹೋದಾಗಲೂ ಟೂರ್‌ಗೆ ಹೋದಾಗ ಹೋಗುತ್ತಾರೆ. ಅಲ್ಲಿ ಊಟ ಮಾಡಿ ಅವರು Rock and Roll ಮಾಡುತ್ತಾರಾ ಅಥವಾ Disco ಮಾಡುತ್ತಾರಾ? ಒಬ್ಬ ಜವಾಬ್ದಾರಿ ಇರತಕ್ಕಂಥ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನೃತ್ಯ ಮಾಡುತ್ತಾರೆ ಎಂದರೆ ಇವರಿಗೆ ಬಾಯಿಗೇ ಏನು control ಬೇಡವೇ? ನಿಮ್ಮ ಪಕ್ಷದಲ್ಲಿ ಅವರಿಗೆ ಯಾರು ಬಾಯಿಗೆ ಬೀಗ ಹಾಕುವವರಿಲ್ಲವೇ? ಅವರನ್ನು ನೋಡಿದರೆ. . .

**(ಗೊಂದಲ)**

**ವೈಸ್ ಛೇರ್ಮನ್**:- ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಅವರು ಆ ರೀತಿ ಮಾತನಾಡಿಲ್ಲವೆಂದು ಹೇಳಿ. ತಾವು ಹೇಳಿದ್ದು ಸತ್ಯಕ್ಕೆ ದೂರವಾದುದು ಎಂದು ಹೇಳಿ.

**ಶ್ರೀ ಕೆ.ಅಬ್ದುಲ್ ಜಬ್ಬಾರ್**:- ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ಥಕ ಥೈ ಕುಣಿಯುತ್ತಿರುವುದು ನೀವು. ಇದು ಯಕ್ಷಗಾನವಲ್ಲ.

**(ಗೊಂದಲ)**

(ಮುಂದು...)

**ವೈಸ್ ಛೇರ್ಮನ್**: ಆ ರೀತಿ ಮಾತನಾಡಿಲ್ಲವೆಂದು ಹೇಳಿ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಅವರು ಹೇಳಿದ್ದು ಸತ್ಯಕ್ಕೆ ದೂರವಾದುದು ಎಂದು ಹೇಳಿ ಅಷ್ಟೆ. ಈಗ ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:- ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರೇ, ತಾವು ಇವೆಲ್ಲಾ ಮಾತನಾಡಬೇಡಿ. ತಾಕತ್ತು ಎಲ್ಲರಿಗೂ ಇದೆ, ಏಕೆ ಆ ರೀತಿ ಮಾತನಾಡುತ್ತೀರಿ. ನೀವು ಪದೇ ಪದೇ interfere ಮಾಡುತ್ತಿದ್ದೀರಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಅವರು ಪದೇ ಪದೇ interfere ಮಾಡುತ್ತಿದ್ದಾರೆ. ತಾವು ಅವರನ್ನು ಕಂಟ್ರೋಲ್ ಮಾಡಿ. ಮಾನ್ಯ ಗೃಹ ಸಚಿವರು ಮಾತನಾಡುತ್ತಾರೆ. ಮಾನ್ಯ ಗೃಹಸಚಿವರು ಮಾತನಾಡುವಾಗ ಏಕೆ ಅವರು interfere ಮಾಡುತ್ತಿದ್ದಾರೆ. ಅವರನ್ನು ಮೊದಲು ಕಂಟ್ರೋಲ್ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬರೀ ನನ್ನನ್ನು ನಿಯಂತ್ರಣ ಮಾಡುವುದಲ್ಲ. ಸಭಾ ನಾಯಕರು ಇಡೀ ಸಭೆಯನ್ನು ನಿಯಂತ್ರಣ ಮಾಡಬೇಕು. ನೀವು ಅವರಿಗೆ ಮೊದಲು ಹೇಳಿ.

**(ಗೊಂದಲ)**

**ವೈಸ್‌ಛೇರ್ಮನ್:-** ಮಂತ್ರಿಗಳು ಹೇಳಿದ್ದು, ಸತ್ಯಕ್ಕೆ ದೂರವಾದುದು ಎಂದು ಹೇಳಿ.

**(ಗೊಂದಲ)**

ನೀವು ಎದ್ದು ನಿಂತರೆ ಅವರು ಹೇಗೆ ಮಾತನಾಡುತ್ತಾರೆ? ಮಾನ್ಯ ಗೃಹಸಚಿವರೇ, ತಾವು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸಭೆ ನಡೆಸಬೇಕಾದಂತಹ ಆಡಳಿತ ಪಕ್ಷದವರು ಈ ರೀತಿ ಆರೋಪ ಮಾಡುತ್ತಿದ್ದರೆ ಏನು ಅರ್ಥ?

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು (ಶ್ರೀ ಕೋಟ ಶ್ರೀನಿವಾಸ ಪೂಜಾರಿ) ದಯವಿಟ್ಟು interfere ಮಾಡಬೇಡಿ. ಮಾನ್ಯ ಗೃಹ ಸಚಿವರು ಅವರ ಮಾತನ್ನು ಮುಗಿಸುತ್ತಾರೆ.

**(ಗೊಂದಲ)**

**ವೈಸ್‌ಛೇರ್ಮನ್:-** ಮಾನ್ಯ ಸದಸ್ಯರುಗಳು ಮಾನ್ಯ ಗೃಹ ಸಚಿವರು ಮಾತನಾಡುವುದಕ್ಕೆ ಬಿಡಿ. ತಾವು ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ಸಭೆ ನಡೆಯಬೇಕೋ ಬೇಡವೋ? ಮಾನ್ಯ ಗೃಹ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಶಕ್ತಿಯುತರಿದ್ದಾರೆ, ಉತ್ತರ ಕೊಡುತ್ತಾರೆ. ತಾವುಗಳು ದಯವಿಟ್ಟು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು):-** ತಾವು (ಶ್ರೀ ಕೋಟ ಶ್ರೀನಿವಾಸ ಪೂಜಾರಿ) ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಗೃಹಮಂತ್ರಿಗಳು ಮಾತನಾಡಿ ಮುಗಿಸುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ವೈಸ್‌ಛೇರ್ಮನ್:-** ಮಾನ್ಯ ಗೃಹಮಂತ್ರಿಗಳೇ, ತಮಗೆ ಇನ್ನು ಎಷ್ಟು ನಿಮಿಷ ಸಮಯಾವಕಾಶ ಬೇಕು.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಇನ್ನು ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್‌ಛೇರ್ಮನ್:-** ಆಯಿತು, ತಾವು ಮಾತನಾಡಿ ಮುಗಿಸಿ.

**(ಗೊಂದಲ)**

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವನ್ನು ನಾನು ಹೇಳಲೇಬೇಕಾಗುತ್ತದೆ. ಶ್ರೀ ಸಂತೋಷ್‌ರವರ ಕೊಲೆ ಪ್ರಕರಣ ನಡೆಯಿತು. ಆಮೇಲೆ ಪೋಲೀಸ್ ಆಯುಕ್ತರು ಆ ಘಟನೆ ನಡೆದ ಬಗ್ಗೆ ಏನೆಲ್ಲಾ ಆಗಿದೆ, ಅದನ್ನು brief ಮಾಡಿದರು. ಆಗ ನಮ್ಮ ಮಾಧ್ಯಮ ಮಿತ್ರರೆಲ್ಲಾ ನಮ್ಮ ಕಛೇರಿ ಬಂದಾಗ ನಾನು ಅವರಿಗೆ brief ಮಾಡುತ್ತಿದ್ದೆ. Brief ಮಾಡಿದಾಗ, ಸ್ಕ್ರೂಡ್ರೈವರ್‌ನಲ್ಲಿ ಚುಚ್ಚಿ ಆ ಹುಡುಗ ಸತ್ತು ಹೋಗಿದ್ದಾನೆ. ಅದೊಂದು ಗಾಯ ಆಗಿರುವುದು ಬಿಟ್ಟರೆ, ಬೇರೆ ಏನೂ ಇಲ್ಲ. ಕಾಲಿಗೆ ಸ್ಕ್ರೂಡ್ರೈವರ್ ಚುಚ್ಚಿದ್ದಾನೆ. ಅದು bleeding ಆಗಿ ಆ ಹುಡುಗ ಸತ್ತು ಹೋದನು ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ನಿನ್ನೆ ದಿವಸ ಮಾನ್ಯ ಕೆ.ಎಸ್.ಈಶ್ವರಪ್ಪನವರು ಇದರ ಬಗ್ಗೆ ಭಾಷಣ ಮಾಡಿದರು. ಶ್ರೀ ರಾಮಲಿಂಗಾ ರೆಡ್ಡಿಯವರ ಮಗನಿಗೆ, ಮಾನ್ಯ ಸಿದ್ದರಾಮಯ್ಯನವರ ಮಗನಿಗೆ ಆ ರೀತಿ ಸ್ಕ್ರೂಡ್ರೈವರ್‌ನಲ್ಲಿ ಚುಚ್ಚಿಬಿಟ್ಟಿದ್ದರೆ, ಅವರಿಗೆ ಏನು ಅನ್ನಿಸುತ್ತಿತ್ತು ಎಂದು ಹೇಳಿದರು. ಆಮೇಲೆ ಯಾರಾದರೂ ಉದ್ದೇಶಪೂರ್ವಕವಾಗಿ ಸಾಯಿಸುವಂತಹವರನ್ನು ತಲೆಗೆ ಹೊಡೆಯುತ್ತಾರೆ, ಎದೆಗೆ ಹೊಡೆಯುತ್ತಾರೆ ಮತ್ತು ಹೊಟ್ಟೆಗೆ ಹೊಡೆಯುತ್ತಾರೆ. ಕಾಲಿಗೆ ಚುಚ್ಚಿದ್ದು ಎಂದಷ್ಟೇ ನಾನು ಹೇಳಿದೆನು. ಆಮೇಲೆ ಆ ಹುಡುಗ ಸತ್ತು ಹೋಗಿದ್ದಾನೆ. ಕಾಲಿಗೆ ಹೊಡೆದದ್ದರಿಂದ ಸತ್ತನೋ, ಅಥವಾ ಕತ್ತು ಹಿಡಿದುಕೊಂಡು ಸಾಯಿಸುತ್ತಾರೋ ಅಥವಾ ನೇಣು ಹಾಕುತ್ತಾರೋ ಅಥವಾ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡುತ್ತಾರೋ ಸಾವು ಸಾವೇ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಯಾರು ಕೊಲೆ ಮಾಡಿದ್ದಾರೋ ಅವರಿಗೆ ಶಿಕ್ಷೆಯೂ ಕೂಡ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿದೆ, ಅವರನ್ನು ಗಲ್ಲಿಗೆ ಹಾಕಲಿ. ಇಲ್ಲವೇ ಅವರಿಗೆ ಜೀವಾವಧಿ ಶಿಕ್ಷೆ ಕೊಡಲಿ. ಸರ್ಕಾರ ಕೂಡ ಕಾನೂನು ಇಲಾಖೆಯಿಂದ ಅದಕ್ಕೆ ಸಪೋರ್ಟ್ ಮಾಡುತ್ತದೆ. ಅದನ್ನು ಮಾಡಲೇಬೇಕಾಗುತ್ತದೆ. ಇಷ್ಟು ಆಯಿತು ಮಾನ್ಯ ಸಭಾಪತಿಯವರೆ. ಮತ್ತೆ ಈಗ ಕಾನೂನು ವ್ಯವಸ್ಥೆ ರಾಜ್ಯದಲ್ಲಿ ಚೆನ್ನಾಗಿದೆ. ಮತ್ತೆ ಇವರು ಹೇಳುವಂತಹ ರೀತಿಯಲ್ಲಿ ಯಾವುದೂ ಇಲ್ಲ. ಮತ್ತೆ ಇವರು PFI (Popular Front of India), SDPI (Social Democratic Party of India) ban ಮಾಡಿ ಎಂದು ಹೇಳುತ್ತಿದ್ದಾರೆ. ಅವರದ್ದು 23 ಪ್ರಕರಣಗಳಿವೆ ಎಂದು ಹೇಳುತ್ತಿದ್ದಾರೆ. ಆದರೆ, ಇತ್ತೀಚೆಗೆ ಆಗಿರುವುದನ್ನು ಸೇರಿಸಿದರೆ, ಅದನ್ನು ಸುಮಾರು 24 ಪ್ರಕರಣ ಅಥವಾ 25 ಪ್ರಕರಣವಾಗಿದೆ. ಅದೇ ರೀತಿ ಸಂಘಪರಿವಾರಕ್ಕೆ ಸಂಬಂಧಪಟ್ಟವರು ಕೂಡ ಸುಮಾರು 20 ಕೊಲೆಗಳಿಗೂ ಹೆಚ್ಚು ಪ್ರಕರಣಗಳಲ್ಲಿ ಬಾಗಿಯಾಗಿದ್ದಾರೆ. ಮಾಡಿದರೆ ಇಬ್ಬರಿಗೂ ಕೂಡ ಬ್ಯಾನ್ ಮಾಡಬೇಕು. Recommend ಮಾಡಿದರೆ ಇಬ್ಬರಿಗೂ ಕೂಡ ಬ್ಯಾನ್ ಮಾಡುತ್ತೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ಕುಟ್ಟಿ ಬೆಂಬಲ ವ್ಯಕ್ತಪಡಿಸಿದರು.)**

ಆಮೇಲೆ, ಯಾರು ಅಪರಾಧ ಮಾಡಿದರೂ ಅದು ತಪ್ಪೆ. ಸಂಘಪರಿವಾರದವರು ಇರಬಹುದು ಅಥವಾ ಕಾಂಗ್ರೆಸ್‌ನವರು ಇರಬಹುದು ಅಥವಾ ಜೆ.ಡಿ(ಎಸ್)ನವರು ಇರಬಹುದು ಅಥವಾ PFI, SDPI ಇರಬಹುದು ಯಾರು ಅಪರಾಧ ಮಾಡಿದರೂ ಸಹ ಅದು ತಪ್ಪು. ನಾನು ಯಾರನ್ನೂ defend ಮಾಡಿಕೊಳ್ಳುವುದಿಲ್ಲ. ನಮ್ಮ ಕಾಂಗ್ರೆಸ್‌ನವರು ಅಪರಾಧ ಮಾಡಿದರೂ ಕೂಡ ಅವರನ್ನು ಮೊದಲು ಬಂಧಿಸಿ ಎಂದು ಹೇಳುವವನೇ ನಾನು.

**ವೈಸ್‌ಛೇರ್ಮನ್**:- ಸಾರ್ವಜನಿಕರು ಅಪರಾಧ ಮಾಡಿದರೂ ಕೂಡ ಅದು ತಪ್ಪು.

**ಶ್ರೀ ರಾಮಲಿಂಗಾರೆಡ್ಡಿ**:- ಮಾನ್ಯ ಸಭಾಪತಿಯವರೇ, ಈಗ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ. ತಾವೂ ಕೂಡ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಮಾನ್ಯ ವಿರೋಧಪಕ್ಷದ ನಾಯಕರೂ ಕೂಡ ನಾನು ಮಾತನಾಡುವಂತಹ ಸಂದರ್ಭದಲ್ಲಿ ಹಲವಾರು ಸಲಹೆ ಮತ್ತು ಸೂಚನೆಗಳನ್ನು ರಾಜ್ಯದ ಹಿತದೃಷ್ಟಿಯಿಂದ ಕೊಟ್ಟಿದ್ದಾರೆ. ಅದನ್ನು ಕೂಡ ನಾವು ಸ್ವೀಕಾರ ಮಾಡುತ್ತೇವೆ. ಕಾನೂನು ಸುವ್ಯವಸ್ಥೆಗೆ ಯಾವುದೇ ಭಾದಕ ಇಲ್ಲ. ಮತ್ತೆ ನಾನು ಹೋಲಿಕೆ ಮಾಡಿದ್ದೇನೆ. ಹಿಂದಿನ ಬಿಜೆಪಿ ಸರ್ಕಾರಕ್ಕೂ ಮತ್ತು ಈ ಸರ್ಕಾರಕ್ಕೂ ಆಡಳಿತದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಮಹಿಳೆಯರ ಬಗ್ಗೆ ರಾಷ್ಟ್ರಮಟ್ಟದಲ್ಲಿ ನಮ್ಮದು 19ನೇ ಸ್ಥಾನದಲ್ಲಿದ್ದು, ಬಹಳ ಕೆಳಗಿನ ಸ್ಥಾನದಲ್ಲಿದೆ. ಬೇರೆ ರಾಜ್ಯಗಳಿಗೆ ನಾವು ಹೋಲಿಕೆ ಮಾಡಿದರೆ comparison ಇಲ್ಲ. ನಮ್ಮ ರಾಜ್ಯದ್ದು ಅಷ್ಟು ಕಡಿಮೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆ. ಆದರೆ, ಕೆಲವು ಕೊಲೆ ಪ್ರಕರಣಗಳು ಮತ್ತು ಅತ್ಯಾಚಾರ ಪ್ರಕರಣಗಳಲ್ಲಿ ಮಾತ್ರ ಇದೆ. ಈ ಎರಡು ಪ್ರಕರಣಗಳನ್ನು ಹೊರತುಪಡಿಸಿದರೆ, ಉಳಿದಿರತಕ್ಕಂಥದ್ದನ್ನು ರಾಜ್ಯ ಮಟ್ಟದಲ್ಲಿ ಬಿಜೆಪಿ ಸರ್ಕಾರಕ್ಕೆ ಹೋಲಿಕೆ ಮಾಡಿದರೆ, general ಆಗಿ ರಾಷ್ಟ್ರಮಟ್ಟದಲ್ಲಿ ಮಹಿಳೆಯರಿಗೆ ಹೋಲಿಕೆ ಮಾಡಿದಾಗ, ನಮ್ಮದು ಬಹಳ ಕಡಿಮೆ ಇದೆ. ಇದು NCRB (National Crime Records Bureau) ನವರು ವರದಿ ಕೊಟ್ಟಿರತಕ್ಕಂಥದ್ದು. ಇದನ್ನು ನಾನು ತಯಾರು ಮಾಡಿರತಕ್ಕಂಥದ್ದಲ್ಲ. ಇದರ ಪ್ರಕಾರ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಎಲ್ಲರಿಗೂ ಧನ್ಯವಾಧಗಳು.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ಕುಟ್ಟಿ ಬೆಂಬಲ ವ್ಯಕ್ತಪಡಿಸಿದರು.)**

**ವೈಸ್‌ಛೇರ್ಮನ್**:- ನೀವು clarifications ಮಾತ್ರ ಕೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಹೌದು. ತಾವೆಲ್ಲರೂ ಮಾತನಾಡತಕ್ಕಂತಹ ಸಂದರ್ಭದಲ್ಲಿ ಮಾನ್ಯ ಗೃಹ ಮಂತ್ರಿಗಳು ಇಲ್ಲಿ ಇರುವುದಕ್ಕೆ ಆಗಲಿಲ್ಲ. ಅಲ್ಲಿ ಇದ್ದರು ಎಂದು ಹೇಳಿದೆ. ಕನಿಷ್ಟಪಕ್ಷ ಸಂಬಂಧಪಟ್ಟ ಅಧಿಕಾರಿಗಳು ಇರಬೇಕಾಗಿತ್ತು. ಆದರೆ ಅವರೂ ಸಹ ಇರಲಿಲ್ಲ. ಅದು ಹೋಗಲಿ, ನಾವೆಲ್ಲಾ ಮಾತನಾಡಿದ್ದನ್ನು ತರಿಸಿಕೊಂಡಾದರೂ ಕೂಡ ಸ್ವಲ್ಪ ಓದಿ, ಅದಕ್ಕೆ ಉತ್ತರ ಕೊಟ್ಟಿದ್ದರೆ, ನಮಗೆ ಸ್ವಲ್ಪ ಸಮಾಧಾನವಾದರೂ ಆಗುವುದು. ನಾವು ಯಾವ್ಯಾವ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ, ಅದರಲ್ಲಿ ಕೆಲವು ಅಂಶಗಳಿಗೆ ಮಾತ್ರ ಉತ್ತರ ಕೊಟ್ಟಿದ್ದಾರೆ. ಆದರೆ, ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವಂತಹ ಅಂಶಗಳ ಬಗ್ಗೆ, communal ವಿಚಾರಗಳು ಬಂದಂತಹ ಸಂದರ್ಭದಲ್ಲಿ, ಕರ್ನಾಟಕ ರಾಜ್ಯದಲ್ಲಿ ಒಂದು ರೀತಿಯ ರಾಷ್ಟ್ರ ಭಕ್ತರದ್ದು ಮತ್ತು ರಾಷ್ಟ್ರದ್ರೋಹಿಗಳದ್ದು ನಡೆಯುತ್ತಿರುವಂತಹ ಸಂದರ್ಭದಲ್ಲಿ, ಇದು ರಾಜಕೀಯಕ್ಕೆ ತಿರುಗಿಬಿಟ್ಟಿದೆ. ನಾನು ಆ ವಿಷಯದ ಬಗ್ಗೆ ಆಮೇಲೆ ಮಾತನಾಡುತ್ತೇನೆ.

ಆದರೆ, ಕರ್ನಾಟಕ ರಾಜ್ಯದಲ್ಲಿ ಹೆಣ್ಣು ಮಕ್ಕಳ ಮೇಲೆ ಆಗುತ್ತಿರುವಂತಹ ಅತ್ಯಾಚಾರಗಳ ಬಗ್ಗೆ ಮಾನ್ಯ ಗೃಹ ಸಚಿವರಿಗೆ ನಾವು ಸಾಕಷ್ಟು ಪ್ರಸ್ತಾಪ ಮಾಡಿದ್ದೇವೆ. ವಿಶೇಷವಾಗಿ ಮಾನ್ಯ ಉಗ್ರಪ್ಪನವರು ಮಧ್ಯಂತರ ವರದಿ ಕೊಟ್ಟಿದ್ದಾರೆ. ಆ ವರದಿ ಬಗ್ಗೆ ನಿಮ್ಮ ಬಳಿ ಏನಿದೆ ಎನ್ನುವುದರ ಬಗ್ಗೆ ಕೂಡ ಉತ್ತರದಲ್ಲಿ ಪ್ರಸ್ತಾಪವೇ ಮಾಡಲಿಲ್ಲವೆಂದರೆ, ಆ ಸಮಿತಿ ಬಗ್ಗೆ ಈ ಸರ್ಕಾರ ಎಷ್ಟರಮಟ್ಟಿಗೆ ಅದಕ್ಕೆ ಗೌರವ ಕೊಡುತ್ತಿದೆ? ಆ ವರದಿ ಬಗ್ಗೆ ಇವರಿಗೆ ಎಷ್ಟರಮಟ್ಟಿಗೆ ಆಸಕ್ತಿ ಇದೆ? ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಆಗುತ್ತಿರುವ ಬಗ್ಗೆ ಪರಿಹಾರ ಮಾಡುವ ನಿಟ್ಟಿನಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಆಸಕ್ತಿ ಹೊಂದಿದೆ? ಇದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ನೋಡಿದಾಗ, ಕರ್ನಾಟಕ ರಾಜ್ಯದಲ್ಲಿ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆಯುತ್ತಿರುವುದರ ಬಗ್ಗೆ ಈ ಸರ್ಕಾರಕ್ಕೆ ಗುಲಗಂಜಿ ತೂಕ ಕೂಡ ಆ ಬಗ್ಗೆ ಗಮನ ಹರಿಸುವುದಕ್ಕೆ ಆಸಕ್ತಿ ಇಲ್ಲವೆಂದು ನಾನು ತುಂಬಾ ನೊಂದುಕೊಂಡು ಹೇಳುತ್ತೇನೆ. ಈಗಲೂ ಕೂಡ ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. 2015ರಲ್ಲಿ ಮಾನ್ಯ ಉಗ್ರಪ್ಪನವರು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ. ಅವರು ಅದನ್ನು ಕೊಟ್ಟು ಸುಮಾರು ಎರಡು-ಮೂರು ವರ್ಷವಾಗುತ್ತಾ ಬಂದಿದೆ. ಆ ವರದಿ ಎಲ್ಲಿದೆ ಎನ್ನುವುದಾದರೂ ತಮಗೆ ಗೊತ್ತಿದೆಯೇ? ನಾನು ಮಾನ್ಯ ಗೃಹ ಸಚಿವರಿಗೆ ಒಂದು clarification ಕೇಳುತ್ತಿದ್ದೇನೆ. ಅದು ನಿಮ್ಮ ಇಲಾಖೆಯಲ್ಲಿ ಇದೆಯೋ ಅಥವಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಇದೆಯೋ? ಅವರು ಕೊಟ್ಟಂತಹ ಮಧ್ಯಂತರ ವರದಿ ಬಗ್ಗೆ ಏನಾದರೂ ಗಮನಹರಿಸಿ, ಅವರೇನು ಅದಕ್ಕೇನು ಪರಿಹಾರಗಳಿವೆ ಎಂದು ಹೇಳಿದ್ದಾರಲ್ಲಾ, ಅದನ್ನೇನಾದರೂ ಮಾಡುವಂತಹ ಪ್ರಯತ್ನವನ್ನು ನೀವು ಮಾಡುತ್ತೀರಾ? ಅದಕ್ಕೆ ಪರಿಹಾರವೇನು ಎನ್ನುವುದನ್ನಾದರೂ ಕೂಡ ನೀವು ಇಲ್ಲಿ ಹೇಳಬಹುದಲ್ಲವೇ? ಇದನ್ನು ಮೊದಲನೆಯದಾಗಿ ನಾನು ನಿಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಎರಡನೆಯದಾಗಿ, ನೀವು ಗೃಹ ಸಚಿವರಾಗಿ ಕೊಟ್ಟಂತಹ ಉತ್ತರ ಏನಿದೆ, ನಾನು ಮುಂಚೆಯೇ ಗೃಹಮಂತ್ರಿಗಳಾಗಿದಿದ್ದರೆ, ನಿಜಕ್ಕೂ ಕರ್ನಾಟಕ ರಾಜ್ಯದಲ್ಲಿ ಸರಿಯಾದಂತಹ ಒಂದು ವ್ಯವಸ್ಥೆ ಮಾಡುತ್ತಿದ್ದೆನೆಂದು ಹೇಳಿದ್ದೀರಿ. ಹಾಗಾದರೆ, ನೀವು ಗೃಹ ಸಚಿವರಾಗುವವರೆಗೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಇಲ್ಲವೆನ್ನುವುದನ್ನು ನೀವು ಒಪ್ಪಿಕೊಳ್ಳುತ್ತೀರಾ? ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಶಿವಮೊಗ್ಗದಲ್ಲಿ ಶ್ರೀ ವಿಶ್ವನಾಥ್‌ರವರು ಕೋಮುಗಲಭೆಯಲ್ಲಿ ತೀರಿಹೋಗಿದ್ದಾರೆಂದು ತಾವು ಪ್ರಸ್ತಾಪ ಮಾಡಿದ್ದೀರಿ. ಆ ಸಂದರ್ಭದಲ್ಲಿ ಶಿವಮೊಗ್ಗದಲ್ಲಿ ಕಂಟ್ರೋಲ್ ಮಾಡುವ ದಿಕ್ಕಿನಲ್ಲಿ ಸಾಕಷ್ಟು ಪ್ರಯತ್ನವನ್ನು ನಾವೆಲ್ಲರೂ ಸೇರಿಕೊಂಡು ಮಾಡಿದ್ದೇವೆ. ನಾನು ಆ ಪಕ್ಷ, ಈ ಪಕ್ಷವೆಂದು ಹೇಳುವುದಿಲ್ಲ. ಎಲ್ಲಾ ಪಕ್ಷದವರೂ ಸೇರಿ ಅದನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಅದು ಒಂದು ರೂಪಕ್ಕೆ ಬಂತು. ಆಗಿನ ಗೃಹ ಮಂತ್ರಿಗಳಾಗಿದ್ದಂತಹ ಮಾನ್ಯ ಕೆ.ಜೆ.ಜಾರ್ಜ್‌ರವರಿಗೆ ನಾನು ಫೋನ್ ಮಾಡಿದೆನು. ಅವರು ಅಲ್ಲಿಗೆ ಬಂದರು. ಅವರ ಜೊತೆಗೆ ಶ್ರೀ ಕೆಂಪಯ್ಯನವರು ಸಹ ಬಂದರು. ಆ ಅಂಶವನ್ನು ಪ್ರಸ್ತಾಪ ಮಾಡಿ, ಈ ರೀತಿ ಘಟನೆ ಆಗಿದೆ, ಸಿ.ಸಿ.ಟಿ.ವಿ ಕ್ಯಾಮರಾದಲ್ಲಿ ಆ ಘಟನೆ ನಡೆದ ಬಗ್ಗೆ ಏನೇನಾಗಿದೆ ಎಂದು ತಿಳಿದುಕೊಳ್ಳಿ ಎಂದು ಹೇಳಿದಾಗ, ಆಗ ನಾನೊಬ್ಬನೇ ಐ.ಬಿ.ಯಲ್ಲಿ ಕುಳಿತಿದ್ದೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(054)07.02.2018/1.50/ಎಂಎಂ-ಎಕೆ

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):-**

ಮಾನ್ಯ ಗೃಹ ಮಂತ್ರಿಗಳು, ಕೆಂಪಯ್ಯನವರು ಮತ್ತು ಉನ್ನತ ಪೋಲೀಸ್ ಅಧಿಕಾರಿಗಳು ಕುಳಿತಿದ್ದ ಸಂದರ್ಭದಲ್ಲಿ, ಮಾನ್ಯ ಗೃಹ ಮಂತ್ರಿಯವರು ಏನಾಗಿದೆ ಎಂದು ನನ್ನನ್ನು ಕೇಳಿದರು. ಆಗ ನಾನು ನನ್ನನ್ನು ಕೇಳಬೇಡಿ, ನಿಮ್ಮ ಪೋಲೀಸ್ ಅಧಿಕಾರಿಗಳನ್ನು ಕೇಳಿ ಎಂದು ಹೇಳಿದೆ. ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿದೆ, 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿದಂತಹ ವ್ಯಕ್ತಿಗಳು ವಿಶ್ವನಾಥ್ ಅವರು ವಾಪಸ್ ಹೋಗುತ್ತಿದ್ದಂತಹ ಸಂದರ್ಭದಲ್ಲಿ ಅವರನ್ನು ಕೊಲೆ ಮಾಡಿ ಹೊರಟು ಹೋಗಿದ್ದಾರೆ. ಅವರು ಶಿವಮೊಗ್ಗದವರಲ್ಲ. ಶಿವಮೊಗ್ಗದಲ್ಲಿ ಮುಸಲ್ಮಾನರು, ಹಿಂದೂಗಳು ಅಣ್ಣತಮ್ಮಂದಿರ ಹಾಗೆ ಬದುಕುತ್ತಿದ್ದಾರೆ. ಕೇರಳದಿಂದ ಬಂದಿದ್ದಾರೆ ಅವರು ಎಂದು ಹೇಳಿದರು. ನಾನು ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ. ಇವತ್ತು ಕೇರಳದಿಂದ ಬಂದಂತಹ ಮುಸಲ್ಮಾನರು ಕೇರಳದಲ್ಲಿರುವ ಮುಸಲ್ಮಾನರೆಲ್ಲರೂ ರಾಷ್ಟ್ರದ್ರೋಹಿಗಳೆಂದು ನಾನು ಹೇಳುವುದಿಲ್ಲ. ಕರ್ನಾಟಕದಲ್ಲಿರುವ ಮುಸಲ್ಮಾನರೆಲ್ಲರೂ ರಾಷ್ಟ್ರದ್ರೋಹಿಗಳೆಂದು ನಾನು ಹೇಳುವುದಿಲ್ಲ. ಕೊಲೆಗಡುಕ ಮುಸಲ್ಮಾನ್ ವ್ಯಕ್ತಿಗಳಿದ್ದಾರಲ್ಲ ಅಂತಹವರಿಗೆ ಈ ಸರ್ಕಾರದ ಬಗ್ಗೆ ಭಯ ಇಲ್ಲ ಎನ್ನುವಂತಹ ಅಂಶವನ್ನು ನಾನಾಗ ಪ್ರಸ್ತಾಪ ಮಾಡಿದೆ. ಹಾಗಾದರೆ ನೀವು ಮುಂಚೆಯೇ ಗೃಹ ಮಂತ್ರಿಗಳಾಗಿ ಬಿಟ್ಟಿದ್ದರೆ ಪ್ರಶ್ನೆಯೇ ಇಲ್ಲ ಎಂದರೆ;

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಎರಡು ವರ್ಷದ ಹಿಂದೆಯೇ ಗೃಹಮಂತ್ರಿಯಾಗಿದ್ದರೆ ಚೆನ್ನಾಗಿತ್ತು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆ ರೀತಿಯಾಗಿದ್ದರೆ ಚೆನ್ನಾಗಿತ್ತು.

**ಶ್ರೀ ರಾಮಲಿಂಗಾರೆಡ್ಡಿ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಗೃಹ ಸಚಿವನಾಗಿ ಮುಂದುವರಿಯುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರೇ ಗೃಹ ಸಚಿವರಾಗಿ ಮುಂದುವರಿಯಲಿ. ನಾನು ತಮಾಷೆ ಮಾಡುತ್ತಿಲ್ಲ, ಗಂಭೀರವಾಗಿ ಹೇಳುತ್ತಿದ್ದೇನೆ.

**ವೈಸ್ ಛೇರ್ಮನ್:-** ಅದಕ್ಕೆ ಎಷ್ಟು ಮಹತ್ವವನ್ನು ಕೊಡಬೇಕೋ ಅಷ್ಟು ಮಾತ್ರ ಮಹತ್ವ ಕೊಡಿ, ಮಿಕ್ಕಿದ್ದನ್ನು ಬಿಟ್ಟು ಬಿಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಇಂದಿನ ಗೃಹ ಮಂತ್ರಿಯವರು ತುಂಬಾ ಸ್ಪಷ್ಟವಾಗಿ ಹಿಂದಿನ ಗೃಹ ಮಂತ್ರಿಗಳು 'ನಾಲಾಯಕ್' ಎಂದು ಒಪ್ಪಿಕೊಂಡ ಹಾಗಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೇ, ಇನ್ನೆರಡು ವರ್ಷ ಸಮಯ ಸಿಕ್ಕಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಿದೆ ಅಷ್ಟೇ, ನಾನು ಯಾರ ಬಗ್ಗೆಯೂ ಕೀಳಾಗಿ ಮಾತನಾಡಲಿಲ್ಲ.

(ಗೊಂದಲ)

**VICE CHAIRMAN:** Enough is enough. ಅವರು ಏನನ್ನು ಹೇಳಬೇಕೋ ಅದನ್ನು ಹೇಳಿದ್ದಾರೆ. ಅವರು remark ಮಾಡುವುದಕ್ಕೆ ಹೇಳಿದ್ದಾರೆ ಸಾಕು ಬಿಡಿ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**Sri D.S. VEERARIAH:** Hon'ble Chairman, You can't take that for granted.

(ಗೊಂದಲ)

**ವೈಸ್ ಛೇರ್ಮನ್:-** ಅವರು remark ಮಾಡುವುದು ಮಾಡಿದ್ದಾರೆ ಬಿಡಿ. It has gone on record.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನೀವು ಇರಲಿಲ್ಲ. ಉದಾಹರಣೆಗೆ, ದೀಪಕ್ ರಾವ್ ಕೊಲೆ ಬಗ್ಗೆ ಹೇಳಿದಿರಿ. ದೀಪಕ್ ರಾವ್ ಕೊಲೆಯಾದ ನಂತರ ಮುಲ್ಕಿ ತಡೆ Sub-Inspector ಅನ್ನು ಕೊಲೆಗಡುಕರು ಅಟ್ಟಿಸಿಕೊಂಡು ಹೋಗಿ, ಇನ್ನೇನು ಕಾರನ್ನು ಹೊಡೆಸಿ ಅವರನ್ನು ಸಾಯಿಸಬೇಕು ಎನ್ನುವಷ್ಟರಲ್ಲಿ ಅವರು ಚರಂಡಿಗೆ ಬೀಳುತ್ತಾರೆ. ಅಂದರೆ ಪೋಲೀಸ್ ಇಲಾಖೆ ಬಗ್ಗೆ ಈ ಕೊಲೆಗಡುಕರಿಗೆ ಯಾವ ಭಯವೂ ಇಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ. ಮುಸಲ್ಮಾನರು ಸತ್ತರು, ಹಿಂದೂಗಳು ಸತ್ತರು; ಯಾರ್ಯಾರು ಸತ್ತಿದ್ದಾರೆ, ಯಾರ ಪರವೂ ನಾನು ಮಾತನಾಡುವುದಿಲ್ಲ. ಕೊಲೆಗಡುಕನಾದವನು ಹಿಂದೂವೂ ಅಲ್ಲ, ಮುಸಲ್ಮಾನನೂ ಅಲ್ಲ, ಕೊಲೆಗಡುಕ ಕೊಲೆಗಡುಕನೇ. ಆ ಕೊಲೆಗಡುಕನ ಬಗ್ಗೆ ಔದಾರ್ಯ ಏಕೆ? ಎಲ್ಲವನ್ನೂ ಸಿ.ಬಿ.ಐ. ಗೆ ವಹಿಸಿಬಿಡಿ. ಈ ಪ್ರಕರಣ ಕೂಡ ತಮ್ಮ ಬಳಿಯೇ ಇದೆ. 9-10 ಹಿಂದೂಗಳ ಕೊಲೆಯಾಗಿದೆ, ಕನೂಲಿನಲ್ಲಿ ಇನ್ನು ಕೆಲವು ಮುಸಲ್ಮಾನರ ಕೊಲೆಯಾಗಿದೆ ಎಂದು ಕೆಲವನ್ನು ನೀವು ಒಪ್ಪಿಕೊಂಡಿರಿ. ಅಷ್ಟನ್ನೂ ಕೂಡ ಸಿ.ಬಿ.ಐ. ಗೆ ವಹಿಸಿ, ಆ ಕೊಲೆಗಡುಕರು ಶಿಕ್ಷೆಯನ್ನು ಅನುಭವಿಸಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯಸಚೇತಕರು):–** ಮಾನ್ಯ ಈಶ್ವರಪ್ಪನವರೇ, ಕರ್ನಾಟಕ ಪೋಲೀಸರು ಏನು ಮಾಡುತ್ತಾರೆ?

(ಗೊಂದಲ)

**ವೈಸ್ ಛೇರ್ಮನ್:–** ಮಾನ್ಯ ಮಂತ್ರಿಯವರು ಸಮರ್ಥರಿದ್ದಾರೆ ಅವರು ಉತ್ತರ ಕೊಡುತ್ತಾರೆ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಇದನ್ನು ಪೂರ್ತಿ ಮಾಡಿ ಬಿಡುತ್ತೇನೆ, ಮಧ್ಯೆ ಮಧ್ಯೆ ಮಾತನಾಡುವುದು ಬೇಡ. ಮಾನ್ಯ ಗೃಹ ಸಚಿವರು ನಂತರ ಉತ್ತರ ನೀಡಲಿ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ನಿಮಿಷ . . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಬೇಡ. ಗೃಹ ಸಚಿವರು ಆಮೇಲೆ ಉತ್ತರ ಕೊಡಲಿ. ಅವರು ಮಾತನಾಡುವಾಗ ನಾನು ಬಾಯಿ ಮುಚ್ಚಿಕೊಂಡು ಕುಳಿತುಕೊಂಡಿದ್ದೆ, ಹಾಗೆ ನಾನು ಮಾತನಾಡುವಾಗ ಗೃಹ ಸಚಿವರು ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಲಿ. ನಾನು ಆಗಿನ ಗೃಹ ಮಂತ್ರಿಯವರನ್ನು ನಾಲಾಯಕ್ ಎಂದು ಹೇಳಿದೆ. Chief Whip ಅವರನ್ನೂ 'ನಾಲಾಯಕ್' ಎಂದು ಹೇಳುವಂತಹ ಪರಿಸ್ಥಿತಿ ಬಂದಿತು.

**(ಈ ಹಂತದಲ್ಲಿ ಭಾರತೀಯ ಜನತಾಪಕ್ಷದ ಸದಸ್ಯರುಗಳು ಮೇಜು ತಟ್ಟಿ ಬೆಂಬಲ ಸೂಚಿಸಿದರು)**

**ವೈಸ್ ಛೇರ್ಮನ್:–** Don't repeat it.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಗೃಹ ಮಂತ್ರಿಯವರು ಮಧ್ಯೆ ಬರುವುದು ಬೇಡ. ಅದಕ್ಕೆ ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾರು ಆರ್.ಎಸ್.ಎಸ್. ಕಾರ್ಯಕರ್ತರನ್ನು ಕೊಲೆ ಮಾಡಲು ಪ್ರಯತ್ನ ಮಾಡುತ್ತಿರುವಂತಹ ಸಂದರ್ಭದಲ್ಲಿ action ಗೆ reaction ಆಗುತ್ತದೆ. ನೀವು ಬೈಕ್ ರ್‍ಯಾಲಿಯನ್ನು ಏಕೆ ಮಾಡಿದಿರಿ ಎಂದು ಕೇಳಿದರು. ಪ್ರಜಾಪ್ರಭುತ್ವದಲ್ಲಿ ನಮ್ಮ ಮಕ್ಕಳು ಸತ್ತಂತಹ ಸಂದರ್ಭದಲ್ಲಿ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ? ದೀಪಕ್ ರಾವ್ ಸತ್ತಂತಹ ಸಂದರ್ಭದಲ್ಲಿ ಅಲ್ಲಿಗೆ ಹೋದರು ಆದರೆ ಬಶೀರ್ ನೋಡುವುದಕ್ಕೆ ಹೋಗಲಿಲ್ಲ ಎಂದು ಇವರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದರು. ನಮ್ಮ ಹುಡುಗನನ್ನು ಕೊಲೆ ಮಾಡಿದ್ದಾರೆ, ಅವರನ್ನು ಸಾಂತ್ವನ ಮಾಡುವುದಕ್ಕೆ ಹೋಗದೇ ಕೊಲೆ ಮಾಡಿರುವವನನ್ನು ನೋಡುವುದಕ್ಕೆ ಹೋಗಬೇಕೇ?

(ಗೊಂದಲ)

**ಶ್ರೀ ಕೆ. ಅಬ್ದುಲ್ ಜಬ್ಬಾರ್:-** ಮಾನ್ಯ ಸಭಾಪತಿಯವರೇ, ಬಶೀರ್ ಇಲ್ಲಿ ಕೊಲೆಗಡುಕನೇ? ಆಗ ಮಾನ್ಯ ವಿರೋಧಪಕ್ಷದ ನಾಯಕರು ಹಿಂದೂ ಮುಸಲ್ಮಾನರೆಲ್ಲಾ ಒಂದೇ ಎಂದು ಹೇಳಿದರು.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಗೃಹ ಸಚಿವರಿಗೆ ಉತ್ತರ ಕೊಡುವುದಕ್ಕೆ ಶಕ್ತಿ ಇದೆ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಬೇಡ ಎಂದರೆ ನಾನು ಹೋಗುತ್ತೇನೆ. (ಗೊಂದಲ) ಇವತ್ತು ಕರ್ನಾಟಕ ರಾಜ್ಯದಲ್ಲಿ ಏನಾಗುತ್ತಿದೆ ಎಂದರೆ, ಈ ರೀತಿ ಕೊಲೆಗಡುಕರಿಗೆ ಮೇಲಿಂದ ಮೇಲೆ ಬೆಂಬಲವನ್ನು ಕೊಡುತ್ತಿರುವಂತಹ ಸಂದರ್ಭದಲ್ಲಿ ಕೊಲೆಗಡುಕರಿಗೆ ಯಾವುದೇ ಭಯ ಇಲ್ಲದ ಹಾಗೆ ಆಗಿದೆ. ತಾವು ಗೃಹ ಮಂತ್ರಿಯಾಗುವ ತನಕವೂ; ಹಿಂದೆ ಹಾಗೆಲ್ಲಾ ಆಗಿದೆ, ಎರಡು ವರ್ಷಕ್ಕಿಂತ ಮುಂಚೆಯೇ ನಾನು ಗೃಹ ಮಂತ್ರಿಯಾಗಿದ್ದರೆ ಚೆನ್ನಾಗಿತ್ತು ಎಂದು ಗೃಹ ಸಚಿವರು ಹೇಳಿದರು. ನನ್ನ ಅಪೇಕ್ಷೆಯೂ ಅದೇ ಆಗಿದೆ, ತುಂಬಾ ಸಂತೋಷವಾಯಿತು. ಅದನ್ನು ತಾವು ಬಾಯಿಯಲ್ಲಾದರೂ ಹೇಳುತ್ತೀರಿ, ಅವರು ಬಾಯಿಯಲ್ಲಿಯೂ ಹೇಳಲಿಲ್ಲ. ನಾವು ಕೊಲೆಯಾಯಿತೆಂದು ಹೇಳುತ್ತಿದ್ದ ಹಾಗೆ ನಾವು ಆರ್.ಎಸ್.ಎಸ್., ಬಿ.ಜೆ.ಪಿ ಯವರನ್ನು ಬಲಿ ಹಾಕುತ್ತೇವೆ, ಕೋಮುವಾದಿಗಳನ್ನು ತುಳಿಯುತ್ತೇವೆ ಎಂದು ಹೇಳುತ್ತಿದ್ದರು. ನಮ್ಮ ಕಾರ್ಯಕರ್ತರನ್ನು ಕಳೆದುಕೊಂಡು ನಾವು ಸಾಯುತ್ತಿರಬೇಕಾದರೆ ಆರ್.ಎಸ್.ಎಸ್. ನವರನ್ನು ಇವರು ತುಳಿಯುತ್ತಾರಂತೆ. ಇದು ಯಾವ ಲೆಕ್ಕ? ನಾನು ಅದಕ್ಕೋಸ್ಕರವಾಗಿ ಹೇಳುತ್ತಿದ್ದೇನೆ, ರಾಜಕೀಯ ಮಾಡುವುದಕ್ಕೆ ಯಾರಿಗೆ ಮತ ಕೊಡಬೇಕು, ಯಾರಿಗೆ ಮತ ಕೊಡಬಾರದೆಂದು ಜನರು ತೀರ್ಮಾನ ಮಾಡುತ್ತಾರೆ. ತಾವು ಗೃಹ ಮಂತ್ರಿಗಳಾಗಿ ಆ ಸ್ಥಾನಕ್ಕೆ ಮತ್ತು ಮುಖ್ಯಮಂತ್ರಿಗಳು ಆ ಸ್ಥಾನಕ್ಕೆ ತಕ್ಕಂತಹ ಗೌರವವನ್ನು ಕೊಡಲಿಲ್ಲ ಎನ್ನುವ ನೋವಿದೆ. ಮಾನ್ಯ ಮುಖ್ಯಮಂತ್ರಿಯವರು ಆರ್.ಎಸ್.ಎಸ್. ನವರನ್ನು terrorists ಗೆ ಹೋಲಿಸುತ್ತಾರೆ. ಇದನ್ನು ಪ್ರಸ್ತಾಪ ಮಾಡಿದರೆ ಅದಕ್ಕೆ ಉತ್ತರವಿಲ್ಲ. ನಾನು ಹೇಳುವುದಕ್ಕೆ ಹೊರಟಿರುವುದೇನೆಂದರೆ, ಇಡೀ ಪ್ರಪಂಚದಲ್ಲಿ ಭಾರತ ದೇಶದ ಬಗ್ಗೆ ಗೌರವ ಜಾಸ್ತಿ ಇದೆ. ಒಬ್ಬ ಆರ್.ಎಸ್.ಎಸ್. ನಿಂದ ಬಂದಂತಹ ಶ್ರೀ ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರ್.ಎಸ್.ಎಸ್. ನವರನ್ನು terrorists ಎಂದು ಕರೆಯುವಂತಹ ಪರಿಸ್ಥಿತಿ ಬಂದರೆ ಇವರನ್ನು ಮುಖ್ಯಮಂತ್ರಿ ಎಂದು ಕರೆಯಬೇಕೇ?

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ನಾನು ಬಾಯಿ ಮುಚ್ಚಿಕೊಂಡು ಕುಳಿತಿದ್ದೆ. ಈಗ ಇವರು ಮಾತನಾಡುವಾಗ ನಾನು ಮಾತನಾಡಬೇಕಾಗುತ್ತದೆ.

(ಗೊಂದಲ)

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಒಬ್ಬ ಪ್ರಧಾನಮಂತ್ರಿಯಾಗಿ ಅವರು ಏನೇನು ಶಬ್ದಗಳನ್ನು ಮಾತನಾಡುತ್ತಾರೆ ಎಂದರೆ ಹಾಗೆ ಮಾತನಾಡಲು ಆರ್.ಎಸ್.ಎಸ್. ತರಬೇತಿ ಕೊಟ್ಟಿದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇವರು ಸಂತೋಷ್ ಬಗ್ಗೆ ಹೇಳಿದರು. ಸಂತೋಷ್ ಅವರು ಬಿ.ಜೆ.ಪಿ ಕಾರ್ಯಕರ್ತನೇ ಅಲ್ಲ ಎಂದು ಗೃಹ ಮಂತ್ರಿ ಮತ್ತು ಮುಖ್ಯಮಂತ್ರಿಯವರು ಹೇಳಿದರು. ಹಾಗೆ ಹೇಳಿದ್ದನ್ನು ನಿನ್ನೆ ದಿವಸ ದಿನಪತ್ರಿಕೆಯಲ್ಲಿ ಬಂದಿದ್ದ ತುಣುಕನ್ನು ತೋರಿಸಿದೆ. ಜೊತೆಗೆ ಭಾರತೀಯ ಜನತಾ ಪಾರ್ಟಿಯ ಯುವ ಮೋರ್ಚಾ ಕಾರ್ಯಕರ್ತರ ಫ್ಲೆಕ್ಸ್‌ನಲ್ಲಿ ಅವನ ಭಾವಚಿತ್ರ ಇರುವುದನ್ನು ತೋರಿಸಿದೆ. ಅದರ ಪ್ರತಿಯನ್ನು ಕೊಟ್ಟಿದ್ದೇನೆ. ನಿಮಗೆ ಕೈ ಮುಗಿಯುತ್ತೇನೆ ಸುಮ್ಮನೇ ಕುಳಿತುಕೊಳ್ಳುತ್ತೀರಾ? (ಗೊಂದಲ) ಇವರಿಗೆ ಏನಾಗಿದೆ?

(ಗೊಂದಲ)

**ವೈಸ್ ಛೇರ್ಮನ್:-** ಇಲ್ಲಿ ಮಂತ್ರಿಗಳಿದ್ದಾರೆ, ಸಭಾನಾಯಕರಿದ್ದಾರೆ ಅವರು ಹೇಳುತ್ತಾರೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೊಲೆ ಮಾಡುವವರ ಪರವಾಗಿ ಬಹಳ ಚೆನ್ನಾಗಿ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ.

**ವೈಸ್ ಛೇರ್ಮನ್:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. Please sit down. ನಾನು ಅವರಿಗೆ ಹೇಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಶರತ್ ಮಡಿವಾಳ ಎಂಬುವರ ಕೊಲೆಯಾದಾಗ ಇವರು ಆ ಕೊಲೆಗಡುಕರನ್ನು ಬಂಧಿಸಿ ಎಂದು ಎಷ್ಟು ಕೂಗಿದರೂ ಕೂಡ ಬಂಧಿಸಲಿಲ್ಲ. ಕೊನೆಗೆ ಇಷ್ಟನೇ ತಾರೀಖಿನೊಳಗೆ ಬಂಧಿಸದಿದ್ದರೆ ಮೋಟಾರ್ ಸೈಕಲ್‌ನಿಂದ ರ್ಯಾಲಿ ಮಾಡಬೇಕಾಗುತ್ತದೆ ಎಂದು ಗಡುವು ಕೊಡಬೇಕಾಯಿತು, ನಾವು ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದಾಗ ಹಿಂದಿನ ದಿನ ಬಂಧಿಸಿದ್ದಾರೆ. ಅಂದರೆ, ಕೊಲೆಗಡುಕರು ಯಾರೆಂಬುದು ನಿಮ್ಮ ಸರ್ಕಾರಕ್ಕೆ ಗೊತ್ತಿದ್ದರೂ ಮುಂಚೆಯೇ ಏಕೆ ಅರೆಸ್ಟ್ ಮಾಡಲಿಲ್ಲ? ನಾವು ಹೇಗೆ ಕೊಲೆ ಮಾಡಿದರೂ ಕೂಡ ನಮ್ಮನ್ನು ಮುಟ್ಟುವುದಕ್ಕೆ ಯಾರೂ ತಯಾರಿಲ್ಲ ಇದು ಆ ಕೊಲೆಗಡುಕರಿಗೆ ಕುಮ್ಮಕ್ಕು ಕೊಟ್ಟಂತಾಗುತ್ತದೆ. ಇದು ನಮ್ಮ ಆಪಾದನೆಯಾಗಿದೆ. ಯಾವ ಮುಸ್ಲಿಂ ಗೂಂಡಾ ಕೊಲೆಗಡುಕರಿದ್ದಾರೆ, ನಾನು ನೂರು ಬಾರಿ ಹೇಳುತ್ತೇನೆ. ನನಗೆ ಅನೇಕರು ಫೋನ್ ಮಾಡುತ್ತಾರೆ ಅವರೆಲ್ಲಾ ಮುಸಲ್ಮಾನರಾಗಿದ್ದಾರೆ. ನಾನು ಖಂಡಿತ ಹೇಳುವುದಿಲ್ಲ. ಆರ್.ಎಸ್.ಎಸ್. ಕಾರ್ಯಕರ್ತರನ್ನು ಕೊಲೆ ಮಾಡುವಂತಹ ಗೂಂಡಾಗಳನ್ನು ಕೊಲೆಗಡುಕರೆಂದು ಕರೆಯದೇ ಏನೆಂದು ಕರೆಯಬೇಕು? ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ, ಯಾವ ವ್ಯಕ್ತಿ ಕೊಲೆ ಮಾಡಿದ್ದಾನೆ ಎಂದು ನಿಮಗೆ ಗೊತ್ತಿದ್ದರೂ ಅವರನ್ನು ರಕ್ಷಣೆ ಮಾಡಲು ಹೋಗಿರುವುದು, ಇದು ಕರ್ನಾಟಕಕ್ಕೆ ಬಂದಿರುವ ಪರಿಸ್ಥಿತಿಯಾಗಿದೆ. PFI ಅನ್ನು ಬ್ಯಾನ್ ಮಾಡಬೇಕೆಂದು ಹೇಳಿದಿರಿ. ಆರ್.ಎಸ್.ಎಸ್. ನ ಕಾರ್ಯಕರ್ತರು ಕೊಲೆ ಮಾಡಿದ್ದಾರೆ ಎಂದು ನೀವು ಹೇಳುತ್ತಿದ್ದೀರಲ್ಲ ಇದು ರಾಜಕೀಯವಾದ ಹೇಳಿಕೆ. ಇಲ್ಲಿ ನನಗೆ ಮಾಹಿತಿ ಇರುವ ಪ್ರಕಾರ, ಅವರು ಆ ಪಾರ್ಟಿಯಿಂದ ಗೆದ್ದಿದ್ದರು, ಬೇರೆ ಬೇರೆ ರೂಪದಲ್ಲಿ ವೈಯಕ್ತಿಯವಾಗಿ ಏನೇನೋ ಕಾರಣಗಳತ್ತು ಹೀಗಾಗಿ ಈ ರೀತಿ ಕೊಲೆಗಳಾಗಿದೆ ಹಾಗೆ ಹೀಗೆ ಎಂದು ನೀವು ಹೇಳಿದ್ದಿರಿ.

(ಮುಂದು)

(55) 07-02-2018/2-00/ಕೆಹೆಚ್/ಆರ್‌ಎನ್

**ಶ್ರೀ ಕೆ.ಎಸ್. ಈಶ್ವರಪ್ಪ (ಮುಂದು):-** ಒಂದೋ-ಎರಡೋ ಹಿಂದೂ ಕಾರ್ಯಕರ್ತರ ಕಗ್ಗೊಲೆಗಳು ಆಗುತ್ತಿವೆ. ಇದರಲ್ಲಿ ಉದಾಹರಣೆಗೆ ಶ್ರೀ ಪ್ರಶಾಂತ್ ಪೂಜಾರಿಯವರ ಪ್ರಕರಣವನ್ನು ತೆಗೆದುಕೊಳ್ಳೋಣ. ಕಳ್ಳರು ಗೋವನ್ನು ಹೊತ್ತುಕೊಂಡು ಹೋಗುತ್ತಿರುವಂತಹ ಸಂದರ್ಭದಲ್ಲಿ ಅದನ್ನು ರಕ್ಷಣೆ ಮಾಡಬೇಕೆಂದು ಶ್ರೀ ಪ್ರಶಾಂತ್ ಪೂಜಾರಿಯವರು ಪೋಲೀಸ್ ಠಾಣೆಗೆ ದೂರನ್ನು ಕೊಡುತ್ತಾರೆ. ಹಾಗೆಯೇ ಮರುದಿನ ಬಸ್ ನಿಲ್ದಾಣದ ಪಕ್ಕದಲ್ಲಿ ಹೂವು ಮಾರುತ್ತಿರುವಂತಹ ಹುಡುಗನನ್ನು ಕೊಲೆಗಡುಕರು ಕೊಚ್ಚಿ ಹಾಕುತ್ತಾರೆ. ಅಂತಹ ಕೊಲೆಗಡುಕರನ್ನು ಆ ದಿವಸವೇ ಬಂಧಿಸಿದ್ದರೆ, ಯಾರು ಕೊಲೆ ಮಾಡುತ್ತಾರೋ, ಅಂತಹ ವ್ಯಕ್ತಿಗಳಿಗೆ ಭಯವಾಗುತ್ತಿತ್ತು. ಹಿಂದೂ ಕಾರ್ಯಕರ್ತರನ್ನು ಕಗ್ಗೊಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರೆ ರಾಜ್ಯ ಸರ್ಕಾರದವರು ನಮ್ಮನ್ನು ಬಿಡುವುದಿಲ್ಲವೆಂದು ಮತ್ತು ಹಿಂದೂ-ಮುಸ್ಲಿಂರನ್ನು ಒಂದೇ ದಿಕ್ಕಿನಲ್ಲಿ ನೋಡುತ್ತಾರೆ ಎಂದು ತಿಳಿದುಕೊಳ್ಳುತ್ತಾರೆ. ಹಾಗಾಗಿ ರಾಜ್ಯ ಸರ್ಕಾರದವರು ನಮ್ಮನ್ನು ಬಿಡುವುದಿಲ್ಲವೆಂದು ಒಂದು ರೀತಿಯಲ್ಲಿ ಭಯಪಡುತ್ತಿದ್ದರು. ಇವರನ್ನು ವಾರಗಟ್ಟಲೆ, ಹದಿನೈದು ದಿನಗಳ ಮಟ್ಟಿಗೆ ಬಿಟ್ಟರೆ, ಇವರೆಲ್ಲಾ ಹೋರಾಟ ಮಾಡುವುದು ಏಕೆ? ಬಳೆ ತೊಟ್ಟುಕೊಂಡು ಕುಳಿತುಕೊಳ್ಳುವುದಕ್ಕಾಗಿಯೇ? ಒಬ್ಬ ಕಾರ್ಯಕರ್ತ ಸತ್ತಿದ್ದಾನೆ ಎಂದು ಗೊತ್ತಾದ ತಕ್ಷಣ ಪ್ರತಿಭಟನೆಯನ್ನು ಮಾಡುತ್ತಾರೆ. ಸರ್ಕಾರ ಮಲಗಿರುವಂತಹ ಸಂದರ್ಭದಲ್ಲಿ, ಸರ್ಕಾರವನ್ನು ಜಾಗೃತಿ ಮಾಡುವುದಕ್ಕೆ ಹಿಂದೂ ಸಂಘಟನೆಗಳು ಹೋರಾಟ ಮಾಡುವುದು ಬೇಡವೇ? ನಾನು ಅದಕ್ಕೋಸ್ಕರ ಹೇಳುತ್ತಿರುವುದು ಮಾನ್ಯ ಗೃಹ ಮಂತ್ರಿಗಳಾಗಿ ಸಂತೋಷ್‌ರವರ ಕೊಲೆಯಾದಂತಹ ಸಂದರ್ಭದಲ್ಲಿ 'screw driver ನಿಂದ ಚುಚ್ಚಿ ಅವನನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಅವನು ಕೊಲೆ ಮಾಡಲಿಲ್ಲ' ಎಂದು ಹೇಳಿದ್ದಾರೆ. ನಾನು ಅದಕ್ಕೋಸ್ಕರ ಹೇಳುವುದಕ್ಕೆ ಹೊರಟಿದ್ದೇನೆ. ನಾನು ಇಷ್ಟೊಂದು ಜನ ಸತ್ತಿದ್ದಾರೆ ಎಂದು ಹೇಳಿದಾಗ, ಕೇವಲ 9 ಜನ ಸತ್ತಿದ್ದಾರೆ, 23 ಜನ ಸತ್ತಿಲ್ಲವೆಂದು ಮಾನ್ಯ ಗೃಹಮಂತ್ರಿಗಳು ಹೇಳುತ್ತಿದ್ದಾರೆ. ಅದನ್ನು ಈಗ ಬಿಟ್ಟುಬಿಡಿ. ನಾನು 23 ಜನ ಸತ್ತಿರುವ ವಿಷಯದ ಬಗ್ಗೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಒಬ್ಬ ಕಾರ್ಯಕರ್ತನನ್ನು ಸುಮ್ಮನೆ ಕೊಂದರೆ ಅಥವಾ ಗೋರಕ್ಷಣೆ ಮಾಡುವವನನ್ನು ಕೊಂದಾಗ ಮಾನ್ಯ ಗೃಹಮಂತ್ರಿಯವರಿಗೆ ಎಷ್ಟು ನೋವು ಆಗಬೇಕಾಗಿತ್ತಲ್ಲವೆ. ನನ್ನ ಮಗ ಈ ರೀತಿಯಲ್ಲಿ ಸತ್ತಿದ್ದರೆ ಏನಾಗುತ್ತಿತ್ತು ಎಂಬ ಭಾವನೆ ಮಾನ್ಯ ಗೃಹಮಂತ್ರಿಯವರಿಗೆ ಬರಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿರುವ ಆರೂವರೆ ಕೋಟಿ ಜನರಿಗೆ ನೀವು ಗೃಹ ಮಂತ್ರಿಗಳಾಗಿದ್ದೀರೋ ಅಥವಾ ಯಾರೋ ಮುಸಲ್ಮಾನರ ಪರ ಇರುವವರಿಗೆ ಮಾತ್ರ ನೀವು ಗೃಹಮಂತ್ರಿಗಳಾಗಿದ್ದೀರೋ ಹಾಗೂ ಕೊಲೆಗಡುಕರಿಗೆ ಮಾತ್ರ ನೀವು ಮುಸಲ್ಮಾನರ. . . ಅದಕ್ಕೆ ನಾನು ಹೇಳುವುದಕ್ಕೆ ಹೊರಟಿರುವುದು. . .

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮುಸಲ್ಮಾನರ ಪರ ...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀ ಐವನ್ ಡಿ'ಸೋಜಾ ರವರೇ ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ನಾನು ಸುಮ್ಮನೆ ಅವರು ಹೇಳುವುದನ್ನು ಕೇಳಬೇಕೇ,

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಗೂಂಡಾ ಮತ್ತು ಮುಸಲ್ಮಾನ ಕೊಲೆಗಡುಕರ ಬಗ್ಗೆ ನಾನು ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಶ್ರೀ ಕೆ.ಎಸ್.ಈಶ್ವರಪ್ಪನವರು ಕೊಲೆಗಡುಕರ ಬಗ್ಗೆ ಮಾತ್ರ ಮಾತನಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಶ್ರೀ ಐವನ್ ಡಿ'ಸೋಜಾ ರವರು ಗೂಂಡಾ ಮತ್ತು ಮುಸಲ್ಮಾನರ ಪರ ಎಂದು ನಾನು ಹೇಳಿದ್ದೇನೆಯೇ,

**ವೈಸ್ ಛೇರ್ಮನ್:-** ಮಾನ್ಯ ಕೆ.ಎಸ್.ಈಶ್ವರಪ್ಪನವರು ಆ ರೀತಿಯಲ್ಲಿ ಹೇಳಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹಿಂದೂ ಕಾರ್ಯಕರ್ತರನ್ನು ಕಳೆದುಕೊಂಡಿರುವುದಕ್ಕೆ ನನ್ನ ಹೊಟ್ಟೆ ಉರಿಯುತ್ತದೆ.

(ಗೊಂದಲ)

**ವೈಸ್ ಛೇರ್ಮನ್:-** ಶ್ರೀ ಕೆ.ಎಸ್. ಈಶ್ವರಪ್ಪನವರು ಹಿಂದೂ ಕಾರ್ಯಕರ್ತರ ಬಗ್ಗೆ ಹೇಳಿದರೆ ನಿಮಗೆಲ್ಲ ಏಕೆ ಹೊಟ್ಟೆ ಉರಿಯುತ್ತದೆ?

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, . . .

**ವೈಸ್ ಛೇರ್ಮನ್:-** ನಾರಾಯಣಸ್ವಾಮಿಯವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಶ್ರೀ ಕೆ.ಎಸ್. ಈಶ್ವರಪ್ಪನವರಿಗೆ ತಾವು ದಯಮಾಡಿ ಹೇಳಬೇಕು. ಅವರು ಹಿಂದೂ ಕಾರ್ಯಕರ್ತಗಳನ್ನು ಏನಾದರೂ ಗುತ್ತಿಗೆಗೆ ತೆಗೆದುಕೊಂಡಿದ್ದಾರೆಯೇ?

(ಗೊಂದಲ)

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಏನು ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ.

(ಗೊಂದಲ)

**ವೈಸ್ ಛೇರ್ಮನ್:-** ಮಾನ್ಯ ಶಾಣಪ್ಪನವರು ಏನೋ ಮಾತನಾಡುತ್ತೇನೆ ಎಂದು ಹೇಳಿದರು.

**ಶ್ರೀ ಕೆ.ಬಿ ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸಿದ ನಂತರ ನಾನು ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಶಾಣಪ್ಪನವರು ನಂತರ ಮಾತನಾಡುತ್ತಾರೆ. ನಾನು ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ನಿನ್ನೆ ಇಲ್ಲಿ ಉಲ್ಲೇಖ ಮಾಡಿದೆ. ನನಗೆ ಬಹಳ ಖುಷಿಯಾಯಿತು. 'ಗೂಂಡಾ ಕಾಯ್ದೆ' ಅಡಿಯಲ್ಲಿ ಪ್ರಕರಣವನ್ನು ನಾವು ದಾಖಲಿಸುತ್ತೇವೆ. ಮಾನ್ಯ ಶಾಮನೂರು ಶಿವಶಂಕರಪ್ಪ ನವರು "ರಾಜ್ಯದ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳು ಹೆಚ್ಚಾಗಿರುವಂತಹ ಹಿನ್ನೆಲೆಯಲ್ಲಿ, ಇದನ್ನು ನಿಯಂತ್ರಿಸುವ ಸಲುವಾಗಿ ಅತ್ಯಾಚಾರಿಗಳಿಗೆ ಕಂಡಲ್ಲಿ ಗುಂಡಿಕ್ಕಬೇಕು" ಎಂಬ ಒಂದು ಮಾತನ್ನು ಹೇಳಿದರು. ಮಾನ್ಯ ಮುಖ್ಯಮಂತ್ರಿಯವರು "ಯಾರು ಈ ರೀತಿಯಲ್ಲಿ ಕೊಲೆಗಡುಕರಿದ್ದಾರೆ, ಆ ಕೊಲೆಗಡುಕರ ಬಗ್ಗೆ ಗೂಂಡಾ ಕಾಯ್ದೆಯನ್ನು ಮಾಡಿ ಅವರನ್ನು ಹೊರಗಡೆ ಹಾಕುತ್ತೇವೆ. ಅವರನ್ನು ಬಿಡುವುದಿಲ್ಲ" ಎಂದು ಹೇಳಿದ್ದರು. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಿದವರನ್ನು ಗುಂಡಿಕ್ಕಿ ಕೊಲ್ಲಬೇಕು ಎಂದು ಹೇಳಿದರು. ಅವರು ಹೇಳುತ್ತಿರುವುದನ್ನು ನೋಡಿದರೆ ಅದು ಕೇವಲ 'ಉತ್ತರನ ಪೌರುಷವೇ?' ಎಂದು ನನಗೆ ಅನ್ನಿಸುತ್ತಿದೆ. ಈ ರಾಜ್ಯದಲ್ಲಿ ಕೊಲೆ ಮಾಡುವಂತಹ ವ್ಯಕ್ತಿಗಳಿಗೆ ಭಯ ಇರಬೇಕು. ನಾನು ಏನಾದರೂ ಆ ರೀತಿಯಲ್ಲಿ ಕೊಲೆ ಮಾಡಿದರೆ ನನ್ನ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ, ನನ್ನನ್ನು ಬಿಡುವುದಿಲ್ಲವೆಂಬ ಭಾವನೆ ಆ ವ್ಯಕ್ತಿಗೆ ಬರಬೇಕು. ಈ ಒಂದು ಭಾವನೆಗಳು ಬರುವಂತಹ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಇಲ್ಲದೆಯಿರುವುದಕ್ಕೋಸ್ಕರವೇ ಹಿಂದೂ ಯುವಕರ ಕಗ್ಗೊಲೆ, ಕಗ್ಗೊಲೆಯಾದ ತಕ್ಷಣ ಪ್ರತಿಭಟನೆ, ಪ್ರತಿಭಟನೆ ಮಾಡುತ್ತಿರುವಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದು, ಇವೆಲ್ಲ ಘಟನೆಗಳಿಗೂ ಈ ಸರ್ಕಾರವೇ ಕಾರಣವಾಗಿದೆ. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡುವುದಕ್ಕೆ ಹೋಗುವಂತಹ ವ್ಯಕ್ತಿಗಳಿಗೆ ಈ ರಾಜ್ಯದಲ್ಲಿ ಅವಕಾಶವಿಲ್ಲ. ಹಿಂದೂಗಳು ಮತ್ತು ಮುಸಲ್ಮಾನರು ಈ ರೀತಿ ಬಡಿದಾಟ ಮಾಡಿಕೊಳ್ಳುತ್ತಿರುವುದಕ್ಕೆ ಈ ಸರ್ಕಾರವೇ ಕಾರಣ. ಮಾನ್ಯ ಗೃಹ ಮಂತ್ರಿಗಳು 'ನಾನು ಮೊದಲು ಬಂದಿದ್ದರೆ ಸರಿ ಇರುತ್ತಿತ್ತು' ಎಂದು ಹೇಳಿದರಲ್ಲವೇ, ಹಾಗಾದರೆ ಅವರು ಮೊದಲು ಬರಬೇಕಾಗಿತ್ತು, ಯಾರು ಬರುವುದು ಬೇಡವೆಂದಿದ್ದರು? ನೀವು ಮೊದಲು ಬರಬೇಕಾಗಿತ್ತು. ನೀವು ಬರುವುದು ಬೇಡವೆಂದು ಯಾರೂ ಹೇಳಲಿಲ್ಲ. ಈ ರೀತಿಯ ಸಮಸ್ಯೆಗಳಿಗೆ ...

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾನಾಯಕರೆ ಆ ರೀತಿಯಲ್ಲ.

**ಎಂ.ಆರ್.ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮೊದಲು ಬಂದಿದ್ದರೆ ಸರಿ ಇರುತ್ತಿತ್ತು ಎಂದು ಮಾನ್ಯ ಗೃಹ ಮಂತ್ರಿಗಳು ಹೇಳಲಿಲ್ಲ. ಸುಮ್ಮನೆ ಏಕೆ ಅದನ್ನು ಕಡತದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಾಖಲಾಗುವಂತೆ ಮಾಡುತ್ತಾರೆ. 2 ವರ್ಷಗಳ ಕಾಲ ಸಮಯವನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅವರು ಹೇಳಿದ್ದು . . .

(ಗೊಂದಲ)

**ವೈಸ್ ಛೇರ್ಮನ್:-** ಇದರ ಬಗ್ಗೆ ಅವರೇ ಉತ್ತರವನ್ನು ಕೊಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಮಂತ್ರಿಯವರು ಏನು ಹೇಳಿದ್ದಾರೆ. ಅದಕ್ಕೆ ನಾನು endorse ಮಾಡುತ್ತಿದ್ದೇನೆ. ದಯವಿಟ್ಟು ಸುಮ್ಮನಿರಿ.

(ಗೊಂದಲ)

**VICE CHAIRMAN:-** Don't disturb the House.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಮಂತ್ರಿಯವರಿಗೆ ಇನ್ನೂ ಎರಡು ತಿಂಗಳ ಅವಕಾಶ ಇದೆ ಎಂಬುದು ಅರ್ಥವಾಗಿರಬೇಕು, ಈ ಎರಡು-ಮೂರು ತಿಂಗಳನಲ್ಲಿ; ನಾನು ಅವರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಇದರ ಬಗ್ಗೆ ಪದೇ ಪದೇ ಹತ್ತು ಬಾರಿ ಹೇಳುತ್ತೇನೆ. ಹಿಂದೂ ಕಾರ್ಯಕರ್ತರ ಕೊಲೆಯಾದರೆ, ಯಾವ ಮುಸಲ್ಮಾನ ಗೂಂಡಾಗಳು ಇದ್ದಾರೋ, ನಾನು ಎಲ್ಲಾ ಮುಸಲ್ಮಾನ ಗೂಂಡಾಗಳಿಗೆ ಹೋಲಿಕೆ ಮಾಡಿ ಹೇಳುವುದಿಲ್ಲ. ಈ ಮುಸಲ್ಮಾನ ಗೂಂಡಾಗಳಿಗೆ ಭಯಪಡಿಸುವುದಕ್ಕೆ ಒಂದೋ ಅಥವಾ ಎರಡೋ ಪ್ರಕರಣಗಳ ಮೇಲೆ ಕ್ರಮವನ್ನು ತೆಗೆದುಕೊಂಡರೆ ಆಗ ನಿಜಕ್ಕೂ ಕೂಡ ಈ ಸರ್ಕಾರ ಆರೂವರೆ ಕೋಟಿ ಜನರ ಪರವಾಗಿ ಇದೆ ಎಂದು ಅನಿಸುತ್ತದೆ.

**ವೈಸ್ ಛೇರ್ಮನ್:-** ಶ್ರೀ ಕೆ.ಎಸ್.ಈಶ್ವರಪ್ಪನವರೆ, ಮಾನ್ಯ ಗೃಹ ಮಂತ್ರಿಯವರು ಉತ್ತರವನ್ನು ಕೊಡುವುದಕ್ಕೆ ಸಮಯವನ್ನು ಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇನ್ನು ಸ್ವಲ್ಪ ಹೊತ್ತು ಮಾತನಾಡುತ್ತೇನೆ. ಹಿಂದೂ ಕಾರ್ಯಕರ್ತರ ಕೊಲೆಯಾದ ತಕ್ಷಣವೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಗೃಹ ಮಂತ್ರಿಯವರು ಆರ್.ಎಸ್.ಎಸ್., ಕಾರ್ಯಕರ್ತರನ್ನು ಬಲಿ ತೆಗೆದುಕೊಳ್ಳುತ್ತೇವೆ ಎಂದು ಒಂದು ಹೇಳಿಕೆಯನ್ನು ಕೊಡುತ್ತಾರೆ. ಶ್ರೀಮತಿ ಇಂದಿರಾ ಗಾಂಧಿರವರು, ಸನ್ಮಾನ್ಯ ನೆಹರೂ ರವರು ಒಂದೇ ಒಂದು "ಭಗವದ್ವಜ" ವನ್ನು ಹಾರಿಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರು. ಈಗ ಇಡೀ ದೇಶದಲ್ಲಿ "ಭಗವದ್ವಜ" ವನ್ನು ಹಾರಿಸಲಾಗುತ್ತಿದೆ. ಮೊದಲನೆಯದು ಇವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಹೇಳುತ್ತಿದ್ದೇನೆ. PFI (Popular Front of India) ಬಗ್ಗೆ ನಾನು ಏಕೆ ಹೇಳಿದೆ ಎಂದರೆ, ಶಿವಮೊಗ್ಗದಲ್ಲಿ PFI ಕಾನ್ಫರೆನ್ಸ್ ಆಗಿ "ಪಾಕಿಸ್ತಾನ್ ಜಿಂದಾಬಾದ್" ಎಂದು ಕೂಗಿದ ವಿಷಯವನ್ನು ನಿಮ್ಮ ಪೋಲೀಸ್ ಅಧಿಕಾರಿಗಳು ಹೇಳಿರುವುದಕ್ಕೆ ಮತ್ತು ಕೊಲೆಯಾಗಿರುವ ವಿಷಯವನ್ನು ತಿಳಿಸಿರುವುದಕ್ಕೆ ಆ ಸಂಸ್ಥೆಯ ಮೇಲೆ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳುತ್ತಿರುವುದು. ನೀವು ಇದರ ಬಗ್ಗೆ ಹೇಳದೆ, ಆರ್.ಎಸ್.ಎಸ್., ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ, ಹೀಗೆ ಮಾಡುತ್ತೇವೆ ಎಂದು ರಾಜಕೀಯಕ್ಕೆ ಬೆರೆಸಿದರೆ ನಾನು ಏನು ಮಾಡುವುದಕ್ಕೂ ಆಗುವುದಿಲ್ಲ. ಈಗಾಗಲೇ ಹೆಣ್ಣುಮಕ್ಕಳ ಬಗ್ಗೆ ಮಾನ್ಯ ಉಗ್ರಪ್ಪನವರು . .

**ವೈಸ್ ಛೇರ್ಮನ್**:- ಶ್ರೀ ವಿ.ಎಸ್. ಉಗ್ರಪ್ಪನವರು ಈ ವಿಚಾರದ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಈಗಾಗಲೇ ಈ ವಿಷಯವನ್ನು ಮಾನ್ಯ ವಿ.ಎಸ್. ಉಗ್ರಪ್ಪನವರು ಹೇಳಿದ್ದಾರೆ. ಆದರೆ ಮಾನ್ಯ ಗೃಹ ಮಂತ್ರಿಯವರು ನೆನ್ನೆಯ ದಿವಸ ಸದನಕ್ಕೆ ಬಂದು ಕುಳಿತುಕೊಂಡಿದ್ದರೆ ಈ ರೀತಿಯಲ್ಲಿ ನಾನು ಕಿರುಚುವಂತಹ ಅವಶ್ಯಕತೆ ಇರಲಿಲ್ಲ. ನೆನ್ನೆಯ ದಿವಸ ಮಾನ್ಯ ಗೃಹ ಮಂತ್ರಿಯವರು ಮತ್ತು ಅಧಿಕಾರಿಗಳು ಯಾರು ಸದನದಲ್ಲಿ ಇರಲಿಲ್ಲ. ಈ ವಿಚಾರವನ್ನು ನೆನ್ನೆಯ ದಿವಸ ಮಾತನಾಡಬಾರದು ಎಂದು ನಾನು ಅಂದುಕೊಂಡಿದ್ದೆ. ಒಂದು ಪಕ್ಷ ಮಾನ್ಯ ಗೃಹ ಮಂತ್ರಿಗಳು ಇದರ ಬಗ್ಗೆ ಓದಿಕೊಂಡು ಬರುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಆ ರೀತಿಯಲ್ಲಿಯೂ ಸಹ ಅವರು ಮಾಡಿಲ್ಲ.

**ವೈಸ್ ಛೇರ್ಮನ್**:- ನೀವು ಮಾತನಾಡುವ ಕಾಲಕ್ಕೆ ಅಧಿಕಾರಿಗಳು ಸದನಕ್ಕೆ ಬಂದಿದ್ದರು.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಸದನದಲ್ಲಿ ಅಧಿಕಾರಿಗಳು ಯಾರಿದ್ದರು? ಒಬ್ಬ ಅಧಿಕಾರಿಯು ಸಹ ಇರಲಿಲ್ಲ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೆ, . .

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೆ, ಇರಲಿ ಬಿಡಿ, ನಾನು ಏಕೆ ಸುಮ್ಮನೆ ಮಾತನಾಡಬೇಕು? ಇದರ ಬಗ್ಗೆ ನೀವು defend ಮಾಡಿಕೊಳ್ಳಿ. ಆಯಿತು ಬಿಡಿ.

**ಶ್ರೀ ಎಂ.ಆರ್.ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ಸದನದಲ್ಲಿ ಇದ್ದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸಂತೋಷ... ಸದನದಲ್ಲಿ ಅಧಿಕಾರಿಗಳು ಇದ್ದರು ಎಂದು ಹೇಳಿದರೆ ನಾನು ಏನು ಮಾಡುವುದಕ್ಕೂ ಆಗುವುದಿಲ್ಲ. ಈ ದಿಕ್ಕಿನಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಒತ್ತಾಯ ಮಾಡುತ್ತೇನೆ. "ರಾಷ್ಟ್ರದ್ರೋಹಿ ಸಂಘಟನೆ" ಎಂದು ತೀರ್ಮಾನವಾಗಿರಬೇಕಾದರೆ "ಪಾಕಿಸ್ತಾನ ಜಿಂದಾಬಾದ್" ಎಂದು ಕೂಗಿರುವ ವಿಷಯವನ್ನು ನಿಮ್ಮ ಪೊಲೀಸ್ ಅಧಿಕಾರಿಗಳು ಹೇಳಿದ ಮೇಲೆ ಆ ಸಂಸ್ಥೆಯ ಬಗ್ಗೆ defend ಮಾಡಿಕೊಳ್ಳುವುದಕ್ಕೆ ಹೋಗುವುದು ಬೇಡ. ದಯವಿಟ್ಟು ಮೊದಲು ಇದನ್ನು ಬ್ಯಾನ್ ಮಾಡಿ. ಇದು ಒಂದು ಕೊಲೆಗಡುಕ ಸಂಸ್ಥೆಯಾಗಿರುವುದರಿಂದ, ಅಂತಹ ಕೊಲೆಗಡುಕರಿಗೆ ಮತ್ತು ಮುಸಲ್ಮಾನ್ ಗೂಂಡಾಗಳ ಕೊಲೆಗಡುಕರ ಮೇಲೆ ತಾವು ಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡಿದರೆ, ಕರ್ನಾಟಕ ರಾಜ್ಯದಲ್ಲಿ ಶಾಂತಿ ನೆಲೆಸುವಂತಹ ಪ್ರಯತ್ನವನ್ನು ಮಾಡಬಹುದು. Communal clashes ಆಗುವುದಿಲ್ಲ. ಆರ್.ಎಸ್.ಎಸ್., ಕಾರ್ಯಕರ್ತರ ಬಗ್ಗೆ ಹಗುರವಾಗಿ ಮಾತನಾಡುವಂತಹ ಪ್ರಯತ್ನವನ್ನು ಯಾರು ಮಾಡಬಾರದು.

ಕೊನೆಯದಾಗಿ, ಈಗಾಗಲೇ ಗಾಂಜಾ ವಿಷಯದ ಬಗ್ಗೆ ನಾನು ಮಾತನಾಡಿದ್ದೇನೆ. ಪತ್ರಿಕೆಯಲ್ಲಿ ಜೈಲಿಗೆ walker stick ನಲ್ಲಿ "ಗಾಂಜಾವನ್ನು ಆರೋಪಿಗಳಿಗೆ ಕೊಡಲು ಬಂದವರ ಸೆರೆ" ಎಂದು ಬಂದಿದೆ. ತಮ್ಮ ಸರ್ಕಾರದ ಬಗ್ಗೆ ಯಾವ ರೀತಿಯ ಭಯವಿದೆ. ಗಾಂಜಾವನ್ನು walker stick ನಲ್ಲಿ ಬಚ್ಚಿಟ್ಟುಕೊಂಡು ಹೋಗುತ್ತಿದ್ದಾರೆಂದರೆ, ಇದು ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೀವು ಲೆಕ್ಕ ಹಾಕಬೇಕು. ಇದು ಎಷ್ಟು ದಿವಸಗಳಿಂದ ನಡೆದುಕೊಂಡು ಹೋಗುತ್ತಿರಬಹುದು. ಇಂತಹ ಸಂದರ್ಭದಲ್ಲಿ ಇದನ್ನೆಲ್ಲ ಗೃಹ ಇಲಾಖೆಯವರು ಗಮನಿಸಬೇಕು. ಇದರ ಬಗ್ಗೆ ನಿಮ್ಮ ಇಲಾಖೆಯವರ ಕರ್ತವ್ಯ ಜಾಸ್ತಿಯಾಗಿರಬೇಕು. ನಾನು ನೆನ್ನೆಯ ದಿವಸ ಇದರ ಬಗ್ಗೆ ಅನೇಕ ವಿಷಯಗಳನ್ನು ಹೇಳಿದ್ದೇನೆ. ಇದನ್ನು ಯಾರು ಸಹ ಬರೆದುಕೊಂಡಿಲ್ಲ. ಮಾನ್ಯ ಗೃಹಮಂತ್ರಿಗಳು ಮತ್ತು ಅವರ ಅಧಿಕಾರಿಗಳು ಸದನದಲ್ಲಿ ಯಾರು ಇರಲಿಲ್ಲ.

ಇನ್ನು "ಸ್ಯಾಂಡ್ ಮಾಫಿಯಾ" ಬಗ್ಗೆ ಮಾತನಾಡಿದ್ದೇನೆ. ಇದರ ಬಗ್ಗೆ ಉತ್ತರದಲ್ಲಿ ಯಾವುದೇ ರೀತಿಯ ಚಕಾರವಿಲ್ಲ. ಉಡುಪಿ ಜಿಲ್ಲೆಯಲ್ಲಿ "ಸ್ಯಾಂಡ್ ಮಾಫಿಯಾ" ದವರನ್ನು ಹಿಡಿಯುವುದಕ್ಕೆ ಹೋದರೆ, ನಮ್ಮ ಮೇಲೆ ಗೂಂಡಾಗಳು ಹಲ್ಲೆ ಮಾಡಿದ್ದಾರೆ ಎಂದು ಗೃಹ ಇಲಾಖೆಯ ಅಡಿಯಲ್ಲಿ ಬರುವ ಪೊಲೀಸ್ ಠಾಣೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಸಹಾಯಕ ಆಯುಕ್ತರು ದೂರನ್ನು ನೀಡಿದ್ದಾರೆ. ಹಾಗೆಯೇ ಮೈಸೂರು ಜಿಲ್ಲೆಯಲ್ಲಿ ಶ್ರೀಮತಿ ಶಿಖಾ, ಶ್ರೀ ಅಭಿನವ್ ಖರೆ ಇವರುಗಳು ಮರಳು ದಂಧೆ ವಿಷಯವನ್ನು ತಿಳಿದುಕೊಂಡು ರಾತ್ರಿ 12.00 ಗಂಟೆಗೆ ಟಿ.ನರಸೀಪುರಕ್ಕೆ ಹೋಗುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೆ 500 ಜನ ಗೂಂಡಾಗಳು, ಹಿಂದೆ 500 ಜನ ಗೂಂಡಾಗಳು ಎಸ್.ಪಿ., ಮತ್ತು ಡಿ.ಸಿ., ಯವರ ಮೇಲೆ ಧಾಳಿ ಮಾಡುತ್ತಾರೆ. ನಾನು ಇದರ ಫೋಟೋ ಅನ್ನು ತಂದು ತೋರಿಸಿದ್ದೇನೆ. ಈ ವಿಷಯದ ಮೇಲೆ ಯಾವುದೇ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡಿಲ್ಲ. ಆದರೆ ನಂತರ ಅಲ್ಲಿನ ಎಸ್.ಪಿ., ಮತ್ತು ಡಿ.ಸಿ., ಯವರನ್ನೇ ವರ್ಗಾವಣೆ ಮಾಡಲಾಯಿತು. ಇಂತಹ ವಿಷಯಗಳ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇದಕ್ಕೆ ಕಾರಣವೆಂದರೆ "ಸ್ಯಾಂಡ್ ಮಾಫಿಯಾ" ಮತ್ತು ಇನ್ನು ಅನೇಕ "ಮಾಫಿಯಾ"ಗಳು ಈ ಕರ್ನಾಟಕ ರಾಜ್ಯದಲ್ಲಿ ಇದೆ. ಈ ಎಲ್ಲಾ ವಿಷಯಗಳ ಬಗ್ಗೆ ಗೃಹ ಇಲಾಖೆಯು ಸಂಪೂರ್ಣವಾಗಿ ವಿಫಲವಾಗಿದೆ. ಎಸ್.ಪಿ., ಮತ್ತು ಡಿ.ಸಿ., ಯವರೆ ಬಂದು ದೂರನ್ನು ಕೊಡುವಂತಹದ್ದು; ಅದ್ಯಾವುದೋ ಹೇಳಿಕೆಗಳನ್ನು ಓದಿದ್ದೀರಲ್ಲವೇ, ಅಷ್ಟು ಕೊಲೆಗಳಾಗಿತ್ತು, ಇಷ್ಟು ಅತ್ಯಾಚಾರಗಳಾಗಿತ್ತು; ನಿಮ್ಮ ಕಾಲದಲ್ಲಿ ಅಷ್ಟು ದೌರ್ಜನ್ಯಗಳಾಗಿತ್ತು ಎಂದು ಹೇಳಿದ್ದೀರಲ್ಲವೇ, ಬಿ.ಜೆ.ಪಿ., ಸರ್ಕಾರವಿದ್ದಾಗ ಒಬ್ಬರೇ ಒಬ್ಬರು ಎಸ್.ಪಿ., ಮತ್ತು ಡಿ.ಸಿ., ಯವರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಯಾರೊಬ್ಬರು ಬಂದು ದೂರನ್ನು ಕೊಡಲಿಲ್ಲ. ತಾವು ಎರಡು ವರ್ಷಗಳಗಿಂತ ಮುಂಚೆ ಅಧಿಕಾರಕ್ಕೆ ಬಂದಿದ್ದರೆ ಕ್ರಮ ತೆಗೆದುಕೊಳ್ಳುತ್ತಿದ್ದಿರೇನೋ ಎಂಬುದು ಸಹ ನನಗೆ ಗೊತ್ತಿಲ್ಲ.

ಇನ್ನು ಎಂ.ಎಲ್.ಎ., ಗಳಿಗೆ "ಬೆದರಿಕೆ". ನನಗೆ ಎರಡು ವರ್ಷಗಳ ಹಿಂದೆ ಬೆದರಿಕೆ ಹಾಕಲಾಗಿತ್ತು. ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದೆ. ಆಗ ಶ್ರೀ ಎಸ್.ಆರ್. ಪಾಟೀಲ್ ರವರು, ಸಭಾನಾಯಕರಾಗಿ ಇದ್ದರು. ಅವರು ನಿಮ್ಮಷ್ಟೇ ಸಜ್ಜನರಾಗಿದ್ದರು.

(ಮುಂದು)

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು):-**

ವೈಯಕ್ತಿಕವಾಗಿ ನೀವೂ ಸಹ ಸಜ್ಜನರೇ. ಪಾಪ ನೀವು ಗೃಹ ಮಂತ್ರಿಗಳಾಗಿ ಈ ಸರ್ಕಾರದಲ್ಲಿ ಯಾವ ಪರಿಸ್ಥಿತಿಯಲ್ಲಿ ಇದ್ದೀರಿ ಎಂದರೆ, ಬೇಡ ನಿಮ್ಮನ್ನು ಯಾವ ಪ್ರಾಣಿಗೂ ಹೋಲಿಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆ ಸಂದರ್ಭದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅವತ್ತಿನ ದಿನವೇ ಈ ವಿಚಾರದಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಹಾಗೂ ನಮಗೆಲ್ಲರಿಗೂ ರಕ್ಷಣೆಯನ್ನು ಒದಗಿಸುತ್ತೇನೆ ಎಂಬುದಾಗಿ ಹೇಳಿದರು. ಹೀಗಾಗಿ ನನಗೆ ಒಂದು ಪೈಲಟ್ ವಾಹನದ ವ್ಯವಸ್ಥೆಯನ್ನು ಮಾಡಿದ್ದಾರೆ. ನನ್ನ ಪೈಲಟ್ ವಾಹನಕ್ಕೂ ಹಾಗೂ ಒಂದು ಸೈಕಲ್‌ಗೂ ಸ್ಪರ್ಧೆಯನ್ನು ಏರ್ಪಡಿಸಿದರೆ, ಸದರಿ ಸೈಕಲ್ ಮುಂದೆ ಹೋಗಿ ಬಿಡುತ್ತದೆ. ಅದು ನೀವು ನೀಡಿರುವ ಪೈಲಟ್ ವಾಹನವಾಗಿದೆ. ನಾನು ಯಾವ ಕಾರಣಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ, ಯಾರೇ ಬಂದರೂ ಕೂಡ ನನ್ನಂತಹ ಭಂಡನಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ಅವರುಗಳು ನನ್ನ ತಂಟೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರುವುದಿಲ್ಲ. ಇನ್ನೂ ಹತ್ತು ಕೊಲೆ ಬೆದರಿಕೆ ಕರೆಗಳು ಬಂದರೂ ಕೂಡ ಯಾರೂ ಸಹ ನನ್ನನ್ನು ಏನೂ ಮಾಡುವುಕ್ಕಾಗುವುದಿಲ್ಲ.

**ಶ್ರೀ ಮಾನೆ ಶ್ರೀನಿವಾಸ್**:- ಮಾನ್ಯ ಸಭಾಪತಿಯವರೇ, ಮುಂದೆ ಹೋದ ಸದರಿ ಸೈಕಲ್‌ನವರು ನಿಮ್ಮ 'ಸೀಕ್ರೆಟ್ ಪೈಲಟ್' ಆಗಿರಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)**:- ನಾನು ಈ ವಿಷಯವನ್ನು ಈ ಸಂದರ್ಭದಲ್ಲಿ ಏಕೆ ಪ್ರಸ್ತಾಪಿಸುತ್ತಿದ್ದೇನೆ ಎಂದರೆ, ರಾಜ್ಯದ ಗೃಹ ಮಂತ್ರಿಗಳಾಗಿ ರಕ್ಷಣೆಯನ್ನು ಒದಗಿಸುವುದು ನಿಮ್ಮ ಕರ್ತವ್ಯವಾಗಿದೆ. ಇವತ್ತಿನ ದಿವಸ ನಾವು ವಿರೋಧ ಪಕ್ಷದ ಸ್ಥಾನದಲ್ಲಿರಬಹುದು ಹಾಗೂ ನಾಳೆ ನೀವು ವಿರೋಧ ಪಕ್ಷದ ಸ್ಥಾನದಲ್ಲಿರಬಹುದು. ಆದರೆ ವಿರೋಧ ಪಕ್ಷದವರನ್ನು ಯಾವ ರೀತಿಯಾಗಿ ನಡೆಸಿಕೊಳ್ಳಬೇಕು ಎನ್ನುವ ಪರಿಜ್ಞಾನ ಮಾನ್ಯ ಗೃಹ ಮಂತ್ರಿಗಳಿಗೆ ಇರಬೇಕು.

**ವೈಸ್ ಛೇರ್ಮನ್**:- ಪ್ರಸ್ತುತ ಗೃಹ ಮಂತ್ರಿಗಳಾಗಿ ಶ್ರೀಯುತ ರಾಮಲಿಂಗಾರೆಡ್ಡಿ ರವರು ಒಬ್ಬ ಗನ್ ಮ್ಯಾನ್‌ನ್ನೂ ಸಹ ಇಟ್ಟುಕೊಂಡಿಲ್ಲ.

**ಶ್ರೀ ಎಂ.ನಾರಾಯಣ ಸ್ವಾಮಿ**:- ಮಾನ್ಯ ಸಭಾಪತಿಯವರೇ, ಈ ಮಾತನ್ನು ನಾವು ಹೇಳಬೇಕೆಂದು ಅಂದು ಕೊಂಡಿದ್ದೆ ಆದರೆ ನೀವು ಅದೇ ಮಾತನ್ನು ಹೇಳುತ್ತೀದ್ದೀರಿ. ಪ್ರಸ್ತುತ ರಾಜ್ಯದ ಗೃಹ ಮಂತ್ರಿಗಳಾಗಿರುವ ಶ್ರೀಯುತ ರಾಮಲಿಂಗಾರೆಡ್ಡಿ ರವರು ಒಬ್ಬ ಗನ್ ಮ್ಯಾನ್ ಅನ್ನೂ ಸಹ ಇಟ್ಟುಕೊಂಡಿಲ್ಲ.

**ಶ್ರೀ ಮಾನೆ ಶ್ರೀನಿವಾಸ್**:- ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಮಂತ್ರಿಗಳು ಬಳಸುವ ವಾಹನಕ್ಕೆ ಯಾವುದೇ ರೀತಿಯ ಕೆಂಪು ದೀಪವೂ ಸಹ ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಇದೇ ಕಾರಣದಿಂದಾಗಿ ನಾನು ಅವರನ್ನು ಸಜ್ಜನ ಎಂಬುದಾಗಿ ಹೇಳಿದ್ದೇನೆ.

**ಶ್ರೀ ಮಾನೆ ಶ್ರೀನಿವಾಸ್**:- ಮಾನ್ಯ ಸಭಾಪತಿಯವರೇ, ಹೀಗಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಸಜ್ಜನರು ನೀಡಿರುವ ಉತ್ತರವನ್ನು ಒಪ್ಪಿಕೊಳ್ಳಬೇಕು.

**ವೈಸ್ ಛೇರ್ಮನ್**:- ಇಲ್ಲಿ ಚರ್ಚೆ ನಡೆಯುತ್ತಿದೆ. ಹೀಗಾಗಿ ಸುಮ್ಮನೆ ಅಡಚಣೆ ಮಾಡಬೇಡಿ. ದಯಮಾಡಿ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸದನದಲ್ಲಿನ ಕೆಲವು ಆಸನಗಳಿಗೆ ಏನಾದರೂ ಮೆಣಸಿನ ಕಾಯಿಯನ್ನು ಇಡಲಾಗಿದೆಯೇ? ಇಲ್ಲಿ ನಾನು ವೈಯಕ್ತಿಕವಾಗಿ ಶ್ರೀ ರಾಮಲಿಂಗಾ ರೆಡ್ಡಿರವರ ಬಗ್ಗೆ ಹೇಳುತ್ತಿಲ್ಲ. ರಾಜ್ಯದ ಗೃಹ ಮಂತ್ರಿಗಳಾಗಿ ಅವರು ಸ್ವಂತ ಕಾರಿನಲ್ಲಿ ಪ್ರಯಾಣ ಮಾಡುತ್ತಾರೆಯೇ? ಸರ್ಕಾರಿ ವಾಹನದಲ್ಲಿ ಪ್ರಯಾಣ ಮಾಡುವುದಿಲ್ಲವೇ? ಅವರ ಮುಂದೆ ಪೈಲಟ್ ಹಾಗೂ ಹಿಂದೆ ಎಸ್ಕಾರ್ಟ್ ವಾಹನಗಳು ಸಂಚರಿಸುವುದಿಲ್ಲವೇ?

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ನಾರಾಯಣ ಸ್ವಾಮಿರವರೇ ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರೇನಾದರೂ ಗೃಹ ಮಂತ್ರಿಗಳೇ? ನೀವು ಗೃಹ ಮಂತ್ರಿಗಳಾಗಿದ್ದರೆ ಮಾತ್ರವೇ ಮಾತನಾಡಿ.

**ಶ್ರೀ ಎಂ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಸತ್ಯವನ್ನು ಹೇಳುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವ ವಿಚಾರವನ್ನೂ ಹೇಳುವುದು ಬೇಡ. ಮಾನ್ಯ ಗೃಹ ಮಂತ್ರಿಗಳು ಮಾತ್ರವೇ ಹೇಳಲಿ. ಹೀಗಾಗಿ ದಯಮಾಡಿ ಅವರು ಕುಳಿತುಕೊಳ್ಳಲಿ.

**ವೈಸ್ ಛೇರ್ಮನ್:-** ಮಾನ್ಯ ಗೃಹ ಮಂತ್ರಿಗಳೇ, ನೀವು ನಂತರದಲ್ಲಿ ಎಲ್ಲದಕ್ಕೂ ಉತ್ತರವನ್ನು ನೀಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಗೃಹ ಮಂತ್ರಿಗಳಾಗಿರುವ ರಾಮಲಿಂಗಾ ರೆಡ್ಡಿ ಅವರಷ್ಟು ಸಜ್ಜನ ನಾನಲ್ಲ. ನನಗೆ ಯಾವುದು ತಪ್ಪು ಎಂದು ಅನಿಸುತ್ತದೆಯೋ ಅಂತಹದಕ್ಕೆ ನಾನು ಕಠೋರ ಭಾಷೆಯಲ್ಲಿಯೇ ಉತ್ತರವನ್ನು ನೀಡುತ್ತೇನೆ. ಅಂತಹ ಸಂದರ್ಭದಲ್ಲಿ ನನಗೆ ಬೆದರಿಕೆಯೊಡ್ಡಲು ಬರುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಾದ ವ್ಯವಸ್ಥೆ ಇದೆ. ವಿರೋಧ ಪಕ್ಷದ ನಾಯಕರಿಗೆ ಅವರ ವಾಹನದ ಮುಂದುಗಡೆ ಪೈಲಟ್ ವಾಹನ ಹಾಗೂ ಹಿಂದುಗಡೆ ಎಸ್ಕಾರ್ಟ್ ವಾಹನದ ವ್ಯವಸ್ಥೆಯನ್ನು ನೀಡಿಲ್ಲವೆಂದಾದರೆ ಇದು ಸರ್ಕಾರ ನಡೆದುಕೊಳ್ಳುವ ರೀತಿಯೇ? ಈ ಕಾರಣಕ್ಕಾಗಿ ನಾನು ಹೇಳುವುದು ಏನೆಂದರೆ, . . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಇಷ್ಟೊಂದು ಭಾಷಣವನ್ನು ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಇವರುಗಳೆಲ್ಲರಿಗೂ ಯಾವುದಾದರೂ ಖಾಯಿಲೆ ಬಂದಿದೆಯೇ? ಕಡೆಯ ಪಕ್ಷ ವೈದ್ಯರನ್ನಾದರೂ ಇಲ್ಲಿಗೆ ಕರೆಸಿ.

**ವೈಸ್ ಛೇರ್ಮನ್:-** ಮಾನ್ಯ ಈಶ್ವರಪ್ಪನವರೇ, ನಿಮ್ಮ ಗಮನಕ್ಕೆ ಒಂದಂಶವನ್ನು ತರಲಿಚ್ಛಿಸುತ್ತೇನೆ. ದಿವಂಗತ ಪಂಡಿತ್ ಜವಾಹರ್‌ಲಾಲ್ ನೆಹರು ರವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ತೆರೆದ ವಾಹನದಲ್ಲಿ ಅವರು ಓಡಾಡುತ್ತಿದ್ದರು. ಅವರಿಗೆ ಹೂವನ್ನು ಹಾಕಲಾಗುತ್ತಿತ್ತು. ಅವರಿಗೆ ಯಾವುದೇ ರೀತಿಯಾದ ರಕ್ಷಣಾ ವ್ಯವಸ್ಥೆ ಇರಲಿಲ್ಲ. ದಿನಕಳೆದಂತೆ, ನಾವು ಎಷ್ಟರ ಮಟ್ಟಿಗೆ ಅಭಿವೃದ್ಧಿಯಾಗಿದ್ದೇವೆ ಎಂದು ಹೇಳಿದರೆ, ಎಲ್ಲರಿಗೂ ರಕ್ಷಣೆ ಬೇಕು ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅಂದಿನ ದಿನಗಳಲ್ಲಿ ಉಗ್ರವಾದಿಗಳು ಇರಲಿಲ್ಲ. ಉಗ್ರವಾದಿಗಳನ್ನು ಬೆಂಬಲಿಸುವಂತಹ ಇಂತಹ ಕಾಂಗ್ರೆಸ್ ಸರ್ಕಾರ ಇರಲಿಲ್ಲ.

**ವೈಸ್ ಛೇರ್ಮನ್:-** ಅಂತಹ ಕಾಲವನ್ನು ನಾವು ನೋಡಿದ್ದೇವೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಮಂತ್ರಿಗಳಿಗೆ ಹೇಳಲಿಚ್ಛಿಸುವುದೇನೆಂದರೆ, ನಿಮ್ಮದೇ ಪಕ್ಕಾ ಸರ್ಕಾರ. ನಿಮ್ಮ ಅಧಿಕಾರಾವಧಿಯಲ್ಲಿ ಒಂದು ಕೊಲೆಯೂ ಸಹ ನಡೆದಿಲ್ಲ. ಕರ್ತವ್ಯ ನಿರ್ವಹಿಸುತ್ತಿರುವ ಯಾವುದೇ ಎ.ಸಿ., ಡಿ.ಸಿ.ಗಳಿಗೆ ಯಾವುದೇ ರೀತಿಯಾದ ಭಯವೂ ಸಹ ಇಲ್ಲ. ನಿಮ್ಮ ಸರ್ಕಾರದ ಅಧಿಕಾರಾವಧಿಯಲ್ಲಿ ಹಗಲು ರಾತ್ರಿಯಲ್ಲಿ ಹೆಣ್ಣು ಮಕ್ಕಳು ಆರಾಮವಾಗಿ ನಡೆದುಕೊಂಡು ಹೋಗುತ್ತಿದ್ದಾರೆ. ಯಾವುದೇ ಒಂದು ಅತ್ಯಾಚಾರ ಪ್ರಕರಣಗಳಾಗಿಲ್ಲ ಹಾಗೂ ಯಾವುದೇ ಒಬ್ಬ ಹಿಂದೂಗಳ ಕೊಲೆಗಳಾಗಿಲ್ಲ. ನಾನು ಹೇಳುವುದೇನೆಂದರೆ. . . .

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ದಿವಗಂತ ಪಂಡಿತ್ ಜವಾಹರ್‌ಲಾಲ್ ನೆಹರುರವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ತೆರೆದ ವಾಹನದಲ್ಲಿ ಓಡಾಡುತ್ತಿದ್ದರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂತಹ ಅರ್ಥ ಮಾತನ್ನು ಮಾತ್ರವೇ ನೀವು ಹೇಳಿದ್ದೀರಿ. ನಂತರ ದಿನಗಳಲ್ಲಿ ಬುಲೆಟ್ ಫ್ರೂಫ್ ಕಾರಿನಲ್ಲಿ ಯಾವ ಪ್ರಧಾನ ಮಂತ್ರಿ ಪ್ರಯಾಣಿಸುತ್ತಿದ್ದರು ಎಂಬುದನ್ನು ನೀವು ಪ್ರಸ್ತಾಪ ಮಾಡಲಿಲ್ಲ. ಅದನ್ನು ಹೇಳಿ.

**ವೈಸ್ ಛೇರ್ಮನ್:-** ಇಂತಹ ರಕ್ಷಣಾ ವ್ಯವಸ್ಥೆಗೆ ನಾವುಗಳೆಲ್ಲರೂ ಕಾರಣಕರ್ತರಾಗಿದ್ದೇವೆ ಹೊರತು ಬೇರೆಯವರು ಅಲ್ಲ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಆದರೆ ನೀವು ಹೇಳುತ್ತಿರುವ ವಿಚಾರ ಹೇಗಿದೆ ಎಂದರೆ, ಏಕಾಏಕಿ ಪ್ರಸ್ತುತ ದೇಶದ ಪ್ರಧಾನ ಮಂತ್ರಿಗಳಾದ ಶ್ರೀಯುತ ನರೇಂದ್ರ ಮೋದಿ ರವರು ಬುಲೆಟ್ ಫ್ರೂಫ್ ಕಾರಿನಲ್ಲಿ ಓಡಾಡುತ್ತಿದ್ದಾರೆ ಎಂಬುದಾಗಿದೆ. ನೀವು ಹೇಳಿರುವ ಕಥೆಯು ಅಪೂರ್ಣವಾಗಿದ್ದು ಅದನ್ನು ಮುಂದುವರೆಸಿ ಹೇಳಿ.

**(ಗೊಂದಲ)**

**ವೈಸ್ ಛೇರ್ಮನ್:-** ಆಧುನಿಕತೆ ಎನ್ನುವುದು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಇಂತಹ ಮಟ್ಟದಲ್ಲಿ ಆಧುನಿಕತೆ ಬೇಕೆ ಎನ್ನುವ ವಿಚಾರವನ್ನು ನಾವುಗಳೆಲ್ಲರೂ ಯೋಚನೆ ಮಾಡಬೇಕಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ನಮ್ಮ ರಾಜ್ಯದಲ್ಲಿ ಕನಿಷ್ಟವಾಗಿ ಇದ್ದಾರೆ. ಅಂತಹವರುಗಳಿಗೆ ರಕ್ಷಣೆ ಬೇಡವೇ? ಶ್ರೀಮತಿ ಸವಿತಾ ಹೂಗಾರ್ ಎನ್ನುವಂತಹ ಪೋಲೀಸ್ ಉಪ ಅಧೀಕ್ಷಕರೊಬ್ಬರು ಅಕ್ರಮ ಮರಳು ಸಾಗಣಿಕೆಯ ಬಗ್ಗೆ ತನಿಖೆಗಾಗಿ ತೆರಳಿದಾಗ, ಅವರ ಮೇಲೆಯೇ ಲಾರಿಯನ್ನು ಹಾಯಿಸಲು ಹೋಗಿದ್ದರು. ಪಾಂಡವಪುರ ತಾಲ್ಲೂಕಿನ ಸಹಾಯಕ ಆಯುಕ್ತರಾದ ಶ್ರೀಯುತ ಹೆಚ್.ಎಲ್.ನಾಗರಾಜು, ಹಾಸನ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೋಲೀಸ್ ನಿರೀಕ್ಷಕರಾದ ಶ್ರೀಯುತ ಮಂಜೇಗೌಡರು ಇಂತಹ ಹಲವಾರು ವ್ಯಕ್ತಿಗಳ ಉದ್ದನೆಯ ಪಟ್ಟಿ ಇದೆ. ನಿಷ್ಠಾವಂತ ಅಧಿಕಾರಿಗಳಾಗಿರುವ ಶ್ರೀಮತಿ ಶಿಖಾ ಹಿಂದಿನ ಜಿಲ್ಲಾಧಿಕಾರಿಗಳು ಹಾಗೂ ಶ್ರೀ ಅಭಿನವ್ ಖರೆ ಹಿಂದಿನ ಪೋಲೀಸ್ ಅಧೀಕ್ಷಕರು ಇಂತಹವರ ದೊಡ್ಡ ಪಟ್ಟಿಯಿದೆ. ಇದಾದ ನಂತರ ನಾನು ವಿರೋಧ ಪಕ್ಷದ ನಾಯಕನಾಗಿ ಮೈಸೂರಿನಲ್ಲಿ ಅಧಿಕಾರಿಗಳನ್ನು ಅಕ್ರಮ ಮರಳು ದಂಧೆಯ ಪರಿಸ್ಥಿತಿ ಬಗ್ಗೆ ವಿಚಾರಿಸಿದಾಗ, ಅವರುಗಳೆಲ್ಲರೂ ಯಾವುದೇ ರೀತಿಯಾದ ಸಮಸ್ಯೆ ಇಲ್ಲ ಎಂಬುದಾಗಿ ಹೇಳಿದರು. ಇದು ನೈಜ ಘಟನೆಯಾಗಿದೆ. ಇದಕ್ಕೆ ಪ್ರತ್ಯುತ್ತರವಾಗಿ ನಾನು ನನ್ನ ಜೊತೆ ಬನ್ನಿ ಅರ್ಧ ಗಂಟೆಯಲ್ಲಿ 400 ಲೋಡ್ ಮರಳನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಳ್ಳಸಾಗಣಿಕೆಯ ಮೂಲಕ ಅಕ್ರಮವಾಗಿ ಕೊಡಿಸುತ್ತೇನೆ ಎಂಬುದಾಗಿ ಹೇಳಿದೆನು. ಅದಕ್ಕೆ ಸದರಿ ಅಧಿಕಾರಿಗಳು ತಮ್ಮ ಬಳಿಯಿದ್ದ ಛಾಯಾಚಿತ್ರಗಳನ್ನು ತೆಗೆದು ತೋರಿಸಿ, ಹೌದು ಈ ಪ್ರದೇಶದಲ್ಲಿ ಅಕ್ರಮವಾಗಿ ಮರಳು ದಂಧೆಯು ನಡೆಯುತ್ತಿದೆ, ಇಲ್ಲವೆಂದಲ್ಲ. ಗೂಂಡಾಗಳಿರುವ ಕೆಲವೊಂದು ಛಾಯಾಚಿತ್ರಗಳನ್ನು ತೋರಿಸಿದರು. ನಂತರದಲ್ಲಿ ಅವರುಗಳು ತಮಗೂ ಸಹ ಮಕ್ಕಳಿದ್ದಾರೆ, ಸರ್ಕಾರವನ್ನು ನಂಬಿಕೊಂಡು ಕೆಲಸ ಮಾಡಿದರೆ, ಆಕಸ್ಮಾತಾಗಿ ನನ್ನ ಮಕ್ಕಳು ಸತ್ತರೆ ಯಾರು ಜವಾಬ್ದಾರರು ಎಂಬುದಾಗಿ ನನ್ನನ್ನು ಪ್ರಶ್ನೆ ಮಾಡಿದರು. ಇದಕ್ಕೆ ನಾನು ನಿರುತ್ತರನಾದೆನು. ಯಾವ ಪ್ರಾಮಾಣಿಕ ಅಧಿಕಾರಿಗಳಿಗೆ ನಾವು ನಿಮ್ಮ ಜೊತೆಗೆ ಇದ್ದೇವೆ, ನೀವುಗಳು ಮುನ್ನುಗ್ಗಿ ಕೆಲಸವನ್ನು ಮಾಡಿ ಎಂಬುದಾಗಿ ಬೆಂಬಲವನ್ನು ಸರ್ಕಾರವು ನೀಡಿದಾಗ ಮಾತ್ರವೇ, ಕೊಲೆಗಡುಕರನ್ನು, ಅತ್ಯಾಚಾರಿಗಳನ್ನು, ಅಕ್ರಮ ದಂಧೆಗಳನ್ನು ಮಾಡುವಂತಹ ವ್ಯಕ್ತಿಗಳು ಇತ್ಯಾದಿ ಯಾರೇ ಇರಬಹುದು ಅಂತಹವರುಗಳ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಬಹುದು. ಪ್ರಾಮಾಣಿಕ ಅಧಿಕಾರಿಗಳಿಗೆ ಸರ್ಕಾರವು ನಮ್ಮ ಜೊತೆಗೆ ಇದೆ, ಹೀಗಾಗಿ ಯಾವುದೇ ಕಾರಣಕ್ಕಾದರೂ ಸರಿ ತಪ್ಪಿತಸ್ಥರ ಅಕ್ರಮ ದಂಧೆಗಳಿಗೆ ಬೆಂಬಲವನ್ನು ನೀಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮನೋಭಾವನೆ ಬರುತ್ತದೆ. ಶ್ರೀ ರಾಮಲಿಂಗಾ ರೆಡ್ಡಿರವರೆ ತಾವು ಇತ್ತೀಚೆಗೆ ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಈ ವಿಚಾರದಲ್ಲಿ ನಾನು ಏನು ಮಾಡಲಿಕ್ಕೆ ಸಾಧ್ಯ ಎಂಬುದಾಗಿ ಹೇಳಬಹುದು. ನೀವುಗಳು ಮುಸಲ್ಮಾನ ಸಮುದಾಯದ ಪರವಾಗಿ ಹಾಗೂ ನಾವುಗಳು ಹಿಂದೂ ಸಮುದಾಯದ ಪರವಾಗಿ ವಾದಗಳನ್ನು ಮಾಡುತ್ತಿದ್ದೇವೆ ಎನ್ನುವ ಭಾವನೆ ಇದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ.

**(ಗೊಂದಲ)**

**VICE CHAIRMAN:-** That is not the subject.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೇ, ನಾವು ಯಾವುದೇ ಜಾತಿಯ ಪರವಾಗಿ ವಾದವನ್ನು ಮಾಡುತ್ತಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಆದರೆ ಪರಿಸ್ಥಿತಿ ಹಾಗೆ ಇಲ್ಲ. ಹೀಗಾಗಿ ನಾನೊಂದು ಮಾತನ್ನು ಉಲ್ಲೇಖಿಸಿದ್ದೇನೆ. ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿ ರವರು ಹೇಳಿರುವ ಮಾತನ್ನೂ ಸಹ ನಾನು ನಿನ್ನೆಯ ದಿವಸ ಉಲ್ಲೇಖ ಮಾಡಿದ್ದೇನೆ. ಸದರಿಯವರು ನಾನೊಬ್ಬ ಹಿಂದೂ, ನನ್ನ ಧರ್ಮಕ್ಕೆ ಪೂಜಿಸುತ್ತೇನೆ ಹಾಗೂ ಬೇರೆ ಧರ್ಮಕ್ಕೆ ಗೌರವಿಸುತ್ತೇನೆ ಎಂಬುದಾಗಿ ಹೇಳಿದ್ದಾರೆ. ಶ್ರೀ ನರೇಂದ್ರ ಮೋದಿರವರ ರಕ್ತ ನನ್ನ ಮೈಯ್ಯಲ್ಲಿ ಹರಿಯುತ್ತಿದೆ. ನಾನೂ ಸಹ ಹಾಗೆಯೇ ವರ್ತಿಸುತ್ತೇನೆ. ಸರ್ಕಾರವು ಕೊಲೆಗಡುಕರ ಪರವಾಗಿ ನಿಂತುಕೊಂಡರೆ ನಾನು ಏನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಲಿ. ಈ ಸರ್ಕಾರವು ಕೊಲೆಗಡುಕರ ಪರವಾಗಿ ನಿಲ್ಲುತ್ತಿದೆ. ಇದರ ಲಾಭವನ್ನು ಪಡೆದುಕೊಂಡು ಅವರುಗಳು ಲೂಟಿಯನ್ನು ಮಾಡುತ್ತಿದ್ದಾರೆ. ಹೀಗಾಗಿ ಅವರುಗಳಿಗೆ ಭಯವಿಲ್ಲ. ಅವರುಗಳು ಪರವಾಗಿ ನೀವು ಇದ್ದೀರಿ. ರಾಜ್ಯದ ಹೆಣ್ಣುಮಕ್ಕಳ ಮೇಲೆ ಆಗುತ್ತಿರುವ ಅತ್ಯಾಚಾರದ ವಿಚಾರವಾಗಿ ವರದಿಯನ್ನು ಸಲ್ಲಿಸಿದ್ದರೂ ಸಹ, ಸದರಿ ವರದಿ ಎಲ್ಲಿದೆ ಎಂಬ ಬಗ್ಗೆ ಮಾಹಿತಿಯೂ ಸಹ ಸರ್ಕಾರಕ್ಕೆ ಇಲ್ಲ. ಇದನ್ನು ನಾವು ಸರ್ಕಾರ ಎಂದು ಕರೆಯಬೇಕೆ? ಅದಕ್ಕಾಗಿ ನಾನು ಹೇಳುವುದೇನೆಂದರೆ, ಮಾನ್ಯ ಗೃಹ ಮಂತ್ರಿಗಳೇ ನೀವು ಈ ರೀತಿಯಾಗಿ ಕೊಡುತ್ತಿರುವ ಉತ್ತರವು ಖಂಡತವಾಗಿಯೂ ಸಹ ರಾಜಕೀಯ ಉತ್ತರವಾಗಿದೆ. ಕೊಲೆಗಳು ಆದಂತಹ ಸಂದರ್ಭದಲ್ಲಿ ಕೊಲೆಗಡುಕರನ್ನು ಬಲಿ ಹಾಕುತ್ತೇವೆ ಎಂಬುದಾಗಿ ಹೇಳಿ, ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ.ಗಳ ದೂಷಣೆಯನ್ನು ಮಾಡುವುದಕ್ಕೆ ಹೋಗಬೇಡಿ. ಈಗ ನಿಮಗೆ ಕೆಲಸವನ್ನು ನಿರ್ವಹಿಸಲು ಅವಕಾಶ ಸಿಕ್ಕಿದೆ. ಇಂತಹ ಸಂದರ್ಭದಲ್ಲಿ ಇನ್ನೆರೆಡು ತಿಂಗಳುಗಳ ಕಾಲ ರಾಜ್ಯದಲ್ಲಿ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಲು ಪ್ರಯತ್ನವನ್ನು ಮಾಡಿ. ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಎಂಬಿತ್ಯಾದಿಯಾಗಿ ಸಮುದಾಯದ ಹೆಸರುಗಳನ್ನು ಹೇಳಿಕೊಂಡು ನಾಟಕ ಮಾಡಿ, ಅವರವರೊಳಗೆ ಆಂತರಿಕವಾಗಿ ಬೆಂಕಿಯನ್ನು ಹಚ್ಚಿ ಅದರ ಮುಖಾಂತರ ರಾಜಕೀಯವನ್ನು ಮಾಡುವಂತಹ ಪ್ರಯತ್ನವನ್ನು ನಡೆಸಬೇಡಿ ಎನ್ನುವಂತ ಮಾತುಗಳನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಹೇಳಿದ ಎಲ್ಲಾ ಅಂಶಗಳಿಗೂ ಸಹ ತಾವು ಉತ್ತರವನ್ನು ನೀಡಬೇಕು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ನಿನ್ನೆಯ ದಿನ ಸದನದಲ್ಲಿ ಮಾತನಾಡುತ್ತಿದ್ದಾಗ ನನ್ನ ವೈಯಕ್ತಿಕ ವಿಚಾರವೊಂದನ್ನು ಪ್ರಸ್ತಾಪಿಸಿದ್ದೆನು. ನನಗೆ 78 ವರ್ಷಗಳಾಗಿದ್ದು, ನಾನು ಹಿರಿಯ ನಾಗರೀಕನಾಗಿದ್ದೇನೆ. ಎರಡು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದು, ಮಂತ್ರಿಯಾಗಿಯೂ ಸಹ ಕೆಲಸವನ್ನು ನಿರ್ವಹಿಸಿದ್ದೇನೆ. ನಾನು ಪೋಲೀಸರಿಗೆ ದೂರನ್ನು ನೀಡಿದ್ದರೆ, ಅವರುಗಳು ಆ ದೂರಿನ ಬಗ್ಗೆ ಆಸಕ್ತಿಯನ್ನು ವಹಿಸಬೇಕೆ ಅಥವಾ ಬೇಡವೇ? ಈ ಬಗ್ಗೆ ನೀವೇ ಹೇಳಿ. ನನಗೇ ಈ ರೀತಿಯಾದರೆ, ಇನ್ನು ಸಾಮಾನ್ಯ ನಾಗರೀಕರ ಗತಿ ಏನು? ಯಾರೋ ಒಬ್ಬ ಪುಂಡ ನನ್ನ ಮೇಲೆ ಹಲ್ಲೆ ಮಾಡಿದಾಗ ನಾನು ಸಾಕ್ಷ್ಯಾಧಾರಗಳು ಹಾಗೂ ಸೂಕ್ತ ದಾಖಲೆಗಳೊಂದಿಗೆ ದೂರನ್ನು ನೀಡಿದ್ದೇನೆ. ನಾನು ದೂರು ನೀಡಿದ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು ಒಳ್ಳೆಯ ವ್ಯಕ್ತಿಯಾಗಿದ್ದಾರೆ. ಆದರೆ ಅದೇ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪ ಪೋಲೀಸ್ ನಿರೀಕ್ಷಕರು ನನ್ನ ದೂರನ್ನು ಮುಕ್ತಾಯಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಈ ವಿಚಾರದಲ್ಲಿ ನಿಮ್ಮ ಇಲಾಖೆಯ ಕಛೇರಿಯಿಂದಲೂ ಸಹ ಕೆಲವರು ಶಿಫಾರಸ್ಸು ಮಾಡಿ ದೂರವಾಣಿ ಕರೆಯನ್ನು ಮಾಡುತ್ತಾರೆ. ಅವರು ಯಾರು ಎಂದು ನಿಮಗೂ ಸಹ ಗೊತ್ತಿರುವ ವಿಚಾರವಾಗಿದೆ. ನಾನು ಹಾಗೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವು ಬಹಳ ಹಳೆಯ ಸ್ನೇಹಿತರಾಗಿದ್ದೇವೆ. ನಿಮ್ಮ ತಂದೆಯವರೂ ಸಹ ನನಗೆ ಗೊತ್ತಿದ್ದಾರೆ. ಆದ್ದರಿಂದ ದಯವಿಟ್ಟು ನನ್ನ ವಿಚಾರದಲ್ಲಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹಾಗೂ ನ್ಯಾಯವನ್ನು ದೊರಕಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಜಿ.ಪುಟ್ಟಸ್ವಾಮಿರವರು ಮಾನ್ಯ ಸಭಾಪತಿಯವರಿಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡಿದರು.)**

ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು 19,380 ರಷ್ಟು ದಾಖಲಾಗಿವೆ.

**ವೈಸ್ ಛೇರ್ಮನ್**:- ಈಗಾಗಲೇ ಈ ವಿಷಯದಲ್ಲಿ ಅಂಕಿ-ಅಂಶಗಳನ್ನು ಸಲ್ಲಿಸಲಾಗಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಕತ್ತು ಕತ್ತರಿಸುವವರ ವಿಚಾರದಲ್ಲಿ ಸರ್ಕಾರವು ಸ್ವಲ್ಪ ಎಚ್ಚರಿಕೆಯನ್ನು ತೆಗೆದುಕೊಂಡರೆ ಒಳ್ಳೆಯದು.

**ವೈಸ್ ಛೇರ್ಮನ್**:- ಗೃಹ ಮಂತ್ರಿಗಳಿಗೆ ಎಲ್ಲಾ ವಿಚಾರಗಳು ಗೊತ್ತಾಗುತ್ತದೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್(ನಾಮನಿರ್ದೇಶಿತರು)**:- ಮಾನ್ಯ ಸಭಾಪತಿಯವರೇ, ನಾನು ಈ ಸದನದ ಮೂಲಕ ಮಾನ್ಯ ಗೃಹ ಮಂತ್ರಿಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿರುವಂತೆ, ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದೋ ಒಂದು ಸಮಾವೇಶದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಎನ್ನುವ ಘೋಷಣೆಯನ್ನು ಮಾಡಿದವರ ವಿರುದ್ಧ ಇಲ್ಲಿಯವರೆವಿಗೂ ಸಹ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ್ದಾರೆ ಎನ್ನುವ ಕಾರಣಕ್ಕಾಗಿ ಅಲ್ಲ. ಯಾವ ಪೋಲೀಸರು ಸದರಿ ಘಟನೆಯ ಬಗ್ಗೆ ದಾಖಲಿಸಿದ್ದಾರೆ. ತಪ್ಪಿತಸ್ಥರನ್ನು ಗಲ್ಲಿಗೇರಿಸಿ. ನಮ್ಮ ದೇಶದಲ್ಲಿದ್ದುಕೊಂಡು ಪಾಕಿಸ್ತಾನ ದೇಶದ ಪರವಾಗಿ ಘೋಷಣೆಯನ್ನು ಕೂಗುತ್ತಿದ್ದರು. ಈ ವಿಚಾರದಲ್ಲಿ ಕೇವಲ ಹೇಳಿಕೆಗಳನ್ನು ಹೇಳಿದರೆ ಸಾಲದು ಆದರೆ ಅಗತ್ಯ ದಾಖಲಾತಿಗಳನ್ನು ಒದಗಿಸಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಸಭಾಪತಿಯವರೇ, ಈ ಘಟನೆಗೆ ಸಂಬಂಧಪಟ್ಟಂತೆ ಸಿ.ಸಿ.ಕ್ಯಾಮೆರಾದಲ್ಲಿ ದಾಖಲಾಗಿದೆ.

**ಶ್ರೀ ಕೆ.ಅಬ್ದುಲ್ ಜಬ್ಬಾರ್**:- ಮಾನ್ಯ ಸಭಾಪತಿಯವರೇ, ಯಾರು ಈ ರೀತಿಯಾಗಿ ನಮ್ಮ ದೇಶದಲ್ಲಿ ದೇಶದ್ರೋಹ ಕೃತ್ಯಗಳಲ್ಲಿ ಎಸಗಿ, ನಮ್ಮಲ್ಲಿ ಒಡಕುತನವನ್ನು ಮೂಡಿಸುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸಗಳನ್ನು ಮಾಡುತ್ತಿದ್ದಾರೆ ಅಂತಹ. ತಪ್ಪಿತಸ್ಥರಿಗೆ ಗಲ್ಲಿಗೇರಿಸುವ ಸಜೆಯನ್ನು ವಿಧಿಸಬೇಕೆಂದು ತಮ್ಮ ಮುಖಾಂತರ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನಾನು ಎರಡು ವಿಚಾರಗಳಲ್ಲಿ ಸ್ಪಷ್ಟೀಕರಣವನ್ನು ಕೇಳಲಿಚ್ಛಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾವು ಏನಾದರೂ ಗೃಹ ಮಂತ್ರಿಗಳನ್ನು ನೆಚ್ಚಿಕೊಂಡು ಭಾಷಣ ಮಾಡಿದರೆ ನಮಗೆ ಉತ್ತರ ದೊರೆಯುವುದಿಲ್ಲ. ಈ ಕಡೆ ಮಂತ್ರಿಗಳೂ ಇಲ್ಲ ಆ ಕಡೆ ಅಧಿಕಾರಿಗಳೂ ಸಹ ಇಲ್ಲ. ನಮಗೆ ನೀಡಿರುವ ಉತ್ತರವನ್ನು ನೋಡಿದ್ದೀರಲ್ಲವೇ, ಇನ್ನು ಮುಂದೆ ನಾವು ಅಧಿಕಾರಿಗಳು ಸಭೆಗೆ ಬಂದರೆ ಮಾತ್ರವೇ ಪ್ರಶ್ನೆಗಳನ್ನು ಕೇಳುತ್ತೇವೆ ಇಲ್ಲವೆಂದಾದರೆ ಕೇಳುವುದಿಲ್ಲ. ಕನಿಷ್ಟವಾಗಿ ಇಲಾಖೆಯ ಮಂತ್ರಿಗಳಾದರೂ ಸರಿ ಸಭೆಯಲ್ಲಿ ಹಾಜರಿರಬೇಕು. ಬೇಜವಾಬ್ದಾರಿಯಿಂದ ಇರುವ ಇವರುಗಳನ್ನು ಹೀಗೆಯೇ ಬಿಡುವುದಕ್ಕಾಗುವುದಿಲ್ಲ.

**(ಮುಂದು)**

(057) 02.20/07-02-2018/ ಸಿಎಸ್/ವಿಕೆ

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರ ಬಗ್ಗೆ ನನಗೂ ಹಾಗೂ ನನ್ನ ಪಕ್ಷದವರಿಗೂ ಒಂದು ಒಳ್ಳೆಯ ಅಭಿಪ್ರಾಯವಿದೆ. ಮಾನ್ಯ ಗೃಹಸಚಿವರು "ನಾನು ಎರಡು ವರ್ಷ ಮೊದಲೇ ಅಧಿಕಾರ ಸ್ವೀಕಾರ ಮಾಡಿದ್ದರೆ, ಈ ರಾಜ್ಯದಲ್ಲಿ ಸಾಕಷ್ಟು ಬದಲಾವಣೆಗಳನ್ನು ತರುತ್ತಿದ್ದೆನು" ಎಂದು ಬಹಳ frank ಆಗಿ ಹೇಳಿದರು. ಅವರು ಮನಸ್ಸು ಬಿಚ್ಚಿ ಮಾತನಾಡಿದ್ದರು. He has given his opinion. I am coming to the point.

**ಶ್ರೀ ಕೆ,ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಕೂಡ ಇದೇ ಮಾತನ್ನು ಕನ್ನಡದಲ್ಲಿಯೇ ಹೇಳಿದ್ದೇನೆ, ಉರ್ದು ಭಾಷೆ ಅಥವಾ ಮಲಯಾಳಂ ಭಾಷೆಯಲ್ಲಿ ಹೇಳಿರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಅವರೇನು ತಪ್ಪು ಮಾತುಗಳನ್ನು ಹೇಳಿಲ್ಲ. He has given his opinion. ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಮಾನ್ಯ ಸಚಿವರು ಉತ್ತರ ನೀಡುವ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಕೊಲೆ, ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ನಡೆದಿಲ್ಲ, ಸರಗಳ್ಳರು ಇಲ್ಲ, ಯಾವುದೇ ಜಾತಿ ಜಗಳ ಆಗಿಲ್ಲ. ಹಿಂದೂ –ಮುಸ್ಲೀಮ್ ಗಲಭೆಗಳು ನಡೆದಿಲ್ಲ, ಹಿಂದಿನ ಸರ್ಕಾರ ಹೋದ ಮೇಲೆ ನಾವು ಇಷ್ಟು ಚೆನ್ನಾಗಿ ಆಡಳಿತ ನಡೆಸಿದ್ದೇವೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆಂದು ನಾವು ಭಾವಿಸಿದ್ದೆವು. ಆದರೆ ಗೃಹಸಚಿವರು ಹಾಗೆ ಹೇಳದೇ compare ಮಾಡಲಿಕ್ಕೆ ಪ್ರಾರಂಭಿಸಿದರು. ಹಿಂದಿನ ಸರ್ಕಾರದ ಆಡಳಿತಾವಧಿಯಲ್ಲಿ 6000 ಜನರು ಸತ್ತಿದ್ದರೆ, ಈಗ ನಮ್ಮ ಸರ್ಕಾರದ ಆಡಳಿತದಲ್ಲಿ 4000 ಜನರು ಸತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. Is it the state that you have to compare? ಒಬ್ಬ ದಾರ್ಶನಿಕರು ಹೇಳುವುದೇನೆಂದರೆ, "we have accepted the state to save my life, to save my property. Therefore, we have given contract to you to rule us. It is not that we have to die here under the state ship" ಈ ರೀತಿಯ ಮಾತುಗಳನ್ನು ಮಾನ್ಯ ಗೃಹಸಚಿವರು ಹೇಳುತ್ತಾರೆಂದು ನಾನು ಭಾವಿಸಿದ್ದೆನು. ಆದರೆ ಈಗ ಕೊಲೆಗಳು ನಡೆಯುತ್ತಿವೆ, ಹೆಣ್ಣುಮಕ್ಕಳು ಹಾಗೂ ಮಕ್ಕಳ ಮೇಲೆ ಅತ್ಯಾಚಾರಗಳು ನಡೆಯುತ್ತಲೇ ಇವೆ., *POCSO (*The Protection of Children from Sexual Offences) Act ಬಂದ ಸಲುವಾಗಿ ಈಗ ಹೆಚ್ಚಾಗಿ ಆಗಿದೆ ಎನ್ನುವುದು, this is not the answer which were are expecting from the Hon'ble Home Minister. ಮಾನ್ಯ ಗೃಹಸಚಿವರು "ಹಿಂದಿನ ಸರ್ಕಾರದಲ್ಲಿ 40 ಪ್ರಕರಣಗಳು ನಡೆದಿದ್ದವು ಈಗ ನಾವು ಅಧಿಕಾರಕ್ಕೆ ಬಂದ ಮೇಲೆ 2 ಪ್ರಕರಣ ನಡೆದಿವೆ., This was the answer which I was expecting. ಇದರ ಜೊತೆಗೆ ಪ್ರಮುಖವಾಗಿ ಮಾನ್ಯ ಕಲ್ಬುರ್ಗಿಯವರು ಹಾಗೂ ಶ್ರೀಮತಿ ಗೌರಿ ಲಂಕೇಶ್‌ರವರ ಕೊಲೆಗಳ ಬಗ್ಗೆ ಗೃಹಸಚಿವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. Where these cases stand? Are they ordinary men? ಮಾನ್ಯ ಎಂ.ಎನ್. ಕಲ್ಬುರ್ಗಿಯವರು ಈ ರಾಜ್ಯದ ವಿದ್ವಾಂಸರಲ್ಲಿ ಒಬ್ಬರು, ವಚನ ಸಾಹಿತ್ಯದ ರಚನೆ ಮತ್ತು ಈ ರಾಜ್ಯದಲ್ಲಿ ಕನ್ನಡ ಸಾಹಿತ್ಯಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹ ಸಾಹಿತಿ ಸತ್ತು 3 ವರ್ಷಗಳು ಕಳೆದಿವೆ. ಶ್ರೀಮತಿ ಗೌರಿ ಲಂಕೇಶ್‌ರವರು ದೊಡ್ಡ ಮನೆತನದವರು, ಈ ರಾಜಕೀಯದಲ್ಲಿ ಮುಕ್ತವಾಗಿ ಪತ್ರಿಕೆಯನ್ನು ತಂದಂತಹ ಒಂದು ಮನೆತನ. ಆಕೆಯ ಕೊಲೆ ನಡೆದಿದೆ. ಇದರ ಬಗ್ಗೆ ಕೂಡ ಮಾನ್ಯ ಗೃಹಸಚಿವರು ಯಾವುದೇ ಮಾಹಿತಿ ನೀಡಿರುವುದಿಲ್ಲ. People are waiting to know your answer. ಇದನ್ನೆಲ್ಲ ಬಿಟ್ಟು ಬೇರೆಲ್ಲ ಉತ್ತರವನ್ನು ಗೃಹಸಚಿವರು ನೀಡಿದ್ದಾರೆ. You kindly tell where these two murder cases are standing? I want answer about this. Narendra Dabholkar ಹತ್ಯೆ ಪೂನಾದಲ್ಲಿ ಆಯಿತು, ಅದೇ ರೀತಿ Govind *Pansare*

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹತ್ಯೆ ಕೂಡ ಆಯಿತು. ಅದರ ***ಬಗ್ಗೆ ನಾವು*** ಬೇರೆ ಕಡೆಗಳಲ್ಲಿ ಆದ ವಿಚಾರಗಳು ನನಗೆ ಬೇಕಾಗಿಲ್ಲ. ನನಗೆ ಈ ಇಬ್ಬರು ವ್ಯಕ್ತಿಗಳ ಕೊಲೆ ಮಾಡಿರುವವರ ಬಗ್ಗೆ ಮಾಹಿತಿ ಬೇಕಾಗಿದೆ. ಏಕೆಂದರೆ ಪರಿಸ್ಥಿತಿ ಹೀಗೆ ಮುಂದುವರೆದರೆ ನಾಳೆ ನನ್ನ ಕೊಲೆ ಆದರೂ ಸಹ ಯಾರು ಕೇಳುವವರು ಇರುವುದಿಲ್ಲ. ಮಾನ್ಯ ಈಶ್ವರಪ್ಪನವರಿಗೂ ಸಹ ಜೀವ ಬೆದರಿಕೆ ಕರೆಗಳು ಬರುತ್ತಿವೆ, ಅವರನ್ನು ಸಹ ಯಾರು ಕೇಳುವವರಿಲ್ಲ. ಎಲ್ಲಿಯವರೆಗೆ ಈ ಕೊಲೆಗಡುಕರನ್ನು ಹಿಡಿಯುವುದಿಲ್ಲ, ಅಲ್ಲಿಯವರೆಗೆ ನಮಗೆ ಭಯ ಇದ್ದೇ ಇರುತ್ತದೆ. ಸರ್ಕಾರ ದಯಮಾಡಿ, ಕೊಲೆಯಾದ ಈ ಪತ್ರಕರ್ತರ ಹಾಗೂ ಲೇಖಕರ ಕೊಲೆಕಡುಕರು ಯಾರು ಎನ್ನುವುದರ ಬಗ್ಗೆ ಮಾಹಿತಿ ನೀಡಬೇಕು. ನಾವು ದಿನ ಪತ್ರಿಕೆಗಳಲ್ಲಿ ಕೊಲೆಗಡುಕರ ಸುಳಿವು ಸಿಕ್ಕಿದೆ, we are in the position to trap them ಎನ್ನುವುದನ್ನು ಓದುತ್ತಲೇ ಇದ್ದೇವೆ. ಅದನ್ನೆಲ್ಲ ಬಿಟ್ಟು ಈ ಬಗ್ಗೆ ಸದನಕ್ಕೆ ಸರಿಯಾದ ವರದಿಯನ್ನು ನೀಡಬೇಕೆಂದು ಗೃಹಸಚಿವರನ್ನು ನಾನು ಕೋರುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಗೃಹ ಸಚಿವರು ಅತ್ಯಂತ ಸರಳ ಜೀವಿಗಳು. ಇವತ್ತು crime rate ಕಡಿಮೆ ಆಗುತ್ತಿರುವುದನ್ನು ನಾವೆಲ್ಲರೂ ಕೂಡ ಗಮನಿಸಿದ್ದೇವೆ. ಅದಕ್ಕಾಗಿ ಸರ್ಕಾರವನ್ನು ಹಾಗೂ ಗೃಹಸಚಿವರನ್ನು ನಾನು ಅಭಿನಂದಿಸುತ್ತೇನೆ. ಆದರೆ ನಾನು ಸರ್ಕಾರವನ್ನು ಕೇಳಬಯಸುವುದೇನೆಂದರೆ ನಮ್ಮ ರಾಜ್ಯದಲ್ಲಿ ಮತ್ತಷ್ಟು crime rate ಕಡಿಮೆ ಆಗಬೇಕಾಗಿದೆ. National average of conviction rate is 2.8 percent. ನಮ್ಮ ರಾಜ್ಯದಲ್ಲಿ ಶೇಕಡ 50ರಷ್ಟು conviction rate ಕಡಿಮೆ ಆದರೆ crime ಮಾಡಬಾರದೆನ್ನುವ ಒಂದು ಸಂದೇಶ ನಮ್ಮ ಸಮಾಜಕ್ಕೆ ರವಾನೆ ಆಗುತ್ತದೆ. ಈ conviction rate ಇಷ್ಟಾಗಬೇಕಾದರೆ investigation ೯೦ ದಿವಸಗಳಲ್ಲಿ ಮುಗಿಸಬೇಕು. ಸೆಕ್ಷನ್ 376 ಆದರೆ Charge Sheet ಹಾಕಿದ ನಂತರ 60 ದಿವಸಗಳಲ್ಲಿ case trial ಆಗಬೇಕು ಎಂದು CrPC ನಲ್ಲಿದೆ. ಅಂದರೆ ಒಟ್ಟು 5 ತಿಂಗಳುಗಳು. ಆದರೆ ಇವತ್ತು 5 ವರ್ಷಗಳು ಕಳೆದರೂ ಸಹ cases trial ಪೂರ್ತಿಯಾಗುತ್ತಿಲ್ಲ. *POCSO cases* ಒಂದು ವರ್ಷದಲ್ಲಿ ಮುಗಿಯಬೇಕೆಂದಿದೆ, ಅದು ಸಹ ಆಗುತ್ತಾ ಇಲ್ಲ. ಇದಕ್ಕೆ *designated courts* ಅಲ್ಲ, *separate courts* ಅನ್ನು *establish* ಮಾಡಬೇಕು. District Judge ಇದ್ದಾರೆ, ಅದಕ್ಕೊಂದು *designation* ಕೊಟ್ಟರೆ ಅದರಿಂದ ಪ್ರಯೋಜನ ಆಗುವುದಿಲ್ಲ. ಅದಕ್ಕೆ ಏನು ಕ್ರಮ ಜರುಗಿಸುತ್ತೀರಿ ಎಂದು ಹೇಳಬೇಕು. ಮೂರನೆಯದಾಗಿ ಸೆಕ್ಷನ್ 357 (ಎ) ಪ್ರಕಾರ victim compensation

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಕ್ಕೆ ನ್ಯಾಯಾಧೀಶರುಗಳಿಗೆ case trial ನಡೆಸಿದವರಿಗೆ ಒಂದು ಕಡೆ ಅವಕಾಶವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು victim compensation ನೀಡುವುದಕ್ಕೆ ನಿರ್ಭಯ ಫಂಡ್ ಇದ್ದರೆ, ರಾಜ್ಯದಲ್ಲಿ ಬೇರೆ ಫಂಡ್‌ಗಳಿವೆ. ಅದನ್ನು victims ಭಿಕ್ಷೆ ಬೇಡಬಾರದು. ಅದನ್ನು ಒಂದು ಕಾಲಮಿತಿಯಲ್ಲಿ ನೀಡುವುದಕ್ಕೆ ಸರ್ಕಾರ ಯಾವ ಕ್ರಮವನ್ನು ಜರುಗಿಸುತ್ತದೆ? ಅದೇ ರೀತಿಯಲ್ಲಿ 2013ರ ವಿಶಾಖ ಗೈಡ್‌ಲೈನ್ಸ್ ಪ್ರಕಾರ ಯಾವ ಕಚೇರಿಯಲ್ಲಿ whether it is Government or Non-Government ಯಾವ ಜಾಗದಲ್ಲಿ 10 ಜನರ ಮೇಲೆ irrespective of gender ಯಾರು ಆ ಕೆಲಸ ಮಾಡುತ್ತಾರೋ ಅಲ್ಲಿ Internal Complaints Committee ಇರಬೇಕು. ನನಗೆ ತಿಳಿದಿರುವ ಹಾಗೆ ನಾನು ಪ್ರವಾಸ ಕಾಲದಲ್ಲಿ ಅಧ್ಯಯನ ಮಾಡಿದ ಹಾಗೆ ಶೇಕಡ 90ರಷ್ಟು ಕಚೇರಿಗಳಲ್ಲಿ ಈ ಕಮಿಟಿ ಇಲ್ಲ. ದಯಮಾಡಿ ಎಷ್ಟು ದಿವಸಗಳಲ್ಲಿ ಈ ಕಮಿಟಿಗಳನ್ನು ರಚನೆ ಮಾಡಿ, ಎಷ್ಟು ದಿವಸಗಳಲ್ಲಿ ನಮ್ಮ ರಾಜ್ಯದಲ್ಲಿ ಒಂದು ಉತ್ತಮ ನಾಗರೀಕ ಸಮಾಜ ಹೊರಹೊಮ್ಮುತ್ತದೆ? ಅದಕ್ಕಾಗಿ ಸರ್ಕಾರ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ ಎಂದು ಕೇಳಬಯಸುತ್ತೇನೆ.

**ಶ್ರೀ ರಾಮಲಿಂಗ ರೆಡ್ಡಿ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಶಾಣಪ್ಪನವರು ಹಾಗೂ ಮಾನ್ಯ ಉಗ್ರಪ್ಪನವರು ಕೆಲವೊಂದು ಮಾಹಿತಿಗಳನ್ನು ನನಗೆ ಕೇಳಿದ್ದಾರೆ. ನಮ್ಮ ಐಜಿಪಿ ಯವರಾದ ಶ್ರೀ ಹರಿಶೇಖರನ್ ನಿನ್ನೆಯ ದಿವಸ ಸದನದಲ್ಲಿಯೇ ಇದ್ದರು. ಅವರು ನನಗೆ ಮಾಹಿತಿಗಳನ್ನು ಒದಗಿಸಿದ್ದಾರೆ, ಅದರಲ್ಲಿ ಒಂದೆರಡು ಮಾಹಿತಿಗಳು ಮಿಸ್ ಆಗಿವೆ. ಅದಕ್ಕೆಲ್ಲ ನಾನೇ ಉತ್ತರ ನೀಡುತ್ತೇನೆ.

ಇನ್ನು ಕೆಲವು ಪ್ರಕರಣಗಳನ್ನು ಸಿಬಿಐ ಗೆ ವಹಿಸುವ ಬಗ್ಗೆ ಕೇಳಿದಿರಿ, ಅದಕ್ಕೆ ನಾನೇ ಉತ್ತರ ನೀಡಲಿಲ್ಲ. ನಮ್ಮ ಉಗ್ರಪ್ಪನವರ ಸಮಿತಿಯ ಮಧ್ಯಂತರ ವರದಿಯನ್ನು ಅವರು ಸರ್ಕಾರಕ್ಕೆ ನೀಡಿದ್ದಾರೆ. ಅವರ ಸಮಿತಿಯ ಅವಧಿಯನ್ನು ಕೂಡ ವಿಸ್ತರಣೆ ಮಾಡಲಾಗಿದೆ. Women and Children Welfare Department ನಿಂದ ಒಂದು ಅಭಿಪ್ರಾಯ ಪಡೆದು ಅದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಕೆಲವು ಪ್ರಕರಣಗಳನ್ನು ಸಿಬಿಐ ಗೆ ವಹಿಸಬೇಕೆಂದು ಮಾನ್ಯ ಈಶ್ವರಪ್ಪನವರು ಕೇಳಿದರು. ಈ ಪ್ರಕರಣಗಳನ್ನು ಸಿಬಿಐ ಗೆ ವಹಿಸಬಹುದಿತ್ತು, ಆದರೆ ಇವರಿಗೆ ಸಿಬಿಐ ಬಗ್ಗೆ ವಿಶ್ವಾಸವಿಲ್ಲ. ಏಕೆಂದರೆ ಹಿಂದೊಮ್ಮೆ ಅವರೇ ಸಿಬಿಐ "ಕಾಂಗ್ರೆಸ್ ಬಚಾವೋ ಏಜೆನ್ಸಿ" ಎಂದು ಟೀಕೆ ಮಾಡಿದ್ದರು. ಅದಕ್ಕೆ ನಾನು ಸಿಬಿಐ ಗೆ ವಹಿಸಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನೀಡುತ್ತಿರುವ ಉತ್ತರ ಅವರಿಗೆ ಸರಿ ಅನಿಸಿದರೆ ಕೊಡಲಿ, ನಮ್ಮದೇನೂ ಅಭ್ಯಂತರವಿಲ್ಲ.

**ಶ್ರೀ ರಾಮಲಿಂಗ ರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಷೀರ್ ಅವರ ಕೊಲೆಗೂ ರಾಜಕೀಯಕ್ಕೂ ಯಾವುದೇ ಸಂಬಂಧವಿಲ್ಲ. ಒಂದು ಗುಂಪಿನ ಯಾರದ್ದೋ ಕೊಲೆ ಆದಾಗ ಆ ಕಡೆಯವರು ಈ ಕಡೆ ಒಬ್ಬರನ್ನು ಸಾಯಿಸಿದರು. ಅದಕ್ಕೂ ರಾಜಕೀಯಕ್ಕೂ ಯಾವುಧೇ ಸಂಬಂಧವಿಲ್ಲ.

(ಮುಂದು)

**ಶ್ರೀ ರಾಮಲಿಂಗಾ ರೆಡ್ಡಿ**(ಮುಂದು):- ಎಷ್ಟು Communal Clashes ಗಳಲ್ಲಿ ಕೇಸ್‌ಗಳಾಗಿವೆ, ಅದರಲ್ಲಿ ಒಂದೇರಡು ಬಿಟ್ಟರೆ ಎಲ್ಲಾ ಪ್ರಕರಣಗಳಲ್ಲಿ ಅಪರಾಧಿಗಳನ್ನು ಬಂಧಿಸಲಾಗಿದೆ.

**ವೈಸ್ ಛೇರ್ಮನ್:-** ಮಹಿಳೆಯರ ದೌರ್ಜನ್ಯದ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ, ಅದಕ್ಕೆ ಉತ್ತರ ಹೇಳಿ.

**ಶ್ರೀ ರಾಮಲಿಂಗಾ ರೆಡ್ಡಿ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಆಗಿರುವ ಒಂದೆರಡು ಪ್ರಕರಣಗಳನ್ನು ಬಿಟ್ಟರೆ ಎಲ್ಲ ಕೇಸ್‌ಗಳಲ್ಲಿ ಚಾರ್ಜ್‌ಶೀಟ್ ಹಾಕಲಾಗಿದೆ. ಕೆಲವು ಕಡೆಗಳಲ್ಲಿ review meeting ಮಾಡುವ ಸಂದರ್ಭದಲ್ಲಿ ನಾನು ಏನು ಹೇಳಿದ್ದೇನೆ ಎಂದರೆ, ಗಾಂಜಾ ಮಾರಾಟ ಮಾಡುವವರು ಮೇಲೆ ಕೇಸ್ ಹಾಕಲಾಗುತ್ತದೆ. ಆದರೆ ನಾನು ಹೇಳಿರುವುದು ಗಾಂಜಾ ಮಾರುವವರ ಮೇಲೆ ಕೇಸ್ ಹಾಕುವುದರ ಜೊತೆಗೆ ಗಾಂಜಾ ಎಲ್ಲಿಂದ ಬರುತ್ತದೆ ಎನ್ನುವುದನ್ನು ಕಂಡು ಹಿಡಿಯಿರಿ, ಅದು ಓರಿಸ್ಸಾದಿಂದ, ತಮಿಳುನಾಡಿನಿಂದ, ಆಂಧ್ರದಿಂದ ಬರುತ್ತದೆಯೇ, ಅಲ್ಲಿವರೆಗೆ ಅದರ ಮೂಲವನ್ನು ಹುಡುಕಿಕೊಂಡು ಹೋಗಿ, ಅದು ಕರ್ನಾಟಕ ರಾಜ್ಯಕ್ಕೆ ಬರದಂತೆ ಮಾಡಿ ಎಂದು ನಮ್ಮ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ಕೊಟ್ಟಿದ್ದೇನೆ. ಅದೇ ರೀತಿಯಲ್ಲಿ ಎರಡು ಕಡೆ ಕೊಲೆಯಾದಾಗ ಕೊಲೆ ಮಾಡಿದ ನಾಲ್ಕು ಜನರ ಮೇಲೆ ಕೇಸ್ ಹಾಕಲಾಗುತ್ತದೆ, ಆದರೆ ಅದರ ಹಿಂದೆ ಯಾರು ಇದ್ದಾರೆ ಎನ್ನುವುದನ್ನು ಹುಡುಕಲು ಹೋಗುವುದಿಲ್ಲ. ಅದರ ಹಿಂದೆ conspiracy ನಲ್ಲಿ ಯಾರು ಇದ್ದಾರೆ ಅವರನ್ನು ಹಿಡಿದಾಗ ಮಾತ್ರ ಕೊಲೆಗಳನ್ನು ನಿಲ್ಲಿಸಲು ಸಾಧ್ಯವಾಗುತ್ತದೆ. ಅದರ ಹಿಂದೆ ಇರುವವರನ್ನು ಹಿಡಿಯದಿದ್ದರೆ, ಕೊಲೆ ಕೇಸ್‌ನಲ್ಲಿ ಅರೆಸ್ಟ್ ಆದವರನ್ನು ಅವರೇ ಬಂದು ಬಿಡಿಸಿಕೊಂಡು ಹೋಗುತ್ತಾರೆ, ಇನ್ನು ಅನೇಕ ಕೊಲೆಗಳನ್ನು ಮಾಡಿಸುತ್ತಾರೆ. Conspiracy ನಲ್ಲಿ ಇರುವವರನ್ನು ಹಿಡಿದು ಹಾಕಿದಾಗ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತ್ರ ರಾಜಕೀಯ ಕೊಲೆ ಇರಬಹುದು, ಯಾವುದೇ ಕೊಲೆ ಇರಬಹುದು ಅವುಗಳು ಕಡಿಮೆಯಾಗುತ್ತವೆ.

ಚಿಕ್ಕ ಹೆಣ್ಣುಮಕ್ಕಳ ಮೇಲೆ ಆಗುತ್ತಿರುವ ಅತ್ಯಾಚಾರದ ಬಗ್ಗೆ ಹೇಳಬೇಕಾದರೆ, POCSO (Protection of Children from Sexual Offences) ಕಾಯಿದೆ ಬಂದಮೇಲೆ ಸಣ್ಣ ಮಕ್ಕಳಿಂದ ಹಿಡಿದು ಪ್ರೌಢ ವ್ಯವಸ್ಥೆಗೆ ಬಂದ ಹೆಣ್ಣು ಮಕ್ಕಳ ಅತ್ಯಾಚಾರವಾದರೂ ಅದನ್ನು ಅತ್ಯಾಚಾರವೆಂದೆ ಹೇಳಲಾಗುತ್ತದೆ. ಹೀಗಾಗಿ POCSO ಕಾಯಿದೆ ಬಂದ ಮೇಲೆ ಚಿಕ್ಕ ಮತ್ತು ದೊಡ್ಡ ಹೆಣ್ಣುಮಕ್ಕಳ ಅತ್ಯಾಚಾರವನ್ನು ಒಟ್ಟಾರೆ ಹೆಣ್ಣುಮಕ್ಕಳ ಅತ್ಯಾಚಾರವೆಂದು ಲೆಕ್ಕಕ್ಕೆ ತೆಗೆದುಕೊಳ್ಳುವುದರಿಂದ ಅದರ ಸಂಖ್ಯೆ ಜಾಸ್ತಿಯಾಗಿದೆ ಅನ್ನಿಸುತ್ತದೆ. ಈ ರೀತಿ ನಮ್ಮಲ್ಲಿ ಮಾತ್ರವಲ್ಲ, ಇಡೀ ರಾಷ್ಟ್ರದಲ್ಲಿಯೇ ಹೀಗಾಗಿದೆ. ಇದರ ಬಗ್ಗೆ ಅನೇಕ Court directions ಗಳು ಇವೆ, ಕೇಸ್ ಬಂದ ತಕ್ಷಣ ತೆಗೆದುಕೊಳ್ಳಬೇಕು ಎಂದು ನಾವು ಕೂಡಾ ಹೇಳಿರುವುದರಿಂದ ಇದರ ಸಂಖ್ಯೆ ಜಾಸ್ತಿಯಾಗಿದೆ. ಇದನ್ನು ಕಡಿಮೆ ಮಾಡಲು ಎಷ್ಟು ಸಾಧ್ಯ ಅಷ್ಟು ಪ್ರಯತ್ನವನ್ನು ನಮ್ಮ ಇಲಾಖೆ ಮಾಡುತ್ತಿದೆ. ಇಷ್ಟೇ ಅಲ್ಲದೆ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದರೆ ಅಂತಹ ಅಪರಾಧಿಯನ್ನು ಗಲ್ಲಿಗೆ ಏರಿಸಬೇಕು ಎಂದು ಮಧ್ಯಪ್ರದೇಶದಲ್ಲಿ ಒಂದು ಕಾನೂನನ್ನು ತಂದಿದ್ದಾರೆ. ಅದನ್ನು ನಾವು ತರಿಸಿಕೊಂಡು ಕಾನೂನು ಇಲಾಖೆಗೆ ಪರಿಶೀಲನೆಗಾಗಿ ಕಳುಹಿಸಿದ್ದೇವೆ. ಈ ಕಾನೂನು ಜಾರಿಯಾದರೆ ಲೈಂಗಿಕ ದೌರ್ಜನ್ಯದ ಪ್ರಕರಣಗಳ ಪ್ರಮಾಣ ಖಂಡಿತವಾಗಿ ಕಡಿಮೆಯಾಗುತ್ತದೆ. ಜೈಲಿನಲ್ಲಿ ನಡೆಯುತ್ತಿರುವ ವ್ಯವಹಾರದ ಬಗ್ಗೆ ಮಾನ್ಯ ಈಶ್ವರಪ್ಪನವರು ಹೇಳಿದರು. ಅದು ನಿಜ, ಇಲ್ಲ ಎಂದು ನಾನು ಹೇಳುವುದಿಲ್ಲ. ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಮೊನ್ನೆ ಗಲಾಟೆಯಾದಾಗಿನಿಂದ ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ. ಬೆಂಗಳೂರಿನಲ್ಲಿ ಮಾತ್ರವಲ್ಲ ಬೇರೆ ಜಿಲ್ಲೆಗಳಲ್ಲಿಯೂ ಎಲ್ಲವನ್ನು ನಿಯಂತ್ರಣ ಮಾಡಲಾಗಿದೆ. ಒಂದೆರಡು ಕಡೆಗಳಲ್ಲಿ ಅಹಿತಕರ ಘಟನೆಗಳು ನಡೆದಿದ್ದರೆ ಅದನ್ನು ಬಂದೋಬಸ್ತ್ ಮಾಡುತ್ತೇವೆ. ಮೊನ್ನೆ ಗಲಾಟೆಯಾದಾಗಿನಿಂದ ಸಾಕಷ್ಟು ಸುಧಾರಣೆಗಳಾಗಿವೆ. ಇನ್ನು ಏನಾದರೂ ಲೋಪ-ದೋಷಗಳು ಇದ್ದರೆ ಅವುಗಳನ್ನು ಸರಿ ಮಾಡುವ ಕೆಲಸವನ್ನು ಮಾಡುತ್ತೇವೆ. ಜೈಲಿನಲ್ಲಿರುವ ಅಪರಾಧಿಗಳಿಗೆ ಮತ್ತು trial ಮೇಲೆ ಇರುವ ಆರೋಪಿಗಳಿಗೆ Jail manual ಪ್ರಕಾರ ಎಷು ಸೌಲಭ್ಯಗಳನ್ನು ಕೊಡಬೇಕು ಅಷ್ಟೆ ಕೊಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಮರಳು ಮಾಫಿಯಾ ಬಗ್ಗೆ ಸಾಕಷ್ಟು ಬಿಗಿಯಾಗಿದೆ. ನಾನು ಬೇರೆ ಕಡೆ ಹೋದಾಗ ಎಸ್‌ಪಿ ಯವರು ಬಹಳ strict, ಮನೆ ಕಟ್ಟಲು ಮರಳು ಸಿಗುತ್ತಿಲ್ಲ, ಮರಳು ಅಕ್ರಮ ಮಾರಾಟ ಮಾಡುತ್ತಿಲ್ಲ, ಮನೆ ಕಟ್ಟಲು ಮರಳು ಸಿಗುತ್ತಿಲ್ಲ ಪೊಲೀಸ್‌ನವರು ಅದಕ್ಕೂ ತೊಂದರೆ ಕೊಡುತ್ತಿದ್ದಾರೆ ಎಂದು ನನಗೆ ದೂರು ಹೇಳುತ್ತಿದ್ದಾರೆ. ಅಂದರೆ ಪೊಲೀಸ್ ಇಲಾಖೆ ಅಷ್ಟೊಂದು ಬಿಗಿಯಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, Tillers ಮತ್ತು ಎತ್ತಿನ ಗಾಡಿ ಇವುಗಳನ್ನು ಹಿಡಿಯಲು ನಿಮ್ಮ ಪೊಲೀಸ್ ಇಲಾಖೆಯವರು ತುಂಬಾ ಬಿಗಿಯಾಗಿದ್ದಾರೆ. ಒಂದು ಸಾವಿರ ಲೋಡ್ ಮರಳು ಬೇಕಾದರೂ ಕೊಡುತ್ತಾರೆ. ಬನ್ನಿ ತೋರಿಸುತ್ತೇನೆ, ಮರಳು ಲಾರಿಗಳು ಹೋಗುವಾಗ ಗೇಟ್‌ನಲ್ಲಿ ನಿಮ್ಮ ಪೊಲೀಸ್‌ನವರು ಆ ಲಾರಿ ಡ್ರೈವರ್‌ಗೆ ಸೆಲ್ಯೂಟ್ ಹೊಡೆಯುತ್ತಾರೆ. ಅಂದರೆ ಅವರ ಮಧ್ಯೆ ಆಗಲೇ ವ್ಯವಹಾರ ನಡೆದು ಹೋಗಿರುತ್ತದೆ. ಗೃಹ ಮಂತ್ರಿಗಳು ಈ ರೀತಿ ಸದನದಲ್ಲಿ ಪೊಲೀಸ್‌ನವರನ್ನು defend ಮಾಡಿಕೊಳ್ಳುತ್ತಾ ಹೋದರೆ, ಗೃಹ ಮಂತ್ರಿಗಳೆ ಅಕ್ರಮ ಮರಳು ದಂಧೆ ಮಾಡುವವರಿಗೆ ಲೈಸೆನ್ಸ್ ಕೊಟ್ಟ ಹಾಗಾಗುತ್ತದೆ. ಇದನ್ನು ಬಿಗಿ ಮಾಡಲು ಏನು ಮಾಡಬೇಕು ಅದನ್ನು ಮಾಡಿ. ಮೊನ್ನೆ ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಮಾನ್ಯ ಸದಸ್ಯರಾದ ಭಾನು ಪ್ರಕಾಶ್‌ರವರು ಮಾತನಾಡಿದ ಸಂದರ್ಭದಲ್ಲಿ ಮಾನ್ಯ ಸಚಿವರಾದ ಕಾಗೋಡು ತಿಮ್ಮಪ್ಪನವರು "ನಮ್ಮ ಆಡಳಿತದಲ್ಲಿ ವೈಫಲ್ಯವಾಗಿದೆ, ಲೂಟಿಕೋರರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ" ಎಂದು ಹೇಳಿದ್ದಾರೆ. "ಬಿಗಿಯಾಗಿದೆ-ಬಿಗಿಯಾಗಿದೆ" ಎಂದು ನೀವೆ ಹೇಳಿಬಿಟ್ಟರೆ, ಅಲ್ಲಿ ಸಾವಿರಾರು ಲೋಡ್ ಮರಳು ಹೋಗುತ್ತದೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಇದನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ನೋಡಿಕೊಳ್ಳುತ್ತಾರೆ. ನಮ್ಮ ಇಲಾಖೆ ಅವರಿಗೆ ಸಹಾಯಕವಾಗಿ ಕೆಲಸ ಮಾಡುತ್ತಿದೆ. ಆದರೂ ಕೂಡಾ ಇದಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಿ ಎಲ್ಲಾ ಜಿಲ್ಲಾ ಎಸ್‌ಪಿ ಗಳಿಗೆ ಇದರ ಬಗ್ಗೆ ಇನ್ನೂ ಬಿಗಿಯಾದ ನಿಲುವನ್ನು ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಇನ್ನು ಗಣ್ಯ ವ್ಯಕ್ತಿಗಳಿಗೆ ರಕ್ಷಣೆ ಕೊಡುವ ಬಗ್ಗೆ, ಅದು ಮಾನ್ಯ ಈಶ್ವರಪ್ಪನವರಿಗೆ ಮಾತ್ರವಲ್ಲ ಸಾಮಾನ್ಯ ಪ್ರಜೆಗೂ ರಕ್ಷಣೆ ಕೊಡುವುದು ನಮ್ಮ ಕರ್ತವ್ಯ. ಅದರಲ್ಲಿಯೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಈಶ್ವರಪ್ಪನವರಿಗೆ ರಕ್ಷಣೆ ಕೊಡುವುದು ನಮ್ಮ ಕರ್ತವ್ಯ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿಧಾನಸಭಾ ಶಾಸಕರಾದ ಸಿ.ಟಿ.ರವಿ ಯವರಿಗೂ ಬೆದರಿಕೆ ಬಂದಿದೆ. ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಮೊನ್ನೆ ಪತ್ರಿಕೆಯಲ್ಲಿ ಸುದ್ದಿಯನ್ನು ಓದಿಯೇ ನಾನು ಎಸ್‌ಪಿ ಯವರಾದ ಶ್ರೀ ಅಣ್ಣಾಮಲೈರವರಿಗೆ ಫೋನ್ ಮಾಡಿ ಈ ರೀತಿ ಸದಸ್ಯರಾದ ಮಾನ್ಯ ಸಿ.ಟಿ.ರವಿಯವರಿಗೆ ಬೆದರಿಕೆ ಬಂದಿದೆ ಅವರಿಗೆ ರಕ್ಷಣೆಯನ್ನು ಕೊಡಿ ಎಂದು ಹೇಳಿದ್ದೇನೆ. "ಎಸ್‌ಪಿ ಮಟ್ಟದಲ್ಲಿ ರಕ್ಷಣೆಯನ್ನು ಕೊಡುತ್ತೇವೆ" ಎಂದು ಅವರು ಹೇಳಿದ್ದಾರೆ. ಅವರಿಗೆ ರಕ್ಷಣೆ ಕೊಡುವುದು ಸರ್ಕಾರದ ಜವಾಬ್ದಾರಿಯೂ ಆಗಿದೆ. ಇದರ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ನನಗೆ ಬಂದಿರುವ ಬೆದರಿಕೆ ಬಗ್ಗೆ ದೂರು ಕೊಟ್ಟು ಅದನ್ನು ಮರೆತು ಬಿಟ್ಟಿದ್ದೆ. ಮೊನ್ನೆ ನಿಮ್ಮ ಪೊಲೀಸ್ ಅಧಿಕಾರಿಗಳು ಬಂದು ಒಂದು ಪತ್ರವನ್ನು ನನಗೆ ಕೊಟ್ಟರು. ಆ ಪತ್ರದಲ್ಲಿ ತಾವು ಇಂತಹ ದಿನಾಂಕದಂದು ದೂರನ್ನು ಕೊಟ್ಟಿದ್ದೀರಿ, ಇಂತಹ ನಂಬರಿಗೆ ಬೆದರಿಕೆಯ ಕರೆ ಬಂದಿದೆ ಎಂದು ದೂರಿನಲ್ಲಿ ಹೇಳಿದ್ದೀರಿ, ಇದರ ತನಿಖೆ ಮಾಡಿದ್ದೇವೆ. ತನಿಖೆಯಲ್ಲಿ ಈ ಬೆದರಿಕೆ ಕರೆಯನ್ನು ಯಾರು ಮಾಡಿದ್ದಾರೆ ಎನ್ನುವುದು ನಮಗೆ ಗೊತ್ತಾಗಿರುವುದಿಲ್ಲ. ಆದ್ದರಿಂದ ಈ ಕೇಸ್‌ನ್ನು ಖುಲಾಸೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ಮುಂದುವರೆಸಲು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ನೋಡಿ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ನಾನು ಮಾತನಾಡುತ್ತೇನೆ. ಇನ್ನು ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತಾ, ತಾವು ಕೊಟ್ಟಿರುವ ದೂರನ್ನು ತೆಗೆದುಕೊಂಡಿರುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲಿಯ ಇನ್ಸ್‌ಪೆಕ್ಟರ್ ಒಳ್ಳೆಯ ಅಧಿಕಾರಿ. ಅಲ್ಲಿಯ ಸಬ್ ಇನ್ಸ್‌ಪೆಕ್ಟರ್ ಮೇಲೆ ಇವತ್ತೇ ಕ್ರಮ ತೆಗೆದುಕೊಳ್ಳಲು ಹೇಳುತ್ತೇನೆ. ನಮ್ಮ ಪೊಲೀಸ್ ಆಯುಕ್ತರಿಗೆ ಇದರ ಬಗ್ಗೆ ಗಮನ ಹರಿಸಲು ಹೇಳುತ್ತೇನೆ. ಮಾನ್ಯ ಸದಸ್ಯರು ಸಿಸಿಬಿ ಗೆ ಕೊಡಿ ಎಂದು ಹೇಳಿದರೆ ಸಿಸಿಬಿ ಗೆ ಕೊಡುತ್ತೇನೆ.

ಇನ್ನು ಪೊಲೀಸ್‌ನವರ ಮೇಲೆ attack ಆಗಿರುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಪೊಲೀಸ್ ನವರ ಮೇಲೆಯೇ attack ಆದರೆ ಇನ್ನು ಜನಸಾಮಾನ್ಯರಿಗೆ ಹೇಗೆ ರಕ್ಷಣೆ ಕೊಡುತ್ತಾರೆ ಎನ್ನುವ ಮಾತು ಸಾಮಾನ್ಯವಾಗಿ ಬರುತ್ತದೆ. ಇಂತಹ ಸಣ್ಣ-ಪುಟ್ಟ ವಿಚಾರಗಳು ಆಗುತ್ತಿರುತ್ತವೆ. ಹಿಂದೆ ಕೂಡಾ ಆಗಿವೆ. ಮುಂದೆಯೂ ಆಗುತ್ತಿರುತ್ತವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆಯಲ್ಲಿ ಸ್ವತ: ಎಸಿ ಯವರು ಮತ್ತು ಡಿಸಿ ಯವರು ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿರುವುದು ಸಣ್ಣ ವಿಚಾರವೇ? ಇದನ್ನು ಸಣ್ಣ-ಪುಟ್ಟ ವಿಚಾರ ಎಂದು ಹೇಳುತ್ತೀರಾ? ಗೃಹ ಮಂತ್ರಿಗಳ ಮೇಲೆಯೇ attack ಆಗಬೇಕು ಎಂದು ಹೇಳುತ್ತೀರಾ? ನೀವು. ಅದು ಮಾತ್ರ ದೊಡ್ಡ ವಿಚಾರವೇ? ಗೃಹ ಮಂತ್ರಿಗಳೆ ಇದನ್ನು ಸಣ್ಣ ವಿಚಾರ ಎಂದು ಹೇಳಿದರೆ ನಾವೇನು ಹೇಳಬೇಕು?

**ಶ್ರೀ ರಾಮಲಿಂಗಾ ರೆಡ್ಡಿ:-** ನಾನು ನನ್ನ ಮಾತುಗಳನ್ನು ಮುಗಿಸುವವರೆಗೆ ನಿಧಾನಿಸಿ. ಇನ್ನು ನಾನು ಪೂರ್ತಿಯಾಗಿ ಹೇಳಿರುವುದಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಸಚೇತಕರು):-** ಮಾನ್ಯ ಸಭಾಪತಿಯವರೇ, ನಿಮ್ಮ ಪೊಲೀಸ್ ಆಯುಕ್ತರೆ ಹೇಳಿಕೆ ಕೊಟ್ಟಿದ್ದಾರೆ. 15 ದಿವಸಗಳಲ್ಲಿ 8 ಈ ರೀತಿಯ ಪೊಲೀಸ್‌ನವರ ಮೇಲೆ ಹಲ್ಲೆ ಪ್ರಕರಣಗಳು ನಡೆದಿವೆ. ಈ ರೀತಿಯಾದರೆ ಇನ್ನು ಮೇಲೆ ಗುಂಡು ಹಾರಿಸಬೇಕಾಗಿದೆ ಎಂದು ಹೇಳಿದ್ದಾರೆ.

**ಶ್ರೀ ರಾಮಲಿಂಗಾ ರೆಡ್ಡಿ:-** ಮಾನ್ಯ ಸಭಾಪತಿಗಳೆ, ನಾನು ಇನ್ನು ಮಾತನ್ನು ಮುಕ್ತಾಯ ಮಾಡಿಲ್ಲ, ಮಧ್ಯದಲ್ಲಿಯೇ ಮಾನ್ಯ ಈಶ್ವರಪ್ಪನವರು ಮಾತನಾಡುತ್ತಿದ್ದಾರೆ. ಎಲ್ಲಾ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಗನ್ ಕೊಟ್ಟಿರುತ್ತಾರೆ, ಅವರಿಗೆ ಗನ್ ಕೊಡುವ ಉದ್ದೇಶ ಏನು ಎಂದರೆ, ಅವರ ಮೇಲೆ ಯಾರಾದರೂ attack ಮಾಡಿದರೆ ಶೂಟ್ ಮಾಡಲು, ಅವರು ಕಾಲಿಗೆ ಹೊಡೆಯುತ್ತಾರೊ ಎಲ್ಲಿ ಹೊಡೆಯುತ್ತಾರೊ? ಎನ್ನುವುದು ಆ ವಾತಾವರಣ ನೋಡಿಕೊಂಡು ಶೂಟ್ ಮಾಡುತ್ತಾರೆ. ಬಹಳ ಸೀರಿಯಸ್ ಆಗಿದ್ದರೆ ಬೇರೆ ಕಡೆ ಹೊಡೆಯುತ್ತಾರೆ, ಸಣ್ಣ-ಪುಟ್ಟದ್ದಾಗಿದ್ದರೆ ಕಾಲಿಗೆ ಹೊಡೆಯುತ್ತಾರೆ. ಅದೇ ರೀತಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೆ ಪೊಲೀಸ್‌ನವರು ಸುಮ್ಮನೆ ಕೂಡುವುದಲ್ಲ, ಗನ್ ಕೊಟ್ಟಿರುವುದೇ ಉಪಯೋಗಿಸಲು. ಸಾರ್ವಜನಿಕ ವಲಯದಲ್ಲಿ ಗಲಾಟೆ, ದೊಂಬಿ, ಕೊಲೆ ಮಾಡುತ್ತಿದ್ದರೆ ಗುಂಡು ಹಾರಿಸಬೇಕು. ಅದಕ್ಕಾಗಿಯೇ ಗನ್ ಕೊಡಲಾಗುತ್ತದೆ. ಅದಕ್ಕೆ ನಾನು ಎಲ್ಲಾ ಮೀಟಿಂಗ್‌ಗಳಲ್ಲಿ ಈ ರೀತಿಯ ಅಹಿತಕರ ಘಟನೆಗಳು ನಡೆದಾಗ ಹಿಂದೆ-ಮುಂದೆ ನೋಡದೆ ಗನ್‌ನಿಂದ ಶೂಟ್ ಮಾಡಿ ಎಂದು ಹೇಳಿದ್ದೇನೆ. ಈ ವಿಚಾರವನ್ನೆ ನಾನು ಹೇಳುತ್ತಿದ್ದೇನೆ ಮಧ್ಯದಲ್ಲಿಯೇ ಮಾನ್ಯ ಈಶ್ವರಪ್ಪನವರು ಮಾತನಾಡಿದರು. ಮೊನ್ನೆ ಬೆಂಗಳೂರಿನಲ್ಲಿ ಪೊಲೀಸ್‌ನವರ ಮೇಲೆ attack ಆದ ಎರಡು ಘಟನೆಗಳು ನಡೆದವು. ಆಗಲೇ ನಾನು ಪೊಲೀಸ್ ಕಮೀಷನರ್‌ವರಿಗೆ ಇನ್ನು ಮುಂದೆ ಈ ರೀತಿ ಪೊಲೀಸ್‌ನವರ ಮೇಲೆ attack ಆಗಿರುವ ಸುದ್ದಿ ನನಗೆ ಬರಬಾರದು, ಅದಕ್ಕೆ ನೀವೇ ಜವಾಬ್ದಾರರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಿದ್ದೇನೆ. ಮಾನ್ಯ ಶಾಣಪ್ಪನವರು ನೀವು ಎಲ್ಲಾ comparision ಮಾಡಿ ಹೇಳುತ್ತಿದ್ದೀರಿ ಎಂದು ಹೇಳಿದರು. ಪ್ರಪಂಚ ಹುಟ್ಟಿದಾಗಿನಿಂದ ಕೊಲೆ, ಸುಲಿಗೆಯಂತಹ ಚಟುವಟಿಕೆಗಳು ನಡೆಯುತ್ತಲೇ ಇವೆ. ಪ್ರಪಂಚ ಇರುವವರೆಗೂ ಇದೆಲ್ಲವು ನಡೆಯುತ್ತಲೇ ಇರುತ್ತದೆ. ಸಂಪೂರ್ಣವಾಗಿ ತೊಡೆದು ಹಾಕಲು ಯಾವ ದೇಶದವರಿಗೂ ಸಾಧ್ಯವಿಲ್ಲ. ಆದರೆ ನಿಯಂತ್ರಣ ಮಾಡಬಹುದು. ಈ crimes ಗಳನ್ನು ನಿಯಂತ್ರಣದಲ್ಲಿ ಇಡಬೇಕು ಎಂದೇ Indian Penal Code ಇರುವುದು.

(ಮುಂದು)

ಶ್ರೀ ರಾಮಲಿಂಗಾರೆಡ್ಡಿ (ಮುಂದು)

ಇದರ ಮೇಲೆ Supreme Court, High Court, District and Sessions Court ಗಳು ಇರುತ್ತವೆ. ಇದರಲ್ಲಿ ನ್ಯಾಯಾಧೀಶರು ಇರುತ್ತಾರೆ. ಕೇಸ್‌ನ ಪರ-ವಿರೋಧ ವಾದ ಮಾಡುವುದಕ್ಕೆ ವಕೀಲರು ಬೇಕು. ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಪೋಲೀಸ್ ಇಲಾಖೆ ಬೇಕು. ಈ ಪೋಲೀಸ್ ಇಲಾಖೆಯಲ್ಲಿ Constable ನಿಂದ IG (Inspector General of Police) ವರೆಗೂ ಇರಬೇಕು. ಅಪರಾಧಗಳು ನಡೆಯುತ್ತಿರುವುದರಿಂದ ಇಷ್ಟೆಲ್ಲಾ ವ್ಯವಸ್ಥೆಗಳು ಇರಬೇಕಾಗುತ್ತದೆ. ಅಪರಾಧ ನಡೆಯದಿದ್ದರೆ, Courts, Judges, Advocates, Police ಇವುಗಳ್ಯಾವುದೂ ಬೇಕಾಗಿಲ್ಲ. ಆದರೆ ನಮ್ಮ ಪೋಲೀಸ್ ಇಲಾಖೆ ಬಿಗಿಯಾಗಿ ಕಾರ್ಯನಿರ್ವಹಿಸಿದರೆ ಅಪರಾಧಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು. ಪೋಲೀಸ್ ಅಧಿಕಾರಿಗಳು ಠಾಣೆಯಲ್ಲಿ strict ಆಗಿ ಕಾರ್ಯನಿರ್ವಹಿಸುತ್ತಾರೆ ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುತ್ತಾರೆ ಎಂದು ಗೊತ್ತಾದರೆ ಅರ್ಧ crimes ಕಡಿಮೆಯಾಗುತ್ತದೆ. ಆದ್ದರಿಂದ ನನ್ನ ಕ್ಷೇತ್ರದಲ್ಲಿ Inspector ಅನ್ನು ಹಾಕಿಸಿಕೊಳ್ಳುವಾಗ ಪೋಲಿ ಪುಂಡರಿಗೆ ಗಲಾಟೆ ಮಾಡದಂತೆ ಚೆನ್ನಾಗಿ treatment ಕೊಡುವುದಾದರೆ ಮಾತ್ರ ಹಾಕಿಸಿಕೊಳ್ಳುತ್ತೇನೆ ಎಂದು ಹೇಳುತ್ತೇನೆ. ನಮ್ಮಲ್ಲಿ crimes ಕಡಿಮೆಯಾಗಬೇಕಾದರೆ ಪೋಲೀಸ್ ಇಲಾಖೆಯು ಬಹಳ strict ಆಗಿ ಕಾರ್ಯನಿರ್ವಹಿಸಬೇಕು. ಇದರಿಂದ crimes ಅನ್ನು reduce ಮಾಡಬಹುದು. ಆದರೆ 0% ತರುವುದಕ್ಕೆ ಆಗುವುದಿಲ್ಲ. ಗರಿಷ್ಟ ಕಡಿಮೆ ಮಾಡಲು ಪ್ರಯತ್ನ ಮಾಡಬಹುದು. ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ.

ಇನ್ನು ಶ್ರೀ ಎಂ.ಎಂ. ಕಲುಬುರ್ಗಿ ಯವರು ಹಾಗೂ ಶ್ರೀಮತಿ ಗೌರಿ ಲಂಕೇಶ್, ಇವರ ಹತ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದು, ಕಲ್ಬುರ್ಗಿಯವರ ಹತ್ಯೆಯ ಬಗ್ಗೆ COD (Corps of Detectives)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಲ್ಲಿ ತನಿಖೆ ನಡೆಯುತ್ತಿದೆ. ಆದರೆ ಶ್ರೀಮತಿ ಗೌರಿ ಲಂಕೇಶ್‌ರವರ ರವರ ಹತ್ಯೆ ಬಗ್ಗೆ ಆದಷ್ಟು ಬೇಗ ಅಪರಾಧಿಗಳನ್ನು ಕಂಡು ಹಿಡಿಯುವ ಬಗ್ಗೆ ನನಗೆ ವಿಶ್ವಾಸ ಇದೆ.

ಶ್ರೀ ಕೆ.ಬಿ. ಶಾಣಪ್ಪಃ- ಹತ್ಯೆ ಮಾಡಿದವರನ್ನು ಜೈಲಿಗೆ ಕಳುಹಿಸುವುದು ಅಥವಾ ಗಲ್ಲಿಗೆ ಹಾಕದಿದ್ದರೆ ಸರ್ಕಾರ ಇದೆ ಎಂಬ ವಿಶ್ವಾಸ ನನಗೆ ಬರುವುದಿಲ್ಲ. If at all to be accepted as to there is a Government, it has to put the murderers involved in those two cases behind bars.

ಶ್ರೀ ರಾಮಲಿಂಗಾರೆಡ್ಡಿಃ- ಮಾನ್ಯ ಸಭಾಪತಿಯವರೇ, ಅಪರಾಧಿಗಳನ್ನು ಹಿಡಿಯಲು ಬಹಳ ಹತ್ತಿರ ಬಂದಿದ್ದೇವೆ. ಇದನ್ನು ನಾನು ಬಹಳ ಹಿಂದೆಯೇ ಹೇಳಿದ್ದೇನೆ.

ಶ್ರೀ ಕೆ.ಬಿ. ಶಾಣಪ್ಪಃ- ಶ್ರೀಯುತ ಎಂ.ಎಂ. ಕಲ್ಬುರ್ಗಿಯವರ ಹತ್ಯೆ ನಡೆದು 3 ವರ್ಷ ಕಳೆದಿದೆ, ಇನ್ನು ಎಷ್ಟು ಹತ್ತಿರ ಬರಬೇಕು? Whether the Police Department has got any clue in these two Cases and whether the Police Department has any information as to the culprits are from Karnataka or some other State? ಅದರ ಬಗ್ಗೆ ಏನೂ ಬರುತ್ತಲೇ ಇಲ್ಲ. 3 ವರ್ಷಗಳಿಂದ ವಿಚಾರಣೆ ಮಾಡುತ್ತಿದ್ದಾರೆಯೇ?

ಶ್ರೀ ಕೆ.ಎಸ್. ಈಶ್ವರಪ್ಪಃ- ಮಾನ್ಯ ಸಭಾಪತಿಯವರೇ, ಇನ್ನು ಮುಂದೆ ಯಾರಾದರೂ ಸಾಯಬೇಕಾದರೆ ಮಾನ್ಯ ರಾಮಲಿಂಗಾರೆಡ್ಡಿಯವರು ಇದ್ದಾರೋ, ಇಲ್ಲವೋ ಎಂದು ನೋಡಿ ಸಾಯಬೇಕು. ಮಾನ್ಯ ಶಾಣಪ್ಪನವರು ಹೇಳುತ್ತಿರುವುದು ಸರಿಯಿದ್ದು, ಮಾನ್ಯ ಗೃಹ ಸಚಿವರು ಶ್ರೀಮತಿ ಗೌರಿ ಲಂಕೇಶ್‌ರವರ ಹತ್ಯೆಯ ಬಗ್ಗೆ ಸಾಕಷ್ಟು ಸುಳಿವು ಸಿಕ್ಕಿದೆ ಮತ್ತು ಅಪರಾಧಿಗಳ ವಿರುದ್ಧ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಒಂದು ಹೇಳಿಕೆ ಕೊಟ್ಟಿದ್ದರು. ಈಗ ಮಾನ್ಯ ಸಚಿವರು ರಾಜ್ಯದ ಜನರಿಗೆ ಉಚಚಿಡಿಜಿಥಿ ಮಾಡಲಿ.

ಶ್ರೀ ರಾಮಲಿಂಗಾರೆಡ್ಡಿಃ- ಮಾನ್ಯ ಸಭಾಪತಿಯವರೇ, ಅದನ್ನೂ ಹೇಳುತ್ತೇನೆ. ಸುಳಿವು ಇದೆ ಎಂದು ನಾನು ಹಿಂದೆಯೂ ಹೇಳಿದ್ದೇನೆ ಮತ್ತು ಇವತ್ತೂ ಹೇಳುತ್ತೇನೆ. ಆದರೆ ಸುಳಿವಿನ ಪ್ರಕಾರ ಅಪರಾಧಿ ಯಾರು ಎಂದು ಗೊತ್ತಿದ್ದರೂ proper evidence ಇರಬೇಕು. ಏಕೆಂದರೆ ಶ್ರೀ ನರೇಂದ್ರ ದಾಬೋಲ್ಕರ್ ಕೇಸ್‌ನಲ್ಲಿ ಶ್ರೀ ವೀರೇಂದ್ರ ತವಡೆ ಎಂಬುವವರನ್ನು ಅರೆಸ್ಟ್ ಮಾಡಿದರು. ಆದರೆ proper evidence ಇಲ್ಲ ಎಂದು ಕೋರ್ಟ್‌ನಲ್ಲಿ ಬಿಡುಗಡೆಯಾಯಿತು. ಇವರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

conspiracy ಮಾಡಿದ್ದಾರೆಂದು ಅರೆಸ್ಟ್ ಮಾಡಿದ್ದು, evidence ಇಲ್ಲ ಎಂದು ಕೋರ್ಟ್‌ನಲ್ಲಿ ಬಿಡುಗಡೆ ಮಾಡಿದರು. ಅಲ್ಲದೇ shooters ಅನ್ನು ದಾಬೋಲ್‌ಕರ್ ಕೇಸ್‌ನಲ್ಲಿಯೂ ಹಿಡಿದಿಲ್ಲ, ಈ ಕೇಸ್ ಅನ್ನು ಸಿಬಿಐ ವಿಚಾರಣೆ ಮಾಡುತ್ತಿದೆ. ಅಲ್ಲದೇ ಇನ್ನೊಂದು ಪನ್ಸಾರೆ ಕೇಸ್‌ನಲ್ಲಿ ಯಾರನ್ನೂ ಮುಟ್ಟಿಲ್ಲ. ಆ ರೀತಿ ಆಗಬಾರದು ಎಂದು ಪಕ್ಕಾ evidence ಸಂಗ್ರಹ ಮಾಡಿಕೊಂಡು ಅಪರಾಧಿಗಳನ್ನು ಶೀಘ್ರವಾಗಿ ಬಂಧಿಸುತ್ತೇವೆ. ಶ್ರೀಮತಿ ಗೌರಿ ಲಂಕೇಶ್‌ರವರ ವಿಚಾರದಲ್ಲಿ ನನಗೆ 100% ವಿಶ್ವಾಸ ಇದೆ. ಶ್ರೀ ಕಲ್ಬುರ್ಗಿಯವರ ಹತ್ಯೆ ಬಗ್ಗೆ COD ತನಿಖೆ ನಡೆಯುತ್ತಿದ್ದು, ಇದರಷ್ಟು progress ಅದಾಗಿಲ್ಲ. ಇದು ಬಹಳ ಹತ್ತಿರಕ್ಕೆ ಬಂದಿದೆ.

**Sri K.B. SHANAPPA**:- COD enquiry is going on means what is the efficiency of Police? ಇಲ್ಲದಿದ್ದರೆ, CBI (Central Bureau of Investigation) ಗೆ refer ಮಾಡಲಿ. How can we believe them?

**Mr. VICE CHAIRMAN**:- He can't give any answer other than that.

ಶ್ರೀ ರಾಮಲಿಂಗಾರೆಡ್ಡಿಃ- ಮಾನ್ಯ ಸಭಾಪತಿಯವರೇ, ಶ್ರೀ ದಾಬೋಲ್‌ಕರ್ ಕೇಸ್ ಬಗ್ಗೆ ಸಿಬಿಐ ತನಿಖೆ ಮಾಡುತ್ತಿದ್ದು, ಇನ್ನೂ ಏನೂ ಮಾಡಿಲ್ಲ. ಪನ್ಸಾರೆ ಕೇಸ್ ಅನ್ನು ಮಹಾರಾಷ್ಟ್ರ ಸರ್ಕಾರ ತನಿಖೆ ಮಾಡುತ್ತಿದ್ದು, ಅವೆರಡರಲ್ಲೂ ಏನೂ ಪ್ರಗತಿಯಾಗಿಲ್ಲ. ಶ್ರೀಮತಿ ಗೌರಿ ಲಂಕೇಶ್‌ರವರ ಕೇಸ್‌ನಲ್ಲಿ ಬಹಳ ಹತ್ತಿರ ಇದ್ದೇವೆ. ಮಾನ್ಯ ಉಗ್ರಪ್ಪನವರು ಮಾತನಾಡುತ್ತಾ, conviction rate ಬಹಳ ಜಾಸ್ತಿಯಾಗಿದೆ ಎಂದು ಹೇಳಿದರು. Conviction rate ಜಾಸ್ತಿಯಾಗಬೇಕಾದರೆ ಮೊದಲು ಪೊಲೀಸ್ ಅಧಿಕಾರಿಗಳು ಕನಿಷ್ಟ 2 ವರ್ಷ ಒಂದೇ ಸ್ಥಳದಲ್ಲಿ ಇರಬೇಕು ಎಂದು ಇತ್ತು. ಪದೇ ಪದೇ ಅಧಿಕಾರಿಗಳನ್ನು ಬದಲಾವಣೆ ಮಾಡದೇ ಕನಿಷ್ಟ 2 ವರ್ಷಗಳ ಕಾಲ ಒಂದೇ ಕಡೆ ಇರಬೇಕು ಎಂದು ಸುಪ್ರೀಂ ಕೋರ್ಟ್ ಒಂದು ನಿರ್ದೇಶನ ಸಹ ನೀಡಿತ್ತು. ಆ ರೀತಿ ಒಂದೆರಡು ವರ್ಷ ಒಬ್ಬ ಅಧಿಕಾರಿ ಒಂದೇ ಸ್ಥಳದಲ್ಲಿ ಇದ್ದರೆ investigation ಮಾಡಲು ಮತ್ತು charge sheet ಹಾಕಲು ಸಮಯ ಇರುತ್ತದೆ. ಅದರಿಂದ conviction rate ಜಾಸ್ತಿಯಾಗುತ್ತದೆ. 2012ರ PEB (Police Establishment Board) ನಲ್ಲಿ ಏನಾಗಿತ್ತೆಂದರೆ ವರ್ಗಾವಣೆ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಿದ್ದರು. ನಿನ್ನೆ ವಿಧಾನ ಸಭೆಯಲ್ಲಿ ಮಾತನಾಡಿದಾಗ ಸ್ವಲ್ಪ confusion ಇತ್ತು. 2012ರಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

executive posts ನಲ್ಲಿ ಇರುವವರನ್ನು ಒಂದೇ ವರ್ಷಕ್ಕೆ transfer ಮಾಡಬಹುದು ಎಂದು ಮಾಡಿದರು. 2013ರಲ್ಲಿ ನಮ್ಮ ಸರ್ಕಾರ ಬಂದ ಮೇಲೆ non-executive posts ನಲ್ಲಿ ಇರುವವರನ್ನು ಮಾಡಬಹುದೆಂದು ಮಾಡಿದೆವು. ಒಂದು ವರ್ಷದಲ್ಲಿ ಒಬ್ಬ ಅಧಿಕಾರಿ ಅಲ್ಲಿಗೆ ಬಂದು settle ಆಗಿ ಒಂದು ವರ್ಷ ಕಳೆಯುವುದರೊಳಗೆ ಏನೂ ಮಾಡಲು ಆಗುವುದಿಲ್ಲ. ಆದ್ದರಿಂದ ಇದು ಹಿಂದಕ್ಕೆ ಹೋಗಲು ಇದು ಸ್ವಲ್ಪ ಕಾರಣವಾಗಿದೆ. ನನ್ನ ಅಭಿಪ್ರಾಯದಲ್ಲಿ ಒಬ್ಬ ಅಧಿಕಾರಿ ಕನಿಷ್ಟ 2 ವರ್ಷ ಇದ್ದರೆ conviction rate ಜಾಸ್ತಿಯಾಗುತ್ತದೆ. ಆದರೂ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ conviction rate ಜಾಸ್ತಿ ಇದೆ. ಅದೂ ಸಾಲದು. ನನ್ನ ಅಭಿಪ್ರಾಯದಲ್ಲಿ conviction rate ಜಾಸ್ತಿಯಾದಾಗ ಮಾತ್ರ crimes ಕಡಿಮೆಯಾಗುತ್ತದೆ. Conviction rate ಜಾಸ್ತಿಯಾಗದಿದ್ದರೆ crimes ಸಹಜವಾಗಿ ಬೆಳೆಯುತ್ತಾ ಹೋಗುತ್ತದೆ. ತಪ್ಪು ಮಾಡಿದರೆ ಶಿಕ್ಷೆಯಾಗುತ್ತದೆ ಎಂದು ತಪ್ಪು ಮಾಡಿದವನಿಗೆ ತಲೆ ಹೋದಾಗ ಮಾತ್ರ ಅಪರಾಧಗಳು ಕಡಿಮೆಯಾಗುತ್ತವೆ. ಅದನ್ನು ಮಾಡಬೇಕಾಗಿರುವವರು ಯಾರು? ಇದನ್ನು ಪೊಲೀಸ್ ಇಲಾಖೆ, ಕೋರ್ಟ್‌ಗಳು ಮಾಡಬೇಕಾಗಿದ್ದು, ಕೇಸ್‌ಗೆ ಸಂಬಂಧಪಟ್ಟಂತೆ proper evidence ಎಲ್ಲವನ್ನು ಸಂಗ್ರಹ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆಂದು ಹೇಳಿ, ಚರ್ಚೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪಃ- ಮಾನ್ಯ ಸಭಾಪತಿಯವರೇ, ಸರ್ಕಾರದ ಉತ್ತರ ನಮಗೆ ಸಮಾಧಾನ ತಂದಿಲ್ಲ, ಇದು ಕೊಲೆಗಡುಕರ ಪರವಾದ ಸರ್ಕಾರವಾಗಿದ್ದು, ಹಿಂದೂ ಯುವಕರನ್ನು ಕೊಲೆ ಮಾಡುತ್ತಿದ್ದಾರೆ. ಇದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರೆಲ್ಲರೂ 'ಕೊಲೆಗಡುಕ ಸರ್ಕಾರಕ್ಕೆ ಧಿಕ್ಕಾರ' ಎಂಬ ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)

ವೈಸ್ ಛೇರ್ಮನ್ಃ- ಭೋಜನ ವಿರಾಮಕ್ಕಾಗಿ ಈಗ ಸದನವನ್ನು ಸಂಜೆ 4-15 ಗಂಟೆಯವರೆಗೆ ಮುಂದೂಡುತ್ತೇನೆ.

(ಸದನದ ಕಲಾಪವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 46 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಸಂಜೆ 4 ಗಂಟೆ 15 ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(060) 7.2.2018 3.15 ಪಿಕೆ:ಬಿಎನ್‌ಎಸ್

(ಭೋಜನ ವಿರಾಮದ ನಂತರ ಸದನವು 4 ಗಂಟೆ 20 ನಿಮಿಷಕ್ಕೆ ಸೇರಿತು. ಮಾನ್ಯ ಸಭಾಪತಿಗಳು ಪೀಠದಲ್ಲಿ ಉಪಸ್ಥಿತರಿದ್ದರು)

**ಸಭಾಪತಿಯವರು:-** ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅವರಿಗೆ ವಂದನೆ ಸಲ್ಲಿಸುವ ನಿರ್ಣಯವನ್ನು ಮಂಡಿಸಿದ ಮಾನ್ಯ ಸದಸ್ಯರಾದ ಎಸ್.ರವಿಯವರು, ಏಕೆ ವಂದನೆ ಸಲ್ಲಿಸಬೇಕು ಎಂಬ ಹಿನ್ನೆಲೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ.

**5. <u>ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ</u>**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರು ಮಾಡಿದಂತಹ ಭಾಷಣಕ್ಕೆ ಕೃತಜ್ಞತಾಪೂರ್ವಕ ವಂದನೆಯನ್ನು ಸಮರ್ಪಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮತ್ತು ಅದರ ಮೇಲೆ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದನೆ ಸಲ್ಲಿಸಬಯಸುತ್ತೇನೆ.

ನಮ್ಮ ನೆಚ್ಚಿನ ಮುಖ್ಯ ಮಂತ್ರಿಗಳಾಗಿರುವ ಮಾನ್ಯ ಸಿದ್ಧರಾಮಯ್ಯನವರ ನಾಲ್ಕು ಮುಕ್ಕಾಲು ವರ್ಷಗಳಲ್ಲಿ ರಾಜ್ಯದ ಸರ್ವಾಗೀಣ ಅಭಿವೃದ್ಧಿಗೆ, ವಿಶೇಷವಾಗಿ ಎಲ್ಲಾ ವರ್ಗದ ಬಡವರ, ಶೋಷಿತರ, ದೀನ-ದಲಿತರ ಏಳಿಗೆಗಾಗಿ ಹಮ್ಮಿಕೊಂಡಿರುವಂತಹ ಹತ್ತು-ಹಲವಾರು ಕಾರ್ಯಕ್ರಮಗಳ ವಿಹಂಗಮ ನೋಟವನ್ನು ಮಾನ್ಯ ರಾಜ್ಯಪಾಲರು ತಮ್ಮ 32 ಪುಟಗಳ ಭಾಷಣದಲ್ಲಿ ವ್ಯಕ್ತಪಡಿಸಿ ಒಂದು ಸಾರ್ಥಕ ಪ್ರಯತ್ನ ಮಾಡಿದ್ದಾರೆ ಎಂದು ನಾನಾದರೂ ಭಾವಿಸುತ್ತಿದ್ದೇನೆ.

ಅಧಿಕಾರ ಎನ್ನುವಂಥದ್ದು ಸರ್ಕಾರಕ್ಕೆ ವಿಶೇಷವಾದುದೇನಲ್ಲ. ಅದು ಜನತೆಯ ಸೇವೆ ಮಾಡಲು ಸಿಕ್ಕಿರುವ ಅವಕಾಶವಷ್ಟೆ. ತಮ್ಮ ಮೇಲೆ ವಿಶ್ವಾಸ ಇಟ್ಟು ಆಡಳಿತದ ಚುಕ್ಕಾಣಿ ಹಿಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವ ಮಹಾ ಜನತೆಯ ಋಣವನ್ನು ತೀರಿಸಬೇಕು ಎನ್ನುವುದು ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ಧರಾಮಯ್ಯನವರ ಭಾವನೆಯಾಗಿದೆ. ಸರ್ಕಾರದ ಖಜಾನೆಯಲ್ಲಿರುವ ಜನಸಾಮಾನ್ಯರ ತೆರಿಗೆ ಹಣ ಏನಿದೆ, ಅದರ ಸಮರ್ಪಕ ಬಳಕೆ ಆಗಬೇಕು, ಪ್ರತಿ ಪೈಸೆ ಕೂಡ ಜನರ ಕಲ್ಯಾಣಕ್ಕೆ ವಿನಿಯೋಗ ಆಗಬೇಕು ಎಂದು ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ 165 ಭರವಸೆಗಳ ಪೈಕಿ ಬಹುತೇಕ ಎಲ್ಲಾ ಭರವಸೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಯಾವುದಾದರೂ ಒಂದು ಸರ್ಕಾರ ಇದೆ ಎನ್ನುವುದಿದ್ದರೆ ಅದು ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಎಂಬುದನ್ನು ತಮ್ಮ ಮುಖೇನ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನ್ನವಿಲ್ಲದೇ ಹಸಿವಿನಿಂದ ನರಳುತ್ತಿರುವವರನ್ನು, ಬಡತನದ ಕಾರಣದಿಂದ ಶಿಕ್ಷಣ ವಂಚಿತರಾದವರನ್ನು, ಹಾಸ್ಟೆಲ್ ಸೌಲಭ್ಯ ದೊರೆಯದೇ ಉನ್ನತ ಶಿಕ್ಷಣದಿಂದ ದೂರವಾಗುತ್ತಿದ್ದವರನ್ನು, ಅಪೌಷ್ಟಿಕತೆಯ ಅಂಶದಿಂದಾಗಿ ಗರ್ಭಿಣಿಯರು, ಮಕ್ಕಳು, ಅನಾರೋಗ್ಯ ಪೀಡಿತರಾಗುವುದನ್ನು ತಪ್ಪಿಸಲು "ಅನ್ನಭಾಗ್ಯ", "ಕ್ಷೀರಭಾಗ್ಯ", "ಮಾತೃಪೂರ್ಣ ಯೋಜನೆ" ಮತ್ತು "ವಿದ್ಯಾಸಿರಿ" ಯಂತಹ ವಿಶೇಷ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿರುವಂತಹ ಖ್ಯಾತಿ ನಮ್ಮ ಸರ್ಕಾರದ್ದು. ರಾಜ್ಯದ ನಾಲ್ಕೂವರೆ ಕೋಟಿಗೂ ಹೆಚ್ಚು ಜನ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳು. 61 ಲಕ್ಷ ಜನ ಮಕ್ಕಳು ಬಿಸಿಯೂಟದೊಂದಿಗೆ ಹಾಲಿನ ಸೌಲಭ್ಯ ಕೂಡ ಪಡೆಯುತ್ತಿದ್ದಾರೆ. ಸುಮಾರು 60 ಲಕ್ಷಕ್ಕೂ ಹೆಚ್ಚು ಜನ ಫಲಾನುಭವಿಗಳು ವಿವಿಧ ಸಾಮಾಜಿಕ ಭದ್ರತಾ ಯೋಜನೆ ಅಡಿ ಅನೇಕ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. 13 ಲಕ್ಷ 70 ಸಾವಿರಕ್ಕಿಂತ ಹೆಚ್ಚು ಜನ ವಸತಿರಹಿತರು ನಿವೇಶನಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. 62 ಲಕ್ಷ 59 ಸಾವಿರ ಮಕ್ಕಳು ಉಚಿತ ಪಠ್ಯಪುಸ್ತಕ ಮತ್ತು 47 ಲಕ್ಷ 45 ಸಾವಿರ ಸಮವಸ್ತ್ರ ಮತ್ತು ಷೂಗಳನ್ನು ನೀಡಿರುವುದು ಈ ಸರ್ಕಾರದ ಒಂದು ಸಾಧನೆಯೇ ಸರಿ. ಮಾನ್ಯ ಸಭಾಪತಿಯವರೇ, ಅಂದು ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಮಾನ್ಯ ದೇವರಾಜು ಅರಸುರವರು, ಉಳುವವನೇ ಭೂಮಿಯ ಒಡೆಯ ಎನ್ನುವಂತಹ ಕಾನೂನನ್ನು ತರುವ ಮುಖಾಂತರ ಈ ನಾಡಿನ ಭೂಹೀನ ರೈತರಿಗೆ, ಶ್ರಮಜೀವಿಗಳಿಗೆ ಜಮೀನಿನ ಒಡೆತನ ದೊರಕಿಸಿ ಕೊಡುವ ಪ್ರಯತ್ನವನ್ನು ಮಾಡಿದ್ದು ಒಂದು ಇತಿಹಾಸ. ಮಾನ್ಯ ದೇವರಾಜ ಅರಸುರವರ ಮಾರ್ಗದರ್ಶನದಲ್ಲಿ, ಅವರು ಇಟ್ಟಂಥ ಹೆಜ್ಜೆಗಳ ಮೇಲೆ ತಮ್ಮ ದಿಟ್ಟ ಹೆಜ್ಜೆಗಳನ್ನಿಡುತ್ತಿರುವ, ಅವರ ಮಾದರಿಗಳನ್ನು ತಮ್ಮಲ್ಲೂ ಅಳವಡಿಸಿಕೊಂಡಿರುವ ಮಾನ್ಯ ಸಿದ್ಧರಾಮಯ್ಯನವರು, ರಾಜ್ಯದ ರೈತಪರ ಹೋರಾಟದ ಹಿನ್ನೆಲೆಯಲ್ಲಿ ಬಂದಂಥ ಮಾನ್ಯ ಕಂದಾಯ ಸಚಿವರ ಒಡಗೂಡಿ ತಂದಂಥ "ನಿವಾಸಿಯೇ ಮನೆಯೊಡೆಯ" ಎನ್ನುವಂತಹ ಐತಿಹಾಸಿಕ ಭೂಸುಧಾರಣೆಯನ್ನು ತಂದಿದ್ದು ಈ ಸರ್ಕಾರದ ಒಂದು ಸಾಧನೆಯಾಗಿದೆ. ಇದಕ್ಕೆ ಸಂಬಂಧಪಟ್ಟ ಮಸೂದೆಗೆ ಕೆಳಮನೆ ಮತ್ತು ಮೇಲ್ಮನೆಗಳಲ್ಲಿ ಪಕ್ಷಾತೀತವಾಗಿ, ಎಲ್ಲಾ ಪಕ್ಷಗಳು ಸರ್ವಾನುಮತದಿಂದ ಸಹಕರಿಸಿ ಜನರ ಸಂಕಷ್ಟಕ್ಕೆ ನೆರವಾದವು.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ರವಿ(ಮುಂದು):-

ಐತಿಹಾಸಿಕವಾದಂತಹ ಅರ್ಧ ಶತಮಾನಗಳಿಗೂ ಹೆಚ್ಚು ಕಾಲದ ನಿರೀಕ್ಷೆಯನ್ನು ಅವರಿಗೆ ನೀಡತಕ್ಕಂಥ ಹಿನ್ನೆಲೆಯಲ್ಲಿ ಇಡೀ ಸದನ ಒಟ್ಟಾಗಿ ಬೆಂಬಲಿಸಿದಂತಹ ಖ್ಯಾತಿ ಈ ಸರ್ಕಾರದ ಸಾಧನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಜೊತೆಗೆ ಅತ್ಯಂತ ಹಿಂದುಳಿದ ವರ್ಗದ ಜನ ವಾಸ ಮಾಡತಕ್ಕಂಥ ಲಂಬಾಣಿ ತಾಂಡಗಳು, ಗೊಲ್ಲರ ಹಟ್ಟಿ, ತಾಂಡ್ಯ, ಈ ರೀತಿಯಾದಂತಹ ಜನ ಇಂದಿಗೂ ತಲಾತಲಾಮಾರುಗಳಿಂದ ಆ ಕುಟುಂಬಗಳಲ್ಲಿ ವಾಸ ಮಾಡುತ್ತಾ ಬಂದರೂ ಕೂಡ ಆ ಮಾಲೀಕತ್ವದ ಮೇಲೆ ತಾಂಡಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾಗದಂತಹ ಹಿನ್ನೆಲೆಯಲ್ಲಿ ಮೂಲಭೂತ ಸೌಕರ್ಯಗಳನ್ನು ಪಡೆಯಲು ವಂಚಿತರಾಗಿದ್ದಂತಹ ಸಂದರ್ಭದಲ್ಲಿ ಆ ನಿವಾಸಿಗಳಿಗೆ ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವ ಮುಖೇನಾ ಅವರಿಗೆ ಎಲ್ಲಾ ಸೌಲಭ್ಯಗಳು ದೊರೆಯುವ ರೀತಿಯಲ್ಲಿ ತೆಗೆದುಕೊಂಡಂತಹ ಮತ್ತೊಂದು ನಿರ್ಣಯ ಈ ಸರ್ಕಾರದ ಸಾಧನೆಯ ಮತ್ತೊಂದು ಬೃಹತ್ ಮೈಲಿಗಲ್ಲು ಎಂದು ನಾನಾದರೂ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಅದೇ ರೀತಿಯಾಗಿ ಮಾನ್ಯ ಕಂದಾಯ ಸಚಿವರ ನೇತೃತ್ವದಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮವಾಗಿ ಮಾಡತಕ್ಕಂಥ ಸಾಗುವಳಿದಾರರಿಗೆ ಹಕ್ಕು ಪತ್ರಗಳನ್ನು ನೀಡುವುದಕ್ಕೆ ಸೆಕ್ಷನ್ 107ಕ್ಕೆ ತಿದ್ದುಪಡಿಯನ್ನು ಮಾಡಿ ಇದ್ದಂತಹ ಅಡ್ಡಿ ಆತಂಕಗಳನ್ನು ನಿವಾರಣೆ ಮಾಡಿ ಇವತ್ತು ಯಾರು ಅಕ್ರಮವಾಗಿ ಸಾಗುವಳಿಯನ್ನು ಮಾಡುತ್ತಿದ್ದರು ಅವರಿಗೆ ಸಕ್ರಮಗೊಳಿಸುವುದಕ್ಕೆ ತೆಗೆದುಕೊಂಡಿರುವಂತಹ ನಿಲುವು ಕೂಡ ಅತ್ಯಂತ ಐತಿಹಾಸಿಕವಾಗಿರುವಂತಹ ನಿಲುವಾಗಿರುವುದನ್ನು ನಾವೆಲ್ಲಾ ಮನಗಂಡಿದ್ದೇವೆ.

ಇದರ ಜೊತೆಗೆ ಪಿಂಚಣಿ ಅದಾಲತ್, ಆರ್.ಟಿ.ಸಿ. ತಿದ್ದುಪಡಿ ಆಂದೋಲನ, ಪೋಡಿ ಮುಕ್ತ ಗ್ರಾಮ ಅಭಿಯಾನ, ಅದರ ಜೊತೆಗೆ ನಾಲ್ಕು ವರ್ಷಗಳ ಕಾಲದ ಈ ಸರ್ಕಾರದ ಅವಧಿಯಲ್ಲಿ ಹಿಂದೆಂದು ಕಂಡರಿಯದ ರೀತಿಯಲ್ಲಿ ಈ ನಾಡು ಬರವನ್ನು ಎದುರಿಸಿತ್ತು. ಮಳೆಯ ತೀವ್ರ ಅಭಾವವನ್ನು ಕಂಡಂಥ ಸಂದರ್ಭದಲ್ಲಿ ಜನ, ದನಕರುಗಳಿಗೆ ನೀರು, ಮೇವು, ಎಲ್ಲಾ ಕೂಡ ಅತ್ಯಂತ ಶೋಚನೀಯವಾದಂತಹ ಪರಿಸ್ಥಿತಿ ತಲುಪಿದಂತಹ ಸಂದರ್ಭದಲ್ಲಿ ಮಂತ್ರಿಗಳ ತಂಡಗಳ ರಚನೆ ಮಾಡಿ ಇಡೀ ತಾಲ್ಲೂಕುಗಳಿಗೂ ಕೂಡ ಭೇಟಿ ಮಾಡಿ ಜಿಲ್ಲಾ ಕೇಂದ್ರಗಳಿರಬಹುದು, ತಾಲ್ಲೂಕು ಕೇಂದ್ರಗಳಿರಬಹುದು, ಅಲ್ಲಿಗೆ ಭೇಟಿ ಮಾಡಿ ಜನರ ಸಂಕಷ್ಟಕ್ಕೆ ಅದರಲ್ಲೂ ವಿಶೇಷವಾಗಿ ಕುಡಿಯುವ ನೀರಿನ ಯೋಜನೆಗೆ ಅಥವಾ ದನಕರುಗಳಿಗೆ ಮೇವು ಬೆಳೆಯತಕ್ಕಂಥದ್ದು, ಮೇವು ಸಂಗ್ರಹಿಸುವ ವಿಚಾರ ಇರಬಹುದು ಅಥವಾ ಗೂಳೆ ಹೋಗತಕ್ಕಂಥ ಜನರಿಗೆ ಉದ್ಯೋಗಾವಕಾಶಗಳನ್ನು ಅವರು ವಾಸ ಮಾಡತಕ್ಕಂಥ ಸ್ಥಳಗಳಲ್ಲೇ ನಿರ್ಮಿಸಿ ಕೊಡತಕ್ಕಂಥ ವಿಚಾರದಲ್ಲಿ ಈ ಸರ್ಕಾರ ಅತ್ಯಂತ ಸಮರ್ಪಕವಾಗಿ ನಾಡು ಇನ್ನೆಂದು ಕಂಡರಿಯದಂತಹ ತೀವ್ರ ಬರವನ್ನು ಎದುರಿಸಿದಂತಹ ಸಾಧನೆ ಕೂಡ ಈ ಸರ್ಕಾರಕ್ಕೆ ಇರತಕ್ಕಂಥದ್ದು. ಅದರಲ್ಲೂ ವಿಶೇಷವಾಗಿ ತಮ್ಮ ಮುಖೇನಾ ಈ ಸದನಕ್ಕೆ ನೆನಪಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. 2450 ಕೋಟಿ ರೂಪಾಯಿಗಳನ್ನು 35 ಲಕ್ಷ ಜನ ರೈತರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Bank Account ಗೆ ನೇರವಾಗಿ ಬರ ಪರಿಹಾರದ ವಿತರಣೆಯನ್ನು ಮಾಡಿರತಕ್ಕಂಥ ಸಾಧನೆಯಾಗಿದೆ. ಆ ಕಷ್ಟಕ್ಕೆ ಒಳಗಾಗಿರುವಂತಹ ಜನರಿಗೆ ಕಿಂಚಿತ್ತಾದರೂ ನೆರವನ್ನು ನೀಡಬೇಕಾದ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಿರತಕ್ಕಂಥದ್ದು ನಾವು ನೆನಪಿಸಿಕೊಳ್ಳಬೇಕಾದಂತಹ ವಿಚಾರ ಎಂದು ನಾನು ಹೇಳಬಯಸುತ್ತಿದ್ದೇನೆ. ಆಡಳಿತಾತ್ಮಕವಾಗಿ ಸಣ್ಣ ತಾಲ್ಲೂಕುಗಳು ಇದ್ದಂತಹ ಸಂದರ್ಭದಲ್ಲಿ ಆಡಳಿತವನ್ನು ಹೆಚ್ಚು ಸಮರ್ಪಕವಾಗಿ ನೀಡುವುದಕ್ಕೆ ಸಾಧ್ಯ ಎನ್ನುವ ದೃಷ್ಟಿಯಿಂದ 50 ಹೊಸ ತಾಲ್ಲೂಕುಗಳನ್ನು ರಚನೆ ಮಾಡಿರತಕ್ಕಂತ ಖ್ಯಾತಿ ಕೂಡ ಈ ಸರ್ಕಾರಕ್ಕೆ ಸಲ್ಲಬೇಕಾಗಿರುವಂಥದ್ದು. ಇನ್ನು ಹತ್ತು ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ನಾನು ಕಂದಾಯ ಇಲಾಖೆಯ ಬಗ್ಗೆಯೇ ಪ್ರಸ್ತಾಪ ಮಾಡುತ್ತಾ ಹೋದರೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಹೋಗಬಹುದು. 'ಮನಸ್ವಿನಿ' ಅಥವಾ 'ಮೈತ್ರಿ' ಇರಬಹುದು, ಇದರ ಜೊತೆಗೆ 61 ವರ್ಷದಿಂದ 65 ವರ್ಷ ವಯಸ್ಸಾಗಿರುವಂಥವರಿಗೆ ಕೊಡುತ್ತಿದ್ದಂತಹ 200 ರೂಪಾಯಿ ಪಿಂಚಣಿಯನ್ನು 500 ರೂಪಾಯಿಗೆ ಹೆಚ್ಚಿಸಿದಂತಹ ವಿಶೇಷತೆ ಕೂಡ ಈ ಸರ್ಕಾರದ್ದು ಎನ್ನತಕ್ಕಂಥದ್ದನ್ನು ನೆನಪಿಸುತ್ತಿದ್ದೇನೆ.

ಇನ್ನು ಗೃಹ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಅಥವಾ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯ ಬಗ್ಗೆ ನಿನ್ನೆಯಿಂದ ಈ ಸದನದಲ್ಲಿ ಮತ್ತು ಕೆಳಮನೆಯಲ್ಲಿ ಚರ್ಚೆ, ವಾದ ವಿವಾದಗಳು, ಸಾಕಷ್ಟು ಚರ್ಚೆಗಳು ಈಗಾಗಲೇ ನಡೆದಿವೆ. ಈ ವಿಚಾರವಾಗಿ ನಾನು ಹೆಚ್ಚು ಕೆದುಕುವುದಕ್ಕೆ ನಾನು ಹೋಗುವುದಿಲ್ಲ. ಗೃಹ ಇಲಾಖೆ ಅದರಲ್ಲೂ ವಿಶೇಷವಾಗಿ ಪೋಲೀಸ್ ಇಲಾಖೆ ಸಮರ್ಥವಾಗಿದ್ದಂತಹ ಸಂದರ್ಭದಲ್ಲಿ ನಾಡಿನಲ್ಲಿ ಶಾಂತಿ, ಸುಭಿಕ್ಷೆಯನ್ನು ಕಾಪಾಡುವುದಕ್ಕೆ ಸಾಧ್ಯ ಎನ್ನುವ ವಿಚಾರದಿಂದಾಗಿ ರಾಜ್ಯದಲ್ಲಿ ಪೋಲೀಸ್ ಇಲಾಖೆ ಬಹಳ ಪ್ರಮುಖವಾದಂತಹ ಇಲಾಖೆಯಾಗಿರುವುದರಿಂದ ಮಾನವ ಸಂಪನ್ಮೂಲದ ಕೊರತೆ ಉಂಟಾಗಬಾರದೆಂದು ಗಲಭೆಗಳ ವಿಚಾರ ಇರಬಹುದು, ಇನ್ನಿತರ ವಿಚಾರಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಅತ್ಯಂತ ಪಾರದರ್ಶಕವಾಗಿ 29,684 ಜನ Police Constable ಗಳ ಜೊತೆಗೆ ಆರಕ್ಷಕ ನಿರೀಕ್ಷಕರನ್ನು ನೇಮಕ ಮಾಡಿದಂತಹ ಖ್ಯಾತಿ ಈ ಸರ್ಕಾರಕ್ಕೆ ಸಲ್ಲುತ್ತದೆಂದು ನಾನು ಒತ್ತಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಅತ್ಯಂತ ಪಾರದರ್ಶಕವಾಗಿ ಯಾವುದೇ ರೀತಿಯಾದಂತಹ ಗೊಂದಲಗಳಿಗೆ ಅವಕಾಶ ಇಲ್ಲದಂತೆ ಈ ಸರ್ಕಾರ ನೇಮಕಾತಿಯನ್ನು ಮಾಡಿದೆ. ಇದರ ಜೊತೆಗೆ 11,000 ಕ್ಕೂ ಹೆಚ್ಚು ಜನರಿಗೆ ಪೋಲೀಸ್ ಇರಬಹುದು, Head Constable ಇರಬಹುದು, ಅವರಿಗೆ ಮುಂಬಡ್ತಿಯನ್ನು ನೀಡಿರುವಂಥದ್ದು, ಇದರ ಜೊತೆಗೆ ಆಡಳಿತ ವ್ಯವಸ್ಥೆಯಲ್ಲಿ ಪೋಲೀಸ್ ಇಲಾಖೆ ಮತ್ತು ಕಾನೂನನ್ನು ತಹಬಂದಿಗೆ ತರುವಂತಹ ಪ್ರಯತ್ನದ ಹಿನ್ನೆಲೆಯಲ್ಲಿ 84 ಹೊಸ ಪೋಲೀಸ್ ಠಾಣೆ, 2 ಜಿಲ್ಲಾ ಪೋಲೀಸ್ ಕಚೇರಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಕೀರ್ಣಗಳು, 232 ವಸತಿ quarters ಗಳು, 6 ಜಿಲ್ಲಾ ಪೊಲೀಸ್ ತರಬೇತಿ ಕೇಂದ್ರಗಳು, 10 ಪೊಲೀಸ್ ಉಪಠಾಣೆಗಳು, 10 ಬ್ಯಾರಕ್‌ಗಳು, 6 ಶಸ್ತ್ರಾಗಾರಗಳು, ಇವೆಲ್ಲಾ ಮಾಡಿರತಕ್ಕಂಥದ್ದು. ಈ ರೀತಿ ಪೊಲೀಸ್ ಇಲಾಖೆ, ಗೃಹ ಇಲಾಖೆಯಲ್ಲೇ ಹೆಸರಿಸಲು ಯೋಗ್ಯವಾಗಿರುವಂತಹ ಅರ್ಹವಾಗಿರುವಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಈ ಸರ್ಕಾರ ಅನುಷ್ಠಾನಕ್ಕೆ ತಂದಿರುವಂಥದ್ದು.

ಮತ್ತೊಂದು ಬಹಳ ಪ್ರಮುಖವಾದ ವಿಚಾರವೇನೆಂದರೆ, ಇವತ್ತು ಕೃಷಿ ಕ್ಷೇತ್ರದ ಬಗ್ಗೆ ಹೇಳುವುದಾದರೆ ನಮ್ಮ ನಾಡಿನಲ್ಲಿ ಕೃಷಿಯನ್ನು ಹೆಚ್ಚು ಜನ ಅವಲಂಬಿತರಾಗಿದ್ದಾರೆ. ಅದರಲ್ಲೂ ಪಾರಂಪರಿಕವಾಗಿ ನೈಸರ್ಗಿಕವಾಗಿ ಮಳೆ ಆಧಾರಿತ ಕೃಷಿಯನ್ನು ಹೆಚ್ಚು ಅವಲಂಬಿತರಾಗಿರುವಂತಹ ಸಂದರ್ಭದಲ್ಲಿ ಇವತ್ತು ಕೃಷಿ ಕ್ಷೇತ್ರ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದೆ. ಇವತ್ತು ಕೃಷಿ ಕ್ಷೇತ್ರದಲ್ಲಿ ನಮ್ಮ ಯುವಕರು ಕೃಷಿಯನ್ನು ತೊಡಗಿಸಿಕೊಳ್ಳುವ ದಿಸೆಯಿಂದ ಹಿಂದೆ ಸರಿಯುತ್ತಿದ್ದಾರೆ. ಇವತ್ತು ಯಾರು ಕೂಡ ಕೃಷಿ ಕ್ಷೇತ್ರಕ್ಕೆ ಆದ್ಯತೆ ಕೊಡುತ್ತಿಲ್ಲ. ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು, ಕೃಷಿ ಕ್ಷೇತ್ರದಲ್ಲಿ ಅಧ್ಯಯನ ಮಾಡಬೇಕು, ಶ್ರಮ ವಹಿಸಬೇಕು, ಅದಕ್ಕಿಂತ ಹೆಚ್ಚಾಗಿ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಂತಹ ಸಂದರ್ಭದಲ್ಲಿ ನಾವು ಯಶಸ್ಸನ್ನು ಕಾಣುತ್ತೇವೆ ಎನ್ನುವ ನಂಬಿಕೆ ನಮ್ಮ ಯುವ ಜನತೆಯಲ್ಲಿ ಕಳಚಿಕೊಳ್ಳುತ್ತಿದೆ. ನಾವು ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಂಡರೆ ನಮ್ಮ ಜೀವನದಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಬಲ್ಲೆ, ನನ್ನ ಕುಟುಂಬಕ್ಕೆ ನಾನು ಪೋಷಣೆಯನ್ನು ಮಾಡಬಲ್ಲೆ, ನನ್ನ ಹೆಂಡತಿ ಮಕ್ಕಳನ್ನು ಸಾಕಬಲ್ಲೆ, ಆರ್ಥಿಕವಾಗಿ ನಾನು ಸದೃಢನಾಗಬಲ್ಲೆ ಎನ್ನುವಂತಹ ನಂಬಿಕೆ ಇವತ್ತು ಸಮಾಜಕ್ಕೆ ಇಲ್ಲ. ಅದಕ್ಕೆ ವಿಶೇಷವಾದ ಕಾರಣವೇನೆಂದರೆ, ನೀರಾವರಿಯ ಕೊರತೆ. ನೀರಾವರಿ ಇದ್ದಂತಹ ಸಂದರ್ಭದಲ್ಲಿ ಮಳೆ ಆಧಾರಿತ ಕೃಷಿಯನ್ನು ನಂಬದೆ ಭೂಮಿಯಲ್ಲಿ ಬೆಳೆಯತಕ್ಕಂಥ ಬೆಳೆಗೆ ಸಮರ್ಪಕವಾದ ನೀರ್ರಾವರಿ ವ್ಯವಸ್ಥೆಯನ್ನು ನಾವು ಒದಗಿಸಿಕೊಟ್ಟಂಥ ಸಂದರ್ಭದಲ್ಲಿ ಕೃಷಿ ಕ್ಷೇತ್ರ ಕೂಡ ಆಕರ್ಷಣೀಯವಾದ ಕ್ಷೇತ್ರ, ಲಾಭದಾಯಕವಾದಂತಹ ಕ್ಷೇತ್ರ, ಉದ್ಯೋಗಗಳನ್ನು ಸೃಷ್ಟಿ ಮಾಡತಕ್ಕಂಥ ಕ್ಷೇತ್ರ ಎನ್ನುವ ಭಾವನೆಯನ್ನು ಮನಗಂಡು ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಸಿದ್ದರಾಮಯ್ಯನವರು ಐದು ವರ್ಷಗಳಲ್ಲಿ 58,393 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿ 2017 ಡಿಸೆಂಬರ್ ಅಂತ್ಯದವರೆಗೂ 43,348 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರತಕ್ಕಂಥದ್ದು ಸಾಧನೆ. ಇದು ಕೂಡ ಇತಿಹಾಸದ ಮೈಲಿಗಲ್ಲನ್ನು ಸೇರತಕ್ಕಂಥ ವಿಚಾರ. ಅದರಲ್ಲಿ 2,64,000 ಹೆಕ್ಟೇರ್ ಪ್ರದೇಶವನ್ನು ನೀರಾವರಿ ಭೂಮಿಯನ್ನಾಗಿ ಪರಿವರ್ತನೆ ಮಾಡಿ ರಾಷ್ಟ್ರಕ್ಕೆ ಸಮರ್ಪಿಸಿರುವಂತಹ ಖ್ಯಾತಿ ಈ ಸರ್ಕಾರಕ್ಕೆ ಇದೆ ಎಂದು ನಾನಾದರೂ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇದರ ಜೊತೆಗೆ, ವಿಶೇಷವಾಗಿ ಇವತ್ತು ಕೆರೆಗಳನ್ನು ಸಂರಕ್ಷಣೆ ಮಾಡಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಮುಂದಿನ ಪೀಳಿಗೆಗಾಗಿ ಕೆರೆಗಳ ಸಂರಕ್ಷಣೆಯಾಗಬೇಕಾಗಿದೆ. ಅದರಲ್ಲೂ ವಿಶೇಷವಾಗಿ ಕೆರೆಗಳು ಏಕೆ ಸಂರಕ್ಷಣೆಯಾಗಬೇಕೆಂದರೆ ಅಂತರ್ಜಲ ವೃದ್ಧಿ ಮಾಡುವುದಕ್ಕೆ, ಅಂತರ್ಜಲ ಅಭಿವೃದ್ಧಿಗಾಗಿ ಕೆರೆಗಳನ್ನು ಸಂರಕ್ಷಣೆ ಮಾಡಬೇಕಾಗಿರುವ ಹಿನ್ನೆಲೆಯಲ್ಲಿ 114 ಕೆರೆ ತುಂಬಿಸುವ ಯೋಜನೆಯಡಿಯಲ್ಲಿ 2,672 ಕೆರೆಗಳನ್ನು 8,891 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇವತ್ತು ಆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಇದರ ಜೊತೆಗೆ ನಾನು ಒಬ್ಬ ಹಳೇ ಮೈಸೂರು ಭಾಗದ ವಾಸಿಯಾಗಿದ್ದೇನೆ. ಎಲ್ಲಾ ಹೇಳುತ್ತಿದ್ದಾರೆ, ಹಳೇ ಮೈಸೂರನ್ನು ಉತ್ತರ ಕರ್ನಾಟಕಕ್ಕೆ ಹೋಲಿಕೆ ಮಾಡಿದಾಗ ಹಳೇ ಮೈಸೂರು ಸಮೃದ್ಧಿಯಾಗಿದೆ, ಹಳೇ ಮೈಸೂರು ಶ್ರೀಮಂತವಾಗಿದೆ ಎನ್ನುವಂತಹ ಭಾವನೆ ಮೊದಲಿನಿಂದಲೂ ಕೂಡ ಬಂದಿರುವಂಥದ್ದು. ಆದರೆ ನೈಜವಾಗಿರುವಂತಹ ಪರಿಸ್ಥಿತಿಯೇ ಬೇರೆ. ಹಳೇ ಮೈಸೂರಿನ ನಮ್ಮ ಚಿತ್ರದುರ್ಗ ಜಿಲ್ಲೆ, ತುಮಕೂರು ಜಿಲ್ಲೆ, ರಾಮನಗರ ಜಿಲ್ಲೆ ಅಥವಾ ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಇರಬಹುದು, ಈ ರೀತಿಯ ಜಿಲ್ಲೆಗಳಲ್ಲಿ ನಾವು ಹೋಗಿ ನೋಡಿದಾಗ ಅಲ್ಲಿ ಇವತ್ತು ಬೋರ್‌ವೆಲ್‌ನ್ನು 800 ರಿಂದ 1000 ಅಡಿ ಕೊರೆಸಿದರೂ ನೀರು ಸಿಗುತ್ತಿಲ್ಲ. ಅಲ್ಲಿರುವಂಥವರು ಶ್ರಮಜೀವಿಗಳು. ನಮ್ಮ ಜನ ವ್ಯವಸಾಯ ಮಾಡುವುದಕ್ಕೆ ತಯಾರಿದ್ದಾರೆ. ನಮಗೆ ಯಾವುದಾದರೂ ನೀರಾವರಿ ಕೊಡಿ ಸಾಕು. ಭೂಮಿಗೆ ನೀರು ಕೊಡುವುದು ಬೇಡ, ಅಂತರ್ಜಲ ವೃದ್ಧಿಯಾದರೆ ಸಾಕು. ನಮ್ಮಲ್ಲಿ ಇವತ್ತು ಜನರು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಜನರು ಇವತ್ತು ಬೋರ್‌ವೆಲ್‌ಗಳನ್ನು ನಂಬಿ ವ್ಯವಸಾಯ ಮಾಡುತ್ತಿದ್ದಾರೆ. ನಮ್ಮಲ್ಲಿ ಶಾಶ್ವತವಾದಂತಹ ನೀರಾವರಿ ಯೋಜನೆಗಳಿಲ್ಲ. ಹಳೇ ಮೈಸೂರಿನ ಮಲೆನಾಡು ಸೀಮೆಯಲ್ಲಿ ಕಾವೇರಿ ನೀರು ಹರಿಯತಕ್ಕಂಥದ್ದು ಬಿಟ್ಟರೆ ಇನ್ನು ಆ ಕಡೆ ಭಾಗದಲ್ಲಿ ಹೇಮಾವತಿ ನದಿ ಬಿಟ್ಟರೆ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ಪ್ರಮುಖವಾದಂತಹ ನದಿ ಮೂಲಗಳಿಲ್ಲ.

(ಮುಂದು)

(062) 07-02-2018/4-40/bkp/ ks

ಶ್ರೀ ಎಸ್.ರವಿ(ಮುಂದು. . .)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗೆ ನದಿ ಮೂಲಗಳು ಇಲ್ಲದೇ ಇರುವುದರಿಂದ ನೀರಾವರಿ ಕೊರತೆಯಿಂದ ನಮ್ಮ ಜಮೀನುಗಳನ್ನು ನೀರಾವರಿಗೆ ಒಳಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ಭಾಗದ ಜನರು ಅತ್ಯಂತ ಸಂಕಷ್ಟ ಪರಿಸ್ಥಿತಿಯಲ್ಲಿದ್ದು, ಶ್ರಮ ಜೀವಿಗಳಾಗಿರುತ್ತಾರೆ. ನಾವುಗಳು ವ್ಯವಸಾಯವನ್ನು ಮಾಡಲಿಕ್ಕೆ ಸಿದ್ದವಾಗಿದ್ದೇವೆ. ಅದರ ಮೂಲಕ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ನಾವು ತಯಾರಾಗಿರುವಂತಹ ಸಂದರ್ಭದಲ್ಲಿ ನಮಗೆ ನೀರಾವರಿ ಸೌಲಭ್ಯವೇ ಇರುವುದಿಲ್ಲ. ನಮ್ಮಲ್ಲಿ ಒಬ್ಬ ರೈತ ಸಾವಿರ ಅಡಿ ಆಳಕ್ಕೆ ಬೋರ್‌ವೆಲ್ ತೆಗೆದು ಅದಕ್ಕೆ ಮೋಟರ್ ಹಾಕಿ, ನೀರನ್ನು ತೆಗೆಯುವುದಕ್ಕೆ ಅವನಿಗೆ ಎರಡೂವರೆ ಲಕ್ಷ ರೂಪಾಯಿಗಳಿಂದ ಮೂರು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅವನು ಬೋರ್‌ವೆಲ್ drill ಮಾಡಿಸಲಿಕ್ಕೆ ಒಂದು ಲಕ್ಷ ರೂಪಾಯಿಗಳಾಗುತ್ತದೆ, ಮತ್ತೆ ಅದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಿಕ್ಕೆ ಒಂದೂವರೆ ಲಕ್ಷ ರೂಪಾಯಿಗಳನ್ನು ಹೊಂದಾಣಿಕೆ ಮಾಡಿಕೊಂಡು ಬರುವಷ್ಟರಲ್ಲಿಯೇ ಆ ಬೋರ್‌ವೆಲ್‌ನಲ್ಲಿ ನೀರಿನ ಜಲ ಹೊರಟು ಹೋಗಿರುತ್ತದೆ. ಸುಮ್ಮನೆ ಖಾಲಿ ಮೋಟರ್ ಓಡುತ್ತದೆ. ಒಂದು ವೇಳೆ 3 ತಿಂಗಳು ಆ ಮೋಟರ್ ಓಡಿದರೆ ನಮ್ಮ ಅದೃಷ್ಟ. 6 ತಿಂಗಳಾದ ಮೇಲೆ ಬೋರ್‌ವೆಲ್‌ನಲ್ಲಿ ನೀರು ಬರುವುದಿಲ್ಲ. ಬೋರ್‌ವೆಲ್ ಹಾಕಿ ನೀರು ಬಂದಾಗ ಅಲ್ಲಿ ಯಾವುದೋ ಒಂದು ಬೆಳೆ ಅಂದರೆ ರೇಷ್ಮೆ ಕಡ್ಡಿ, ತರಕಾರಿಗಳನ್ನೋ, ಸೀಮೆ ಗೆಡ್ಡೆಯೋ ಈ ರೀತಿಯಲ್ಲಿ ಯಾವುದಾದರೊಂದು ತರಕಾರಿಯನ್ನು ಬೆಳೆದುಕೊಂಡು ಜೀವನಕ್ಕೆ ಒಂದು ದಾರಿಯನ್ನು ಮಾಡಿಕೊಳ್ಳಬೇಕೆಂದು ಹೇಳಿ, ಅವನು ವ್ಯವಸ್ಥಿತವಾಗಿ ಒಂದು ಬದುಕನ್ನು ಕಟ್ಟಿಕೊಳ್ಳಬೇಕೆಂದು ಹೇಳಿ ಸಾಲಸೋಲ ಮಾಡಿ, ಅವನು ಶ್ರಮವನ್ನು ವಹಿಸುತ್ತಿರುತ್ತಾನೆ. ಅಷ್ಟೊತ್ತಿಗೆ ಆ ಬೋರ್‌ವೆಲ್‌ನಲ್ಲಿ ನೀರು ಇರುವುದಿಲ್ಲ. ನಂತರ ಅವನು ಮತ್ತೊಂದು ಬೋರ್‌ವೆಲ್ ಹಾಕಲೇಬೇಕು. ಏಕೆಂದರೆ, ಅವನು ಬೆಳೆಯನ್ನು ಬಿತ್ತಿರುತ್ತಾನೆ. ಬಿತ್ತಿರುವಂತಹ ಬೆಳೆಯನ್ನು ಅವನು ಉಳಿಸಿಕೊಳ್ಳಲೇಬೇಕು. ಮತ್ತೆ ಅವನು 3 ಲಕ್ಷ ರೂಪಾಯಿಗಳನ್ನು ಸಾಲ ಮಾಡಲೇಬೇಕು. ಅದು ಅವನ ಭಗೀರಥ ಪ್ರಯತ್ನ. ಅವನು ಪುನ: ತನ್ನ ಜಮೀನಿನಲ್ಲಿ ಬೋರ್‌ವೆಲ್ ಕೊರೆಯಲೇಬೇಕು. ನೀರಿಗೆ ಪ್ರಯತ್ನ ಮಾಡಲೇಬೇಕು. ನೀರು ಸಿಕ್ಕಿದರೆ ಸಿಕ್ಕಿತು, ಇಲ್ಲವೆಂದರೆ ಇಲ್ಲ. ಸಿಕ್ಕಿದರೆ ಲಾಟರಿ, ಸಿಕ್ಕದಿದ್ದರೆ ಆತ್ಮಹತ್ಯೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರೈತ ಇದ್ದಾನೆ. ಎರಡು ಬೋರ್‌ವೆಲ್‌ಗಳನ್ನು ಹಾಕಿದರೆ ಮುಗಿಯಿತು. ಮೂರನೇ ಬೋರ್‌ವೆಲ್ ವಿಫಲವಾದರೆ ಅವನು ಬೆಂಗಳೂರಿಗೆ ಬರಬೇಕು. ಅವನ ಹೆಂಡತಿಗೆ ಅಪಾರ್ಟ್‌ಮೆಂಟ್‌ನ ಮೂರು ಮನೆಗಳಲ್ಲಿ ಮನೆ ಕೆಲಸ. ಗಂಡನಿಗೆ security guard ಕೆಲಸ. ಏಕೆಂದರೆ, ಅವನಿಗೆ ವ್ಯವಸಾಯವನ್ನು ಬಿಟ್ಟರೆ, ಬೇರೆ ಅವನಿಗೆ ಕಸುಬು ಗೊತ್ತಿಲ್ಲ. ಅವನು security guard ಆಗಬೇಕು, ಇಲ್ಲವೆಂದರೆ ಬಾರ್‌ನಲ್ಲಿ ಲೋಟವನ್ನು ಎತ್ತಬೇಕಷ್ಟೆ. ಸ್ಲಮ್‌ನಲ್ಲಿ 3000, 4000, 5000

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೂಪಾಯಿಗಳಂತೆ ಮನೆಗೆ ಬಾಡಿಗೆ ಕಟ್ಟುತ್ತಾರೆ. ನಮ್ಮ ತಾಲ್ಲೂಕಿನಲ್ಲಿ 40 ರಿಂದ 50 ಸಾವಿರ ಜನರಿದ್ದಾರೆ. ಈ ಭಾಗದಲ್ಲಿ ಅದರಲ್ಲೂ ನಾಗಮಂಗಲ, ಕುಣಿಗಲ್, ಚಿಕ್ಕಬಳ್ಳಾಪುರ ಭಾಗಕ್ಕೆ ಹೋಗಿ ನೋಡಿ. ಬೆಂಗಳೂರಿನ ಸುತ್ತಮುತ್ತಲಿನ ಯಾವುದಾದರೊಂದು ಭಾಗಕ್ಕೆ ಹೋಗಿ ನೋಡಿ. ಒಂದೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಇಲ್ಲವೆಂದರೂ 30 ರಿಂದ 40 ಸಾವಿರ ಜನರು security guard ಗಳಾಗಿಯೋ, ಬಾರ್‌ಗಳಲ್ಲಿ, ಆಟೋಗಳನ್ನು ಓಡಿಸುವುದು, ಮತ್ತೆ ಫುಟ್‌ಪಾತ್ ಮೇಲೆ ತರಕಾರಿ ಮಾರುತ್ತಿದ್ದಾರೆ. ಊರಿನಲ್ಲಿ ಇರುವವರಿಗಿಂತ ಇಲ್ಲಿ ಬಂದು ನೆಲೆಸಿರುವವರೇ ಮೇಲು. ಊರುಗಳಲ್ಲಿ 5 ಎಕರೆ, 10 ಎಕರೆ ಜಮೀನು ಇರುತ್ತದೆ. ನಮ್ಮ ಊರುಗಳಲ್ಲಿ ಜಮೀನಿನ ಬೆಲೆಯೂ ಜಾಸ್ತಿ ಇರುತ್ತದೆ. ನಮ್ಮ ಭಾಗ ಬೆಂಗಳೂರಿಗೆ ಹತ್ತಿರ ಇರುವುದರಿಂದ 1 ಎಕರೆ ಜಮೀನಿಗೆ 50 ಲಕ್ಷ, 1 ಕೋಟಿ ರೂಪಾಯಿಗಳಿರುತ್ತದೆ. ಅಲ್ಲಿ 4-5 ಎಕರೆ ಜಮೀನು ಇರುತ್ತದೆ. ಇಲ್ಲಿ ಆಮ್ಲೇಟ್ ಹಾಕುವವನು ಅಲ್ಲಿ 4-5 ಜಮೀನು ಇರುವವನಿಗಿಂತ ಮೇಲು. ಹಬ್ಬ-ಹರಿದಿನಕ್ಕೆ ಅವನು ಊರಿಗೆ ಬಂದರೆ ಅವನೇ ಶ್ರೀಮಂತ. ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿರುವಂತಹ ಹಿನ್ನೆಲೆಯಲ್ಲಿ ಇವರುಗಳಿಗೆ ಶಾಶ್ವತ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡಬೇಕಾಗಿದೆ. ಅದರಲ್ಲೂ ಕುಡಿಯುವುದಕ್ಕೆ ನೀರು ಕೊಡಬೇಕು. ನಮಗೆ ಅಂತರ್ಜಲ ಸಾಕು. ನಮ್ಮ ಜಮೀನಿಗಳಿಗೇನೂ ನೀರು ಬೇಡ. ಆ ವಿಚಾರದಲ್ಲಿ ನಮ್ಮ ಸರ್ಕಾರ ಎತ್ತಿನ ಹೊಳೆಯಂತಹ ಅದ್ಭುತವಾದಂತಹ ಒಂದು ಯೋಜನೆಗೆ ಹಣವನ್ನು ವೆಚ್ಚ ಮಾಡಿರುವಂತಹದ್ದು ಇಲ್ಲಿಯವರೆಗೆ 2,565 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಈ ವಿಚಾರದಲ್ಲಿ ಟೀಕೆ-ಟಿಪ್ಪಣಿಗಳು ನೂರಾರು ಬರುತ್ತವೆ. ಅದರ ಬಗ್ಗೆ ಮಾತನಾಡುವವರು ನೂರೆಂಟು ಮಾತನಾಡುತ್ತಾರೆ. ಈ ಬಗ್ಗೆ ಯಾರೇ ಮಾತನಾಡಿದರೂ ಚಿಂತೆ ಇಲ್ಲ. ನಮಗೆ ನೀರು ಬಂದರೆ ಸಾಕು. ಯಾರು, ಹೇಗಾದರೂ ಮಾತನಾಡಿಕೊಂಡು ಹೋಗಲಿ. 2565 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಖರ್ಚು ಮಾಡಿರುವುದನ್ನು ನಾನು ಮನ:ಪೂರ್ವಕವಾಗಿ ಈ ಭಾಗದ ಒಬ್ಬ ರೈತನಾಗಿ ಈ ಸರ್ಕಾರವನ್ನು, ಮತ್ತು ಅದರ ನೇತೃತ್ವವನ್ನು ವಹಿಸಿರುವ ಮಾನ್ಯ ಶ್ರೀ ಸಿದ್ದರಾಮಯ್ಯನವರನ್ನು ತಮ್ಮ ಮೂಲಕ ಅಭಿನಂದಿಸಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಒಂದು ಕೆಲಸವಾದರೆ ನಿಜವಾಗಿಯೂ ಸಹ ಒಂದು ಅದ್ಭುತವಾದಂತಹ ಒಂದು ಪ್ರಯತ್ನ. ಇದರ ಜೊತೆಗೆ ನಾವು ತಮಿಳುನಾಡಿನ ಗಡಿಗೆ ಹೊಂದಿಕೊಂಡಿರುವವರಾಗಿರುತ್ತೇವೆ. ನಾನು ಡಂಕಣಕೋಟೆ, ತಳಿ, ರಾಯ್‌ಕೋಟೆ, ಹೊಸೂರು ಕಡೆಯೆಲ್ಲಾ ನಾವು ಆಗಾಗ್ಗೆ ಹೋಗುತ್ತಿರುತ್ತೇವೆ. ಅಲ್ಲಿ ಮದುವೆ-ಮುಂಜಿಗೆಲ್ಲಾ ಆ ಭಾಗದ ಹಿತೈಸಿಗಳು ಕರೆಯುತ್ತಿರುತ್ತಾರೆ. ಜೊತೆಗೆ ಆ ಭಾಗದಲ್ಲಿ ಜನರು ಹೆಚ್ಚಿಗೆ ಕನ್ನಡವನ್ನೇ ಮಾತನಾಡುತ್ತಿರುತ್ತಾರೆ. ನಮ್ಮಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕೀಯವಾಗಿ ಸಂಪರ್ಕ ಕೂಡ ಅಲ್ಲಿ ಇರುತ್ತದೆ. ಹೊಸೂರಿನ ಮಾರ್ಗದಲ್ಲಿ ನೀವುಗಳು ಯಾರಾದರೂ ಸಂಚಾರ ಮಾಡಿದರೆ ಗೊತ್ತಾಗುತ್ತದೆ. ಅತಿ ಹೆಚ್ಚು ತರಕಾರಿ ಬೆಳೆಯುವಂತಹ ಪ್ರದೇಶ ಯಾವುದಾದರೂ ಇದ್ದರೆ ಆ ಪ್ರದೇಶವಾಗಿರುತ್ತದೆ. ತಮಿಳುನಾಡಿನಲ್ಲಿ ಅತ್ಯಂತ ದೊಡ್ಡ ತರಕಾರಿ ಮಾರುಕಟ್ಟೆ ಎಂದರೆ ಹೊಸೂರು ತಾಲ್ಲೂಕಿನಿಂದ 25 ಕಿ.ಮೀ ದೂರದಲ್ಲಿದೆ. ಇಡೀ ತಮಿಳುನಾಡಿಗೆ ತರಕಾರಿಯನ್ನು ಸರಬರಾಜು ಮಾಡುವಂತಹದ್ದಾಗಿದೆ. ಮತ್ತೆ ಅರ್ಧ ಬೆಂಗಳೂರಿಗೆ ತರಕಾರಿಯನ್ನು ಯಾರು ಸರಬರಾಜು ಮಾಡುತ್ತಾರೆಂದರೆ ನೆರೆಯ ತಮಿಳುನಾಡಿನ ಗಡಿಗೆ ಹೊಂದಿಕೊಂಡಿರುವಂತಹ ನಮ್ಮ 3-4 ತಾಲ್ಲೂಕಿನ ರೈತರಾಗಿದ್ದಾರೆ. ಇವರುಗಳಿಗೆ ಎಲ್ಲಿಂದ ನೀರಿನ ಸೌಲಭ್ಯ ಬಂತು. ಇವರುಗಳಿಗೆ ನಮ್ಮದೇ ವಾತಾವರಣ, ನಮ್ಮದೇ ವ್ಯವಸ್ಥೆ. ಇವರುಗಳಿಗೆ ಯಾವ ರೀತಿಯಲ್ಲಿ ದೊಡ್ಡ ನದಿ ಇದೆ? ಅಲ್ಲಿ Hogenakkal Falls ಇದೆ. ನಮ್ಮ ಕನಕಪುರ ತಾಲ್ಲೂಕು ಬಿಟ್ಟರೆ, ಕಾವೇರಿ ನೀರು ಅಲ್ಲಿ ಹೋಗುತ್ತದೆ. ಅಲ್ಲಿ ಕಾವೇರಿ ನೀರನ್ನು ಹತ್ತಿಸಲಿಕ್ಕೂ ಸಾಧ್ಯವಿಲ್ಲ. ಇವರು ಹೇಗೆ ಶಾಶ್ವತ ನೀರಾವರಿಯನ್ನು ಮಾಡಿಕೊಂಡಿದ್ದಾರೆಂದರೆ, ಬೆಂಗಳೂರಿನ ಮೋರಿಯ ನೀರು. ಬೆಂಗಳೂರಿನ ಅರ್ಧ ನೀರು ವೃಷುಭಾವತಿಯಿಂದ ಹೋಗುತ್ತದೆ, ಅರ್ಧ ನೀರು ತಮಿಳುನಾಡಿಗೆ ಹೋಗುತ್ತದೆ. ಇವತ್ತು ಬೆಂಗಳೂರಿನ ಜನ ಯಾವುದಾದರೂ ತರಕಾರಿಯನ್ನು ತಿನ್ನುತ್ತಿದ್ದಾರೆಂದರೆ ಆ ತರಕಾರಿ ನಮ್ಮ ಬೆಂಗಳೂರಿನ ಮೋರಿ ನೀರನ್ನು ತೆಗೆದುಕೊಂಡು ತಮಿಳುನಾಡಿನವರು ಬೆಳೆಯುತ್ತಿರುವಂತಹ ತರಕಾರಿ. ಅದನ್ನು ಇಲ್ಲಿ ಮಾರುತ್ತಿದ್ದಾರೆ. ಮತ್ತೆ ಯಾವುದೇ ನೀರಿನ ಸೌಲಭ್ಯ ಇಲ್ಲ. ಈ ನೀರಿಗೆ pumpset ಹಾಕಿಕೊಂಡು ತರಕಾರಿಯನ್ನು ಬೆಳೆಯುತ್ತಿದ್ದಾರೆ. ಆ ನೀರನ್ನು ನಮಗೆ ಕೊಟ್ಟರೆ ನಾವೇ ತರಕಾರಿಯನ್ನು ಬೆಳೆಯುತ್ತೇವೆ. ಅದೇ ಕೆಲಸವನ್ನು ನಾವು ಮಾಡುತ್ತೇವೆ. ಒಟ್ಟಾರೆ ನಮಗೆ ನೀರು ಕೊಟ್ಟರೆ ಸಾಕು. ಕಾವೇರಿ ನೀರು ಲೆಕ್ಕಕ್ಕೆ ಸಿಕ್ಕುತ್ತದೆ. ಕುಡಿಯುವ ನೀರಿನ ಲೆಕ್ಕ ಕೊಡುತ್ತೇವೆ. ಈ ನೀರನ್ನು ಉಪಯೋಗ ಮಾಡಿದ ಮೇಲೆ ಅದನ್ನು ಮರು ಉಪಯೋಗ ಮಾಡಿಕೊಳ್ಳಲಿಕ್ಕೆ ನಾವು ಇಲ್ಲಿಯವರೆಗೆ ಯಾವುದೇ ಕಾರ್ಯಕ್ರಮವನ್ನು ಇಲ್ಲಿಯವರೆಗೂ ಹಾಕಿಕೊಂಡಿರಲಿಲ್ಲ. ನಮ್ಮ ನೆಚ್ಚಿನ ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದಲ್ಲಿ ಆ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡತಕ್ಕಂತಹ ವಿಚಾರದಲ್ಲಿ ಬಹಳ ದಿಟ್ಟವಾದ ಕ್ರಮವನ್ನು ತಗೆದುಕೊಂಡು ಇವತ್ತು K.C. Valley Project ನ ಮೂಲಕ ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆ ಈ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಿ ಈ ಭಾಗದ 5-6 ತಾಲ್ಲೂಕುಗಳಿಗೆ ಅಂದರೆ, ನಮ್ಮ ಭಾಗದಲ್ಲಿ ಆನೇಕಲ್‌ನಿಂದ ಹಿಡಿದು ಈ ವೃಷುಭಾವತಿ ವಲಯಕ್ಕೆ ಸಂಬಂಧಪಟ್ಟ ಹಾಗೆ ಕೊಟ್ಟರೆ ಒಂದೆರಡು ವರ್ಷಗಳಲ್ಲಿ ತಮಿಳುನಾಡಿಗೆ ಒಂದು ತೊಟ್ಟು ತ್ಯಾಜ್ಯ ನೀರು ಹೋಗುವುದಿಲ್ಲ. ಈ ರೀತಿಯಲ್ಲಿ ಮಾಡಿದರೆ ನಮ್ಮ 8

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಿಂದ 10 ತಾಲ್ಲೂಕುಗಳಲ್ಲಿ ಅಂತರ್ಜಲ ವೃದ್ಧಿಯಾಗಿ ನಮ್ಮ ಬದುಕು ಹಸನಾಗುತ್ತದೆ. ಆದ್ದರಿಂದ, ಇಂತಹ ಅಭೂತಪೂರ್ವವಾದಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಂತಹ ಈ ಸರ್ಕಾರವನ್ನು ಮತ್ತೊಮ್ಮೆ ಅಭಿನಂದಿಸಲಿಕ್ಕೆ ಇಚ್ಚೆ ಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನು ವಿದ್ಯುತ್ ಇಲಾಖೆ ಬಗ್ಗೆ ಹೇಳುವುದಾದರೆ, ನಾನು ಈಗಾಗಲೇ ಹೇಳಿದಹಾಗೆ ಈ ನಾಡು ಕಂಡಂತಹ ಅತ್ಯಂತ ಭೀಕರ ಬರಗಾಲದ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. ಇತಿಹಾಸವನ್ನು ನೋಡಿದಂತಹ ಸಂದರ್ಭಗಳಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿದಂತಹ ಸಂದರ್ಭದಲ್ಲಿ ನಮ್ಮಲ್ಲಿ ರಾಗಿ ಬೆಳೆಯನ್ನು 'ಗಂಡು' ಬೆಳೆ ಎಂದು ಕರೆಯುತ್ತೇವೆ. ರಾಗಿಯನ್ನು ಗಂಡು ಬೆಳೆ ಎಂದು ಏತಕ್ಕೆ ಹೇಳುತ್ತೇವೆಂದರೆ ನೀವು ರಾಗಿಯನ್ನು ಬಿತ್ತಿದರೆ ಸಾಕು, 15 ದಿವಸಗಳಿಗೋ, ತಿಂಗಳಿಗೋ ಮಳೆಯಾದರೆ ಸಾಕು. ಬೆಳಗಿನ ಹಿಬ್ಬನಿಗೆಯೇ ರಾಗಿ ಮೊಳಕೆ ಬಂದು ನಿಂತಿರುತ್ತದೆ. ಒಂದು ಇಂಚು ಭೂಮಿ ತೇವಾಂಶವಾದರೂ ಸಾಕು. ಹೇಗೋ ದನಗಳಿಗೂ ಕೂಡ ಮೇವು ಆಗುತ್ತದೆ. ಮನುಷ್ಯನಿಗೆ ರಾಗಿಯಾಗುತ್ತದೆ. ರಾಗಿ ಬೆಳೆ ಪೂರ್ಣವಾಗಿ ನಮ್ಮ ಕೈ ಸೇರುವುದಕ್ಕೆ 3 ರಿಂದ 4 ಹದ ಮಳೆಯಾದರೆ ಸಾಕು. ರಾಗಿ ಹೊಡೆ ಹೊಡೆಯುವುದಕ್ಕೆ ಮುಂಚೆ ಒಂದು ಬಾರಿ, ಹೂ ಬರುವುದಕ್ಕೆ ಮುಂಚೆ ಒಂದು ಬಾರಿ, ಹೂ ಆಗಿ ಕಾಳಿಗೆ ಹಾಲು ತುಂಬುವಾಗ ಒಂದು ಬಾರಿ ಮಳೆಯಾದರೆ ಸಾಕು. ಈ ರೀತಿಯಲ್ಲಿ 3 ರಿಂದ 4 ಹದ ಮಳೆಯಾದರೆ ದನಕರುಗಳಿಗೂ ಮೇವು ಆಗುತ್ತದೆ, ನಮಗೆ ಊಟವೂ ಆಗುತ್ತದೆ ಎನ್ನುವುದು ನಮ್ಮ ಭಾವನೆಯಾಗಿದೆ. ಕಳೆದ ಬಾರಿ ಮಳೆಯ ತೀವ್ರ ಅಭಾವದಿಂದ ರಾಗಿ ಬೆಳೆ ನೆಲ ಬಿಟ್ಟು ಎದ್ದೇಳಲಿಲ್ಲ. ಕೊನೆಯಲ್ಲಿ ಹುರುಳಿಯನ್ನು ಚೆಲ್ಲುತ್ತಿದ್ದೆವು. ಮಳೆಯ ಅಭಾವದಿಂದ ಹುರುಳಿಯನ್ನು ಚೆಲ್ಲಲಿಕ್ಕೆ ಆಗಲಿಲ್ಲ. ಆ ಒಂದು ಹಿನ್ನೆಲೆಯಲ್ಲಿ ಈ ಬಯಲು ಸೀಮೆಯಲ್ಲಿ ಬರಗಾಲ ಕಾಡಿತು.

ಮಾನ್ಯ ಸಭಾಪತಿಯವರೇ, ತಾವು ವಾಸ ಮಾಡುತ್ತಿರುವಂತಹ ಶಿವಮೊಗ್ಗ ಜಿಲ್ಲೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವಂತಹ ಲಿಂಗನಮಕ್ಕಿ ಡ್ಯಾಂ ತುಂಬಲಿಲ್ಲ. ಸೂಪಾ ಡ್ಯಾಂ ತುಂಬಲಿಲ್ಲ. ಜಲಾಶಯಗಳು ಬರಿದಾಗಿ ನಿಂತಿದ್ದವು. ನಮ್ಮ ರಾಜ್ಯ ಜಲವಿದ್ಯುತ್ ಮೇಲೆ ಅತಿ ಹೆಚ್ಚು ಅವಲಂಭಿತವಾಗಿರುವಂತಹದ್ದಾಗಿದೆ. ನಮ್ಮ ರಾಜ್ಯದಲ್ಲಿ ಜಲವಿದ್ಯುತ್ ಲಭ್ಯವೇ ಆಗಲಿಲ್ಲ. ಕಲ್ಲಿದ್ದಲಿನ ಕೊರತೆ, ತಾರತಮ್ಯ. ನಾನು ಇದರ ಬಗ್ಗೆ ಹೆಚ್ಚಿಗೆ ಮಾತನಾಲಿಕ್ಕೆ ಹೋಗುವುದಿಲ್ಲ. ಯಾರು ತಾರತಮ್ಯ ಮಾಡಿದರು, ಯಾರು ರಾಜಕೀಯ ಮಾಡಲಿಕ್ಕೆ ಹೊರಟು ಎಂದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಸಂಬಂಧ ಹತ್ತು-ಹಲವಾರು ವಿವಾದಗಳು. ನಮಗೆ ಸರಿಯಾದ ಸಮಯಕ್ಕೆ ಕಲ್ಲಿದ್ದಲು ವಿತರಣೆಯಾಗಲಿಲ್ಲ. ಇಂತಹ ಸಂದರ್ಭದಲ್ಲಿ ಯಾವತ್ತೂ ಸಹ load shedding ಆಗಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಿಗೆ ಓದಲಿಕ್ಕೆ ವಿದ್ಯುತ್ ತೊಂದರೆಯಾಗಲಿಲ್ಲ. ಅವರುಗಳು ನಮಗೆ ವಿದ್ಯುತ್ ಇಲ್ಲವೆಂದು ಹೇಳಿ ಬೀದಿಗೆ ಬಂದು ಪ್ರತಿಭಟನೆ ಮಾಡಲಿಲ್ಲ. ಕೈಗಾರಿಕೋದ್ಯಮಿಗಳು ಬೀದಿಗೆ ಬಂದು ನಮಗೆ ಸಮರ್ಪಕವಾದಂತಹ ವಿದ್ಯುತ್ ಕೊಡದೇ ನಮ್ಮ ಉತ್ಪನ್ನಗಳನ್ನು ತಯಾರು ಮಾಡಲಿಕ್ಕೆ ವಿದ್ಯುತ್ ಅನ್ನು ಕೊಡುತ್ತಿಲ್ಲ, ಈ ಸಂಬಂಧ ಸರ್ಕಾರದ ವಿರುದ್ಧ ದಿಕ್ಕಾರ ಕೂಗುತ್ತೇವೆಂದು ಹೇಳಿ ಯಾವತ್ತೂ ಪ್ರತಿಭಟನೆ ಮಾಡಲಿಲ್ಲ. ಮತ್ತೆ ನಿವಾಸಿಗಳು ಸಹ ಪ್ರತಿಭಟನೆ ಮಾಡಲಿಲ್ಲ. ಯಾವ ಒಂದು ಕ್ಲಿಷ್ಟಕರವಾದ ಸಂದರ್ಭದಲ್ಲಿಯೂ ಕೂಡ ನಾವು ಅತ್ಯಂತ ಸಮರ್ಥವಾಗಿ ವಿದ್ಯುತ್ ಅನ್ನು ಈ ರಾಜ್ಯದ ನಾಡಿನ ಜನತೆಗೆ ಕೊಡುತ್ತಿರುವುದಾಗಿದೆ. ಜೊತೆಗೆ 2013 ರಿಂದ 8,246 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ನಾವು ಸೇರ್ಪಡೆ ಮಾಡಿಕೊಂಡಿದ್ದೇವೆ. ಜೊತೆಗೆ 139 ಹೊಸ ಉಪ ಕೇಂದ್ರಗಳ ಸ್ಥಾಪನೆ. 309 ಉಪ ಕೇಂದ್ರಗಳ ಉನ್ನತೀಕರಣ. 3,709 circuit kilo meter ಪ್ರಸರಣ ಮಾರ್ಗ ಸೇರ್ಪಡೆ. ಇದರ ಜೊತೆಗೆ ಬಡವರ ಪರವಾಗಿರುವಂತಹ ಸರ್ಕಾರವೆಂದು ಹೇಳಿ ಏನು ಮೊದಲೇ ನಾನು ಘೋಷಣೆ ಮಾಡಿಕೊಂಡೆ, ಆ ವಿಚಾರದಲ್ಲಿ ಭಾಗ್ಯಜ್ಯೋತಿ, ಕುಟೀರ ಜ್ಯೋತಿಗೆ ನೀಡುತ್ತಿದ್ದಂತಹ 18 ಯೂನಿಟ್ ಉಚಿತ ವಿದ್ಯುತ್ ಬದಲಿಗೆ 18 ರಿಂದ 40 ಯೂನಿಟ್‌ಗೆ ಹೆಚ್ಚು ಮಾಡಿದಂತಹ ಖ್ಯಾತಿ ಕೂಡ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆ.

ಇದೆಲ್ಲದಕ್ಕೂ ಮೆರಗು ನೀಡುವಂತಹ, ಕಿರೀಟ ಪ್ರಧಾನವಾದಂತಹ ಮತ್ತೊಂದು ಕಾರ್ಯಕ್ರಮ, ಅದರಲ್ಲೂ ವಿಶ್ವದಲ್ಲಿಯೇ ವಿಶಿಷ್ಟವಾದಂತಹ ಕಾರ್ಯಕ್ರಮವೆಂದು ಈಗಾಗಲೇ ಮಾಧ್ಯಮಗಳ ಮೂಲಕ ಹೇಳುತ್ತಿರುವಂತೆ 2,000 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಯ ಬಗ್ಗೆ ಹೇಳಬೇಕಾಗುತ್ತದೆ. ಪಾವಗಡ ಭಾಗದಿಂದ ಬಂದವರಾದ ಮಾನ್ಯ ವಿ.ಎಸ್.ಉಗ್ರಪ್ಪನವರು ಇಲ್ಲಿಯೇ ಇದ್ದಾರೆ. ಈ ರಾಜ್ಯದಲ್ಲಿ ಅತಿ ಹೆಚ್ಚು ಬರಗಾಲ ಎಂದು ಯಾವುದಾದರೂ ತಾಲ್ಲೂಕು ಕಂಡಿದ್ದರೆ ಅದು ಪಾವಗಡ ತಾಲ್ಲೂಕು ಆಗಿದೆ. ಇತಿಹಾಸವನ್ನು, ದಾಖಲೆಗಳನ್ನು ನೋಡಿದಂತಹ ಸಂದರ್ಭದಲ್ಲಿ ಪಾವಗಡ ತಾಲ್ಲೂಕು ಬರುತ್ತದೆ. ಇದರ ಜೊತೆಗೆ ಚಿತ್ರದುರ್ಗ ಜಿಲ್ಲೆಯ ಮೊಣಕಾಲ್ಮೂರು ತಾಲ್ಲೂಕು ಸಹ ಬರುತ್ತದೆ.

ಈ ಕೆಲಸವನ್ನು ಮಾಡಲಿಕ್ಕೆ ಪಾವಗಡ ತಾಲ್ಲೂಕಿನ ರೈತರ ಜಮೀನನ್ನು ಭೂಸ್ವಾಧೀನ ಮಾಡಲಿಲ್ಲ. ರೈತರನ್ನು ಖರೀದಿಗೆ ಬಿಡಲಿಲ್ಲ. ಯಾವುದೋ ಮಧ್ಯವರ್ತಿ ಏಜೆಂಟ್‌ಗಳ ಕಮಿಷನ್ ವ್ಯವಹಾರ ನಡೆಯಲಿಲ್ಲ. ನೇರವಾಗಿ 13 ಸಾವಿರ ಎಕರೆ ಜಮೀನನ್ನು ತೆಗೆದುಕೊಂಡು ಸೋಲಾರ್ ಅಳವಡಿಸಲಾಗಿದೆ. ಆ ಬರಪೀಡಿತ, ಅತ್ಯಂತ ಹಿಂದುಳಿದ ಪ್ರದೇಶ, ನಕ್ಸಲ್ ಪೀಡಿತ ತಾಲ್ಲೂಕಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೈತರಿಗೆ ಎಕರೆಗೆ 21 ಸಾವಿರ ರೂಪಾಯಿಗಳ ವಾರ್ಷಿಕವಾಗಿ ಹಣ ನೀಡುವಂತಹ ಕೆಲಸವನ್ನು ಮಾಡಲಾಗಿದೆ. ಜೊತೆಗೆ ಎರಡು ವರ್ಷಗಳಿಗೊಮ್ಮೆ 5% ರಷ್ಟು ಹಣವನ್ನು ಹೆಚ್ಚು ಮಾಡುವಂತಹದ್ದನ್ನು ಮಾಡಲಾಗಿದೆ. ಜೊತೆಗೆ ಭೂ ಒಡೆತನ ಅವರಲ್ಲಿಯೇ ಇರುತ್ತದೆ. ಅವರ ಜಮೀನುಗಳನ್ನು 28 ವರ್ಷಗಳಿಗೆಂದು ಅವರಿಂದ lease ತೆಗೆದುಕೊಳ್ಳಲಾಗಿದೆ. 28 ವರ್ಷಗಳಿಗೆ, ಪ್ರತಿ ವರ್ಷ ಎಕರೆ ಒಂದಕ್ಕೆ 21 ಸಾವಿರ ರೂಪಾಯಿಗಳು ಮತ್ತು ಎರಡು ವರ್ಷಕ್ಕೊಮ್ಮೆ 5% ರಷ್ಟು ಹಣ ಹೆಚ್ಚಳ. ಇಂತಹ ಒಂದು ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ತೆಗೆದುಕೊಂಡು ಬಂದಿದ್ದು, ಈ ಒಂದು ಕಾರ್ಯಕ್ರಮ ಈಗ ಮುಕ್ತಾಯದ ಹಂತದಲ್ಲಿದೆ.

**ಮುಂದು. .**

(063) 07.02.2018 04.50 ಎಸ್‌ವಿ-ಜಿಆರ್

**ಶ್ರೀ ಎಸ್.ರವಿ(ಮುಂದು):-**

ಕೆಲವಷ್ಟು ಯೂನಿಟ್‌ಗಳು ಈಗಾಗಲೇ ಉತ್ಪಾದನೆಯನ್ನು ಪ್ರಾರಂಭ ಮಾಡಿದ್ದು, ಅವುಗಳು ಮುಕ್ತಾಯದ ಹಂತದಲ್ಲಿವೆ. ಮುಂದಿನ ದಿನಗಳಲ್ಲಿ ಅದು ಒಂದು ಪ್ರವಾಸಿ ಕೇಂದ್ರವಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ. ಇಡೀ ದೇಶದಲ್ಲಿಯೇ ಇದು ಒಂದು ವಿಶಿಷ್ಟವಾದ ಯೋಜನೆಯಾಗಿದ್ದು, ಆ ಹೆಮ್ಮೆ ಕೂಡ ನಮ್ಮ ಸರ್ಕಾರದ್ದಾಗಿದೆ. ಇದರ ಜೊತೆಗೆ 59 ಹಿಂದುಳಿದ ತಾಲ್ಲೂಕುಗಳಲ್ಲಿ ಸೋಲಾರ್ ಯೂನಿಟ್‌ಗಳನ್ನು ಬಳಸಿ ತಲಾ 20 ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಉತ್ಪಾದನೆ ಮಾಡಿ, ವಿಶೇಷವಾಗಿ ರೈತರ ವ್ಯವಸಾಯ ಚಟುವಟಿಕೆಗಾಗಿ ಹೇರಳವಾಗಿ ವಿದ್ಯುತ್ ಅನ್ನು ಕೊಡಲಾಗುತ್ತಿದೆ. ಈಗಾಗಲೇ 59 ತಾಲ್ಲೂಕುಗಳಲ್ಲಿ ತಲಾ 20 ಮೆಗಾವ್ಯಾಟ್‌ನಂತೆ 1150 ಮೆಗಾವ್ಯಾಟ್ ಸೌರಶಕ್ತಿಯ ಉತ್ಪಾದನೆಗೆ ಕ್ರಮ ತೆಗೆದುಕೊಂಡಿರುವ ಸರ್ಕಾರ ಇದಾಗಿದೆ ಎಂದು ನಾನು ಘಂಟಾಘೋಷವಾಗಿ ಹೇಳುವುದಕ್ಕಿಚ್ಛಿಸುತ್ತೇನೆ.

ಇನ್ನು ಪ್ರಾದೇಶಿಕ ಅಸಮತೋಲನವನ್ನು ತೆಗೆದುಕೊಂಡರೆ ಸ್ವಾತಂತ್ರ್ಯಾನಂತರ ಮುಂಬೈ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ, ಹಳೆ ಮೈಸೂರು ಈ ರೀತಿ ವಿವಿಧ ಆಡಳಿತಗಳಲ್ಲಿ ಹಂಚಿಕೆಯಾಗಿದ್ದಂತಹ ನಮ್ಮ ರಾಜ್ಯವನ್ನು ಒಟ್ಟಾರೆಯಾಗಿ ಕರ್ನಾಟಕ ಎಂದು ಮಾಡಿದಾಗ ಸಹಜವಾಗಿ ಅಸಮತೋಲನ ಉಂಟಾಯಿತು. ಅಸಮತೋಲನವನ್ನು ನಿವಾರಣೆ ಮಾಡಬೇಕು, ಸರ್ವರನ್ನೂ ಸಮವಾಗಿ ಕಾಣಬೇಕೆನ್ನುವ ಸದುದ್ದೇಶದಿಂದ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಈ ಸರ್ಕಾರ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲವು ಪ್ರಮುಖ ಕಾರ್ಯಕ್ರಮಗಳನ್ನು ನಾನು ತಮ್ಮ ಮುಂದೆ ಹೇಳಬಯಸುತ್ತೇನೆ. ರೂ.3750 ಕೋಟಿಯಷ್ಟು ಹಣವನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮುಖೇನ ಮೀಸಲಿರಿಸಲಾಗಿದೆ. ಅದರಲ್ಲಿ ಇಂದು 12696 ಕಾರ್ಯಕ್ರಮಗಳಿದ್ದು, 6064 ಕಾರ್ಯಕ್ರಮಗಳು ಮುಕ್ತಾಯಗೊಂಡಿವೆ. ಇದರ ಜೊತೆಗೆ ಆ ಭಾಗದ ಜನತೆಗೆ 18993 ಹುದ್ದೆಗಳನ್ನು ನೇರ ನೇಮಕಾತಿಯ ಮುಖಾಂತರ ಭರ್ತಿ ಮಾಡಿರುವ ಖ್ಯಾತಿಯೂ ಸಹ ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರಕ್ಕೆ ಸಲ್ಲುತ್ತದೆ.

ನಮ್ಮ ಯುವ ಸಚಿವರ ನೇತೃತ್ವದಲ್ಲಿ ಕೃಷಿ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ನಾಡಿನಲ್ಲಿ ಅತ್ಯಂತ ಬೇಡಿಕೆಯ ಕಾರ್ಯಕ್ರಮವೆಂದರೆ 'ಕೃಷಿ ಹೊಂಡ'ಗಳ ನಿರ್ಮಾಣದ್ದಾಗಿದೆ. ನಾನು ಹಲವಾರು ಜಿಲ್ಲೆಗಳಲ್ಲಿ ಸಂಚರಿಸುವಾಗ ಅಥವಾ ನನ್ನ ಮತಕ್ಷೇತ್ರದಲ್ಲಿ ಓಡಾಡುವಾಗ ಇದನ್ನು ಕಂಡಿರುತ್ತೇನೆ. ರೈತರಿಂದ ಅತಿ ಹೆಚ್ಚು ಬೇಡಿಕೆ ಇರುವಂತಹ ಕಾರ್ಯಕ್ರಮ ಇದಾಗಿದೆ. 1898 ಕೋಟಿ ರೂಪಾಯಿಗಳ ವೆಚ್ಚದಲ್ಲಿ ರಾಜ್ಯಾದ್ಯಂತ 1,90,000 ಕೃಷಿ ಹೊಂಡಗಳು ಅತ್ಯಂತ ಸಮರ್ಪಕವಾಗಿ ರೈತರ ನೆರವಿಗೆ ಬರುತ್ತಿದೆ. ಹೆಚ್ಚು ಮಳೆಯಾದಂತಹ ಸಂದರ್ಭದಲ್ಲಿ ಆ ನೀರನ್ನು ಹಿಡಿದಿಟ್ಟುಕೊಂಡು, ಮಳೆ ಕೈಕೊಟ್ಟ ಸಂದರ್ಭದಲ್ಲಿ ರೈತ ಅದೇ ನೀರನ್ನು ತನ್ನ ಬೆಳೆಗೆ ಹಾಯಿಸಿ ಬೆಳೆಯನ್ನು ಕಾಪಾಡಿಕೊಳ್ಳುವುದು ಇದರ ಮೂಲ ಉದ್ದೇಶವಾಗಿದೆ. ಇದಕ್ಕೆ ಮೋಟರ್ ಅನ್ನೂ ಸಹ ಸರ್ಕಾರವೇ ಈ ಕಾರ್ಯಕ್ರಮದಡಿಯಲ್ಲಿ ಒದಗಿಸುತ್ತದೆ. ಇದು ಅತ್ಯಂತ ಅದ್ಭುತವಾದ ಹಾಗೂ ಅತ್ಯಂತ ಯಶಸ್ಸನ್ನು ಕಂಡಂತಹ ಕಾರ್ಯಕ್ರಮವಾಗಿದೆ.

ನಾನು ಆಗಲೇ ಹೇಳಿದಂತೆ ವ್ಯವಸಾಯ ಕ್ಷೇತ್ರ ಆಕರ್ಷಣೀಯವಾಗಿಲ್ಲದಂತಹ ಸಂದರ್ಭದಲ್ಲಿ ವ್ಯವಸಾಯ ಮಾಡುವವರಿಗೆ ಮಳೆಯ ಅಭಾವ ಹಾಗೂ ಕೃಷಿ ಕಾರ್ಮಿಕರ ಕೊರತೆ ಬೃಹತ್ ಪ್ರಮಾಣದಲ್ಲಿ ನಮ್ಮ ರೈತರನ್ನು ಕಾಡುತ್ತಿದೆ. ಇದಕ್ಕೆ ಯಾಂತ್ರೀಕರಣವೊಂದೇ ಪರಿಹಾರವಾಗಿದ್ದು, ಸಾಂಪ್ರದಾಯಿಕವಾಗಿ ಮಾಡುತ್ತಾ ಬಂದಿರುವ ಕೃಷಿಗೆ ಯಾಂತ್ರೀಕರಣವನ್ನು ಅಳವಡಿಸಿಕೊಂಡಾಗ ಮಾತ್ರ ಕೃಷಿಯಲ್ಲಿ ಯಶಸ್ಸನ್ನು ಕಂಡು ಆಹಾರವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪನ್ನ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ 'ಕೃಷಿ ಯಂತ್ರಧಾರ' ಕಾರ್ಯಕ್ರಮದಡಿಯಲ್ಲಿ 335 ಕೃಷಿ ಯಂತ್ರಗಳನ್ನು ಅತ್ಯಂತ ಕಡಿಮೆ ಬಾಡಿಗೆ ದರದಲ್ಲಿ ಬೀದರ್‌ನಿಂದ ಕೊಡಗಿನವರೆವಿಗೂ ಭೌಗೋಳಿಕವಾಗಿ ಆಯಾ ಪ್ರದೇಶದ ರೈತರ ವ್ಯವಸಾಯ ಚಟುವಟಿಕೆಗೆ ಪೂರಕವಾಗಿ ಬೇಕಾದಂತಹ ಯಂತ್ರಗಳನ್ನು ನಮ್ಮ ಸರ್ಕಾರ ಒದಗಿಸುತ್ತಿದೆ. ಕೃಷಿ ಇಲಾಖೆಯ ಬಗ್ಗೆ ಇನ್ನಷ್ಟು ವಿಚಾರಗಳನ್ನು ಹೇಳುತ್ತಾ ಹೋದರೆ ಸಾಕಷ್ಟು ದೊಡ್ಡ ಪಟ್ಟಿಯೇ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವೆಲ್ಲವುಗಳಿಗಿಂತಲೂ ಮಿಗಿಲಾದ ಕಾರ್ಯಕ್ರಮವೆಂದರೆ 'ಸಾಲ ಮನ್ನಾ' ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಇಡೀ ನಾಡು ಹಿಂದೆಂದೂ ಕಂಡರಿಯದ ಮಳೆಯ ಅಭಾವದಿಂದ ಅತ್ಯಂತ ತೀವ್ರತರವಾದ ಬರಗಾಲವನ್ನು ನಮ್ಮ ರಾಜ್ಯ ಎದುರಿಸಿತು. ನಾಡಿಗೆ ಅನ್ನ ನೀಡತಕ್ಕಂಥ ರೈತ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ರೈತನ ಸಾಲವನ್ನು ಮನ್ನಾ ಮಾಡುವುದಕ್ಕಾಗಿ ಇಡೀ ನಾಡಿನಾದ್ಯಂತ ಒಂದು ಕೂಗು ಎದ್ದಿತ್ತು. ಇದರ ಬಗ್ಗೆ ಬಜೆಟ್‌ನಲ್ಲಿ ಆಗಲೀ, ಚುನಾವಣಾ ಪ್ರಣಾಳಿಕೆಯಲ್ಲಿ ಆಗಲೀ ಅಥವಾ ಮುಖ್ಯಮಂತ್ರಿಗಳು ಯಾವುದೇ ಕಾರ್ಯಕ್ರಮದಲ್ಲಿ ಆಗಲೀ ಹೇಳಿರಲಿಲ್ಲ. ಸಾಲಮನ್ನಾ ಬಗ್ಗೆ ಉಭಯ ಸದನಗಳಲ್ಲಿಯೂ ಪ್ರಸ್ತಾಪ ಆಗಿರಲಿಲ್ಲ. ಆದರೆ ನಮ್ಮ ನೆಚ್ಚಿನ ಮುಖ್ಯಮಂತ್ರಿಗಳು ರೂ.8165 ಕೋಟಿಯಷ್ಟು ಬೃಹತ್ ಮೊತ್ತದ ಸಾಲವನ್ನು ಮನ್ನಾ ಮಾಡಿದರು. ಮೊದಲಿನ ಎರಡು ಸರ್ಕಾರಗಳಲ್ಲಿಯೂ ಅಂದರೆ, ಶ್ರೀ ಜಗದೀಶ್ ಶೆಟ್ಟರ್ ಅವರ ನೇತೃತ್ವದ ಸರ್ಕಾರ ಹಾಗೂ ಶ್ರೀ ಕುಮಾರಸ್ವಾಮಿಯವರ ನೇತೃತ್ವದ ಸರ್ಕಾರ ಸಾಲ ಮನ್ನಾ ಮಾಡಿದ್ದವು. ಆದರೆ ಅವುಗಳ ದುಪ್ಪಟ್ಟಲ್ಲ, ನಾಲ್ಕರಷ್ಟು ಮೊತ್ತದ ಸಾಲವನ್ನು ಮನ್ನಾ ಮಾಡುವ ಮೂಲಕ ಸಂಕಷ್ಟದಲ್ಲಿದ್ದಂತಹ ರೈತರ ಬಳಿಗೆ ಧಾವಿಸಿದಂತಹ ಸರ್ಕಾರ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಕೆಲವರು "ಸಾಲ ಮನ್ನಾ ಮಾಡಿ ಘೋಷಣೆಯನ್ನು ಮಾಡಿದರು, ಆದರೆ ದುಡ್ಡೇ ಕೊಡುತ್ತಿಲ್ಲ" ಎಂದು ಮಾತನಾಡಿದರು. ನಾನೂ ಸಹ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷನಾಗಿರುತ್ತೇನೆ. ನಮ್ಮಲ್ಲಿ ಕೂಡ ರೂ.375 ಕೋಟಿ ಸಾಲ ಮನ್ನಾ ಆಗಿದೆ. ಮಾರ್ಚ್ ತಿಂಗಳವರೆವಿಗೂ ರೂ.375 ಕೋಟಿ ಬರಬೇಕಾಗಿದ್ದು, ನವೆಂಬರ್ ತಿಂಗಳವರೆವಿಗೆ ರೂ.112 ಕೋಟಿ ಈಗಾಗಲೇ ಪಾವತಿಯಾಗಿದೆ. ಯಾರು ಬಿಲ್ಲನ್ನು ಸರ್ಕಾರಕ್ಕೆ ಮೊದಲು ಸಲ್ಲಿಸುತ್ತಾರೆಯೋ, ಅವರಿಗೆ ಮೊದಲು ಹಣ ಪಾವತಿಯಾಗುತ್ತದೆ. ಸರ್ಕಾರ ಒಂದು ಪೈಸೆ ಕೂಡ ರೈತರ ದುಡ್ಡನ್ನು ನಿಲ್ಲಿಸುತ್ತಿಲ್ಲ. ಸರ್ಕಾರದಲ್ಲಿ ದುಡ್ಡಿನ ಕೊರತೆಯಿಲ್ಲ. ಸಾಲ ಮನ್ನಾದ ಹಣವನ್ನು ಪಾವತಿ ಮಾಡುವುದಕ್ಕೆ ನೇರವಾಗಿ ಆದೇಶವನ್ನು ಕೊಟ್ಟಿರುತ್ತಾರೆ. ಯಾವ ರೈತರಿಗೆ ರೂ.50,000/- ಗಳವರೆವಿಗೆ ಸಾಲ ಮನ್ನಾ ಮಾಡಲಾಗಿದೆಯೋ ಆ ರೈತರು ಪುನಃ ತಮ್ಮನ್ನು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡುವ ದೃಷ್ಟಿಯಿಂದ ಹಣವನ್ನು ನೀಡಬೇಕೆಂಬುದಾಗಿ ಅತ್ಯಂತ ಸ್ಪಷ್ಟ ನಿರ್ದೇಶನವನ್ನು ಸರ್ಕಾರ ನೀಡಿದೆ. ಇದರ ಜೊತೆಗೆ 6.74 ಲಕ್ಷ ಹೊಸ ರೈತರಿಗೆ ರೂ.5,352 ಕೋಟಿಗಳ ಸಾಲವನ್ನು ಕೊಡಲಾಗುತ್ತಿದೆ. ರೂ.3 ಲಕ್ಷ ರೂಪಾಯಿಯವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿರುವುದು ಕೇವಲ ಕರ್ನಾಟಕ ರಾಜ್ಯ ಸರ್ಕಾರ ಎಂದು ನಾನು ಹೇಳಬಯಸುತ್ತೇನೆ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರ ಬೇರೆ ಯಾವ ರಾಜ್ಯದಲ್ಲಿಯೂ ಸಹ ಶೂನ್ಯ ಬಡ್ಡಿ ದರದಲ್ಲಿ ಸಾಲವನ್ನು ನೀಡುತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದರ ಜೊತೆಗೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ರೂ.5 ಲಕ್ಷಗಳವರೆವಿಗೆ ಶೂನ್ಯ ಬಡ್ಡಿ ದರದಲ್ಲಿ ಸಹಕಾರ ಸಂಘಗಳ ಮುಖೇನ ರಾಜ್ಯ ಸರ್ಕಾರ ನೀಡುತ್ತಿದೆ. ಇದರಿಂದ ಹೆಣ್ಣುಮಕ್ಕಳಿಗೆ ವಿಶೇಷವಾಗಿ ನೆರವಾಗುತ್ತಿದೆ. ಪಡೆದಂತಹ ಸಾಲವನ್ನು ಪ್ರಾಮಾಣಿಕವಾಗಿ ಪಾವತಿ ಮಾಡುತ್ತಿರುವ ವರ್ಗ ಎಂದರೆ, ಹೆಣ್ಣುಮಕ್ಕಳು. ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಲ್ಲಿ ಶೇ.98 ರೆಕವರಿ ಇದೆ. ಶೇ.2 ರಷ್ಟು ಮಾತ್ರ ಅನ್ಯ ಕಾರಣಗಳಿಂದಾಗಿ ಪಾವತಿ ಮಾಡಲು ಸಾಧ್ಯವಾಗಿಲ್ಲದಿರಬಹುದು. ಎನ್.ಜಿ.ಓ.ಗಳ ಹೆಸರಿನಲ್ಲಿ, ದೇವಸ್ಥಾನಗಳ ಹೆಸರಿನಲ್ಲಿ 12%, 11%, 8%ರ ಬಡ್ಡಿದರದಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು, ಕಮರ್ಷಿಯಲ್ ಬ್ಯಾಂಕ್‌ಗಳನ್ನು ಜೊತೆಯಲ್ಲಿಟ್ಟುಕೊಂಡು ಹಾಗೂ ಮೈಕ್ರೋಫೈನಾನ್ಸ್‌ನ ಹೆಸರಿನಲ್ಲಿ ಸಾಲವನ್ನು ಕೊಡುವವರನ್ನು ನಾವು ನೋಡಿದ್ದೇವೆ. ಆದರೆ ನಮ್ಮ ಸರ್ಕಾರ 5 ಲಕ್ಷ ರೂಪಾಯಿಗಳವರೆವಿಗೂ ಶೂನ್ಯ ಬಡ್ಡಿ ದರದಲ್ಲಿ ಹಣವನ್ನು ಕೊಡುತ್ತಿದೆ. ಇದು ಕೂಡ 'ನಮ್ಮ ರಾಜ್ಯದಲ್ಲಿ ಮಾತ್ರ' ಎಂಬುದನ್ನು ನಾನು ಸದನದ ಗಮನಕ್ಕೆ ತರಬಯಸುತ್ತೇನೆ.

(...ಮುಂದು)

**ಶ್ರೀ ಎಸ್.ರವಿ (ಮುಂದು..):-**

ಮಾನ್ಯ ಸಭಾಪತಿಯವರೇ, ಇನ್ನೊಂದು ಬಹಳ ವಿಶೇಷವಾದಂತಹ ಕಾರ್ಯಕ್ರಮವಿದೆ. ನಾನು ಅದನ್ನು ಪ್ರಸ್ತಾಪಿಸಲೇ ಬೇಕಾದಂತಹ ಕಾರ್ಯಕ್ರಮ. ಅದು "ಕ್ಷೀರಧಾರೆ ಯೋಜನೆ". ನಮ್ಮ ಭಾಗದಲ್ಲಿನ ಜನರು ಇವತ್ತು ಏನಾದರೂ ಜೀವನ ಮಾಡುತ್ತಿದ್ದರೆ, ಅದರಲ್ಲೂ ವಿಶೇಷವಾಗಿ ಬೆಂಗಳೂರಿನ ಸುತ್ತಮುತ್ತಲು silk and milk ನಮಗೆ ಆಧಾರವಾಗಿವೆ. ಅದು ಕೋಲಾರ ಇರಬಹುದು ಅಥವಾ ಯಾವುದೇ ಜಿಲ್ಲೆ ಇರಬಹುದು. ಅದರಲ್ಲೂ ವಿಶೇಷವಾಗಿ ನಮ್ಮ ಹೆಣ್ಣು ಮಕ್ಕಳು ಬೆಳಗ್ಗೆ 4.00 ಗಂಟೆಗೆ ಎದ್ದು ಮೊದಲು ಹಸುಗಳನ್ನು ಕಟ್ಟಿಹಾಕಿ ಅವುಗಳಿಗೆ ಒಂದಷ್ಟು ಮೇವು ಹಾಕಿ ನಂತರ ಹಾಲು ಕರೆದು ಹಾಲನ್ನು ಡೈರಿಗೆ ತೆಗೆದುಕೊಂಡು ಹೋಗುವುದೇ ಇವತ್ತಿನ ನಮ್ಮ ಪ್ರಮುಖ ಕಸುಬು ಆಗಿದೆ. ನಮ್ಮ ಭಾಗಗಳಲ್ಲಿ ಇವತ್ತಿನ ದಿವಸ ಏನಾಗಿದೆ ಎಂದರೆ, 4.00 ಗಂಟೆಯಿಂದ 6.00 ಗಂಟೆಯೊಳಗೆ ಸಚಿವರನ್ನು ಊರಿಗೆ ಕರೆದುಕೊಂಡು ಬಂದು ರಾಜಕೀಯದ ಕಾರ್ಯಕ್ರಮವನ್ನು ಮಾಡುತ್ತೇವೆಂದರೆ, ಅದಕ್ಕೆ ಅವರು ಬರಬೇಡಿ, ಆ ವೇಳೆ ಹಾಲು ಕರೆಯುವಂತಹ ಸಮಯವಾಗಿರುತ್ತದೆ ಎಂದು ಹೇಳುತ್ತಾರೆ. ಆ ವೇಳೆಯಲ್ಲಿ ಊರಿನಲ್ಲಿ ಜನರೆ ಇರುವುದಿಲ್ಲ. 4 ಗಂಟೆಯಿಂದ 6.00 ಗಂಟೆಯೊಳಗೆ ಪಡಸಾಲೆಯ ಮೇಲೆ ತೂಕಡಿಸಿಕೊಂಡು ಕುಳಿತಿರುವಂತಹ ವ್ಯಕ್ತಿಯು ಸಹ ಇರುವುದಿಲ್ಲ. ಆತನನ್ನು ಸಹ ಆತನ ಹೆಂಡತಿ ಬಿಡುವುದಿಲ್ಲ, ಆತನಿಗೆ ಪೂಜೆಯಾಗುತ್ತದೆ ಅಷ್ಟೇ. ಅವನೂ ಸಹ ಹೋಗಿ ಹಾಲು ಕರೆದು ಆ ಹಾಲನ್ನು ಡೈರಿಗೆ ಹಾಕಬೇಕಾಗಿರುತ್ತದೆ. ಈ "ಕ್ಷೀರಧಾರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆ" ಅನ್ವಯ ಅಂತಹ ಒಂದು ಸಂದರ್ಭ ನಮ್ಮಲ್ಲಿ ಇವತ್ತಿನ ದಿವಸ ನಿರ್ಮಾಣವಾಗಿರುತ್ತದೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ನಮ್ಮ ರೈತರಿಗೆ ಪ್ರತಿ ಲೀಟರ್ ಹಾಲಿಗೆ ಎರಡು ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಟ್ಟರು. ನಾನು ಅದನ್ನು ಇವತ್ತು ಸ್ಮರಿಸಿಕೊಳ್ಳುತ್ತೇನೆ. ಆದರೆ, ನಮ್ಮ ನೆಚ್ಚಿನ ನಾಯಕರಾದಂತಹ ಮಾನ್ಯ ಸಿದ್ಧರಾಮಯ್ಯನವರು ಅಧಿಕಾರಕ್ಕೆ ಬಂದ ಮೇಲೆ ನಾವೆಲ್ಲರೂ ಸೇರಿ ನಮ್ಮ ರೈತರ ಸಂಕಷ್ಟಗಳನ್ನು ಅವರ ಮುಂದೆ ವಿವರಿಸಿದಾಗ, ಅವರು ಪ್ರತಿ ಲೀಟರ್ ಹಾಲಿಗೆ ಐದು ರೂಪಾಯಿಗಳ ಪ್ರೋತ್ಸಾಹ ಧನವನ್ನು ಕೊಟ್ಟರು. ಇವತ್ತು ಐದು ರೂಪಾಯಿಗಳ ಪ್ರೋತ್ಸಾಹ ಧನದ ಅಡಿಯಲ್ಲಿ ಕಳೆದ 4 ವರ್ಷಗಳಲ್ಲಿ 1,200 ಕೋಟಿ ರೂಪಾಯಿಗಳು ನಮ್ಮ ರೈತರಿಗೆ ಪಾವತಿಯಾಗಿದೆ. ಇದನ್ನು ನೇರವಾಗಿ ಆನ್‌ಲೈನ್ ಮುಖಾಂತರ ರೈತರ ಖಾತೆಗೆ ಹೋಗಿದೆ. ಇದಕ್ಕೆ ಯಾವ ಮಧ್ಯವರ್ತಿಯೂ ಇಲ್ಲ. ಯಾವ ಕಾರ್ಯದರ್ಶಿಯೂ ಇಲ್ಲ. ಯಾವ ಅಧ್ಯಕ್ಷರೂ ಇಲ್ಲ. ಅದರಲ್ಲೂ ಹೆಚ್ಚಾಗಿ ಹೆಣ್ಣು ಮಕ್ಕಳ ಹೆಸರಿಗೆ ಪಾವತಿಯಾಗುತ್ತಿದೆ. ಡೈರಿಗಳಿಗೆ ಹೆಚ್ಚಾಗಿ ಹಾಲು ಹಾಕುವವರು ಯಾರೆಂದರೆ, ಹೆಣ್ಣು ಮಕ್ಕಳು. ಇವತ್ತು ಆ ಪ್ರೋತ್ಸಾಹ ಧನ ಅವರ ಮಕ್ಕಳ ಶಿಕ್ಷಣಕ್ಕೆ, ಅವರ ಕಾಯಿಲೆಗಳಿಗೆ, ಅವರ ಖರ್ಚುವೆಚ್ಚಗಳಿಗೆ ಮತ್ತು ಹಬ್ಬಹರಿದಿನಗಳಿಗೆ ಸಹಾಯವಾಗುತ್ತಿದೆ. ಇವತ್ತಿನ ದಿವಸ ನಮ್ಮ ಗ್ರಾಮೀಣ ಭಾಗದಲ್ಲಿ ಯಾವುದಾದರೂ ಆರ್ಥಿಕ ಶಕ್ತಿ ಎಂದು ಇದ್ದರೆ, ಅದು ಹೈನುಗಾರಿಕೆ ಉದ್ದಿಮೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ಕನಕಪುರ ತಾಲ್ಲೂಕಿನಲ್ಲಿ ಒಂದರಲ್ಲಿಯೇ ಸುಮಾರು 1,20,000 ಲೀಟರ್ ಹಾಲು 5 ರೂಪಾಯಿ ಪ್ರೋತ್ಸಾಹಧನ ಕೊಡುವುದಕ್ಕೆ ಮುಂಚೆ ಬರುತ್ತಿತ್ತು. ನಮ್ಮ ತಾಲ್ಲೂಕಿನಲ್ಲಿ ಈ ಬೇಸಿಗೆಯಲ್ಲಿಯೂ ಸಹ 1,90,000 ಲೀಟರ್ ಹಾಲು ಬರುತ್ತಿದೆ. ಇವತ್ತಿಗೂ ಸಹ ಹಾಲು ಉತ್ಪಾದನೆ ನಿಂತಿಲ್ಲ.

ಮಾನ್ಯ ಸಭಾಪತಿಯವರೇ, ಮೊದಲು ಒಂದು ವಾರಕ್ಕೆ ಎರಡು ದಿವಸ ಹಾಲು ಹಾಕುವುದಕ್ಕೆ ರಜೆ ಕೊಟ್ಟು ಬಿಡುತ್ತಿದ್ದರು. ಒಬ್ಬ ರೈತ ಎರಡು ಅಥವಾ ಮೂರು ಹಸುಗಳನ್ನು ಕಟ್ಟಿಕೊಂಡರೆ, ಪ್ರತಿ ದಿವಸ 20 ರಿಂದ 30 ಲೀಟರ್ ಹಾಲು ಉತ್ಪಾದನೆ ಆಗುತ್ತಿತ್ತು. ಒಂದು ಹಸುವಿನಿಂದ 7 ರಿಂದ 8 ಲೀಟರ್ ಹಾಲು ಉತ್ಪಾದನೆ ಆಗುತ್ತಿತ್ತು. ಮೂರು ಹಸು ಇದ್ದರೆ, ಬೆಳಗ್ಗೆ ಮತ್ತು ಸಂಜೆ ಎರಡು ಹೊತ್ತು ಸೇರಿ ಪ್ರತಿದಿವಸ 25 ರಿಂದ 30 ಲೀಟರ್ ಹಾಲು ಉತ್ಪಾದನೆ ಆಗುತ್ತಿತ್ತು. ರೈತನಿಗೆ ಹಾಲು ಹೆಚ್ಚಿಗೆ ಆಗಿಬಿಟ್ಟರೆ ಆ ಹೆಚ್ಚಿನ ಹಾಲನ್ನು ಅವರು ಏನೂ ಮಾಡಿಕೊಳ್ಳುತ್ತಾರೆ? ಬೂಮಲ್, ಕೋಮಲ್, ಮೈಸೂರು ಹಾಲು ಉತ್ಪಾದಕರ ಒಕ್ಕೂಟ, ಕೋಲಾರ ಹಾಲು ಉತ್ಪಾದಕರ ಒಕ್ಕೂಟ, ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ಒಕ್ಕೂಟ, ಮಂಡ್ಯ ಹಾಲು ಉತ್ಪಾದಕರ ಒಕ್ಕೂಟ, ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ ಇವರೆಲ್ಲರೂ ಹೆಚ್ಚಿನ ಹಾಲನ್ನು ಏನು ಮಾಡುವುದು? ಹಾಲನ್ನು ಯಾರಿಗೆ ಮಾರಾಟ ಮಾಡುವುದು ಎಂಬ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಆ ಹಾಲನ್ನು ಪೌಡರ್ ಆಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

convert ಮಾಡಬೇಕಾಗುತ್ತದೆ. ಆ ರೀತಿ Conversion ಮಾಡಬೇಕಾದರೆ ಹಾಲನ್ನು ಚಿತ್ತೂರಿಗೆ ಕಳುಹಿಸಬೇಕು ಇಲ್ಲವೆಂದರೆ ಪೂನಾಗೆ ಕಳುಹಿಸಬೇಕು. ಮೊದಲು ನಮ್ಮಲ್ಲಿ ಉತ್ಪಾದನೆಯಾದಂತಹ ಹಾಲನ್ನು ಮಾರಾಟ ಮಾಡಬೇಕು ಅಲ್ಲವೇ? ನಮಗೆ ಮಾರುಕಟ್ಟೆಯ ಸಾಮರ್ಥ್ಯದ ಕೊರತೆ ಇದೆ. ಅಲ್ಲದೇ, ನಮಗೆ ಖಾಸಗಿಯವರ ಹಾವಳಿ ಬೇರೆ ಇದೆ. ಇದರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ನಷ್ಟವಾಗುತ್ತದೆ. ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ನಷ್ಟವಾದರೆ, ಅದು ನಮ್ಮ ರೈತರಿಗೆ ನಷ್ಟವಾದಂತೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಹೆಚ್ಚಿಗೆ ಉತ್ಪಾದನೆಯಾದ ಹಾಲನ್ನು ಶೇಖರಿಸಿ ಇಟ್ಟುಕೊಳ್ಳುವುದಕ್ಕೆ ಏನೂ ಮಾಡುವುದು? ಅದಕ್ಕೆ ಈ ಹಿಂದೆ ಒಂದು ವಾರಕ್ಕೆ ಎರಡು ದಿವಸ ರಜೆ ಕೊಡುತ್ತಿದ್ದರು. ಒಂದು ವಾರಕ್ಕೆ ಎರಡು ದಿವಸವೆಂದರೆ, ತಿಂಗಳಿಗೆ 8 ದಿವಸಗಳು ಆಗುತ್ತದೆ. ಪ್ರತಿದಿವಸ 30 ಲೀಟರ್ ಹಾಲು ಉತ್ಪಾದನೆ ಆಗುತ್ತಿತ್ತು ಎಂದರೆ, 8 ದಿವಸಗಳಿಗೆ 240 ಲೀಟರ್ ಹಾಲನ್ನು ರೈತ ಏನು ಮಾಡಬೇಕು? ಈ ರೀತಿ ಆದಾಗ ರೈತ ಹಸುಗಳನ್ನು ಏಕೆ ಕಟ್ಟುತ್ತಾನೆ? ಈ ರೀತಿಯ ಪರಿಸ್ಥಿತಿ ಇದ್ದಾಗ ರೈತ ಅಭಿವೃದ್ಧಿ ಆಗುವುದು ಹೇಗೆ? ಅದಕ್ಕೆ ನಾವೆಲ್ಲರೂ ಸೇರಿ ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ತಾವು ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹ ಧನವೆಂದು 5 ರೂಪಾಯಿಗಳನ್ನು ಕೊಟ್ಟುಬಿಟ್ಟಿದ್ದೀರಿ, ತಾವು ಕೊಡುವುದನ್ನು ಕೊಟ್ಟಿದ್ದೀರಿ. ಆದರೆ, ಈಗ ನಮ್ಮ ರೈತರು ಹಸುಗಳನ್ನು ಕಟ್ಟಿಕೊಂಡು ಹಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ. ಈಗ ಆ ಹಾಲನ್ನು ಮಾರುಕಟ್ಟೆ ಮಾಡುವವರು ಯಾರು? ಈಗ ಯೂನಿಯನ್‌ನವರು ಎಲ್ಲರೂ ಸೇರಿಕೊಂಡು ನಾವು ಒಂದು ವಾರಕ್ಕೆ ಎರಡು ದಿವಸ ರಜೆ ಕೊಡುತ್ತೇವೆಂದು ಹೇಳುತ್ತಿದ್ದಾರೆ ಎಂದು ಹೇಳಿದಾಗ, ಅದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಆಯಿತು, ಹೋಗಲಿ ಶಾಲೆಯ ಮಕ್ಕಳಿಗೆ ವಾರಕ್ಕೆ 5 ದಿವಸಗಳ ಕಾಲ ಹಾಲನ್ನು ಕೊಡುತ್ತೇವೆಂದು ಹೇಳಿ "ಕ್ಷೀರಭಾಗ್ಯ" ಕಾಯಕ್ರಮವನ್ನು ರೂಪಿಸಿದರು. ನಾನು ಇವತ್ತು ರೈತರ ನೆರವಿಗೆ ಬಂದಂತಹ ಸರ್ಕಾರಕ್ಕೆ ಮನಃಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತಿನ ದಿವಸ ಏನಾದರೂ "ಕ್ಷೀರಭಾಗ್ಯ" ಕಾರ್ಯಕ್ರವನ್ನು ಹಾಕಿಕೊಳ್ಳಲಿಲ್ಲವೆಂದರೆ, ನಮ್ಮ ರೈತರು ಇವತ್ತಿನ ದಿವಸ ಬಹಳ ಸಂಕಷ್ಟದಲ್ಲಿ ಇರುತ್ತಿದ್ದರು. ನಮ್ಮ ರಾಜ್ಯದಲ್ಲಿ ಕ್ಷೀರಕ್ರಾಂತಿ ಆಗುವುದಕ್ಕೆ ಸಾಧ್ಯವೇ ಇರಲಿಲ್ಲ. ಇದಕ್ಕೆ ಯಾವುದೇ ಜಾತಿ ಇಲ್ಲ.

ಮಾನ್ಯ ಸಭಾಪತಿಯವರೇ, ಸಾಲ ಮನ್ನಾಕ್ಕೆ ಯಾವುದೇ ಜಾತಿ ಇಲ್ಲ. ಅಹಿಂದ ಎಂದು ಹೇಳುತ್ತಾರೆ. ಸಾಲ ಯಾರು ಪಡೆದಿದ್ದಾರೆ? ಎಲ್ಲಾ ಜಾತಿಯ ಬಡವರು ಸಾಲ ಪಡೆದಿದ್ದಾರೆ ಅಲ್ಲವೇ. ಎಲ್ಲಾ ಜಾತಿಯ ರೈತರು ಸಾಲ ಪಡೆದಿದ್ದಾರೆ. ಡೈರಿಗಳಿಗೆ ಹಾಲು ಹಾಕುತ್ತಿರುವವರು ಯಾರು? ಬರೀ ದಲಿತರು ಹಾಲು ಹಾಕುತ್ತಿದ್ದಾರೆಯೇ? ಬರೀ ಅಲ್ಪಸಂಖ್ಯಾತರು ಹಾಲು ಹಾಕುತ್ತಿದ್ದಾರೆಯೇ? ಹಿಂದುಳಿದ ವರ್ಗದವರು ಮಾತ್ರ ಹಾಲು ಹಾಕುತ್ತಿದ್ದಾರೆಯೇ? ಡೈರಿಗಳಿಗೆ ಹಾಲು ಹಾಕುತ್ತಿರುವವರಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲುವರ್ಗದ ರೈತರು ಯಾರು ಇಲ್ಲವೇ? ನಾವೆಲ್ಲರೂ ಈ ಸೌಲಭ್ಯವನ್ನು ಪಡೆಯುತ್ತಿಲ್ಲವೇ? ಈ ಕಾರ್ಯಕ್ರಮವನ್ನು ಯಾರಿಗೆ ಮಾಡಿರುವಂತಹದ್ದು? ಇದು ಒಂದು ಸಮಾಜದಲ್ಲಿರುವಂತಹ ಎಲ್ಲಾ ವರ್ಗದ ರೈತರಿಗೆ ಅಲ್ಲವೇ? ರೈತರಿಗೆ ಜಾತಿ ಇದೆಯೇ? ಟೀಕಾಕಾರರು ಟೀಕೆ ಮಾಡುತ್ತಾರೆ. ಆದರೆ, ಈ ಕಾರ್ಯಕ್ರಮಗಳನ್ನು ಅಧ್ಯಯನ ಮಾಡಿ ನೋಡಿದಾಗ, ಈ ಕಾರ್ಯಕ್ರಮಗಳು ಬಹಳ ಅಭೂತ ಪೂರ್ವವಾದಂತಹ ಕಾರ್ಯಕ್ರಮಗಳು ಆಗಿವೆ. ಈ ಕಾರ್ಯಕ್ರಮಗಳನ್ನು ತಮ್ಮ ಮುಖೇನ ಈ ವಿಚಾರವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ನಾನು ಇದರ ಜೊತೆಗೆ ಇನ್ನೊಂದು ಮುಖ್ಯವಾದಂತಹ ವಿಷಯವನ್ನು ಹೇಳಲೇಬೇಕಾಗಿದೆ. ನಮ್ಮ ಇಡೀ ರಾಷ್ಟ್ರದಲ್ಲಿಯೇ ಗುಜರಾತ್ ಅತ್ಯಂತ ಹೆಚ್ಚು ಹಾಲನ್ನು ಉತ್ಪಾದನೆ ಮಾಡುತ್ತಿರುವ ರಾಜ್ಯ ಆಗಿದೆ. ಹಾಗೆಯೇ, ಗುಜರಾತ್‌ನವರು 'Amul' ಎಂಬ brand name ನಲ್ಲಿ ಮಾರ್ಕೆಟ್ ಮಾಡುತ್ತಿದ್ದಾರೆ. ನಮ್ಮ ರಾಜ್ಯ 'ನಂದಿನಿ' ಎಂಬ brand name ನಲ್ಲಿ ಮಾರ್ಕೆಟ್ ಮಾಡುತ್ತಿದ್ದೇವೆ. ಇವತ್ತು ಯಾವ ವಿಮಾನಕ್ಕೆ ಹೋದರೂ, star hotel ಗೆ ಹೋದರೂ ಸಹ, ಅಲ್ಲಿ 'Amul' brand ಇರುತ್ತದೆ. ಅದಕ್ಕೆ ನಾವು alternative ಆಗಿ ನಮ್ಮ brand ಗೆ ಉತ್ತಮ ಗುಣಮಟ್ಟವನ್ನು ಕಲ್ಪಿಸಿ ಕೊಡಬೇಕಾಗುತ್ತದೆ. ಇವತ್ತು ನಮ್ಮಲ್ಲಿ ಆ ಸಾಮರ್ಥ್ಯಕ್ಕೆ ಅನುಗುಣವಾಗಿ quality and quantity ಯಲ್ಲಿ ಅವರಿಗಿಂತ ಹೆಚ್ಚಾಗಿ ಮಾಡಬೇಕೆಂದು ಕೆ.ಎಂ.ಎಫ್ ಇವತ್ತು ಚೆನ್ನಪಟ್ಟಣ ಮತ್ತು ರಾಮನಗರ ತಾಲ್ಲೂಕುಗಳ ಮಧ್ಯೆ ಇರುವಂತಹ ಕೆಂಗಲ್ ಎಂಬಲ್ಲಿ 375 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೈಗಾರಿಕೆಯನ್ನು ನಿರ್ಮಿಸುತ್ತಿದ್ದು, ಅದು ಈಗಾಗಲೇ ಉದ್ಘಾಟನೆಗೆ ಸಿದ್ಧವಾಗಿ ನಿಂತಿದೆ. ನಮ್ಮ ತಾಲ್ಲೂಕಿನಲ್ಲಿ 575 ಕೋಟಿ ರೂಪಾಯಿಗಳಲ್ಲಿ ಹಾಲಿನ ಎಲ್ಲಾ ಉತ್ಪಾದನೆಗಳನ್ನು ಮಾಡುವುದಕ್ಕೆ ಸರ್ಕಾರ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತಿದೆ. ಹಾಲನ್ನು ಪೌಡರ್ ಆಗಿ convert ಮಾಡುವಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ನಾವು ಹಾಲನ್ನು conversion ಮಾಡಲು ಮಹಾರಾಷ್ಟ್ರಕ್ಕೆ ಕಳುಹಿಸಬೇಕು ಇಲ್ಲವೆಂದರೆ ತಮಿಳುನಾಡಿಗೆ ಕಳುಹಿಸಬೇಕು. ಅದಕ್ಕೆ ಒಂದು ಲೀಟರ್ ಹಾಲಿಗೆ 7 ರೂಪಾಯಿ ಖರ್ಚು ಆಗುತ್ತಿದೆ. ಅದಕ್ಕೆ ಹಾಲು ಎಲ್ಲಿ ಉತ್ಪಾದನೆ ಆಗುತ್ತದೆಯೋ ಅಲ್ಲಿಯೇ convert ಮಾಡಿ ಅಲ್ಲೆಯೇ ಉತ್ಪನ್ನಗಳನ್ನು ಮಾಡಿದರೆ, ಅದರಲ್ಲೂ ವಿಶೇಷವಾಗಿ cheese ಅನ್ನು ತಯಾರು ಮಾಡಿದಂತಹ ಸಂದರ್ಭದಲ್ಲಿ ನಮಗೆ 7 ರೂಪಾಯಿ ಉಳಿಯುತ್ತದೆ. ಆಗ ನಮ್ಮ ರೈತರಿಗೆ ಇನ್ನೂ 5 ರೂಪಾಯಿಗಳ ಪೋತ್ಸಾಹ ಧನವನ್ನು ಕೊಡಬಹುದು. ಆಗ ರೈತರು ಇನ್ನಷ್ಟು ಆರ್ಥಿಕವಾಗಿ ಮತ್ತಷ್ಟು ಸದೃಢರಾಗುತ್ತಾರೆ. ಆಗ ಯಾವ ರೈತರು ಹೈನುಗಾರಿಕೆಯನ್ನು ನಂಬಿಕೊಂಡಿದ್ದಾರೆ ಅವರನ್ನು ಇನ್ನಷ್ಟು ಸಬಲೀಕರಣ ಮಾಡಿದಂತೆ ಆಗುತ್ತದೆ ಎನ್ನುವಂತಹ ದಿಟ್ಟ ಪ್ರಯತ್ನ ಅದು ಆಗುತ್ತದೆ ಎಂಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದೃಷ್ಟಿಯಿಂದ ಸರ್ಕಾರ ಇವತ್ತು ಆ ಎರಡು ಕಾರ್ಖನೆಗಳನ್ನು ಮಾಡಲು ಮುಂದಾಗಿದ್ದು ಆ ಕಾರ್ಖನೆಗಳೂ ಉದ್ಘಾಟನೆಯ ಹಂತಕ್ಕೆ ಬಂದು ನಿಂತಿವೆ.

ಮಾನ್ಯ ಸಭಾಪತಿಯವರೇ, ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಹೇಳುವುದಾದರೆ, ಸರ್ಕಾರ ಉತ್ತಮವಾಗಿ ಅವರಿಗೆ ಮೀಸಲಿರಿಸಿರುವಂತಹ ಹಣ ದುರುಪಯೋಗವಾಗದ ರೀತಿಯಲ್ಲಿ ಮತ್ತು divert ಆಗಬಾರದೆಂಬ ವಿಚಾರದಲ್ಲಿ ಸಮರ್ಪಕವಾಗಿ ಯಾವ ಉದ್ದೇಶಗಳಿಗೆ ಅವರಿಗೆ ಹಣವನ್ನು ನಿಗದಿ ಮಾಡುತ್ತೇವೆ ಆ ಹಣ ಅವರಿಗೆ ತಲುಪಬೇಕು. ಅದು ಕೆಳಹಂತದವರಿಗೂ ಸಹ ಸಮರ್ಪಕವಾಗಿ ಆ ಕಾರ್ಯಕ್ರಮಗಳ ಅನುಷ್ಠಾನಗೊಳಿಸಬೇಕೆಂಬ ವಿಚಾರದಲ್ಲಿ ಕಾನೂನ್ಮಾತಕವಾಗಿ ಸಾಕಷ್ಟು ಬಿಗಿ ಭದ್ರತೆಯಲ್ಲಿ ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರ ಹಮ್ಮಿಕೊಂಡಿರುತ್ತದೆ. 2017-2018ನೇ ಸಾಲಿಗೆ 27,703 ಕೋಟಿ ರೂಪಾಯಿಗಳ ಅನುಧಾನವನ್ನು ಈ ವರ್ಗಕ್ಕೆ ಮೀಸಲಾಗಿರಿಸಿ ಅದನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕ ಅಭಿವೃದ್ಧಿಗಾಗಿ, ಅದರಲ್ಲೂ ವಿಶೇಷವಾಗಿ ಸಾಲ ನೀಡಿಕೆ ಇರಬಹುದು, ಸಹಾಯಧನ ನೀಡಿಕೆ ಇರಬಹುದು, ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತಹದ್ದು ಇರಬಹುದು, ಹಾಸ್ಟೆಲ್ ಇರಬಹುದು, ವಿದ್ಯಾರ್ಥಿ, ಶಾಲಾ ಕಟ್ಟಡಗಳನ್ನು ಇವೆಲ್ಲವನ್ನು ಸಹ ಒಂದು ದಿಶೆಯಲ್ಲಿ ಹಮ್ಮಿಕೊಂಡಿರುವಂಥದ್ದುನ್ನು ತಾವೆಲ್ಲರೂ ನೋಡುತ್ತಿದ್ದೀರಿ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಇನ್ನೊಂದು ಕಾರ್ಯಕ್ರಮವನ್ನು ಹೇಳಲೇಬೇಕಾಗಿದೆ. ವಿಶ್ವ ಮಟ್ಟದ ಉನ್ನತ ದರ್ಜೆಯ ಶಿಕ್ಷಣ ನಮಗೆ ಲಭ್ಯವಾಗಬೇಕು ಎನ್ನುವಂಥ ವಿಚಾರದಲ್ಲಿ 125ನೇ ಡಾ॥ಬಾಬಾಸಾಹೇಬ್ ಅಂಬೇಡ್ಕರ್‌ರವರ ಜನ್ಮ ದಿನಾಚರಣೆಯ ನೆನಪಿಗಾಗಿ ಇವತ್ತು ಬೆಂಗಳೂರಿನಲ್ಲಿ ಸ್ಥಾಪಿಸಲು 'Dr.B.R.Ambedkar School of Economics' ಅನ್ನು ಸ್ಥಾಪನೆ ಮಾಡಿರುವಂಥದ್ದು ಸಹ ಒಂದು ಶಾಘ್ಲನೀಯವಾದಂತಹ ಕಾರ್ಯಕ್ರಮ. ಇದರ ಜೊತೆಗೆ 31,750 ಮಾಹಿತಿ ತಂತ್ರಜ್ಞಾನ ಇವತ್ತು ಶಿಕ್ಷಣಕ್ಕೆ ನಾವು internet, ಲ್ಯಾಪ್‌ಟಾಪ್ ಜೊತೆಗೆ ವ್ಯಾಸಂಗ ಮಾಡಿದರೆ ಮಾತ್ರ ಇವತ್ತಿನ ದಿವಸ ನಾವು ಶಿಕ್ಷಣ ಪಡೆಯಲು ಸಾಧ್ಯವಾಗುತ್ತದೆ. ಇವತ್ತು ಆರ್ಥಿಕವಾಗಿ ಅವುಗಳ ಸೌಲಭ್ಯವನ್ನು ಪಡೆಯಲಿಕ್ಕೆ ಯಾರು ಸಮರ್ಥರಲ್ಲವೋ ಅವರಿಗೂ ಕೂಡ ಆ ಸಾಮರ್ಥ್ಯವನ್ನು ಕೊಡಬೇಕೆಂಬ ಉದೇಶವನ್ನು ಇಟ್ಟುಕೊಂಡು 31,742 ಯೂನಿಟ್‌ಗಳನ್ನು ಸ್ಥಾಪನೆ ಮಾಡಿರುವಂಥದ್ದು, ಅವರಿಗೆ ಲ್ಯಾಪ್‌ಟಾಪ್‌ಗಳನ್ನು ಕೊಡಲು ಸಿದ್ದತೆ ಮಾಡಿಕೊಂಡಿರುವುದನ್ನು ನಾನು ಸಂದರ್ಭದಲ್ಲಿ ಸ್ಮರಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಇನ್ನೂ "ಬಾಪೂಜಿ ಸೇವಾ ಕೇಂದ್ರ"ದ ಬಗ್ಗೆ ಹೇಳಲೇಬೇಕಾಗಿದೆ. 100 ಅಗತ್ಯ ಸೌಲಭ್ಯಗಳನ್ನು ಏಕಕಾಲದಲ್ಲಿ ನಮ್ಮ ರೈತರು ಅಥವಾ ಗ್ರಾಮೀಣ ಪ್ರದೇಶದ ಜನರು ಒಂದೇ ಕಡೆ ಆರ್‌ಟಿಸಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರಕ್ಕೆ ತಹಶೀಲ್ದಾರರ, Revenue Inspector ಅಥವಾ ಗ್ರಾಮ ಲೆಕ್ಕಾಧಿಕಾರಿಯವರ ಹತ್ತಿರಕ್ಕೆ ಹೋಗಿ ಅಲೇದಾಡಿ ಅರ್ಜಿಕೊಟ್ಟು ಲಂಚಕ್ಕೆ ಅವಕಾಶ ಮಾಡಿ ಕೊಡುವುದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ 5,648 ಗ್ರಾಮ ಪಂಚಾಯಿತಿಗಳಲ್ಲಿ "ಬಾಪೂಜೀ ಸೇವಾಕೇಂದ್ರ" ಎಂಬ ಅದ್ಭುತ ಕಲ್ಪನೆ ಮತ್ತು ಜೊತೆಗೆ ಗ್ರಾಮ ಪಂಚಾಯಿತಿಯ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಹಮ್ಮಿಕೊಂಡಿರುವಂತಹ ಒಂದು ಅದ್ಭುತವಾದಂತಹ ಒಂದು ಕಾರ್ಯಕ್ರಮ "ಬಾಪೂಜೀ ಸೇವಾ ಕೇಂದ್ರ"ದ ಕಾರ್ಯಕ್ರಮ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ನಮ್ಮ ನಾಡಿನ ಜನರಿಗೆ ಶುದ್ದ ಕುಡಿಯುವ ನೀರನ್ನು ಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಕುಡಿಯುವ ನೀರು ಅತ್ಯಂತ ಅವಶ್ಯಕವಾಗಿರುವಂಥದ್ದು. ನಮಗೆ ನೀರಿನಿಂದ ಇವತ್ತಿನ ದಿವಸ ಹಲವಾರು ರೋಗಗಳು ಬರುತ್ತಿವೆ. ಏಕೆಂದರೆ, ವಾತಾವರಣ ಮೊದಲಿನಷ್ಟು ನೈಸರ್ಗಿಕವಾಗಿ ಇಲ್ಲ. ನದಿ, ಕೆರೆ ಕಟ್ಟೆಗಳಲ್ಲಿನ ನೀರು ಕಲುಷಿತಗೊಂಡಿವೆ. ನಮಗೆ ಮೊದಲು ಭೂಮಿಯ ಮೇಲ್ಭಾಗದಲ್ಲಿ ಲಭ್ಯವಿದ್ದಂತಹ ನೀರು ಭೂಮಿಯ ಪಾತಾಳಕ್ಕೆ ಕುಸಿಯುತ್ತಿವೆ. ನಾವು ಕುಡಿಯುವ ನೀರಿಗಾಗಿ ಅಂತರ್ಜಲವನ್ನು ನಂಬಿರುವಂತಹ ಸಂದರ್ಭದಲ್ಲಿ ಪಾತಾಳಕ್ಕೆ ಕುಸಿದಂತಹ ಅಂತರ್ಜಲದಲ್ಲಿ ಖನಿಜಗಳು, ಲವಣಗಳು ಮಿಶ್ರಣವಾಗಿ ಕುಡಿಯಲು ಯೋಗ್ಯವಲ್ಲದ ಆ ಮುಖೇನ ನಮಗೆ ಹತ್ತು ಹಲವಾರು ಕಾಯಿಲೆಗಳು ಬರುತ್ತಿರುವಂತಹ ಸಂದರ್ಭದಲ್ಲಿ ನಮ್ಮ ಇಡೀ ನಾಡಿನ ಜನತೆಗೆ ಶುದ್ಧ ಕುಡಿಯುವ ನೀರನ್ನು ಕೊಡಬೇಕೆಂದು ಶುದ್ಧ ನೀರಿನ ಘಟಕಗಳನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿದೆ. ಅವುಗಳನ್ನು ಇಂದಿಗೂ ಸಹ ಸಮರ್ಪಕ ಕಾರ್ಯಕ್ರಮವಾಗಿ ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ನೀಡುತ್ತಿರುವಂಥದ್ದು ಒಂದು ಶ್ಲಾಘನೀಯವಾದಂತಹ ವಿಚಾರ. ಇದರ ಜೊತೆಗೆ 247 ಬಹು ಗ್ರಾಮ ಕುಡಿಯುವ ನೀರು ಯೋಜನೆಗಳನ್ನು ಸಹ ಅನುಷ್ಠಾನಗೊಳಿಸಿದೆ.

(ಮುಂದು...)

**ಶ್ರೀ ಎಸ್.ರವಿ (ಮುಂದು):-**

ಅದನ್ನು ಕೂಡ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿರುವಂಥದ್ದನ್ನು ಕೂಡ ತಮ್ಮ ಮುಖೇನ ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಗಳ ಅನಿಲ ಭಾಗ್ಯ ಯೋಜನೆ, ಸುಮಾರು 30 ಲಕ್ಷ ಕುಟುಂಬಗಳಿಗೆ ಉಚಿತ ಅನಿಲ ಸಂಪರ್ಕ, ಬರೀ ಉಚಿತ ಅನಿಲ ಸಂಪರ್ಕವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಲ್ಲದೆ, ಅದರ ಜೊತೆಗೆ ಒಂದು ಗ್ಯಾಸ್ ಸ್ಟೋವ್ ಮತ್ತು 2 cylinder refill ಗಳನ್ನು ಕೂಡ ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೆ ಅವರಿಗೆ ನೀಡಬೇಕು ಎಂಬುವಂತಹ ಉದ್ದೇಶದಿಂದ ನೀಡಿರುವಂಥದ್ದನ್ನು ನಾವು ನೋಡುತ್ತಿದ್ದೇವೆ. ಇನ್ನು ಇಂದಿರಾ ಕ್ಯಾಂಟೀನ್ ಬಗ್ಗೆ ಪ್ರಸ್ತಾಪ ಮಾಡಲೇಬೇಕು. ಏಕೆಂದರೆ, ಇದು ಅತೀ ಹೆಚ್ಚು ಚರ್ಚಿತವಾದಂತಹ ವಿಚಾರ, ಮಾಧ್ಯಮಗಳಲ್ಲಿ ಇರಬಹುದು, ನಮ್ಮ ವಿರೋಧ ಪಕ್ಷದ ಸನ್ಮಿತ್ರರಲ್ಲಿ ಇರಬಹುದು, ಇನ್ನು ಹಲವಾರು ಸಂದರ್ಭಗಳಲ್ಲಿ ಈ ಇಂದಿರಾ ಕ್ಯಾಂಟೀನ್ ಬಗ್ಗೆ ಸಾಕಷ್ಟು ಚರ್ಚೆಗಳು ಆಗಿವೆ. ಇವತ್ತಿನ ದಿವಸ ಬೆಂಗಳೂರು ಮಹಾನಗರದಲ್ಲಿ ಸುಮಾರು 198 ಇಂದಿರಾ ಕ್ಯಾಂಟೀನ್‌ಗಳು ಅತ್ಯಂತ ಯಶಸ್ವಿಯಾಗಿವೆ. ಈಗ ಯಾರು ಬಡ, ಮಧ್ಯಮ, ಕೆಳ ವರ್ಗದ ಮತ್ತು ಶ್ರಮಿಕ ವರ್ಗದ ಜನರಿಗೆ ಐದು ರೂಪಾಯಿಗೆ ಬೆಳಗಿನ ಉಪಹಾರ ಮತ್ತು ಹತ್ತು ರೂಪಾಯಿಗಳಿಗೆ Lunch and Dinner ಅನ್ನು ಅತ್ಯಂತ ಗುಣಮಟ್ಟದ ಮತ್ತು ರುಚಿಕರವಾದ ಆಹಾರವನ್ನು ಪಡೆಯುವ ಮುಖೇನ, ಆಟೋ ಡ್ರೈವರ್‌ಗಳು ಇರಬಹುದು, ಶ್ರಮಿಕರು ಇರಬಹುದು, ವಿದ್ಯಾರ್ಥಿಗಳು ಇರಬಹುದು, ಯಾರು ಗ್ರಾಮಾಂತರ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಕಾರ್ಯನಿಮಿತ್ತ ಇಲ್ಲಿಗೆ ಬರುತ್ತಾರೆ, ಅಂತಹವರು ಇರಬಹುದು, ಇವರಿಗೆ ಅನುಕೂಲವಾಗುತ್ತಾ ಈ ಇಂದಿರಾ ಕ್ಯಾಂಟೀನ್ ಅದ್ಭುತವಾದಂತಹ ಒಂದು ಯಶಸ್ಸನ್ನು ಕಂಡಿದೆ. ಟೀಕಾಕಾರರ ಬಾಯನ್ನು ಮುಚ್ಚುವಂತಹ ಕಾರ್ಯಕ್ರಮವಾಗಿ ಇದು ಈಗ ಮತ್ತೆ ಇಡೀ ರಾಜ್ಯಾದ್ಯಂತ ಬೇಡಿಕೆಯ ಕಾರ್ಯಕ್ರಮವಾಗಿದೆ. ಇಂದಿರಾ ಕ್ಯಾಂಟೀನ್ ಮಾಡಿ ಅದನ್ನು ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಳಿಸಬಾರದು, ಅದನ್ನು ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳು ಮತ್ತು ಸ್ಥಳೀಯ ನಗರ ಪ್ರದೇಶಗಳಿಗೂ ಸಹ ಅನ್ವಯವಾಗಬೇಕು ಎಂಬ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು 247 ಹೊಸ ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಹೊರಟಿದ್ದಾರೆ, ಇದು ಅತ್ಯಂತ ಶ್ಲಾಘನೀಯವಾದಂತಹ ವಿಚಾರ.

ಮಾನ್ಯ ಸಭಾಪತಿಯವರೇ, ಇನ್ನು ನಗರೋತ್ಥಾನ ಯೋಜನೆ. ಇವತ್ತಿನ ದಿವಸ ಜನರ ಜೀವನಶೈಲಿ ಬದಲಾವಣೆಯಾಗುತ್ತಿದೆ, ಹತ್ತು ಹಲವಾರು ಕಾರಣಗಳಿಂದ ಗ್ರಾಮಾಂತರ ಪ್ರದೇಶದ ಜನಸಂಖ್ಯೆ ಕ್ಷೀಣವಾಗುತ್ತಿದೆ. ಕಾರಣ, ಆ ಜನರು ನಗರ ಪ್ರದೇಶಗಳಿಗೆ ಅಂದರೆ ಸ್ಥಳೀಯವಾದಂತಹ ಬೆಂಗಳೂರು, ಮೈಸೂರು ಅಥವಾ ತಾಲ್ಲೂಕು ಕೇಂದ್ರಗಳು ಅಥವಾ ಜಿಲ್ಲಾ ಕೇಂದ್ರಗಳಿಗೆ ಸ್ಥಳಾಂತರಗೊಳ್ಳುತ್ತಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ; ಅವರ ಮಕ್ಕಳಿಗೆ ಉತ್ತಮವಾದಂತಹ ಶಿಕ್ಷಣವನ್ನು ಕೊಡಿಸುವಂಥದ್ದಕ್ಕೆ ಇರಬಹುದು, ಉತ್ತಮ ಜೀವನದ ಉದ್ಯೋಗಾವಕಾಶಗಳಿಗೆ ಇರಬಹುದು, ಆರೋಗ್ಯದ ದೃಷ್ಟಿಯಿಂದ ಇರಬಹುದು, ವ್ಯಾಪಾರ, ವ್ಯವಹಾರಗಳ ದೃಷ್ಟಿಯಿಂದ ಇರಬಹುದು, ಈ ರೀತಿಯ ಉತ್ತಮವಾದಂತಹ ಜೀವನವನ್ನು ಪಡೆಯುವ ಕಾರಣಕ್ಕಾಗಿ ಜನರು ಹೆಚ್ಚು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚು ವಲಸೆ ಅಥವಾ ಸ್ಥಳಾಂತರಗೊಳ್ಳುತ್ತಿರುವಂತಹ ಸಂದರ್ಭದಲ್ಲಿ, ನಗರ ಪ್ರದೇಶಗಳ ಜೀವನ ಕೂಡ ಒಂದು ಸುಧಾರಣೆಯ ಮತ್ತು ಸಹನೀಯ ಬದುಕನ್ನಾಗಿಸುವುದಕ್ಕೆ, ಹಣದ ಅವಶ್ಯಕತೆ ಇರತಕ್ಕಂಥದ್ದು, ಕಾರ್ಯಕ್ರಮಗಳ ಅವಶ್ಯಕತೆ ಇರುವಂತಹ ಹಿನ್ನೆಲೆಯಲ್ಲಿ, ಅಲ್ಲಿ ಕುಡಿಯುವ ನೀರು ಇರಬಹುದು, ಒಳಚರಂಡಿ ಇರಬಹುದು, ಈ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ನಗರೋತ್ಥಾನ ಎರಡು ಮತ್ತು ಮೂರರ ಅಡಿಯಲ್ಲಿ 6,479 ಕೋಟಿ ರೂಪಾಯಿಗಳನ್ನು ತೊಡಗಿಸುವಂಥದ್ದು ಕೂಡ ಒಂದು ಶ್ಲಾಘನೀಯವಾದಂತಹ ಕಾರ್ಯಕ್ರಮ. ಮಾನ್ಯ ಮಂತ್ರಿಗಳು ಸಹ ಇಲ್ಲೇ ಇದ್ದಾರೆ. ಆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಕ್ಕೆ ಇದ್ದಂತಹ ಅಡ್ಡಿ ಆತಂಕಗಳನ್ನು ನಿವಾರಣೆ ಮಾಡುವುದಕ್ಕೆ ನೇರವಾಗಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಸಾಧ್ಯ ಮಾಡಿದ್ದಾರೆ. ಈಗಾಗಲೇ, ಹಲವಾರು ಕಡೆಗಳಲ್ಲಿ ಕಾರ್ಯಕ್ರಮ ಪ್ರಾರಂಭವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇನ್ನು ಸಾರಿಗೆ ಇಲಾಖೆ ಬಹಳ ಉತ್ತಮವಾಗಿ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಇನ್ನೂ ಹತ್ತು ಹಲವಾರು ವಿಚಾರಗಳು ಇದ್ದಾಗಲೂ ಕೂಡ, ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಇನ್ನು ಆರೋಗ್ಯ ಭಾಗ್ಯ ಯೋಜನೆ ಮತ್ತು ಬೆಳಗಾವಿ ಅಧಿವೇಶನದಲ್ಲಿ ನಾಗರಿಕರ ಆರೋಗ್ಯದ ದೃಷ್ಟಿಯಿಂದ ಖಾಸಗಿ ನರ್ಸಿಂಗ್ ಹೋಂಗಳನ್ನು ನಿಯಂತ್ರಿಸುವ ದೃಷ್ಟಿಯಿಂದ ತೆಗೆದುಕೊಂಡಂತಹ ವೈದ್ಯಕೀಯ ವಿಧೇಯಕದ ಬಗ್ಗೆ ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುವುದಕ್ಕೆ ಇಚ್ಛಿಸುತ್ತೇನೆ. ಮುಂದೆ ಸರ್ಕಾರ ಆರೋಗ್ಯ ಭಾಗ್ಯ ಯೋಜನೆ ಅಡಿಯಲ್ಲಿ, ಯಾವುದೇ ಇತಿಮಿತಿಗಳು ಇಲ್ಲದೆ, ಎಲ್ಲಾ ಜನರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸದೆ, ಎಲ್ಲಾ ವರ್ಗದ ಜನರಿಗೂ ಕೂಡ ಉತ್ತಮವಾದಂತಹ ಆರೋಗ್ಯವನ್ನು ಕೊಡಬೇಕೆಂದು ರಾಜ್ಯದಲ್ಲಿರುವ ಸುಮಾರು 1.4 ಕೋಟಿ ಕುಟುಂಬಗಳಿಗೆ ಆರೋಗ್ಯ ಸೇವೆ ದೊರೆಯಬೇಕೆಂಬ ಸದುದ್ದೇಶದಿಂದ ಕೈಗೊಂಡಿರುವಂತಹ ಆರೋಗ್ಯ ಭಾಗ್ಯ ಯೋಜನೆಯನ್ನು ಕೂಡ ಶ್ಲಾಘಿಸುತ್ತೇನೆ.

ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಗ್ರಾಮೀಣಾಭಿವೃದ್ಧಿಗೆ ಮಾನ್ಯ ಮುಖ್ಯಮಂತ್ರಿಗಳು ನೀಡಿದ 21 ಅಂಶಗಳ ಕಾರ್ಯಕ್ರಮ, ಅದು ಯಶಸ್ವಿಯಾಗಿ ಅನುಷ್ಠಾನಗೊಂಡಿರುವಂಥದ್ದಾಗಿದೆ. ಇನ್ನು ಲೋಕೋಪಯೋಗಿ ಇಲಾಖೆಯ ಮುಖೇನ ಸಾಕಷ್ಟು ರಸ್ತೆಗಳು ಅಭಿವೃದ್ಧಿಗೊಂಡಿವೆ, ಇದನ್ನು ನಾವು ಸಂಚಾರ ಮಾಡುವಂತಹ ಸಂದರ್ಭದಲ್ಲಿ ನೋಡಿದ್ದೇವೆ, ರಾಜ್ಯದಲ್ಲಿ ಎಲ್ಲೂ ನೇರವಾದಂತಹ ಆರೋಪಗಳು ಇಲ್ಲ. ಇವತ್ತಿನ ದಿವಸ ಉತ್ತಮವಾದಂತಹ ರಸ್ತೆಗಳು, ಉದಾಹರಣೆಗೆ 1,850 ಕಿಲೋಮೀಟರ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸಿರುವಂಥದ್ದು. ಸುಮಾರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

8,190 ಕೋಟಿ ರೂಪಾಯಿಗಳ ವೆಚ್ಚದಲ್ಲಿ 9,644 ಕಿಲೋಮೀಟರ್ ರಾಜ್ಯ ಹೆದ್ದಾರಿಯನ್ನು ಮಾಡಿರುವಂಥದ್ದು. ಸುಮಾರು 20,333 ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿ ಮಾಡಿರುವಂಥದ್ದು. ಇದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ವಾಸ ಮಾಡುತ್ತಿರುವಂತಹ ವಸತಿ ಪ್ರದೇಶಗಳಲ್ಲಿ ಸುಮಾರು 1,532 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಾಣ ಮಾಡಿರುವಂಥದ್ದು ನಮ್ಮ ಸರ್ಕಾರದ ಮತ್ತೊಂದು ಮೈಲಿಗಲ್ಲು ಎಂದು ಹೇಳಿ ತಮ್ಮ ಮುಖೇನ ಪ್ರಸ್ತಾಪ ಮಾಡುತ್ತೇನೆ. ಇನ್ನು ಕೈಗಾರಿಕೆ ವಿಚಾರದಲ್ಲಿ 2012ರಲ್ಲಿ ಬಂಡವಾಳ ಹೂಡಿಕೆಯಲ್ಲಿ ನಮ್ಮ ರಾಜ್ಯ ಹನ್ನೊಂದನೆ ಸ್ಥಾನದಲ್ಲಿತ್ತು. ಆದರೆ, 2016-17ನೇ ಸಾಲಿನಲ್ಲಿ ರಾಷ್ಟ್ರದಲ್ಲೇ ಪ್ರಥಮ ಸ್ಥಾನಕ್ಕೆ ಬರುವ ಮುಖೇನ ಸುಮಾರು 1.89 ಲಕ್ಷ, ಅಂದರೆ, ಅತಿ ಸಣ್ಣ, ಸಣ್ಣ, ಮಧ್ಯಮ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ, ಹನ್ನೊಂದುಕಾಲು ಲಕ್ಷ ಜನರಿಗೆ ಉದ್ಯೋಗಗಳನ್ನು ಸೃಜಿಸಿರುವಂತಹ ಒಂದು ಹಿನ್ನೆಲೆ ಇರತಕ್ಕಂಥ ಈ ಸರ್ಕಾರವನ್ನು ಅಭಿನಂದಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಇನ್ನು ಬೆಂಗಳೂರು ಮಹಾನಗರದ ಬಗ್ಗೆ ಹೇಳದೆ ಹೋದರೆ ಅದು ತಪ್ಪಾಗುತ್ತದೆ. ಬೆಂಗಳೂರು ಮಹಾನಗರದ ವಿಚಾರದಲ್ಲಿ ಸರ್ಕಾರ ಎಂದೂ ಕೂಡ ನಿರ್ಲಕ್ಷ್ಯ ಮಾಡಿಲ್ಲ. ನಾವು 2012ರಲ್ಲಿ ಬೆಳಗ್ಗೆ ಎದ್ದು ನೋಡುತಿದ್ದೆವು, ಬೆಂಗಳೂರು Garden City ಹೋಗಿ Garbage City ಆಗಿತ್ತು. ಅಂದರೆ, ಸರಿಯಾದ ರೀತಿಯಲ್ಲಿ ಕಸ ಮತ್ತು ತ್ಯಾಜ್ಯವನ್ನು ನಿರ್ವಹಣೆ ಮಾಡದೆ, ಅಸಮರ್ಪಕ ಆಡಳಿತದ ಹಿನ್ನೆಲೆಯಲ್ಲಿ ಇಡೀ ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯಾಗಿದ್ದಂತಹ ನಗರಕ್ಕೆ ಒಂದು ಕಪ್ಪು ಕಳಂಕವನ್ನು ಕಂಡಿದ್ದಂತಹ ನಾಡು, 2012ರ ನಂತರ ಮತ್ತೆ 'Clean City' ಮಾಡುವಲ್ಲಿ, ಈ ಸರ್ಕಾರ ಹತ್ತು ಹಲವಾರು ಕಾರ್ಯಕ್ರಮಗಳನ್ನು, ಸಾವಿರಾರು ಕೋಟಿ ರೂಪಾಯಿಗಳ ಅನುದಾನದೊಂದಿಗೆ ಮಾಡುವುದಕ್ಕೆ ಹೊರಟಿರುವುದು ಅತ್ಯಂತ ಶ್ಲಾಘನೀಯವಾದುದ್ದು. ಅದರಲ್ಲೂ ವಿಶೇಷವಾಗಿ ಬೇರೆ ನಗರಗಳಿಗೆ ಹೋಲಿಕೆ ಮಾಡುವಂತಹ ಸಂದರ್ಭದಲ್ಲಿ *Tender-sure roads* ಇರಬಹುದು, *White-topping roads* ಇರಬಹುದು, ಅವುಗಳನ್ನು ನಾವು ನೋಡುತ್ತಿದ್ದೇವೆ. ಯೂರೋಪ್ ರಾಷ್ಟ್ರಗಳು ಇರಬಹುದು ಅಥವಾ ಇನ್ನಿತರ ಮುಂದುವರಿದ ದೇಶಗಳ ನಗರಗಳಲ್ಲಿ ಇರತಕ್ಕಂಥ ರಸ್ತೆಯ ಗುಣಮಟ್ಟಕ್ಕೆ ಕಡಿಮೆ ಇಲ್ಲದಂತಹ ಸರಿ ಸಾಟಿಯಾದಂತಹ ರಸ್ತೆಗಳನ್ನು ನಾವು ಬೆಂಗಳೂರಿನಲ್ಲಿ ಕಾಣುತ್ತಿದ್ದೇವೆ. ರಸ್ತೆಗಳು ಉತ್ತಮವಾದಂತಹ ರೀತಿಯಲ್ಲಿ ನಿರ್ವಹಣೆ ಆಗುತ್ತಿದೆ. ಬೆಂಗಳೂರಿನ 'ನಮ್ಮ ಮೆಟ್ರೋ' ವಿಚಾರದಲ್ಲಿ ಹೇಳುವುದಾದರೆ, ಈಗಾಗಲೇ ಮೊದಲನೆ ಹಂತ ಮುಗಿದಿದೆ, ಎರಡನೆಯ ಹಂತದ ಕೆಲಸ ಯಾವುದೇ ಅಡ್ಡಿ ಆತಂಕವಿಲ್ಲದೆ ನಡೆಯುವುದಕ್ಕೆ, ಶರವೇಗದಿಂದ ಯುದ್ಧೋಪಾದಿಯಲ್ಲಿ ನಿಗಧಿತ ಸಮಯದ ಒಳಗಡೆ ಮೆಟ್ರೋ ಕಾರ್ಯಕ್ರಮವನ್ನು ಮುಗಿಸುವುದಕ್ಕೆ ಸಿದ್ಧವಾಗಿರುವುದು ಕೂಡ ಅದ್ಭುತವಾದಂಥದ್ದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿರುವುದು ಈ ಸರ್ಕಾರದ ಒಂದು ಸಾಧನೆ. ಇದರ ಜೊತೆಗೆ ಸಂಚಾರದಟ್ಟಣೆ ನಿಯಂತ್ರಣಕ್ಕೆ grade seperator ಇರಬಹುದು, under pass ಇರಬಹುದು ಮತ್ತು ಮೇಲ್ಸೇತುವೆಗಳು ಇರಬಹುದು. ನಾನು ಇವುಗಳ ಹೆಸರುಗಳನ್ನು ಹೇಳುತ್ತಾ ಹೋದರೆ, ಯಾವುದು ಮೇಲ್ಸೇತುವೆ, ಯಾವುದು ಕೆಳಸೇತುವೆ ಮತ್ತು ಯಾವುದು grade seperator ಮತ್ತು ಅವುಗಳನ್ನು ಎಲ್ಲೆಲ್ಲಿ ಮಾಡಿದ್ದಾರೆ ಎಂದು ಹೇಳುವುದಕ್ಕೆ ಸುಮಾರು ಕಾಲು ಗಂಟೆ ತೆಗೆದುಕೊಳ್ಳುತ್ತದೆ. ಅಷ್ಟು ಕೆಲಸಗಳನ್ನು ಮಹಾನಗರಕ್ಕೆ ಸೀಮಿತವಾಗಿ ಮಾಡಿದ್ದು ಈ ಸರ್ಕಾರ ಎಲ್ಲೂ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ಕಳೆದ ವರ್ಷ ಇತಿಹಾಸದಲ್ಲಿ ಕಂಡರಿಯದಂತಹ ಮಳೆ ಸುರಿಯಿತು. ಬೇರೆ ಸಂದರ್ಭಗಳಲ್ಲಿ ಅತೀ ಹೆಚ್ಚು ಮಳೆಯಿಂದ ಸಂಭವಿಸಿದಂತಹ ಅನಾಹುತಗಳಿಗೆ ಹೋಲಿಕೆ ಮಾಡಿ ನೋಡಿದರೆ, ಯಾವುದೇ ಅನಾಹುತಗಳು ಆಗಲಿಲ್ಲ, ಅದನ್ನು ನಿಯಂತ್ರಣ ಮಾಡಿ ತಡೆಯುವಲ್ಲಿ ಮತ್ತು ಅಂತಹ ಒಂದು ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ನಮ್ಮ ಸರ್ಕಾರ ಅತ್ಯಂತ ಸಮರ್ಥವಾಗಿ ಕಾರ್ಯನಿರ್ವಹಣೆ ಮಾಡಿತು ಎಂದು ಈ ಸಂದರ್ಭದಲ್ಲಿ ತಮ್ಮ ಮುಖೇನ ಈ ವಿಚಾರಗಳನ್ನು ಹೇಳುತ್ತೇನೆ. ಇನ್ನು ಸಾಕಷ್ಟು ಅದ್ಭುತವಾದಂತಹ ಕೆಲಸ, ಕಾರ್ಯಕ್ರಮಗಳು ಆಗಿವೆ. ಮಾನ್ಯ ಸಭಾಪತಿಯವರು ನನ್ನ ಮುಖವನ್ನು ನೋಡುತ್ತಿದ್ದಾರೆ, ಮಾತನಾಡುವುದಕ್ಕೆ 30 ನಿಮಿಷ ಎಂದು ಹೇಳಿದ್ದರು. ಮಾನ್ಯ ಸಭಾಪತಿವಯರೇ, ನಾನು ನಿಜಕ್ಕೂ ತಮ್ಮನ್ನು ಅಭಿನಂದಿಸುತ್ತೇನೆ. ತಾವು ನಾನು ಮಾತನಾಡುವುದನ್ನು ನಿಲ್ಲಿಸುವುದಕ್ಕೆ ಅವಕಾಶವನ್ನು ಕೊಡದೆ, ನಗುತ್ತಾ ಕುಳಿತ್ತಿದ್ದೀರಿ. ತಾವು ನಾನು ಮಾತನಾಡುವುದಕ್ಕೆ ಬಹಳ ಅವಕಾಶವನ್ನು ಕೊಟ್ಟಿದ್ದೀರಿ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರು ಮಾತನಾಡುವುದನ್ನು ನಿಲ್ಲಿಸುವಂತೆ ಮಾನ್ಯ ಸಭಾಪತಿಯವರು ಹೇಳಲಿ ಎಂದು ಅವರು ನಿಮ್ಮನ್ನು ನೋಡುತ್ತಿದ್ದರು, ಆದರೆ ತಾವು ಅವರಿಗೆ ಮಾತನಾಡುವುದನ್ನು ನಿಲ್ಲಿಸುವುದಕ್ಕೆ ಹೇಳಲಿಲ್ಲ.

**ಶ್ರೀ ಎಸ್.**ರವಿ:- ಮಾನ್ಯ ಸಭಾಪತಿಯವರೇ, ಇನ್ನೂ ಮಾತನಾಡಿ ಎಂದರೆ ನಾನು ಮಾತನಾಡುವುದಕ್ಕೆ ತಯಾರಿದ್ದೇನೆ. ತಾವು ನನ್ನ ಮಾತನ್ನು ಕೇಳುತ್ತೇನೆ ಎಂದರೆ ಇನ್ನೂ ಒಂದು ಗಂಟೆ ಮಾತನಾಡುತ್ತೇನೆ, ನನಗೆ ಏನೂ ಸಮಸ್ಯೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಮಾತನಾಡಿದ್ದು ಸಾಕು, ಈಗಾಗಲೇ ಸುಮಾರು ಐವತ್ತು ನಿಮಿಷವಾಗಿದೆ. ವಿಚಾರದ ಧಾಟಿ ಚೆನ್ನಾಗಿ ಇತ್ತು ಮತ್ತು ಬಹಳ ಸ್ಪಷ್ಟವಾಗಿತ್ತು, It was really fine. ಧನ್ಯವಾದಗಳು.

**(ಮುಂದು...)**

**ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ವರನ್ನೂ ಒಳಗೊಂಡಿರತಕ್ಕ, ಸರ್ವರನ್ನು ಬೆಸೆಯುವ, ಸರ್ವರಿಗೆ ಸಮಪಾಲು, ಸರ್ವೋದಯ ತತ್ವದ ಅಡಿಯ ಮಾದರಿ ಸರ್ಕಾರ ನಮ್ಮದು. ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಮಾದರಿ ಸರ್ಕಾರವಾಗಿದೆಯೆಂದು ಕನ್ನಡಿಗರಾಗಿ, ಕರ್ನಾಟಕ ರಾಜ್ಯ ನಿವಾಸಿಗಳಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಇದರಲ್ಲಿ ನಮ್ಮ ಪಕ್ಷ, ಪರಪಕ್ಷ ಯಾವುದಾದರೂ ಇರಲಿ, ನಮ್ಮ ರಾಜ್ಯ ಸರ್ಕಾರ ಅಭಿವೃದ್ಧಿ ವಿಚಾರದಲ್ಲಿ, ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶ್ರಮಿಸುತ್ತಿರುವಂತಹ ವಿಚಾರದಲ್ಲಿ ಮತವನ್ನು ಕೊಟ್ಟು ಆಡಳಿತವನ್ನು ಕೊಟ್ಟಿರತಕ್ಕಂತಹ, ಈ ರಾಜ್ಯದ ಚುಕ್ಕಾಣಿ ಹಿಡಿಯುವುದಕ್ಕೆ ಅವಕಾಶ ಮಾಡಿ ಕೊಟ್ಟಂತಹ ಮತದಾರರ ಋಣವನ್ನು ತೀರಿಸುವಂತಹ ವಿಚಾರದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿರುವಂತಹ ಸರ್ಕಾರ ಎಂದು ನಾವು ನೀವೂ ಕೂಡ ಸೇರಿ ಬಹಳ ಹೆಮ್ಮೆಯಿಂದ ಹೇಳಿಕೊಳ್ಳುವಂತಹ ನಮ್ಮ ರಾಜ್ಯ ಸರ್ಕಾರ, ಕರ್ನಾಟಕದ ಮಾದರಿ ರಾಜ್ಯ ಸರ್ಕಾರ ಎಂದು ನಾನಾದರೂ ಹೆಮ್ಮೆಯಿಂದ ಹೇಳುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ಬೆಂಬಲ ಸೂಚಿಸಿದರು)**

ಮತ್ತು ಜಾತಿ, ಧರ್ಮಗಳನ್ನು ದಾಳಗಳನ್ನಾಗಿ ಮಾಡಿಕೊಂಡು, ಆ ಮುಖೇನ ಸಮಾಜವನ್ನು ವಿಭಜಿಸಿ, ಅದರ ಮುಖೇನ ರಾಜಕೀಯ ಲಾಭ ಪಡೆಯುವ ಪ್ರಯತ್ನ ಈ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅತ್ಯಂತ ಮಾರಕವಾದದ್ದು ಆಗಿದೆ. ಆದರೆ, ಇಂತಹ ಹುನ್ನಾರಗಳು ಕರ್ನಾಟಕದ ಪ್ರಜ್ಞಾವಂತ ಜನರಲ್ಲಿ ಯಾವುದೇ ರೀತಿಯಾದಂತಹ ಪರಿಣಾಮವನ್ನು ಬೀರಲಾರದು. ಇಂತಹ ಪ್ರಯತ್ನಗಳಲ್ಲಿ ತೊಡಗಿಸಿಕೊಂಡಿರುವಂತಹವರು ಸಫಲತೆಯನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದು ಈ ನಾಡಿನ ಜನರಿಗೆ ತಿಳಿದಿದೆಯೆಂದು ನನಗಾದರೂ ಒಂದು ಸ್ಪಷ್ಟವಾದ ನಂಬಿಕೆ ಇದೆ. ಅದಕ್ಕೆ ಕಾರಣವೇನೆಂದರೆ, ಈ ನಾಡು ಕಂಡಿರತಕ್ಕಂತಹ ಶ್ರೀ ಬಸವಣ್ಣನವರಂತಹ ಮಾರ್ಗದರ್ಶನದಲ್ಲಿ ಹಾಗೂ ನೂರಾರು ಸಾಧು-ಸಂತರು, ಸೂಫಿಗಳು, ಮಹನೀಯರು ಹುಟ್ಟಿದಂತಹ ನಾಡಿನಲ್ಲಿ ಜಾತ್ಯಾತೀತತೆಯ ಬೀಜವನ್ನು ಬಿತ್ತಿದ್ದಾರೆ. ಆ ಹಿನ್ನೆಲೆಯಲ್ಲಿ ಈ ನಾಡು ಎಂದಿಗೂ ಕೋಮುವಾದಿಗಳಿಗೆ ಸಮಾಜವನ್ನು ಒಡೆದು ಆಳುವ, ಯಾವುದೇ ಅಭಿವೃದ್ಧಿ ಪರವಾದ ಚಿಂತನೆಗಳಿಲ್ಲದೇ, ಕೇವಲ ದ್ವೇಷದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಿಚ್ಚಿನಿಂದ ಈ ನಾಡನ್ನು ವಿಭಜಿಸಿ ಆ ಮೂಲಕ ಅಧಿಕಾರ ಲಾಭವನ್ನು ಪಡೆಯುವಂತಹ ಪ್ರಯತ್ನವನ್ನು ಮಾಡತಕ್ಕಂತಹ ಕೋಮುವಾದಿಗಳನ್ನು ಈ ರಾಜ್ಯದ ಜನ ಹೊರಗಿಡುತ್ತಾರೆ ಎನ್ನುವುದು ನನ್ನ ಭಾವನೆ. ಜಾತ್ಯಾತೀತ ತತ್ವದ ಹಿನ್ನೆಲೆಯಲ್ಲಿ ನಮ್ಮ ರಾಜ್ಯ ಇಡೀ ರಾಷ್ಟ್ರದಲ್ಲಿಯೇ ವಾಸಿಸಲು ಅತ್ಯಂತ ಯೋಗ್ಯವಾಗಿರತಕ್ಕಂತಹ, ಬಂಡವಾಳ ಹೂಡಲು ಅತ್ಯಂತ ಯೋಗ್ಯವಾಗಿರತಕ್ಕಂತಹ ಅತ್ಯಂತ ಸಮರ್ಥ ಅಧಿಕಾರವನ್ನು ಪ್ರಜ್ಞಾವಂತ ನಾಗರಿಕರನ್ನು ಒಳಗೊಂಡಿರತಕ್ಕಂತಹ ಸಮಾಜ ಈ ನಾಡು ಕರ್ನಾಟಕ ಎನ್ನುವ ಹೆಗ್ಗಳಿಕೆಗೆ ಚ್ಯುತಿ ಬರದ ರೀತಿಯಲ್ಲಿ ಸಮರ್ಥವಾಗಿ ಆಡಳಿತವನ್ನು ನೀಡಿರತಕ್ಕಂತಹ ಶ್ರೀ ಸಿದ್ದರಾಮಯ್ಯನವರಿಗೆ ಜನರು ಮತ್ತೊಮ್ಮೆ ಆಶೀರ್ವಾದ ಮಾಡುತ್ತಾರೆಂದು ನಾನಾದರೂ ಭಾವಿಸುತ್ತೇನೆ. ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮ್ಮ ಸರ್ಕಾರ ಕೈಗೊಂಡಿರತಕ್ಕಂತಹ ಒಂದಿಷ್ಟು ವಿಚಾರಗಳನ್ನು ಸಮಗ್ರವಾಗಿ ಕಟ್ಟಿಕೊಡಲು ಒಂದು ಪ್ರಯತ್ನ ಮಾಡಿದ್ದಾರೆ. ಅವರಿಗೆ ನಾನು ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೂ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ಬೆಂಬಲ ಸೂಚಿಸಿದರು)**

**ಡಾ॥ ಜಯಮಾಲ ರಾಮಚಂದ್ರ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ಮತ್ತು ಪ್ರಸ್ತಾವನೆಯನ್ನು ಅನುಮೋದಿಸಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ಕಳೆದ 5 ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಇವೆರಡನ್ನೂ ಕೂಡ ಜನರಿಗೆ ಸಮಾನವಾಗಿ ತಂದು ಕೊಡುವಲ್ಲಿ ಇವತ್ತು ಒಂದು ಹೆಜ್ಜೆಯನ್ನು ಇಟ್ಟಿದೆ ಎನ್ನುವುದನ್ನು ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಭಾಷಣದ ಮುಖಾಂತರ ಕರ್ನಾಟಕ ಸರ್ಕಾರದಲ್ಲಿ ಬಡವರು ಇರಬಹುದು, ದುರ್ಬಲ ವರ್ಗದವರು ಇರಬಹುದು, ಅಥವಾ ಅವಕಾಶದಿಂದ ವಂಚಿತರಾದವರು ಇರಬಹುದು ಇವರೆಲ್ಲರನ್ನೂ ಕೂಡ ಒಂದು ಅಭಿವೃದ್ಧಿಯತ್ತ ಕರೆದುಕೊಂಡು ಹೋಗುತ್ತಿದೆ. ಅದಕ್ಕೆ ಈ ಸರ್ಕಾರ ಬದ್ಧವಾಗಿದೆ, ಆದುದರಿಂದ ಇದೊಂದು ಸ್ಥಿರ ಸರ್ಕಾರ ಎನ್ನುವಂತಹ ಮಾತುಗಳನ್ನು ರಾಜ್ಯಪಾಲರು ಹೇಳಿದ್ದಾರೆ. ನಿನ್ನೆಯಿಂದ ಇವತ್ತಿನವರೆಗೂ ಕೂಡ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಈ ಸದನದಲ್ಲಿ ಚರ್ಚೆಗಳು ಆಗುತ್ತಲೇ ಇದೆ ಮತ್ತು ಘನತೆವೆತ್ತ ರಾಜ್ಯಪಾಲರು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಹಲವಾರು ಪರಿಣಾಮಕಾರಿಯಾದಂತಹ ಕ್ರಮಗಳನ್ನು ಈ ಸರ್ಕಾರ ತೆಗೆದುಕೊಂಡಿದೆ ಎಂದು ಸೊಗಸಾಗಿ ಹೇಳಿದ್ದಾರೆ. ಅಂದರೆ, ಹಠಾತ್ತಾಗಿ ನಡೆಯುವಂತಹ ಕೋಮುಗಲಭೆಗಳು ಇರಬಹುದು ಅಥವಾ ಘರ್ಷಣೆ ಇರಬಹುದು, ಗುಂಪು ಘರ್ಷಣೆ ಇರಬಹುದು ಇವೆಲ್ಲವೂ ಕೂಡ ನಡೆದಾಗ ತಕ್ಷಣ ಅವುಗಳನ್ನು ನಿಯಂತ್ರಿಸುವಲ್ಲಿ ಈ ಸರ್ಕಾರ ಯಾವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಾದಂತಹ ಕ್ರಮವನ್ನು ವಹಿಸಲು ಮುಂದಾಗಿದೆ ಎನ್ನುವಂತಹ ಮಾತನ್ನು ಘನತೆವೆತ್ತ ರಾಜ್ಯಪಾಲರು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಸದನದಲ್ಲಿ ಇದ್ದಾರೆ. ನಿನ್ನೆಯ ದಿವಸ ನಾನು ಮಾತನಾಡುವಾಗ ಒಂದು ಮಾತನ್ನು ಗೌರವಾನ್ವಿತ ವಿರೋಧ ಪಕ್ಷದ ನಾಯಕರಲ್ಲಿ ಹೇಳಿಕೊಂಡೆ. ಅದೇನೆಂದರೆ, ಬಿಜಾಪುರ ಜಿಲ್ಲೆಯಲ್ಲಿ ಒಂದು ಅತ್ಯಾಚಾರ ನಡೆಯಿತು ಎಂದು ನಾವು ಹೇಳುತ್ತೇವೆ. ಈ ಅತ್ಯಾಚಾರ ಎನ್ನುವಂಥದ್ದರಲ್ಲಿ ಅತ್ಯಾಚಾರಿಗಳು ಹೇಗೆ ಹುಟ್ಟುತ್ತಾರೆಂದು ನಾವು ಹೇಳುವುದಕ್ಕೆ ಆಗುವುದಿಲ್ಲ.

**(ಈ ಹಂತದಲ್ಲಿ ಪ್ಯಾನಲ್ ಸದಸ್ಯರಾದ ಶ್ರೀ ರಾಮಚಂದ್ರಗೌಡರವರು ಸಭಾಪತಿ ಪೀಠವನ್ನು ಅಲಂಕರಿಸಿದರು)**

ಬಹುಶಃ ತಾಯಿಯಾದವಳಿಗೆ ಕೂಡ ನನ್ನ ಮಗ ಅತ್ಯಾಚಾರಿಯಾಗುತ್ತಾನೆಂದು ಗೊತ್ತಾಗುವುದಿಲ್ಲ. ಆಕೆ ಅವನನ್ನು ಮಗುವಿನಿಂದಲೂ ಗಮನಿಸುತ್ತಿರುತ್ತಾಳೆ. ಆದರೆ, ತನ್ನ ಮಗು ಯಾವತ್ತು ಕೂಡ ಶ್ರೇಷ್ಠ ವ್ಯಕ್ತಿಯಾಗಬೇಕು ಎಂಬ ಕನಸು ಕಾಣುತ್ತಾಳೆ. ಆದರೆ, ಎಲ್ಲಿಯೋ ಒಂದು ಕಡೆ ಆ ತಾಯಿಗೆ ಗೊತ್ತಾಗದ ಹಾಗೆ ಆ ಒಂದು ವಿಕೃತ ಮನಸ್ಸು, ವಿಕೃತ ಭಾವ ಆ ಮಕ್ಕಳಲ್ಲಿ ಬಿತ್ತುತ್ತಾ ಹೋಗುತ್ತದೆ. ಈ ಮಾತನ್ನು ಏತಕ್ಕೆ ಹೇಳಿದೆಯೆಂದರೆ, ಬಿಜಾಪುರದಲ್ಲಿ 9ನೇ ತರಗತಿ ಓದುವಂತಹ ಹುಡುಗಿಯನ್ನು ಎತ್ತಿಕೊಂಡು ಹೋಗಿ ಅತ್ಯಾಚಾರ ಮಾಡುತ್ತಾರೆ. ಆ ಅತ್ಯಾಚಾರ ಮಾಡುವಂತವರು ಯಾರು? ಸಮಾಜದ ಸಂಘಟನೆಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿಕೊಂಡು ಬರುವಂತಹ ಹುಡುಗರು. ನಾನು ಅವರನ್ನು ಬಿಜೆಪಿ ಪಕ್ಷದ ಹುಡುಗರು ಎಂದು ಹೇಳುವುದಿಲ್ಲ. ಆದರೆ, ಅದು ಬಿಜೆಪಿಯ ಕಾರ್ಯಕರ್ತರು ಎಂದು ಸಾಬೀತಾಗುತ್ತದೆ. ಇಲ್ಲಿ ಬಿಜೆಪಿ ಕಾರ್ಯಕರ್ತರು ಮಾಡುತ್ತಾರೆ ಅಥವಾ ಇನ್ನೊಂದು ಪಕ್ಷದ ಕಾರ್ಯಕರ್ತರು ಮಾಡುತ್ತಾರೆ ಎಂದು ನಾನು ಹೇಳುವುದಿಲ್ಲ. ಆದರೆ, ಇಲ್ಲಿ ನಾವು ಏನಾಗುತ್ತಿದ್ದೇವೆ ಎಂದರೆ, ಇದನ್ನು ನಿಯಂತ್ರಣಕ್ಕೆ ತರುವುದಕ್ಕೆ ಯಾವುದಾದರೂ ಕ್ರಮ ವಹಿಸಬೇಕೇ ವಿನಃ, ನಿಮ್ಮ ಪಕ್ಷದವರು ಮಾಡಿದರು, ಅದು ನೀವು ಹೇಳಿ ಮಾಡಿಸಿರುವುದಿಲ್ಲ. ಅವನ ವಿಕೃತ ಮನಸ್ಸು ಎಲ್ಲಿಯೋ ಕುಳಿತುಕೊಂಡು ಆ ರೀತಿ ಮಾಡಿಸುತ್ತದೆ. ಇಂತಹ ವ್ಯಕ್ತಿಗಳು ಪ್ರತಿ ಕ್ಷೇತ್ರದಲ್ಲಿಯೂ ಶೇಕಡ 1 ರಷ್ಟು ಇದ್ದೇ ಇರುತ್ತಾರೆ. ಒಳ್ಳೆಯದು ಕೆಟ್ಟದ್ದು ಎಂದು ನಾವು ಏನು ಹೇಳುತ್ತಿವೆಯೋ ಈ ಕೆಟ್ಟದ್ದು ಕೂಡ ಶೇಕಡ 1 ರಷ್ಟು ಜನ ಎಲ್ಲಾ ಕ್ಷೇತ್ರದಲ್ಲಿಯೂ ಇದ್ದಾಗ ಕಾನೂನು ಮತ್ತು ಸುವ್ಯವಸ್ಥೆಯನ್ನು ಹಠಾತ್ತಾಗಿ ನಿಯಂತ್ರಣಕ್ಕೆ ತರುವಲ್ಲಿ ಒಂದು ಹೊಸ ಕ್ರಮಗಳನ್ನು ನಾವು ಬಳಸಿಕೊಳ್ಳಬೇಕಾಗುತ್ತದೆ. ಕೆಲವರು ಜೋರಾಗಿ ಹೇಳಿಕೊಂಡು ಇಂತಹ ಕೆಲಸಗಳನ್ನು ಮಾಡುತ್ತಾರೆ. ಆದರೆ, ಮಾನ್ಯ ಗೃಹಮಂತ್ರಿಗಳು ಅವರು ಮಾಡುವಂತಹ ಕೆಲಸವನ್ನು ಸೌಮ್ಯವಾಗಿ ಮಾಡುವುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ನಾನು ಈ ಮಾತನ್ನು ಹೇಳುವುದಕ್ಕೆ ಒಂದೇ ಒಂದು ಕಾರಣ ಇದೆ. ನಾವು ಹಿಂದೂ ಪರ, ಮುಸಲ್ಮಾನರ ಪರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳುತ್ತೇವೆಯಲ್ಲ ಅದು ಎಲ್ಲಿಯೋ ಒಂದು ಕಡೆ ನಾವೆಲ್ಲರೂ ಕೂಡ ಮನುಷ್ಯರ ಪರ. ಈ ಜಾತೀಯತೆ, ಧರ್ಮ ಇವೆಲ್ಲವನ್ನೂ ಕೂಡ ಮನುಷ್ಯರಾದ ನಾವುಗಳೇ ಮಾಡಿಕೊಂಡಿದ್ದೇವೆ. ಆದರೆ, ನಾವೆಲ್ಲರೂ ಕೂಡ ಮನುಷ್ಯರ ಪರ ಎಂದು ನನಗನ್ನಿಸುತ್ತದೆ. ಆ ಮನುಷ್ಯರ ಪರ ಎನ್ನುವಂಥದ್ದನ್ನು ಈ ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಅದರಂತೆ, ಈ ಸರ್ಕಾರ ಮನುಷ್ಯನ ಪರವಾಗಿ ಯೋಜನೆಗಳನ್ನು ರೂಪಿಸುತ್ತದೆ, ಅವನಿಗೆ ನ್ಯಾಯವನ್ನು ಒದಗಿಸಿಕೊಡುತ್ತದೆ. ಸಾಮಾಜಿಕ ನ್ಯಾಯದಲ್ಲಿ ಆ ಜಾತಿ ಬೇರೆ, ಈ ಜಾತಿ ಬೇರೆ, ಈ ಧರ್ಮ ಬೇರೆ ಎನ್ನುವಂಥದ್ದನ್ನು ಖಂಡಿತವಾಗಿಯೂ ಈ ಕರ್ನಾಟಕ ಸರ್ಕಾರ ಮಾಡಿರುವುದಿಲ್ಲ. ಯಾರಿಗೆ ಸಾಮಾಜಿಕ ನ್ಯಾಯ ದಕ್ಕಿಲ್ಲವೋ ಅವರೆಲ್ಲರಿಗೂ ಕೂಡ ಸಾಮಾಜಿಕ ನ್ಯಾಯ ಸಮಾನವಾಗಿ ಹಂಚಿಕೆ ಆಗಬೇಕು ಎನ್ನುವ ನಿಟ್ಟಿನಲ್ಲಿ ಈ ಸರ್ಕಾರ ಗಮನವಹಿಸಿದೆ ಎನ್ನುವುದನ್ನು ನಾನು ತಮ್ಮ ಮೂಲಕ ಈ ಸದನಕ್ಕೆ ತಿಳಿಸುತ್ತೇನೆ.

ಇನ್ನೊಂದು ವಿಷಯವನ್ನು ನಾನು ಹೇಳಬೇಕು, ಅದೇನೆಂದರೆ, ನಮ್ಮ ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮಹದಾಯಿ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಮಹದಾಯಿ ನೀರಿಗಾಗಿ ನಡೆಯುತ್ತಿರತಕ್ಕಂತಹ ಹೋರಾಟದ ಬಗ್ಗೆ ಹೇಳಿದ್ದಾರೆ. ಈ ಮಹದಾಯಿ ಯೋಜನೆಗಾಗಿ ನಮ್ಮ ರೈತರ ಹೋರಾಟ ನಿರಂತರವಾಗಿ ನಡೆಯುತ್ತಿದೆ. ಆ ಹೋರಾಟದ ಪ್ರತಿಫಲವಾಗಿ ಸರ್ಕಾರ ನಮ್ಮ ರೈತರ ಪರವಾಗಿ ಅವರ ಹಕ್ಕನ್ನು ಉಳಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿರುವಂಥದ್ದನ್ನು ಹೇಳಿದ್ದಾರೆ. ನನಗೆ ನೀರು ಎಂದು ಹೇಳಿದಾಗ ಒಂದು ಸಣ್ಣ ವಿಷಯ ನೆನಪಾಗುತ್ತದೆ. ನಾವು ಈ ಸದನದಲ್ಲಿಯೇ ಅವರ ಭಾವಚಿತ್ರ ಇಟ್ಟಿದ್ದೇವೆ. ಸರ್ ಎಂ.ವಿಶ್ವೇಶ್ವರಯ್ಯನವರು ನಮ್ಮನ್ನು ನೋಡುತ್ತಿದ್ದಾರೆ. ಶ್ರೀಯುತರು ಬಾಲ್ಯದಲ್ಲಿದ್ದಾಗ ಅವರ ತಾಯಿ ನಿತ್ಯವೂ ಊಟ ಮಾಡುವಾಗ ಅವರಿಗೆ ಕುಡಿಯುವುದಕ್ಕೆ ನೀರನ್ನು ಕೊಡುತ್ತಿರಲಿಲ್ಲವಂತೆ, ಆ ಮಹಾತಾಯಿ ತನ್ನ ಮಗನಿಗೆ ಮಜ್ಜಿಗೆಯನ್ನು ಕೊಡುತ್ತಿದ್ದರಂತೆ. ಶ್ರೀಯುತರು ಅಮ್ಮ ನೀನು ಏತಕ್ಕೆ ನನಗೆ ನೀರು ಕೊಡುವುದಿಲ್ಲ, ಯಾವಾಗಲೂ ಕುಡಿಯುವುದಕ್ಕೆ ಮಜ್ಜಿಗೆ ಕೊಡುತ್ತೀಯಾ? ಎಂದು ಯಾವಾಗಲೂ ಕೇಳುತ್ತಿದ್ದರಂತೆ.

(ಮುಂದುವರೆದಿದೆ...)

(67) 07.02.2018 5.30 ವೈಎಲ್-ಎಕೆ

ಡಾ: ಜಯಮಾಲ ರಾಮಚಂದ್ರ (ಮುಂದು):-

ನೀರನ್ನು ತೆಗೆದುಕೊಂಡು ಬರುವುದಕ್ಕೆ ನಮ್ಮ ಊರಿನಿಂದ ತುಂಬಾ ದೂರ ಹೋಗಬೇಕು ಎಂದು ಆ ತಾಯಿ ಮಗುವಿಗೆ ಹೇಳುತ್ತಾಳೆ. 'ನಮ್ಮ ಊರಿನಲ್ಲಿ ನೀರಿಗಾಗಿ ಬಹಳ ಕಷ್ಟ ಇದೆ. ಹಾಗಾಗಿ ಮಜ್ಜಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿಗುತ್ತದೆ, ನೀನು ಮಜ್ಜಿಗೆಯನ್ನು ಕುಡಿ' ಎಂದು ಹೇಳುತ್ತಾಳೆ. ಆದರೆ, ಸರ್.ಎಂ.ವಿಶ್ವೇಶ್ವರಯ್ಯನವರಿಗೆ ತನ್ನ ಸ್ಮೃತಿಯಲ್ಲಿ ತಾನು ಎಷ್ಟೇ ದೂರದಲ್ಲಿ ಕಲಿತು ಬಂದರೂ ಕೂಡ, ತನ್ನ ನಾಡಿಗಾಗಿ ತಾಯಿ ಪಟ್ಟ ಕಷ್ಟವನ್ನು ನೆನೆಸಿಕೊಂಡು, ನೀರಿಗೋಸ್ಕರ ಕನ್ನಂಬಾಡಿ ಅಣ್ಣೆಕಟ್ಟೆಯನ್ನು ನಿರ್ಮಾಣ ಮಾಡಿ ಕರ್ನಾಟಕದಲ್ಲಿ ವಾಸವಾಗಿರತಕ್ಕಂಥ ಮುಕ್ಕಾಲು ಭಾಗದ ಜನರು ಕಾವೇರಿ ನೀರನ್ನು ಕುಡಿಯುವಂತೆ ಮಾಡಿದ್ದಾರೆ. ಇವತ್ತು ಸಹ ಅವರು ದೇವಾತ ಸ್ವರೂಪಿಯಾಗಿ ನಮ್ಮ ಸ್ಮೃತಿಯಲ್ಲಿ ಉಳಿದುಕೊಂಡಿದ್ದಾರೆ. ಇವರನ್ನು ನಾನು ಏತಕ್ಕಾಗಿ ಉದಾಹರಣೆ ಕೊಡುತ್ತಿದ್ದೇನೆ ಎಂದರೆ, ನಮ್ಮಲ್ಲಿ ಬಹಳಷ್ಟು ಜನ ಇಂತಹ ಮಹಾನುಭಾವರಿದ್ದಾರೆ. ಇವತ್ತು ಮಹದಾಯಿ ಹೋರಾಟವನ್ನು ನೋಡುತ್ತಿರುವಾಗ ಮೊನ್ನೆ ಒಂದು ಸಣ್ಣ ಮಗುವಿನ ಬಾಯಿಯಲ್ಲಿ ಹೋರಾಟದ ಕಿಚ್ಚುಗಳನ್ನು ಆ ಮಗು ಹೇಳುತ್ತಿರುವುದನ್ನು ಕೇಳಿದಾಗ ನನ್ನ ಕಣ್ಣಿನಲ್ಲಿ ನೀರು ಬಂತು. ಒಂದು ತೊಟ್ಟು ಕುಡಿಯುವ ನೀರಿನ ಬಗ್ಗೆ ಆ ಮಗು ಕಿತ್ತೂರಿನ ಚೆನ್ನಮ್ಮನಾಗಿ ಹೋರಾಟ ಮಾಡುವ ರೀತಿ ಕೇಳುತ್ತಿತ್ತು. ನೀರು ಸಿಗುವವರೆಗೂ ನಿರಂತರ ಹೋರಾಟ ಮಾಡುತ್ತೇವೆ. ಅಲ್ಲಿ ಕುಳಿತಿರತಕ್ಕಂಥ ನೀವುಗಳೆಲ್ಲರೂ ನಮಗೆ ನೀರು ಕೊಡಿಸಿ ಎನ್ನುವ ಮಾತನ್ನು ಒಬ್ಬ ಪುಟ್ಟ ಬಾಲಕಿ ಹೇಳುತ್ತಾಳೆ. ಆದರೆ, ಆ ಬಾಲಕಿ ಮಾತನಾಡುವಾಗ ಆ ಮಾತು ಹೇಳಿ ಕೊಟ್ಟಂತಹ ಮಾತೆಂದು ಅನ್ನಿಸಲಿಲ್ಲ. ಏಕೆಂದರೆ, ನಾನು ಕೂಡ ಕಲಾವಿದೆ. ಎಷ್ಟೇ text ನ್ನು ಬಾಯಿ ಪಾಠ ಮಾಡಿಕೊಂಡರೂ ಅದು ಸ್ವಂತಿಕೆಯಿಂದ ಬಂದಿರುವುದು ನಮ್ಮ ಕಣ್ಣಿಗೆ ಕಾಣಿಸುತ್ತದೆ. 'ನೀವುಗಳೆಲ್ಲಾ ದೊಡ್ಡ ದೊಡ್ಡ ವ್ಯಕ್ತಿಗಳು ಯಾರು ಎಂಬುದು ನನಗೆ ಗೊತ್ತಿಲ್ಲ. ಆದರೆ ನಮ್ಮ ಮನೆಯವರೆಲ್ಲಾ ನೀರಿಗೋಸ್ಕರ ಕಷ್ಟ ಪಡುತ್ತಿದ್ದಾರೆ, ನಮಗೆ ನೀರು ಕೊಡಿಸಿ' ಎಂದು ಅಷ್ಟು ಚೆನ್ನಾಗಿ ಆ ಮಗು ಹೇಳುತ್ತದೆ.

ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರ ಕರ್ನಾಟಕ ಸರ್ಕಾರದ ಪರವಾಗಿ ನಿರಂತರ ರೈತರ ಹಕ್ಕುಗಳನ್ನು ಕೊಡಿಸಬೇಕು. ಆ ಭಾಗದ ಜನರಿಗೆ ನೀರನ್ನು ಕೊಡಿಸಬೇಕೆಂದು ಹೋರಾಟ ಮಾಡುತ್ತಿದೆ ಮತ್ತು ಸತತ ಪ್ರಯತ್ನದ ಬಗ್ಗೆ, ಸತತ ಪ್ರಯತ್ನ ಮಾಡುತ್ತಿರುವ ಬಗ್ಗೆ ಸಹ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಈ ಮೂಲಕ ಕೇಳಿಕೊಳ್ಳುವುದೇನೆಂದರೆ, ನಾವೆಲ್ಲರೂ ಸಹ ಪಕ್ಷವನ್ನು ಮರೆತು, ಬಹುಶಃ ಜನರ ಹೋರಾಟ ನಿಲ್ಲಿಸುವುದಕ್ಕಾಗಿ ಪ್ರಯತ್ನ ಮಾಡಬೇಕು. ಎಲ್ಲೋ ಒಂದು ಕಡೆ ನಮ್ಮೆಲ್ಲರೊಳಗೂ ಕೂಡ ಸರ್.ಎಂ.ವಿಶ್ವೇಶ್ವರಯ್ಯನವರಿದ್ದಾರೆ. ನಾವು ಸರ್.ಎಂ.ವಿಶ್ವೇಶ್ವರಯ್ಯನವರು ಕಟ್ಟಿಸಿಕೊಟ್ಟ ಅಣ್ಣೆಕಟ್ಟಿನಿಂದ ನೀರನ್ನು ಕುಡಿದಂಥವರು. ನಮಗೂ ಸಹ ಆ ಮಾನವೀಯತೆ, ಇನ್ನೊಬ್ಬರಿಗೆ ಸ್ಪಂಧಿಸುವ ಮನೋಭಾವ ಇದೆ. ಅದು ಎಲ್ಲರಲ್ಲಿಯೂ ಬರಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಸರ್ಕಾರ ನಡೆಸಿಕೊಂಡಂತಹ ರೀತಿ ಇದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ 2, 3 ವರ್ಷಗಳು ಬರಗಾಲದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಸ್ಥಿತಿಯನ್ನು ಎದುರಿಸಿತ್ತು. ಈ ಬರಗಾಲದ ಪರಿಸ್ಥಿತಿಯನ್ನು ಎದುರಿಸುವಾಗ, ಅದರಲ್ಲಿಯೂ ಬಯಲು ಸೀಮೆಯ ಜನರು ಬಹಳ ಕಷ್ಟ ಪಟ್ಟರು. ಮಕ್ಕಳು ಸೈಕಲ್‌ನಲ್ಲಿ ಕೊಡವನ್ನು ತೆಗೆದುಕೊಂಡು ಹೋಗಿ ಮರಳು ಬಾಚಿ ಕೆಳಗೆ ಎಲ್ಲಿ ನೀರು ಸಿಗುತ್ತದೆಯೋ ಎಂದು ನೀರಿನ ಸೆಲೆಯನ್ನು ಹುಡುಕಿದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಅಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ನೀರಿಗಾಗಿ ಯಾರ್‍ಯಾರಿಗೆ ಹಾಹಾಕಾರ ಇತ್ತೋ, ಅಂತಹ ಸಂದರ್ಭದಲ್ಲಿ ಒಂದೆರಡು ಒಳ್ಳೆಯ ಕೆಲಸಗಳನ್ನು ಕೈಗೊಳ್ಳುವ ಬಗ್ಗೆ ಕಾಂಗ್ರೆಸ್ ಸರ್ಕಾರ ತೆಗೆದುಕೊಂಡ ಕ್ರಮವನ್ನು ಮರೆಯುವುದಕ್ಕಾಗುವುದಿಲ್ಲ. ಮೊದಲನೆಯದಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪನೆ ಮಾಡುವುದು. ಇಡೀ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಇಂತಹ ಒಂದು ಮಹಾ ಯೋಜನೆಯನ್ನು ರೂಪಿಸುವುದು. 2.00 ಕೋಟಿ ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದಕ್ಕೆ 13,000 ಶುದ್ಧೀಕರಣ ನೀರಿನ ಘಟಕಗಳನ್ನು ಪ್ರಾರಂಭ ಮಾಡಿದೆ. ಅದರ ಜೊತೆಗೆ 54 ಲಕ್ಷ ಗ್ರಾಮೀಣ ಜನರನ್ನು ಒಳಗೊಂಡಂತೆ 4367 ಗ್ರಾಮೀಣ ಕುಟುಂಬಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕೆ 247 ಬಹು ಗ್ರಾಮ ಕುಡಿಯುವ ನೀರು ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ನಿಜಕ್ಕೂ ಯಾವುದೇ ಗ್ರಾಮಕ್ಕೆ ಹೋಗಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನೋಡಿದಾಗ ಆ ಗ್ರಾಮೀಣ ಜನರ ಕೃತಜ್ಞತಾ ಭಾವವನ್ನು ನಾವು ಅವರ ಕಣ್ಣಿನಲ್ಲಿ ಕಾಣುತ್ತೇವೆ. ನಾವು ಏನನ್ನು ಹೇಳುವುದೇ ಬೇಡ. ನೀರು ಚೆನ್ನಾಗಿ ಇದೆಯೇ ಎಂದು ಕೇಳಿದಾಗ ಅವರು ವ್ಯಕ್ತಪಡಿಸುವ ಭಾವನೆಗಳು ಆ ಗ್ರಾಮೀಣ ಜನರು ಮೊದಲು ಶುದ್ಧ ಕುಡಿಯುವ ನೀರಿಗಾಗಿ ಪಡುತ್ತಿದ್ದಂತಹ ಸಂಕಷ್ಟ ಪರಿಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಈ ಮೊದಲು ಮಕ್ಕಳಿಗೆ ಕಾಯಿಸಿ ಆರಿಸಿದ ನೀರನ್ನೇ ಕುಡಿಸಬೇಕಿತ್ತು. ಬಿಸಿ ನೀರು ಇಲ್ಲದೇ ಹೋದರೆ ಬೇರೆ ನೀರನ್ನು ಕುಡಿದಾಗ ಮಕ್ಕಳಿಗೆ ಕಾಯಿಲೆ ಬರುವುದು, ಆಸ್ಪತ್ರೆಗೆ ಅಲ್ಲೆಯುವುದೆಲ್ಲವನ್ನೂ ಸಹ ಇವತ್ತು ಶುದ್ಧ ಕುಡಿಯುವ ನೀರಿನ ಘಟಕದ ಮೂಲಕ ನಿಯಂತ್ರಣಕ್ಕೆ ತರುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಇದು ನಿಜವಾಗಿಯೂ ಸಹ ಬಹಳ ದೊಡ್ಡ ಯೋಜನೆಯಾಗಿದೆ. ಇದರ ಜೊತೆಗೆ ಬಹಳ ಒಳ್ಳೆಯ ಕೆಲಸಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕೃಷಿ ಇಲಾಖೆ ಎರಡು ಇಲಾಖೆ ಸೇರಿ ಒಟ್ಟಿಗೆಯೇ ಒಳ್ಳೆಯ ಕೆಲಸವನ್ನು ಮಾಡಿದೆ. ಗ್ರಾಮೀಣಾಭಿವೃದ್ಧಿ ಇಲಾಖೆಯು ನೀರಿನ ಘಟಕವನ್ನು ಸ್ಥಾಪನೆ ಮಾಡುವುದು ಒಂದು ಕಡೆಯಾದರೆ, ಕೃಷಿ ಇಲಾಖೆ 'ಕೃಷಿ ಭಾಗ್ಯ ಯೋಜನೆ' ಮೂಲಕ 'ಕೃಷಿ ಹೊಂಡ'ಗಳನ್ನು ತೋಡಿಸುವ ಮೂಲಕ ಮತ್ತು 1 ಲಕ್ಷ 90 ಸಾವಿರ 'ಮಳೆ ಕೊಯ್ಲು' ಸ್ಥಾಪನೆ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿ, ರೈತರ ಬೆಳೆಗಳಿಗೂ ಸಹ ಇಳುವರಿ ಜಾಸ್ತಿ ಮಾಡುವಂತೆ ಮಾಡಿದೆ. ಕೃಷಿ ಹೊಂಡಗಳ ಸಂಖ್ಯೆ ಹೆಚ್ಚಾದಂತೆ ಅಂತರ್ಜಲದ ಮಟ್ಟ ಕೂಡ ಹೆಚ್ಚಾಗಿದ್ದು, ಇನ್ನೊಂದು ಕಡೆ ಇಳುವರಿ ಕೂಡ ಹೆಚ್ಚಾಗಿರುವುದರ ಬಗ್ಗೆ ಹಲವಾರು ರೈತರು ಮಾತನಾಡಿರುವುದನ್ನು ನಾನು ಕೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಗೆ ಬರಗಾಲ ಬಂದ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಆ ಭಾಗದ ಜನರಿಗೆ ಪ್ರತಿಯೊಬ್ಬರಿಗೂ ನೀರಿಗೆ ತೊಂದರೆಯಾಗಬಾರದೆಂದು ಟ್ಯಾಂಕರ್‌ಗಳ ಮೂಲಕ ನೀರನ್ನು ಸರಬರಾಜು ಮಾಡಿರುವುದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಇದು ಒಂದು ಜನಪರವಾದ ಸರ್ಕಾರ. ಸಂಕಷ್ಟ ಬರುವುದು ಸಹಜ. ಆದರೆ ಸಂಕಷ್ಟ ಬಂದಾಗ ಸರ್ಕಾರ ಜನರ ಬಗ್ಗೆ ಹೇಗೆ ಆಲೋಚನೆ ಮಾಡುತ್ತದೆ ಎಂಬುದು ಮುಖ್ಯ. ಜನರಿಗೆ ಸಂಕಷ್ಟ ಬಂದಾಗ ಅದಕ್ಕೆ ಅದನ್ನು ಸ್ಪಂಧಿಸುವುದಕ್ಕೆ, ಎದುರಿಸುವುದಕ್ಕೆ, ನಿವಾರಿಸುವುದಕ್ಕೆ ಸರ್ಕಾರ ತೆಗೆದುಕೊಂಡ ಬಹು ದೊಡ್ಡ ಕ್ರಮವಾಗಿದೆ. ಇದನ್ನು ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದಲ್ಲಿಯೂ ಸೂಚಿಸಿದ್ದಾರೆ.

ಹಾಗೆಯೇ ಕೃಷಿ ಯೋಜನೆಗೆ ಸಂಬಂಧಿಸಿದಂತೆ ತುಂಬಾ ಖುಷಿಯಾಗುವ ವಿಚಾರವೇನೆಂದರೆ, ಒಂದು ಕಡೆ ರೈತರ ಸಾಲವನ್ನು ಮನ್ನಾ ಮಾಡುತ್ತದೆ. ಇನ್ನೊಂದು ಕಡೆ ಹೊಸ ರೈತರಿಗೆ ಸಾಲವನ್ನು ಒದಗಿಸುತ್ತಿರುವುದು ರೈತರ ಪರ ಸರ್ಕಾರ ನಿಂತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಅಂದರೆ, ರೈತರ ಸಾಲವನ್ನು ಮನ್ನಾ ಮಾಡುವುದು, ರೈತರ ಪರವಾಗಿ ನಿಲ್ಲುವಂಥದ್ದು, ರೈತರಿಗೆ ನಾವು ಇದ್ದೇವೆ ಎಂದು ಹೇಳುವುದು, ಆ ಒಂದು ಸ್ಪಂದನೆಯನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ನಡೆಯಿಂದ ತೋರಿಸಿಕೊಟ್ಟಿದ್ದಾರೆ. ಸಾಲ ಮನ್ನಾ ಮಾಡುವ ಜೊತೆಗೆ ಈ ವರ್ಷ 6.74 ಹೊಸ ರೈತರಿಗೆ 5,352 ಕೋಟಿ ರೂಪಾಯಿಗಳ ಸಾಲವನ್ನು ನೀಡಲಾಗಿದೆ. ಇವೆಲ್ಲವನ್ನು ಪಾರದರ್ಶಕವಾಗಿ ಅವರವರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ಮಾಡಿಲ್ಲವೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಇಂತಹ ಒಂದು ವಿಷಯದ ಬಗ್ಗೆ ಘನತೆವೆತ್ತ ರಾಜ್ಯಪಾಲರು ತಮ್ಮ ಭಾಷಣದ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಇದೆಲ್ಲದಕ್ಕಿಂತ ಹೆಚ್ಚಾಗಿ ಆರೋಗ್ಯ ಇಲಾಖೆ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡಿದೆ. ಆರೋಗ್ಯ ಇಲಾಖೆಯ ಮುಖಾಂತರ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಡಯಾಲಿಸಿಸ್ ಕೇಂದ್ರವನ್ನು ಸ್ಥಾಪನೆ ಮಾಡಿರುವುದಾಗಿದೆ. ಪ್ರಾಣ ಎಂಬುದು ಎಲ್ಲರಿಗೂ ಒಂದೇ. ಅದು ಬಡವರದಾಗಿರಬಹುದು ಅಥವಾ ಶ್ರೀಮಂತರದಾಗಿರಬಹುದು. ಆ ಪ್ರಾಣವನ್ನು ಉಳಿಸಿಕೊಟ್ಟರೆ ಆ ವ್ಯಕ್ತಿ ಏನಾದರೂ ಸಾಧನೆ ಮಾಡಬಹುದು. ಕಾಂಗ್ರೆಸ್ ಸರ್ಕಾರ ಆ ಪ್ರಾಣವನ್ನು ಉಳಿಸುವಲ್ಲಿ ಮತ್ತು ಆ ಪ್ರಾಣಕ್ಕೆ ಬೆಲೆ ಕೊಟ್ಟಿರುವುದನ್ನು ಕಾಣಬಹುದು. ಯಾವುದೇ ಖಾಸಗಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಪರೀಕ್ಷೆ ಮಾಡಿಸಬೇಕೆಂದರೆ ಒಂದು ಸೈಕಲ್‌ಗೆ 1200 ರೂಪಾಯಿಗಳನ್ನು ಕೊಡ ಬೇಕಾಗುತ್ತಿತ್ತು. ಆದರೆ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಯಾರೇ ಬಂದರೂ ಸಹ ಉಚಿತವಾಗಿ ಲಕ್ಷಾಂತರ ಜನರ ಜೀವವನ್ನು ಉಳಿಸುವಂಥ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. ಈ ಯೋಜನೆಯ ಉದ್ದೇಶ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಐ.ಸಿ.ಯು. ಗಳನ್ನು ಪ್ರಾರಂಭ ಮಾಡಿರುವುದು. ಐ.ಸಿ.ಯು ಮತ್ತು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಯಾಲಿಸಿಸ್ ಇವೆರಡು ಒಬ್ಬ ವ್ಯಕ್ತಿಯ ಬದುಕಿಗೆ ಸಂಬಂಧಿಸಿದ್ದಾಗಿದೆ. ಆ ಬಡ ವ್ಯಕ್ತಿ ಎಲ್ಲಿಯೂ ಸುತ್ತಾಡುವುದು ಬೇಡ, ಆರೋಗ್ಯವಂತನಾಗಿರಲಿ, ಆಸ್ಪತ್ರೆಗೆ ಹೋದಂತಹ ವ್ಯಕ್ತಿ ಆರೋಗ್ಯವಂತನಾಗಿ ಮತ್ತೆ ವಾಪಸ್ಸು ಬರಲಿ ಎಂದು ಸರ್ಕಾರ ಇಂತಹ ಯೋಜನೆಯನ್ನು ರೂಪಿಸಿದೆ.

(ಮುಂದು) . . .

(068)/07.02.2018/05.40/ಎಸ್‌ಕೆ-ಎಕೆ

(ವೈಸ್ ಛೇರ್ಮನ್ ಉಪಸ್ಥಿತಿ)

**ಡಾ॥ ಜಯಮಾಲಾ ರಾಮಚಂದ್ರ (ಮುಂದು):-** ಮಾನ್ಯ ಸಭಾಪತಿಯವರೇ, ಭಾರತಕ್ಕೆ ಇನ್ನೊಂದು ಮಾದರಿಯಾದಂತಹ ಯೋಜನೆಯನ್ನು ಕೊಟ್ಟಿರುವಂತಹದ್ದು ಸಾರ್ವತ್ರಿಕ ಆರೋಗ್ಯ ರಕ್ಷಣೆ ಯೋಜನೆ. ಎಲ್ಲಾ ಆರೋಗ್ಯ ಯೋಜನೆಯನ್ನು ಒಂದು ಸೂರಿನಡಿಯಲ್ಲಿ ತಂದು ಕೊಟ್ಟಂತಹ ಯೋಜನೆ ಇದಾಗಿದೆ. ಇವತ್ತು ಇದು ನಿಜಕ್ಕೂ ಜನಪರವಾದಂತಹ ಯೋಜನೆಯಾಗಿದೆ. ದೇಶದಲ್ಲಿಯೇ ಇದು ಪ್ರಥಮ ಇರಬಹುದು. ಪ್ರತಿಯೊಬ್ಬರಿಗೂ ಕೂಡ ಒಂದು ಚಿಕಿತ್ಸೆ ಸೇವೆಯನ್ನು ಪಡೆಯಬೇಕೆಂದರೆ, ಒಂದೇ ಕಡೆ ಅದೂ ಏಕಕಾಲದಲ್ಲಿ ಸಾರ್ವತ್ರಿಕವಾಗಿ ನಾವು ಪಡೆಯಬಹುದೆಂಬಂತಹ ಯೋಜನೆಯನ್ನು ರೂಪಿಸಿ, ಈ ರಾಜ್ಯದ ಜನರ ಬಗ್ಗೆ ನಾವು ಒಂದು ಉತ್ತಮವಾದಂತಹ concern ನ್ನು ಹೊಂದಿದ್ದೇವೆಂಬುದನ್ನು ಸರ್ಕಾರ ತೋರಿಸಿಕೊಟ್ಟಿದೆ. ಶಿಶು ಮರಣ ಮತ್ತು ಮಾತೃ ಮರಣದ ಬಗ್ಗೆಯೂ ಕೂಡ ಈ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮದ ಬಗ್ಗೆ ನನಗೆ ಅತ್ಯಂತ ಗೌರವ ಇದೆ. ಶಿಶು ಮರಣಗಳು ಹೆಚ್ಚಾಗುತ್ತಿದ್ದವು. ಹೆರಿಗೆಯಾಗುವ ಸಂದರ್ಭದಲ್ಲಿ ತಾಯಿ ಮರಣ ಹೊಂದುತ್ತಿದ್ದರು. ಆಸ್ಪತ್ರೆಯಲ್ಲಿ ವೈದ್ಯರ ಹುದ್ದೆ ಭರ್ತಿಯಾಗಿರಲಿಲ್ಲ. ಇವತ್ತು ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡಿದರು. ಜನೌಷಧ ಕೇಂದ್ರಗಳನ್ನು ತೆರೆದರು ಮತ್ತು ಕಡ್ಡಾಯವಾಗಿ Ambulance ವ್ಯವಸ್ಥೆಯನ್ನು ಮಾಡಿಕೊಡುವ ಮೂಲಕ ಇವತ್ತಿನ ಪರಿಸರದಲ್ಲಿ ಈ ಎರಡೂ ಅಂದರೆ ಶಿಶುಮರಣ ಮತ್ತು ಮಾತೃ ಮರಣವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸರ್ಕಾರ ಮಹಿಳೆ ಮತ್ತು ಮಕ್ಕಳ ಪರ ಇದೆ ಎಂಬುದನ್ನು ತೋರಿಸಿಕೊಟ್ಟಿದೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಯುವ ಜನಾಂಗದಲ್ಲಿ ಯುವಕರು ಓದಿದರೆ ಮಾತ್ರ ಸಾಲದು. ಓದಿ ಬಂದ ಯುವಕರಿಗೆ ಉದ್ಯೋಗವನ್ನು ಕೂಡ ಕೊಡಬೇಕಲ್ಲ. ಓದಿ ಬಂದ ಯುವಕರಿಗೆ ಉದ್ಯೋಗ ಕೊಡುವುದಕ್ಕಾಗಿ ಮುಖ್ಯಮಂತ್ರಿಗಳ ಯೋಜನಾ ಕೌಶಲ್ಯ ಯೋಜನೆಯನ್ನು ರೂಪಿಸಿದರು. ಈ ಕೌಶಲ್ಯ ಯೋಜನೆಯ ಮೂಲಕ ಇವತ್ತು ಒಂದು ಲಕ್ಷ ಇಪ್ಪತ್ತೂರು ಸಾವಿರ ಯುವಕರಿಗೆ ತರಬೇತಿಯನ್ನು ಕೊಟ್ಟಿದ್ದಾರೆ. ಒಂದು ಲಕ್ಷ ಇಪ್ಪತ್ತೂರು ಸಾವಿರದ ಜನರ ಪೈಕಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಪ್ಪತ್ನಾಲ್ಕು ಸಾವಿರದ ನಾಲ್ಕು ನೂರ ಎಪ್ಪತ್ತಾರು ಆಭ್ಯರ್ಥಿಗಳಿಗೆ ಈಗಾಗಲೇ ಸರ್ಕಾರ ಉದ್ಯೋಗವನ್ನು ದೊರಕಿಸಿ ಕೊಟ್ಟಿದೆ.

ಮಾನ್ಯ ಸಭಾಪತಿಯವರೇ, 'ಒಂದೊಂದು ಹನಿಗೂಡಿದರೆ ಹಳ್ಳ' ಎಂಬ ಗಾದೆಯಂತೆ, ಒಂದೊಂದು ಇಲಾಖೆಯಿಂದ ಹಾಗೂ ಪ್ರತಿ ಕಡೆಗಳಲ್ಲಿಯೂ ಕೂಡ ಉದ್ಯೋಗಗಳು ಸಿಕ್ಕಿದರೆ, ನಮ್ಮಲ್ಲಿರುವ ಹೊಸ ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವುದರಲ್ಲಿ ಈ ಸರ್ಕಾರ ಎಷ್ಟು ಬದ್ಧವಾಗಿದೆ ಎಂಬುದನ್ನು ನಮಗೆ ತೋರಿಸಿಕೊಟ್ಟಿದೆ. ಇಂದಿರಾ ಕ್ಯಾಂಟೀನ್ ಬಗ್ಗೆ ನಮ್ಮ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಅ ಇಂದಿರಾ ಕ್ಯಾಂಟೀನ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇಂದಿರಾ ಕ್ಯಾಂಟೀನ್ ಅತ್ಯಂತ ಜನಪ್ರಿಯ ಮತ್ತು ಜನರಿಗೆ ಬೇಕಾಗಿರುವಂತಹ, ಅದರಲ್ಲಿಯೂ ಕೂಡ ಅದು ಬಡವರು ಮಾತ್ರ ಅಲ್ಲ, ನಾನೂ ಕೂಡ ಅಲ್ಲಿಗೆ ಹೋಗಿ ತಿಂದಿದ್ದೇನೆ. ಬಹಳ ಸ್ವಚ್ಛವಾದಂತಹ ನಿಜಕ್ಕೂ ಮನುಷ್ಯನಿಗೆ ಆರೋಗ್ಯಪೂರ್ಣವಾದಂತಹ ತಿಂಡಿ, ಊಟ ಕೈಗೆಟುಕುವಂತಹ ಬೆಲೆಯಲ್ಲಿ ಆ ಕ್ಯಾಂಟೀನ್ ಸಿಗುತ್ತದೆ. ಅದರಲ್ಲೂ ಕೂಡ ಸುಮಾರು 247 ಕ್ಯಾಂಟೀನ್‌ನ್ನು ಈಗಾಗಲೇ ತೆರೆದಿದ್ದಾರೆ. ನನ್ನ ಅನಿಸಿಕೆ ಪ್ರಕಾರ ಕರ್ನಾಟಕ ರಾಜ್ಯದಲ್ಲೆಲ್ಲಾ ಈ ಕ್ಯಾಂಟೀನ್ ಬರಬೇಕು ಅನಿಸುತ್ತದೆ. ಪ್ರತಿ ತಾಲ್ಲೂಕುಗಳಲ್ಲಿ, ಪ್ರತಿ ಆಸ್ಪತ್ರೆಗಳಲ್ಲಿ ಹಾಗೂ ಹೋರಾಟ ನಡೆಯುವಂತಹ ಜಾಗಗಳಲ್ಲಿ ಇಂತಹ ಒಂದು ಕ್ಯಾಂಟೀನ್‌ಗಳು ಇರಬೇಕು, ಏಕೆ ಎಂದು ಹೇಳಿದರೆ, ಯಾವ ಹೊತ್ತಿನಲ್ಲಿಯೂ ಕೂಡ ಊಟ ಸಿಗುತ್ತೆ ಎಂದು ಹೇಳಿದರೆ ಜನರು ಹಸಿದ ಹೊಟ್ಟೆಗೆ ಅನ್ನ ನೀಡಿ ಸರ್ಕಾರವನ್ನು ನೆನಪಿಸಿಕೊಳ್ಳುತ್ತಾರೆ. ಮನುಷ್ಯನಿಗೆ ಎಷ್ಟು ಕೊಟ್ಟರೂ ಸಾಲದು, ಆದರೆ ಈ ಹಸಿದ ಹೊಟ್ಟೆಗೆ ಒಂದು ಹಿಡಿ ಅನ್ನ ಹಾಕಿದಾಗ, ಅದು ತೃಪ್ತಿಯಾಗುತ್ತದೆ. ಅದರಿಂದಾಗಿ, ಹಸಿದವರಿಗೆ ಊಟ ಕೊಡುವುದಕ್ಕಿಂತ ದೊಡ್ಡ ಕೆಲಸ ಇನ್ನ್ಯಾವುದು ಇಲ್ಲ. ಹಸಿವಿನಿಂದ ಬಳಲುವ ಜನರಿಗೆ ಈ ಸರ್ಕಾರ ಊಟ ಕೊಡುವಂತಹ 'ಅನ್ನಪೂರ್ಣ ಯೋಜನೆ' ಏನು ಇದೆ, ಇದು ನಿಜಕ್ಕೂ ನಿಸ್ವಾರ್ಥತೆಯಿಂದ ರೂಪಿಸಿರುವಂತಹ ಯೋಜನೆಯಾಗಿದ್ದು, ಅತ್ಯಂತ ಯಶಸ್ವಿ ಯೋಜನೆಯಾಗಿದೆ. ಈ ಯೋಜನೆಯನ್ನು ಜಾರಿಗೆ ತಂದು ಬಹಳ ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಿದೆ.

ಮಾನ್ಯ ಸಭಾಪತಿಯವರೇ, ವಸತಿ ಯೋಜನೆ, ಕ್ಷೀರ ಭಾಗ್ಯ ಇನ್ನೂ ಹಲವಾರು ಭಾಗ್ಯಗಳ ಬಗ್ಗೆ ಈಗಾಗಲೇ ನಮ್ಮ ಸಹೋದರರು ಮಾತನಾಡಿದ್ದಾರೆ. ನಾನು ಒಂದು ಮಾತನ್ನು ಹೇಳಲೇಬೇಕು. ಬರಗಾಲ ಬಂದಾಗ, ಅವರು ಬದುಕುವುದಕ್ಕೆ ಉದ್ಯೋಗವೇ ಸಿಗದೇ ಇದ್ದಾಗ, ಏನು ಮಾಡಬೇಕು ಎಂಬುದು ತೋಚದೇ ಇದ್ದಾಗ 'ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನಾ" ಅಡಿಯಲ್ಲಿ ಒಂಭತ್ತು ಕೋಟಿ ಹದಿನೈದು ಲಕ್ಷ ಮಾನವ ದಿನಗಳನ್ನು ಇವತ್ತು ಸೃಷ್ಟಿಸಿ ಕೊಟ್ಟಿತ್ತು. ಇದನ್ನು ಮಾತ್ರ ನಾನು ನಿಜಕ್ಕೂ ಹೇಳುತ್ತೇನೆ. ಇದು ನಿರಂತರವಾಗಿ ನಡೆಯಲೇ ಬೇಕು. ಯಾರು ಕಷ್ಟದಲ್ಲಿದ್ದಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರಿಗೆ ಧಕ್ಕುವಂತಹದು ಮತ್ತು ಇದರ ಮೂಲಕ ಎರಡು ಕೆಲಸಗಳು ನಡೆದಿದೆ. ಒಂದು ಕಡೆ ಅವರಿಗೆ ಕೆಲಸವೂ ಸಿಕ್ಕಿದೆ. ಇನ್ನೊಂದು ಕಡೆ ಸರ್ಕಾರದ ಎಲ್ಲಾ ಆಸ್ತಿಗಳು ಕೂಡ ಗಟ್ಟಿಯಾಗಿದೆ. ಅದು ಚರಂಡಿ ಕಟ್ಟುವುದು ಇರಬಹುದು, ಗಿಡ-ಸಸಿಗಳನ್ನು ನೆಡುವುದು ಇರಬಹುದು, ಚೆಕ್ ಡ್ಯಾಂಗಳನ್ನು ಕಟ್ಟುವುದು ಇರಬಹುದು ಅಥವಾ ಹೂಳೆತ್ತುವ ಕೆಲಸ ಇರಬಹುದು. ಎಲ್ಲಾ ಕೆಲಸವನ್ನು ಕೂಡ ಈ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಒಂಭತ್ತು ಕೋಟಿ ಹದಿನೈದು ಲಕ್ಷ ಜನರಿಗೆ ಇದು ಒಂದು ಸಂಜೀವಿನಿ ತರಹ ಜೀವವನ್ನು ಕೊಟ್ಟಿರುವಂತಹದಾಗಿದೆ. ಸಂಕಷ್ಟದಲ್ಲಿರುವ ಜನರನ್ನು ಒಗ್ಗೂಡಿಸಿ ಇಂತಹ ಮಹತ್ತರವಾದ ಯೋಜನೆಯನ್ನು ನಮ್ಮ ಸರ್ಕಾರ ಕೈಗೆತ್ತಿಕೊಳ್ಳುವಂತಹ ಈ ಕೆಲಸವನ್ನು ಮಾಡಿದೆ. ನನಗೆ ಅತ್ಯಂತ ಹೆಮ್ಮೆಯಾಗುತ್ತದೆ. ಇಂತಹ ಯೋಜನೆಯನ್ನು ಜಾರಿಗೆ ತರಲು ಒಂದು ಮಾತೃ ಹೃದಯ ಬೇಕು ಎಂದು ಹೇಳುತ್ತಾರಲ್ಲ, ಆ ರೀತಿಯಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ಧರಾಮಯ್ಯನವರ ಹೃದಯದೊಳಗೆ ಆ ರೀತಿಯಾದ ಮಾತೃ ಭಾವನೆ ಇರುವುದರಿಂದ ಇಂತಹ ಯೋಜನೆಗಳನ್ನು ರೂಪಿಸುವುದಕ್ಕೆ ಸಾಧ್ಯವಾಯಿತು ಎಂದು ನಾನು ಭಾವಿಸಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಮ್ಮ ಸಹೋದರರು 2013 ರಲ್ಲಿ ಕರ್ನಾಟಕ ಸರ್ಕಾರ ಬಂಡವಾಳ ಹೂಡಿಕೆಯಲ್ಲಿ ಹನ್ನೊಂದನೇ ಸ್ಥಾನದಲ್ಲಿತ್ತು. ಆದರೆ ನಮ್ಮ ಸರ್ಕಾರ ಒಂದನೇ ಸ್ಥಾನಕ್ಕೆ ಕೂರಿಸಿತ್ತು. ನನಗೆ ಹೆಮ್ಮೆ. ಹನ್ನೊಂದನೇ ಸ್ಥಾನದಿಂದ ಒಂದನೇ ಸ್ಥಾನಕ್ಕೆ ಬಂದಿರುವಂತಹ ನಮ್ಮ ಸರ್ಕಾರ ಇವತ್ತು ಎಷ್ಟೋ ಜನರಿಗೆ 13.36 ಸಾವಿರ ಉದ್ಯೋಗಗಳನ್ನು ಸೃಷ್ಟಿ ಮಾಡಿಕೊಟ್ಟಿದೆ. ಹೆಚ್ಚು ಬಂಡವಾಳಗಳು ಬಂದಾಗ ನಮ್ಮಲ್ಲಿರುವಂತಹ ಲಕ್ಷಾಂತರ ಜನರಿಗೆ ಅದು ಉದ್ಯೋಗವನ್ನು ಸೃಷ್ಟಿ ಮಾಡಿಕೊಟ್ಟಿದೆ. ಅದರಿಂದಾಗಿ ಇಂತಹ ಯೋಜನೆಗಳನ್ನು ತರುವ ಮೂಲಕ ನಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸ ಮತ್ತು ಒಳ್ಳೆಯ ಆಲೋಚನೆಯನ್ನು ಮಾಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರತಿ ಸಲವೂ ಕರೆಂಟ್ ಇಲ್ಲದೇ ಇದ್ದಾಗ, ಏನು ಮಾಡುವುದು, ಮಕ್ಕಳಿಗೆ ಪರೀಕ್ಷೆ ಬಂತು, ಮುಕ್ಕಳಿಗೆ ಓದುವುದಕ್ಕೆ ಏನು ಮಾಡಬೇಕು? ಇನ್ನು ಏನು ವಿದ್ಯುತ್ ಕಡಿತ ಮಾಡಿಬಿಡುತ್ತಾರೆ. ಈ ರೀತಿಯಾದಂತಹ ಆಲೋಚನೆ ಸಾಮಾನ್ಯ ಜನರಿಗೆ  ಬರುತ್ತದೆ. ಒಂದು ಯೋಚನೆ ಮಾಡಿದರೆ, ಇವತ್ತಿಗೂ ಕೂಡ  ಈ ಸಮಸ್ಯೆಯನ್ನು ನಿವಾರಿಸುವ ನಿಟ್ಟಿನಲ್ಲಿ ಈ ಸರ್ಕಾರ ಒಂದು ದಿನವೂ ಕೂಡ ಅಂತಹ ಕೆಲಸವನ್ನು ಮಾಡಿಲ್ಲ.  ಪಾವಗಡದಲ್ಲಿ  ಎರಡು ಸಾವಿರ ಎಕರೆಗಳಷ್ಟು ಸೋಲಾರ್ ಪಾರ್ಕ್ ಸ್ಥಾಪನೆ ಮಾಡಿದ್ದಾರೆ. ಈ ಸೋಲಾರ್ ಪಾರ್ಕ್‌ನ ಮೂಲಕ ಇವತ್ತು 500 ಮೆಗಾವ್ಯಾಟ್ ಈಗಾಗಲೇ ಕಾರ್ಯ ಪ್ರಾರಂಭವಾಗಿದೆ.  ಮುಂದಿನ ದಿನಗಳಲ್ಲಿ ಬಹುಶಃ ಈ ಎಲ್ಲಾ ವಿದ್ಯುತ್ ನಮ್ಮ ಕೈಗೆ ಸಿಕ್ಕಿದರೆ ನಾವು ಹೊರಗಡೆಯಿಂದ ವಿದ್ಯುತ್ ಅನ್ನು ಕೊಂಡುಕೊಳ್ಳುವಂಥ ಪ್ರಶ್ನೆ ಉದ್ಭವಿಸುವುದಿಲ್ಲ.  ದಿನದ ಇಪ್ಪತ್ನಾಲ್ಕು ಗಂಟೆ ನಾವು ಮುಂಬೈ ತರಹ ಅಥವಾ ಅಮೆರಿಕಾ ತರಹ ಇಪ್ಪತ್ತು ವರ್ಷಗಳಿಗೊಂದು ಸಲ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

shutdown ಮಾಡಬೇಕಾದ ಸ್ಥಿತಿಗೆ ನಮ್ಮ ರಾಜ್ಯ ತಲುಪಬಹುದು. ಒಂದು ಹತ್ತು ವರ್ಷಗಳ ನಂತರ ನಮ್ಮಲ್ಲೂ ಕೂಡ ಆ ತರಹದ ಒಂದು ಸುದಿನ ಬರಬಹುದೆಂಬ ಆಸೆ ನಮಗೂ ಕೂಡ ಮೂಡಿದೆ. ನಮ್ಮ ರಾಜ್ಯಕ್ಕೆ ಬೃಹತ್ ಯೋಜನೆಗಳನ್ನು ತರುವ ಮೂಲಕ ಇವತ್ತು ಅತ್ಯಂತ ಒಳ್ಳೆಯ ಕೆಲಸವನ್ನು ಮಾಡಿದೆ. ಇಡೀ ಪ್ರಪಂಚ ನಮ್ಮ ಭಾರತದ ಕರ್ನಾಟಕವನ್ನು ನೋಡುತ್ತಾ ಇದೆ. ಕರ್ನಾಟಕದಲ್ಲಿ ಇಂತಹ ಒಂದು ಅಭಿವೃದ್ಧಿ ಕೆಲಸಗಳು ನಡೆಯುತ್ತಿದೆಂಬುದರ ಬಗ್ಗೆ ಗಮನಹರಿಸುವಂತಹ ಕೆಲಸವನ್ನು ಕಳೆದ ಐದು ವರ್ಷಗಳಿಂದ ಕರ್ನಾಟಕ ಸರ್ಕಾರದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಮಾಡಿದೆ. ಈ ಸರ್ಕಾರ ಜನಪರವಾಗಿ ನಿಂತು ಯಾವುದೇ ಒಂದು ಕಪ್ಪು ಚುಕ್ಕೆ ಇಲ್ಲದೇ, ಯಾವುದೇ ವಿವಾದಗಳಿಲ್ಲದೇ, ಅಧಿಕಾರವನ್ನು ನಡೆಸಿಕೊಂಡು ಬಂದಿದೆ. ಪರ-ವಿರೋಧಗಳು ಏನೇ ಇರಬಹುದು. ಆದರೆ ಅದು ಅವರವರ ಆತ್ಮಕ್ಕೆ ಗೊತ್ತಿರುತ್ತದೆ. ಅವರವರು ಮಾಡಿರುವಂತಹ ಕೆಲಸದ ಮೂಲಕ ನಾನು ಜನಪರವಾಗಿ ನಿಂತಿದ್ದೀನಿ, ಜನಕ್ಕೋಸ್ಕರ ಕೆಲಸ ಮಾಡಿದ್ದೇನೆಂಬುದು ಅವರ ಆತ್ಮಕ್ಕೆ ಗೊತ್ತಿರುತ್ತದೆ. ಇವತ್ತು ಈ ಸರ್ಕಾರ ಜನರಿಗಾಗಿ ಜನಪರವಾದ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಬಹುಶಃ ಮನುಷ್ಯ ಒಂದು ಸಲ ಕೆಂಡದಲ್ಲಿ ಕೊಂಡ ಹಾಯ್ತಾರೆ ಅಂತಾ ಹೇಳುತ್ತಾರೆ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೆಂಡದಲ್ಲಿ ಕುಳಿತುಕೊಂಡೇ ಐದು ವರ್ಷಗಳ ಆಡಳಿತವನ್ನು ಮುಗಿಸಿದರು. ಕೆಂಡದಲ್ಲೇ ಕುಳಿತುಕೊಂಡು ಅಷ್ಟು ಪರಿಶುದ್ಧವಾಗಿ ಆಡಳಿತವನ್ನು ನಡೆಸಿದ್ದಾರೆ. ಅಂದರೆ ಕೆಂಡ ಎನ್ನುವಂತಹದ್ದು ಪರಿಶುದ್ಧ ಅಷ್ಟು ಪರಿಶುದ್ಧವಾಗಿ ಈ ಸರ್ಕಾರ ಒಳ್ಳೆಯ ಸರ್ಕಾರವನ್ನು ನೀಡಿದೆ. ಜನರಿಗಾಗಿ, ಜನರ ಪರವಾಗಿ, ಜನರ ಪ್ರೀತಿಯನ್ನು ಗಳಿಸುವಲ್ಲಿ, ಜನರ ಋಣ ತೀರಿಸುವಲ್ಲಿ ಈ ಸರ್ಕಾರ ಅತ್ಯಂತ ಒಳ್ಳೆಯ ಕೆಲಸವನ್ನು ಮಾಡಿದೆ. ಇದನ್ನು ಗಮನಿಸಿರತಕ್ಕಂತಹ ಗೌರವಾನ್ವಿತ ಘನತೆವೆತ್ತ ರಾಜ್ಯಪಾಲರು, ಅವರ ಭಾಷಣದ ಮೂಲಕ ನಮಗೆ ಈ ಎಲ್ಲಾ ಪ್ರಮುಖ ಅಂಶಗಳನ್ನು ದಯಪಾಲಿಸಿದ್ದಾರೆ. ಈ ದಯಪಾಲಿಸಿರುವಂತಹ ಭಾಷಣಕ್ಕೆ ವಂದನೆಯನ್ನು ಅರ್ಪಿಸುವ ಮೂಲಕ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಯನ್ನು ಅರ್ಪಿಸುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ನಾನು ಆಗಲೇ ಮಧ್ಯೆ ಬಾಯಿ ಹಾಕಬೇಕಾಗಿತ್ತು. ಅವರ ಮಾತಿನ ವೇಗಕ್ಕೆ ಕಡಿವಾಣ ಆಗಬಾರದೆಂದು, ಅವರು ಪೂರ್ಣವಾಗಿ ಮಾತನಾಡಲಿ ಎಂದು ಸುಮ್ಮನಿದ್ದೆ. ಒಂದು ಮಾಹಿತಿ ನೀಡುತ್ತೇನೆ. ಕನ್ನಂಬಾಡಿ ಕಟ್ಟೆಯ ಬಗ್ಗೆ ಎರಡು ಬಾರಿ ನಮ್ಮ ಸರ್ ಎಂ.ವಿಶ್ವೇಶ್ವರಯ್ಯನವರನ್ನು ನೆನೆಪಿಸಿಕೊಂಡಿರಿ. ಅದನ್ನು ನಾನು ಒಪ್ಪುತ್ತೇನೆ. ಅದನ್ನೂ ಮೀರಿ ಒಂದು ಆಳವಾದ ಸತ್ಯವಿದೆ. ಕನ್ನಂಬಾಡಿ ಕಟ್ಟೆ ನಿರ್ಮಾಣದಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರನ್ನು ನಾವ್ಯಾರು ಸಹ ಮರೆಯುವಂತಿಲ್ಲ. ಮೂರು ಜನ ದಿವಾನರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದ್ದರು. ಶ್ರೀಯುತರುಗಳಾದ ಸರ್ ಎಂ.ವಿಶ್ವೇಶ್ವರಯ್ಯನವರು ಇದ್ದರು, ಸರ್ ಮಿರ್ಜಾ ಇಸ್ಮಾಯಿಲ್‌ರವರು ಇದ್ದರು, ಶೇಷಾದ್ರಿಯವರು ಇದ್ದರು. ಮಹಾತ್ಮಾಗಾಂಧೀಜಿಯವರು ಮೈಸೂರಿಗೆ ಭೇಟಿ ಕೊಟ್ಟಾಗ, ನನ್ನ ಕನಸಿನ ರಾಮರಾಜ್ಯ ಈ ಮೈಸೂರಿನ ರಾಮರಾಜ್ಯದಲ್ಲಿದೆ ಎಂದಂಥವರು.

(ಮುಂದು...)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು)**

ಆವೊತ್ತು ಅವರು ಅರಮನೆಯ ರಾಣಿಯ ಒಡವೆಗಳನ್ನು ಕೊಂಡೊಯ್ದು ಮಾರಾಟ ಮಾಡಿ, ಆ ಹಣದಿಂದ ಕನ್ನಂಬಾಡಿ ಕಟ್ಟೆ ಕಟ್ಟುವಂತಹ ಇಚ್ಛಾಶಕ್ತಿಯನ್ನು ಪಡೆದಂತಹವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಅಧಿಕಾರಿಗಳು ಪೂರಕವಾಗಿ ಇರುತ್ತಾರೆ, ದಿವಾನರು ಪೂರಕವಾಗಿ ಇರುತ್ತಾರೆ ಮತ್ತು ಕನ್ನಂಬಾಡಿ ಕಟ್ಟೆ ಕಟ್ಟುವುದಕ್ಕೂ ಮುನ್ನಾ ಆ ರಾಜವಂಶದವರು ಅಲ್ಲಿ ಹತ್ತಾರು ಕಟ್ಟೆಗಳನ್ನು ಕಟ್ಟಿದ್ದರು. ಅದು ವಿರಿಜಾನಾಲೆ ಇರಬಹುದು, ಬಲಮುರಿ ನಾಲೆ ಇರಬಹುದು. ಬಹುಶಃ ವಿವಾದದ ಕಾರಣಕ್ಕಾಗಿ ಎರಡನೇ ಹಂತದಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಬರುತ್ತಾರೆ. ಆದರೆ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರನ್ನು ಹೊರತುಪಡಿಸಿ, ಕನ್ನಂಬಾಡಿ ಕಟ್ಟೆಯ ಬಗ್ಗೆ ತಾವು ಮಾತನಾಡಿದಾಗ ಅಪಚಾರವಾಗುತ್ತದೆ ಎನ್ನುವಂತಹ ಮಾತಿಗಾಗಿ ಇದು ದಾಖಲೆಗೆ ಹೋಗಲಿ ಎಂದು ಮಾತನಾಡಿದ್ದೇನೆ. ಹಾಗಾಗಿ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರವರನ್ನು ಕನ್ನಂಬಾಡಿ ಕಟ್ಟೆ ನಿರ್ಮಾಣದ ಎಲ್ಲಾ ಸಂದರ್ಭಗಳಲ್ಲಿ ನಾವು ನೆನಪಿಸಿಕೊಳ್ಳದಿದ್ದರೆ ಅದು ದೊಡ್ಡ ಅಪರಾದವಾಗುತ್ತದೆ. ನಾನು ಈ ವಿಚಾರವನ್ನು ತಮ್ಮ ಮಾಹಿತಿಗಾಗಿ ಹೇಳುತ್ತಿದ್ದೇನೆ.

**ವೈಸ್‌ಛೇರ್ಮನ್**:- ಧನ್ಯವಾದಗಳು.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನಿಷಿಯೇಟ್ ಮಾಡಬೇಕು. ಕೊನೇಪಕ್ಷ ನಾನು ಮಾತನಾಡಲು 1 ಗಂಟೆ ಸಮಯ ಕೊಡಬೇಕು.

**ವೈಸ್‌ಛೇರ್ಮನ್**:-ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರೇ, 1 ಗಂಟೆ ಸಮಯ ಏಕೆ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಏಕೆಂದರೆ, ನಾನು ಇನಿಷಿಯೇಟ್ ಮಾಡಬೇಕಾಗುತ್ತದೆ. ಎಲ್ಲಾ ಮಾನ್ಯ ಸದಸ್ಯರು ಒಂದೊಂದು ಗಂಟೆ ಮಾತನಾಡಿದ್ದಾರೆ. ನಾನು ಅರ್ಧ ಗಂಟೆ ಅಥವಾ 10 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುವುದಕ್ಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದವರು ಇನಿಷಿಯೇಟ್ ಮಾಡುವುದು privilege ಆಗುತ್ತದೆ. ನಾವು ಕೂಡ ಹೆಚ್ಚು ಹೊತ್ತು ಮಾತನಾಡಬೇಕು ಅಲ್ಲವೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್‌ಛೇರ್ಮನ್**:- ತಾವು 45 ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಮಾನ್ಯ ಸಭಾಪತಿಯವರೇ, 45 ನಿಮಿಷದಲ್ಲಿ ಮಾತಾಡಿ ಮುಗಿಸುವುದಕ್ಕಾಗುವುದಿಲ್ಲ. ಪ್ರಾರಂಭ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಶ್ರೀ ಎಸ್.ರವಿಯವರು ಮತ್ತು ಡಾ॥ ಜಯಮಾಲ ರಾಮಚಂದ್ರರವರು ಬಹಳ ಚೆನ್ನಾಗಿ ಮಾತನಾಡಿದರು. ಅಧಿಕಾರಿಗಳ ವಿಚಾರದಲ್ಲಿ, ಇವತ್ತು ಈ ಸದನದ ಗ್ಯಾಲರಿಯಲ್ಲಿ ಯಾರ್ಯಾರು ಅಧಿಕಾರಿಗಳು ಇರಬೇಕಾಗಿತ್ತು ಎಂದು ದಯವಿಟ್ಟು ಸದನಕ್ಕಾದರೂ ತಿಳಿಸಿ. ಯಾರು ಅಧಿಕಾರಿಗಳು ಇರಬೇಕಾಗಿತ್ತು ಎಂದು ಲಿಸ್ಟ್‌ನ್ನಾದರೂ ಓದಿ. ಏಕೆಂದರೆ, ಇಷ್ಟೆಲ್ಲಾ ಸಲಹೆಗಳನ್ನು ಇವರಿಬ್ಬರೂ ಕೊಟ್ಟಾಗಲೂ ಸಹ ಸದನದಲ್ಲಿ ಹಾಜರಿರಬೇಕಾಗಿತ್ತು.

**ವೈಸ್‌ಛೇರ್ಮನ್**:-ಅವಬ್ಬರೂ ಸಹ ಅದ್ಭುತವಾಗಿ ಮಾತನಾಡಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ**:- ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಯಾರ್ಯಾರು ಅಧಿಕಾರಿಗಳು ಸದನದಲ್ಲಿ ಹಾಜರಿರಬೇಕೆಂದು ಲಿಸ್ಟ್ ಇರುತ್ತದೆ. ಈ ಸದನದಲ್ಲಿ ಯಾವ್ಯಾವ ಅಧಿಕಾರಿಗಳು ಇಲ್ಲ ಎನ್ನುವುದಾದರೂ ಸಹ ರೆಕಾರ್ಡ್‌ಗೆ ಹೋಗಲಿ. ಪಾಪ ವಿನಾಗುತ್ತದೆ ಎಂದರೆ, ಇಲ್ಲಿ ಅರಣ್ಯರೋಧನ ಆಗಬಾರದಲ್ಲವೇ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:- ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆಯನ್ನು ಮುಗಿಸಿಬಿಡಿ. ಇದನ್ನು ನಾಳೆ ಪ್ರಾರಂಭ ಮಾಡೋಣ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಯವರೇ, ನಾನು ಸದನದಲ್ಲೇ ಇದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**:- ಸದನದಲ್ಲಿ ಕನಿಷ್ಟ 3 ಜನ ಮಂತ್ರಿಗಳಾದರೂ ಇರಬೇಕು. ಆದರೆ ಯಾರೂ ಇಲ್ಲ, ಇದ್ದಾರೋ ಅಥವಾ ಇಲ್ಲವೋ ಹೇಳಿ. ಈ ಹಿಂದೆ ನಾವು 3 ಜನಕ್ಕಿಂತ ಕಡಿಮೆ ಇದ್ದಂತಹ ಸಂದರ್ಭದಲ್ಲಿ ನೀವು ಸಭಾತ್ಯಾಗ ಮಾಡಿದ್ದೀರಿ. ಅದು ನಿಮಗೆ ನೆನಪು ಇದೆಯೇ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು)**:- ಸದನದಲ್ಲಿ ಮೂರು ಜನ ಮಂತ್ರಿಗಳು ಹಾಜರಿರಬೇಕೆಂದು ಎಲ್ಲೂ ಇಲ್ಲ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಸದನದಲ್ಲಿ ಕನಿಷ್ಠ ಮೂರು ಜನ ಮಂತ್ರಿಗಳು ಇರಬೇಕೆಂದು ನಿಯಮವಿದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು)**:- ಕಾನೂನು ಇರುವುದನ್ನು ಬಿಟ್ಟುಬಿಡಿ. ಪಟ್ಟಿ ಓದಿ ಹೇಳಲಾ.

**ವೈಸ್‌ಛೇರ್ಮನ್**:- ಸಭೆಯ ಗಮನಕ್ಕಾಗಿ ತಿಳಿಸುವುದೇನೆಂದರೆ, ಪಟ್ಟಿಯನುಸಾರ ಇವೊತ್ತಿನ ದಿವಸ ಸದನದಲ್ಲಿ ಉಪಸ್ಥಿತರಿರಬೇಕಾದ ಮಂತ್ರಿಗಳ ಹೆಸರುಗಳನ್ನು ಹೇಳುತ್ತೇನೆ. ಮಾನ್ಯ ಕಂದಾಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರಾದ ಶ್ರೀ ಟಿ.ಬಿ.ಜಯಚಂದ್ರರವರು, ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ಶ್ರೀ ಬಿ.ರಮಾನಾಥ ರೈ ರವರು, ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರು, ಮಾನ್ಯ ವಸತಿ ಸಚಿವರಾದ ಶ್ರೀ ಎಂ.ಕೃಷ್ಣಪ್ಪನವರು, ಮಾನ್ಯ ಮೀನುಗಾರಿಕೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಶ್ರೀ ಪ್ರಮೋದ್ ಮಧ್ವರಾಜ್‌ರವರು ಹಾಗೂ ಇವರ ಜೊತೆಗೆ ಸಭಾ ನಾಯಕರು ಇರಬೇಕು. ಇಷ್ಟು ಜನ ಸಚಿವರು ಇವತ್ತು ಸದನದಲ್ಲಿ ಹಾಜರಿರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಸದನವನ್ನೇ ಆಡಳಿತ ಪಕ್ಷದವರು ಗಂಭೀರವಾಗಿ ತೆಗೆದುಕೊಂಡಿಲ್ಲ ಎನ್ನುವುದಕ್ಕೆ ಇದು ಸಾಕ್ಷಿ. ನೀವು ಸದನವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ನಾನು ನಿಜವಾಗಿಯೂ ಹೇಳುತ್ತೇನೆ. ನಮ್ಮ ಮಾನ್ಯ ವಿ.ಎಸ್.ಉಗ್ರಪ್ಪನವರು ಏನಾದರೂ ಸಚಿವರಾಗಿದ್ದರೆ, ಇಲ್ಲೇ ಖಾಯಂ ಆಗಿ ಕುಳಿತುಕೊಳ್ಳುತ್ತಿದ್ದರು. ಯಾರಿಗೂ ಬದ್ಧತೆ ಇಲ್ಲವೆಂದು ಹೇಳುತ್ತಿದ್ದೇನೆ.

**ಶ್ರೀ ತನ್ವೀರ್ ಸೇಠ್**:- ಮಾನ್ಯ ಸಭಾಪತಿಯವರೇ, ನನ್ನ ಜೊತೆಗೆ ಇನ್ನೂ ಮೂರು ಜನ ಸಚಿವರು ಇದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಯವರೇ, ಇನ್ನೂ ಬಹಳಷ್ಟು ಸಚಿವರು ಇರಬೇಕಿತ್ತು ಅಲ್ಲವೇ? ನೋಡಿ, ಮಾನ್ಯ ಮಂತ್ರಿಗಳನ್ನು ಕೆಳಮನೆಯಲ್ಲಿ ಎಷ್ಟು ಜನ ಇರಬೇಕು ಮತ್ತು ಮೇಲ್ಮನೆಯಲ್ಲಿ ಎಷ್ಟು ಜನ ಇರಬೇಕೆಂದು ವಿಂಗಡಿಸಿ ಹಾಕಿರುತ್ತಾರೆ. ಒಂದೆರಡು ಜನ ಸಚಿವರು ಕೆಳಮನೆ ಮತ್ತು ಮೇಲ್ಮನೆಯಲ್ಲಿ ಏನಾದರೂ ಸಮಸ್ಯೆಗಳು ಇದ್ದಲ್ಲಿ, ಎರಡೂ ಕಡೆ ತಿರುಗಾಟ ಮಾಡಬೇಕೆಂದು ಹೇಳುತ್ತೀರಿ. ಆದರೆ, ಇರಬೇಕಾದಂತಹ ಸಚಿವರೇ ಇಲ್ಲದಿದ್ದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವೈಸ್‌ಛೇರ್ಮನ್**:- ಮಾನ್ಯ ಸಭಾನಾಯಕರೇ, ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ಇವತ್ತಿನ ದಿವಸ ಯಾವ್ಯಾವ ಅಧಿಕಾರಿಗಳು ಈ ಸಭೆಯಲ್ಲಿ ಹಾಜರಿರಬೇಕಾಗುತ್ತದೆ ಎಂದರೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ. ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ. ಅಧಿವೇಶನ ಮಧ್ಯಾಹ್ನದಿಂದ ಮುಕ್ತಾಯವಾಗುವವರೆಗೆ ಉಪಸ್ಥಿತರಿರಬೇಕು. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ. ಸರ್ಕಾರದ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. ಅಧಿವೇಶನ ಪ್ರಾರಂಭದಿಂದ ಮುಕ್ತಾಯವಾಗುವವರೆಗೆ ಇರಬೇಕಾಗಿರುವಂತಹವರು; ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ. ಸರ್ಕಾರದ ಉಪ ಕಾರ್ಯದರ್ಶಿ-1, ಕಾರ್ಮಿಕ ಇಲಾಖೆ. ಸರ್ಕಾರದ ಉಪ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ಅರಕೆರೆ ಜಯರಾಂರವರು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಒಂದು ಲೇಖನ ಬರೆದಿದ್ದಾರೆ. ರಾಜ್ಯಸಭೆ, ಲೋಕಸಭೆ ಹಾಗೂ ಇಲ್ಲಿನ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಒಂದು ಕಾಲದಲ್ಲಿ ಮೌಲಿಕ ಮತ್ತು ಗುಣಮಟ್ಟವುಳ್ಳ ಚರ್ಚೆ ನಡೆಯುತ್ತಿತ್ತು. ಸದನಗಳು ಪ್ರಜಾಪ್ರಭುತ್ವದ ಪ್ರತಿಬಿಂಬವಾಗಿ ಸಮರ್ಥವಾಗಿ ಕೆಲಸ ಮಾಡುತ್ತಿದ್ದವು. ಈಗ ಹೇಗೆ ನಿರಶನ ಅಧಿವೇಶನಗಳಾಗಿವೆ ಎಂದರೆ, ಚರ್ಚೆಗಳು ಮಾತ್ರ ನಡೆಯುತ್ತಿವೆ. ಕನಿಷ್ಟ 60 ದಿನಗಳು ಸದನ ನಡೆಯದೇ ಇರತಕ್ಕಂತಹ ಸಂದರ್ಭಗಳು ಬಂದಿವೆ. ಎಲ್ಲೋ ಒಂದು ಕಡೆ ವಿಧಾನ ಪರಿಷತ್ತು ಮತ್ತು ರಾಜ್ಯಸಭೆ ಮಾದರಿಯಾಗಿ ನಿಲ್ಲುತ್ತಿತ್ತು ಎನ್ನುವಂತಹ ಮಾತನ್ನು ಹೇಳಿ, ನಮ್ಮನ್ನು ಎಚ್ಚರಿಸಿದ್ದಾರೆ. ಆದರೆ ಇಲ್ಲಿ ನಾವು ನೋಡಿದಾಗ, ಇವತ್ತಿನ ದಿವಸ ನಾವು ಎಲ್ಲಿಗೆ ಹೋಗಿ ನಿಲ್ಲುತ್ತಿದ್ದೇವೆಂದರೆ, ಎಲ್ಲೋ ಒಂದು ಕಡೆ ಕಾಟಾಚಾರಕ್ಕೆ ಸದನ ಮಾಡಬೇಕಲ್ಲ ಎನ್ನುವಂತಾಗಿದೆ. ಇವತ್ತಿನ ದಿವಸ ಆಯವ್ಯಯಕ್ಕೆ ಮುಂಚೆ ಪೂರ್ವಭಾವಿ ಬಜೆಟ್ ತಯಾರಿ ಆಗಬೇಕು. ಗಂಭೀರವಾದ ಚರ್ಚೆ ಆಗಬೇಕು. ಆಯವ್ಯಯದಲ್ಲಿ ಏನೇನು ಮಾಡಬೇಕು ಎನ್ನತಕ್ಕಂಥ ಕಾರ್ಯಕ್ರಮಗಳ ಗಂಭೀರವಾದಂತಹ ಚರ್ಚೆ ಇಲ್ಲಿ ಆಗಬೇಕು. ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೂ ಸಹ ಆಸಕ್ತಿ ಇಲ್ಲವೆಂದರೆ, ಏನು feedback ತೆಗೆದುಕೊಳ್ಳುತ್ತಾರೆ? ಇದರಿಂದ ಜನರಿಗೆ ತಪ್ಪು ಸಂದೇಶ ಹೋಗುತ್ತದೆ. ಹಾಗಾಗಿ, ದಯಮಾಡಿ ಸರ್ಕಾರ, ಆಳುವಂತಹ ಪಕ್ಷದ ಸಚಿವರು ಮತ್ತು ಅಧಿಕಾರಿಗಳು ಸದನಕ್ಕೆ ಬರುವಂತೆ ನೋಡಿಕೊಳ್ಳಬೇಕು. ಪಟ್ಟಿಯಲ್ಲಿ ಇರತಕ್ಕಂಥವರು ಕನಿಷ್ಟ ಶೇ.50 ಭಾಗದಷ್ಟು ಸಚಿವರು ಬರುವಂತೆ ನೋಡಿಕೊಳ್ಳಬೇಕು. ಏಳು ಜನ ಸಚಿವರಲ್ಲಿ ಏಳು ಜನರೂ ಇಲ್ಲ. ಮಾನ್ಯ ಉಗ್ರಪ್ಪನವರು ಹೇಳಿದಂತೆ, ಅಧಿಕಾರಿಗಳು ಸಹ ಇಲ್ಲ. ಹೀಗಾದರೆ ನಾವು ಯಾರಿಗೆ ಹೇಳಬೇಕು. ತೌಡು ಕುಟ್ಟುವಂತಹ ಕೆಲಸವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಇಲ್ಲಿ ಮಾಡುವುದೇ? ನಾವು ಇಲ್ಲಿ ತೌಡು ಕುಟ್ಟಬೇಕಾಗುತ್ತದೆ ಅಷ್ಟೆ. ಇದು ನಮಗೆ ಅರ್ಥವಾಗುತ್ತಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರ ಬಗ್ಗೆ ಒಳ್ಳೆಯ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಒಂದು ಕಡೆ, ರಾಜಧರ್ಮವನ್ನು ಪಾಲನೆ ಮಾಡಿ ಆಡಳಿತ ನಡೆಸಿದಂತಹ ರಾಜರು ಇದ್ದರು. ಅರ್ಥಾತ್ ಇವತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಂತ್ರಿಗಳು ಇದ್ದಾರೆ. ಆವೊತ್ತು, ಸರ್ ಎಂ.ವಿಶ್ವೇಶ್ವರಯ್ಯನವರು ಅಧಿಕಾರಿ ವೃಂದದ ಪ್ರಮುಖರಾಗಿದ್ದರು. ಇವರಿಬ್ಬರ ಪ್ರಯತ್ನದಿಂದ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿರುವಂಥದ್ದು. ಅದರಲ್ಲೂ ಅಂತಿಮವಾಗಿ ಸರ್ಕಾರಕ್ಕೆ ಮತ್ತು ಸಚಿವರಿಗೆ ಸಲಹೆಗಳನ್ನು ಕೊಡತಕ್ಕಂಥವರು ಮತ್ತು ವಿಚಾರಗಳನ್ನು ಹೇಳತಕ್ಕಂಥವರು ಅಧಿಕಾರಿಗಳು. ಈ ಅಧಿಕಾರಿಗಳಿಗೇ ಮಾಹಿತಿ ಇಲ್ಲದಿದ್ದರೆ ಏನಾಗಬಹುದು ಎಂಬ ಹಿನ್ನೆಲೆಯಲ್ಲಿ, ಬಹುಶಃ ಅವರು ಇರಬೇಕು. ಹಾಗಾಗಿ, ರೆಕಾರ್ಡ್‌ಗೆ ಹೋಗಲಿ ಎನ್ನುವಂತಹ ದೃಷ್ಟಿಯಿಂದ ಹೇಳುತ್ತೇನೆ. ಆದ್ದರಿಂದ ದಯಮಾಡಿ ಇನ್ನು ಮುಂದಾದರೂ ಅಧಿಕಾರಿಗಳು ಸದನದಲ್ಲಿ ಯಾರು ಹಾಜರಿರಬೇಕೋ ಅವರು ಇರಬೇಕಾಗುತ್ತದೆ. ಸಚಿವರಾದರೂ ಸಹ ಆ ಕೆಳಮನೆಗೆ ಒಂದೊಂದು ಸಲ ಹೋಗಬೇಕಾಗುತ್ತದೆ. ಅವರು ಹೋಗಿ ಬರುವುದಕ್ಕೆ ಅವಕಾಶವಿರುತ್ತದೆ. ಆದರೆ, ಅಧಿಕಾರಿಗಳು ಏಕೆ ಸದನದಲ್ಲಿ ಇರುವುದಿಲ್ಲ. ಅವರೇನಾದರೂ ಪಕ್ಕದಲ್ಲಿರುವಂತಹ ರೇಸ್‌ಕೋರ್ಸ್‌ಗೆ ಹೋಗುತ್ತಾರೆಯೇ? ಅಥವಾ ಪಕ್ಕದಲ್ಲಿರುವಂತಹ ಇನ್ನೊಂದಕ್ಕೆ ಹೋಗುತ್ತಾರೆಯೇ? ಹಾಗಾಗಿ, ಎಲ್ಲೋ ಒಂದು ಕಡೆ, ಈ ಅಧಿಕಾರಿಗಳ ಮೇಲೆ ನಿಯಂತ್ರಣ ಮಾಡದಿದ್ದರೆ ತಪ್ಪಾಗುತ್ತದೆ. ಈ ಸದನ ಪ್ರಾರಂಭವಾಗಿರುವುದು ಇವತ್ತಿಗೆ 3ನೇ ದಿವಸವಷ್ಟೆ. Actually, ಹೇಳಬೇಕೆಂದರೆ ಇಂದು ಎರಡನೇ ದಿನ.

**ವೈಸ್‌ಛೇರ್ಮನ್:**-ನಾನು ಕಾನೂನು ಇಲಾಖೆ ಗಮನಕ್ಕೆ ತರುತ್ತೇನೆ. ಅಧಿಕಾರಿಗಳು ಸದನದಲ್ಲಿ ಇರಬೇಕಿತ್ತು. ಯಾರು ಅಧಿಕಾರಿಗಳು ಬಂದಿರುವುದಿಲ್ಲವೋ ಅಂತಹವರ ಮೇಲೆ ಕಾನೂನಿನ ರೀತ್ಯಾ ಕ್ರಮ ತೆಗೆದುಕೊಳ್ಳುವುದಕ್ಕೆ, ಒಂದು ಕಾನೂನನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೇನೆ. ಸದನದಲ್ಲಿ ಹಾಜರಿರಬೇಕಾದಂತಹ ಅಧಿಕಾರಿಗಳು ಇಲ್ಲದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಕಾನೂನು ತರಬೇಕು. ಆ ಕಾನೂನನ್ನು ಮಾಡಿ ಎಂದು ನಾನು ಕಾನೂನು ಮಂತ್ರಿಗೆ ಅರಿಕೆ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಇದು ಶಿಷ್ಟಾಚಾರದ ಉಲ್ಲಂಘನೆ. In fact, ಇದು. ..

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹೊಸದಾಗಿ ಕಾನೂನನ್ನು ಮಾಡಬೇಕಾಗಿಲ್ಲ. ಈಗ ಇರುವ ಕಾನೂನನ್ನೇ ಜಾರಿಗೆ ತಂದು ಅಧಿಕಾರಿಗಳಿಗೆ ಬಿಸಿಮುಟ್ಟಿಸಬೇಕಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಇದು ಶಿಷ್ಟಾಚಾರದ ಉಲ್ಲಂಘನೆ. ಇದು ಈ ಸದನಕ್ಕೆ ತೋರಿಸತಕ್ಕಂಥ ಅಗೌರವ. ಅಧಿಕಾರಿಗಳು ಈ ಸದನದಲ್ಲಿ ಇರಬೇಕು ಎಂದು ಆದೇಶ ಆಗಿರತಕ್ಕಥ ಹಿನ್ನೆಲೆಯಲ್ಲಿ, ಅಧಿಕಾರಿಗಳು ಈ ಸದನದಲ್ಲಿ ಇರುವುದಿಲ್ಲವೆಂದರೆ, ಅದು ಶಿಷ್ಟಾಚಾರ ಉಲ್ಲಂಘನೆಯಾಗುತ್ತದೆ. ಸದನಕ್ಕೆ ತೋರಿಸತಕ್ಕಂಥ ಅಗೌರವ.

**ಶ್ರೀ ಪ್ರಾಣೇಶ್.ಎಂ.ಕೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸದನದಲ್ಲಿ ಅಧಿಕಾರಿಗಳು ಇಲ್ಲ ಎನ್ನುವುದನ್ನು ತೋರಿಸುತ್ತದೆ ಅಷ್ಟೆ. ಹೀಗಾದರೆ, ಅಧಿಕಾರಿಗಳ ಮೇಲೆ ಸರ್ಕಾರದ ಹಿಡಿತವೇನು? ಅವರಿಗೆ ಹೆದರಿಕೆ ಇದ್ದಿದ್ದರೆ ಖಂಡಿತ ಬಂದು ಕುಳಿತುಕೊಳ್ಳುತ್ತಿದ್ದರು.

**ವೈಸ್‌ಛೇರ್ಮನ್:–**ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದಲ್ಲಿ ಮಾತನಾಡುವಾಗ ಅದನ್ನು ಚರ್ಚೆಗೆ ತೆಗೆದುಕೊಂಡು ಬನ್ನಿ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ತಾವು ಓದುವಾಗ, 4 ಜನ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಇರಬೇಕು. ಆದರೆ, ಒಬ್ಬರೂ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಇಲ್ಲ. ಇದು ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಅವರಿಗೆ ಅಗೌರವ ಸೂಚಿಸುವಂತಹ ಸಂದರ್ಭ ತೋರಿಸುತ್ತದೆ. ಇನ್ನು ಮುಂದೆ ಈ ರೀತಿ ರಿಪೀಟ್ ಆಗಬಾರದು. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಾಗ, ಇಷ್ಟು ಲಘುವಾಗಿ ತೆಗೆದುಕೊಂಡರೆ ಅದು ಘನತೆವೆತ್ತ ರಾಜ್ಯಪಾಲರಿಗೆ ಅಶುಭ ತರುವಂಥ ಕೆಲಸ.

**ವೈಸ್‌ಛೇರ್ಮನ್:–** ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮತ್ತು ಶ್ರೀ ಬಿ.ಜೆ.ಪುಟ್ಟಸ್ವಾಮಿಯವರು ಮಾತನಾಡಲು ನನಗೆ 5 ನಿಮಿಷ ಅಥವಾ 10 ನಿಮಿಷ ಸಮಯ ಸಾಕಾಗುವುದಿಲ್ಲವೆಂದು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು . . .

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನೇ ಇನಿಷಿಯೇಟ್ ಮಾಡುವಾಗ 10 ನಿಮಿಷದಲ್ಲಿ ಮಾತನಾಡಿ ಮುಗಿಸುವುದಕ್ಕೆ ಆಗುತ್ತದೆಯೇ? ತಾವು ರಾತ್ರಿ 7 ಗಂಟೆಯವರೆಗೆ ಕುಳಿತುಕೊಳ್ಳುತ್ತೇನೆಂದರೆ, ನನ್ನದೇನು ಅಭ್ಯಂತವಿಲ್ಲ. ನಾನು ಮಾತನಾಡುತ್ತೇನೆ.

**ವೈಸ್‌ಛೇರ್ಮನ್:–**ನಾನು ಮಾನ್ಯ ಬಿ.ಜೆ.ಪುಟ್ಟಸ್ವಾಮಿಯವರಿಗೆ ಮುಂಚೆ 45 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕೆಂದು ಹೇಳಿದ್ದೆನು. ಆದರೆ, ಈಗ ಏನಾಗಿದೆ ಎಂದರೆ, ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳು ಮಾನ್ಯ ಸಭಾ ನಾಯಕರನ್ನು ಒಂದು ಸಭೆಗೆ ಕರೆದಿದ್ದಾರೆ. ಹಾಗಾಗಿ, ಈಗ ಸಭೆಯನ್ನು ನಾಳೆ ಬೆಳಗ್ಗೆ 11 ಗಂಟೆಯವರೆಗೆ ಸಭೆಯನ್ನು ಮುಂದೂಡಲಾಗಿದೆ.

**(ಸದನವು ಸಂಜೆ 6.00 ಗಂಟೆಗೆ ಮುಕ್ತಾಯಗೊಂಡು**
**ಪುನಃ ದಿನಾಂಕ 08ನೇ ಫೆಬ್ರವರಿ ಮಾಹೇ 2018ರ**
**ಗುರುವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"